सत्यमेव जयते

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ

## ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷ

लोकहितार्थ सत्यनिष्ठा

Dedicated to Truth in Public Interest

**ಕರ್ನಾಟಕ ಸರ್ಕಾರ**

**2019ರ ವರದಿ ಸಂಖ್ಯೆ – 2**

# ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

## ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷ

ಕರ್ನಾಟಕ ಸರ್ಕಾರ

2019ರ ವರದಿ ಸಂಖ್ಯೆ – 2

# ಪರಿವಿಡಿ


| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ಮುನ್ನುಡಿ** | | ix |
| **ಕಾರ್ಯನಿರ್ವಹಣಾ ಸಾರಾಂಶ** | | x |
| **ಅಧ್ಯಾಯ–I** | | |
| **ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು** | | |
| **ಪೀಠಿಕೆ** | **1.1** | **1** |
| 2017–18ರಲ್ಲಿನ ವಿತ್ತ ವ್ಯವಹಾರಗಳ ಸಾರಾಂಶ | 1.1.1 | 1 |
| ವಿತ್ತೀಯ ಸ್ಥಿತಿಯ ಸಮೀಕ್ಷೆ | 1.1.2 | 3 |
| ಪ್ರಮುಖ ವಿತ್ತೀಯ ವ್ಯತ್ಯಯಗಳು | 1.1.3 | 4 |
| ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳು 2017–18 | 1.1.4 | 5 |
| ಮಹಿಳಾ ಉದ್ದೇಶಿತ ಆಯವ್ಯಯ | 1.1.5 | 6 |
| 2017–18ನೇ ಸಾಲಿನ ಆಯವ್ಯಯದ ಪ್ರಮುಖ ಕಾರ್ಯನೀತಿ ಉಪಕ್ರಮಗಳು | 1.1.6 | 9 |
| **ರಾಜ್ಯದ ಸಂಪನ್ಮೂಲಗಳು** | **1.2** | **9** |
| ವಾರ್ಷಿಕ ಹಣಕಾಸಿನ ಲೆಕ್ಕಗಳ ಪ್ರಕಾರ ರಾಜ್ಯದ ಸಂಪನ್ಮೂಲಗಳು | 1.2.1 | 9 |
| **ರಾಜಸ್ವ ಸ್ವೀಕೃತಿಗಳು** | **1.3** | **11** |
| ರಾಜ್ಯದ ಸ್ವಂತ ಸಂಪನ್ಮೂಲಗಳು | 1.3.1 | 13 |
| ತೆರಿಗೆ ಆದಾಯ | 1.3.1.1 | 13 |
| ತೆರಿಗೆಯೇತರ ಆದಾಯ | 1.3.1.2 | 15 |
| ಕೇಂದ್ರ ಸರ್ಕಾರದಿಂದ ಸಹಾಯಾನುದಾನ | 1.3.2 | 19 |
| ಕೇಂದ್ರ ತೆರಿಗೆ ವರ್ಗಾವಣೆಗಳು | 1.3.3 | 20 |
| ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಗಳು | 1.3.4 | 20 |
| ಪೀಠಿಕೆ | 1.3.4.1 | 20 |
| ಪಂಚಾಯತ್‌ರಾಜ್ ಸಂಸ್ಥೆಗಳಿಗೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು | 1.3.4.2 | 20 |
| ವಿಪತ್ತು ಪರಿಹಾರದಡಿ ಬಿಡುಗಡೆಗಳು | 1.3.5 | 21 |
| ಬಿಟ್ಟುಕೊಡಲ್ಪಟ್ಟ ಆದಾಯಗಳು | 1.3.6 | 22 |
| ಕರ್ನಾಟಕದಲ್ಲಿ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನ | 1.3.7 | 22 |
| **ಬಂಡವಾಳ ಸ್ವೀಕೃತಿಗಳು** | **1.4** | **23** |
| **ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು** | **1.5** | **23** |
| **ಸಂಪನ್ಮೂಲಗಳ ಅನ್ವಯ** | **1.6** | **24** |
| ವೆಚ್ಚದ ವೃದ್ಧಿ ಮತ್ತು ಸಂಯೋಜನೆ | 1.6.1 | 25 |
| ರಾಜಸ್ವ ವೆಚ್ಚ | 1.6.2 | 26 |
| ಬದ್ಧ ವೆಚ್ಚಗಳು | 1.6.3 | 27 |
| ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರವೇಶ ತೆರಿಗೆಯ ಹಂಚಿಕೆ | 1.6.4 | 32 |
| ನಾಲ್ಕನೆಯ ಹಣಕಾಸು ಆಯೋಗ | 1.6.5 | 33 |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ವೆಚ್ಚದ ಗುಣಮಟ್ಟ** | **1.7** | **35** |
| ಸಾರ್ವಜನಿಕ ವೆಚ್ಚದ ಪರ್ಯಾಪ್ತತೆ | 1.7.1 | 35 |
| ವೆಚ್ಚದ ದಕ್ಷತೆ | 1.7.2 | 36 |
| **ರಾಜ್ಯ ಸರ್ಕಾರದ ವೆಚ್ಚ ಮತ್ತು ಹೂಡಿಕೆಗಳ ಆರ್ಥಿಕ ವಿಶ್ಲೇಷಣೆ** | **1.8** | **38** |
| ಅಪೂರ್ಣ ಕಾಮಗಾರಿಗಳು | 1.8.1 | 38 |
| ಹೂಡಿಕೆಗಳು ಮತ್ತು ಪ್ರತಿಫಲಗಳು | 1.8.2 | 39 |
| ರಾಜ್ಯ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳು | 1.8.3 | 41 |
| ನಗದು ಶಿಲ್ಕುಗಳು ಮತ್ತು ನಗದು ಶಿಲ್ಕುಗಳ ಹೂಡಿಕೆ | 1.8.4 | 43 |
| **ಆಸ್ತಿಗಳು ಮತ್ತು ಜವಾಬ್ದಾರಿಗಳು** | **1.9** | **44** |
| ಆಸ್ತಿಗಳು ಮತ್ತು ಜವಾಬ್ದಾರಿಗಳ ವೃದ್ಧಿ ಮತ್ತು ಸಂಯೋಜನೆ | 1.9.1 | 44 |
| ವಿತ್ತೀಯ ಜವಾಬ್ದಾರಿಗಳು | 1.9.2 | 46 |
| ಆಯವ್ಯಯದ ಹೊರಗಿನ ಸಾಲಗಳು | 1.9.3 | 46 |
| ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಮ್‌ಟಿಸಿ) ಪಡೆದ ಸಾಲ | 1.9.3.1 | 48 |
| ಸಾರ್ವಜನಿಕ ಲೆಕ್ಕಗಳ ವ್ಯವಹಾರಗಳು | 1.9.4 | 48 |
| ಸಾಂದರ್ಭಿಕ ಜವಾಬ್ದಾರಿಗಳು | 1.9.5 | 52 |
| ಖಾತರಿಗಳ ಸ್ಥಿತಿ | 1.9.5.1 | 52 |
| **ಋಣ ನಿರ್ವಹಣೆ** | **1.10** | **53** |
| ಋಣ ಚಿತ್ರಣ | 1.10.1 | 53 |
| ಋಣ ಸಹಿಷ್ಣುತೆ | 1.10.2 | 54 |
| ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ | 1.10.2.1 | 55 |
| ಋಣ ಸ್ಥಿರತೆ | 1.10.2.2 | 55 |
| ವೃದ್ಧಿತ ಋಣೇತರ ಸ್ವೀಕೃತಿಗಳ ಪರ್ಯಾಪ್ತತೆ | 1.10.2.3 | 56 |
| ಸಾಲಗಳ ಮೂಲಕ ಪಡೆದ ಮೊತ್ತಗಳ ನಿವ್ವಳ ಲಭ್ಯತೆ | 1.10.2.4 | 56 |
| **ವಿತ್ತೀಯ ಅಸಮತೆಗಳು** | **1.11** | **57** |
| ಕೊರತೆಗಳ ಪ್ರವೃತ್ತಿಗಳು | 1.11.1 | 57 |
| ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ | 1.11.2 | 59 |
| ಹೆಚ್ಚಳ/ಕೊರತೆಗಳ ಗುಣಮಟ್ಟ | 1.11.3 | 59 |
| **ಅನುಸರಣೆ** | **1.12** | **60** |
| **ಸಮಾಪನ ಅಭಿಪ್ರಾಯಗಳು ಮತ್ತು ಶಿಫಾರಸುಗಳು** | **1.13** | **60** |
| **ಅಧ್ಯಾಯ–II** | | |
| **ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ** | | |
| **ಪೀಠಿಕೆ** | **2.1** | **63** |
| **ಧನವಿನಿಯೋಗ ಲೆಕ್ಕಗಳ ಸಾರಾಂಶ** | **2.2** | **63** |
| **ವೆಚ್ಚದ ಮೇಲಿನ ಟಿಪ್ಪಣಿಗಳು** | **2.3** | **64** |
| ವೆಚ್ಚವನ್ನು ಅಧಿಕವಾಗಿ/ಕಡಿಮೆಯಾಗಿ ಹೇಳುವಿಕೆ | 2.3.1 | 64 |
| ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತ | 2.3.2 | 65 |
| ಅಧಿಕ ವೆಚ್ಚಗಳು | 2.3.3 | 65 |
| 2017–18ರಲ್ಲಿ ಅವಕಾಶವನ್ನು ಮೀರಿದ ಅಧಿಕ ವೆಚ್ಚ | 2.3.4 | 65 |

| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಹಿಂದಿನ ವರ್ಷಗಳಲ್ಲಿ ಸಕ್ರಮೀಕರಣದ ಅಗತ್ಯವಿರುವ ಅಧಿಕ ವೆಚ್ಚಗಳು | 2.3.5 | 66 |
| ಹೊಸ ಸೇವೆ/ಹೊಸ ಸೇವೆಗಳ ಸಾಧನ | 2.3.6 | 66 |
| **ಆಯವ್ಯಯದಲ್ಲಿ ದೋಷಗಳು** | **2.4** | **67** |
| ಬಂಡವಾಳ ಮತ್ತು ರಾಜಸ್ವ ನಡುವಿನ ವರ್ಗೀಕರಣ ದೋಷಗಳು | 2.4.1 | 67 |
| ಆಯವ್ಯಯದಲ್ಲಿ 'ಪುರಸ್ಕೃತ' ಮತ್ತು 'ಪ್ರಭೃತ' ವಿಭಾಗಗಳಲ್ಲಿ ದೋಷಪೂರಿತ ವರ್ಗೀಕರಣ | 2.4.2 | 67 |
| ಸಾಲಗಳನ್ನು ಈಕ್ವಿಟಿಯಾಗಿ ಪರಿವರ್ತಿಸುವ ಸಂಬಂಧವಾಗಿ ಅವಕಾಶಗಳನ್ನು ಸೂಕ್ತವಾಗಿ ಅನ್ವಯ ಮಾಡದಿದ್ದುದರಿಂದ ಆಯವ್ಯಯದಲ್ಲಿ ದೋಷಗಳು – ಮೆ.ಕೆಎಸ್ಐಸಿ | 2.4.3 | 67 |
| ಪ್ರಧಾನ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮಾಡಿದ ತಪ್ಪು ಅವಕಾಶಗಳು | 2.4.4 | 68 |
| ಉದ್ದೇಶ ಲೆಕ್ಕಶೀರ್ಷಿಕೆಗಳಡಿಯಲ್ಲಿ ವರ್ಗೀಕರಣ ದೋಷಗಳು | 2.4.5 | 68 |
| ನಿಧಿ ಲೆಕ್ಕಗಳಡಿಯ ಆಯವ್ಯಯದ ದೋಷಗಳು | 2.4.6 | 69 |
| ಬಹು ಉದ್ದೇಶ ಶೀರ್ಷಿಕೆ 059– ಇತರೆ ವೆಚ್ಚಗಳಡಿ ಅವಕಾಶ ಕಲ್ಪಿಸುವಲ್ಲಿ–ಆಯವ್ಯಯ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು | 2.4.7 | 69 |
| **ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ** | **2.5** | **70** |
| ಧನವಿನಿಯೋಗಕ್ಕೆ ಪ್ರತಿಯಾಗಿ ಹಂಚಿಕೆಯ ಆದ್ಯತೆಗಳು | 2.5.1 | 70 |
| ಸತತವಾಗಿ ಬಳಕೆಯಾಗದೆ ಉಳಿದ ಅವಕಾಶಗಳು | 2.5.2 | 72 |
| ಪೂರಕ ಅವಕಾಶಗಳು | 2.5.3 | 72 |
| ಮೊತ್ತಗಳ ಪುನರ್ವಿನಿಯೋಗಗಳು | 2.5.4 | 74 |
| ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ | 2.5.5 | 75 |
| **ಸಾದಿಲ್ವಾರು ನಿಧಿ** | **2.6** | **76** |
| **ಆಯ್ದ ಅನುದಾನಗಳ ಸಮೀಕ್ಷೆಯ ಅಂಶಗಳು** | **2.7** | **76** |
| ಅನುದಾನ ಸಂಖ್ಯೆ.8–ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 2.7.1 | 76 |
| ಅನುದಾನ ಸಂಖ್ಯೆ.19 – ನಗರಾಭಿವೃದ್ಧಿ | 2.7.2 | 78 |
| **ಕುಟುಂಬ ಪಿಂಚಣಿಯ ಹೆಚ್ಚುವರಿ ಪಾವತಿ** | **2.8** | **82** |
| **ಸಮಾಪನ** | **2.9** | **83** |
| **ಶಿಫಾರಸುಗಳು** | **2.10** | **84** |
| **ಅಧ್ಯಾಯ–III** | | |
| **ಆರ್ಥಿಕ ನಿರೂಪಣೆ** | | |
| **ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವಿಕೆ** | **3.1** | **85** |
| **ಸರ್ಕಾರದಿಂದ ಗಣನೀಯ ಆರ್ಥಿಕ ಬೆಂಬಲ ಪಡೆದ ಸಂಸ್ಥೆಗಳಿಂದ ಸಂಬಂಧಿಸಿದ ಮಾಹಿತಿ ಬಾರದಿರುವಿಕೆ** | **3.2** | **86** |
| **ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆಯ ಮತ್ತು ರಾಜ್ಯ ಶಾಸಕಾಂಗದ ಮುಂದೆ ಲೆಕ್ಕ ಪರಿಶೋಧನಾ ವರದಿಗಳನ್ನು ಮಂಡಿಸುವಿಕೆಯ ಸ್ಥಿತಿ** | **3.3** | **86** |
| **ಇಲಾಖಾ ವಾಣಿಜ್ಯ ಉದ್ದಿಮೆಗಳು** | **3.4** | **86** |
| **ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು ಸ್ವೀಕೃತಿಯಾಗದಿರುವುದು** | **3.5** | **87** |
| **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು** | **3.6** | **87** |
| **ವೈಯಕ್ತಿಕ ಠೇವಣಿ ಲೆಕ್ಕಗಳು** | **3.7** | **89** |
| ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಇಟ್ಟಿರುವ ಮೊತ್ತಗಳು | 3.7.1 | 89 |

| | | |
|---|---|---|
| ಬಳಕೆ ಮಾಡದಿದ್ದ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡದಿರುವುದು–₹3.05 ಕೋಟಿ | 3.7.2 | 90 |
| ವೈಯಕ್ತಿಕ ಠೇವಣಿ ಲೆಕ್ಕಗಳ ಹೊಂದಾಣಿಕೆ | 3.7.3 | 90 |
| **ಸ್ವೀಕೃತಿಗಳ ಮತ್ತು ವೆಚ್ಚಗಳ ಹೊಂದಾಣಿಕೆ** | **3.8** | **90** |
| **ಲೆಕ್ಕಪತ್ರಗಳ ಮೇಲಿನ ವ್ಯಾಖ್ಯಾನಗಳು** | **3.9** | **91** |
| ಸರ್ಕಾರದ ಲೆಕ್ಕಗಳಿಗೆ ಪರಿಹಾರದ ಮೊತ್ತವನ್ನು ಜಮೆ ಮಾಡದಿರುವುದು | 3.9.1 | 91 |
| ಇಲಾಖಾ ಸ್ವೀಕೃತಿಗಳನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡದಿರುವುದು– ₹127.52 ಕೋಟಿ | 3.9.2 | 92 |
| **ಲೆಕ್ಕಗಳಲ್ಲಿನ ಪಾರದರ್ಶಕತೆ** | **3.10** | **93** |
| ವಿವಿಧೋದ್ದೇಶ ಶೀರ್ಷಿಕೆ–911 ಅಡಿಯಲ್ಲಿ ಮುಂಗಡ ಅಂದಾಜು/ಪೂರಕ ಅಂದಾಜುಗಳಲ್ಲಿ ದೋಷಪೂರಿತ ಅವಕಾಶ ಮಾಡಿರುವುದು | 3.10.1 | 93 |
| ಆಯವ್ಯಯ ಹಂಚಿಕೆ/ವೆಚ್ಚದಲ್ಲಿ ಪಾರದರ್ಶಕತೆಯಿಲ್ಲದಿರುವುದು | 3.10.2 | 94 |
| **ಲೆಕ್ಕಗಳ ನಿಖರತೆಯ ಮೇಲೆ ಪರಿಣಾಮ ಬೀರುವ ಮುಖ್ಯ ಅಂಶಗಳು** | **3.11** | **94** |
| **ಸಮಾಪನ** | **3.12** | **96** |
| **ಶಿಫಾರಸುಗಳು** | **3.13** | **97** |

# ಪರಿವಿಡಿ


| ಅನುಬಂಧಗಳ ಪಟ್ಟಿ | ವಿಷಯ | ಪುಟ ಸಂಖ್ಯೆ |
|---|---|---|
| **1.1** | ರಾಜ್ಯ ಚಿತ್ರಣ | 99 |
| **1.2** | ಸರ್ಕಾರಿ ಲೆಕ್ಕಗಳ ಸ್ವರೂಪ | 101 |
| **1.3** | ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ | 102 |
| **1.4** | ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು | 105 |
| **1.5** | ಆಯವ್ಯಯ ಭರವಸೆಗಳು ಮತ್ತು ಅವುಗಳ ಮೇಲಿನ ಲೆಕ್ಕ ಪರಿಶೋಧನಾ ವಿಶ್ಲೇಷಣೆ | 110 |
| **1.6** | ಸಂಗ್ರಹಣಾ ವೆಚ್ಚಗಳು | 112 |
| **1.7** | ಜುಲೈ 2017ರಿಂದ ಮಾರ್ಚ್ 2018ರವರಗೆ ಜಿಎಸ್‌ಟಿಯ ಪರಿಹಾರ | 113 |
| **1.8** | ಇಲಾಖೆವಾರು ಸಹಾಯಧನಗಳ ಪಾಲು | 114 |
| **1.9** | ಪರೋಕ್ಷ ಸಹಾಯಧನಗಳು | 116 |
| **1.10** | ಮಹಾಲೇಖಾಪಾಲರ ಕಚೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ಸವಿವರ ಸಾಲ ಲೆಕ್ಕಗಳು | 117 |
| **1.11** | 31 ಮಾರ್ಚ್ 2018ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ | 118 |
| **1.12** | ವಿತ್ತೀಯ ಕೊರತೆಗಳ ಭಾಗಗಳು ಮತ್ತು ಅವುಗಳ ಪೂರೈಕೆಯ ವಿಧಾನಗಳು | 119 |
| **2.1** | ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ಕಾರ್ಯಕಾರಿ ಆದೇಶಗಳ ಮುಖಾಂತರ ಬಿಡುಗಡೆ ಮಾಡಲಾದ ಹೆಚ್ಚುವರಿ ಅವಕಾಶಗಳು | 120 |
| **2.2** | ಪ್ರಧಾನ ಲೆಕ್ಕಶೀರ್ಷಿಕೆಗಳಲ್ಲಿನ ₹25 ಕೋಟಿಗೂ ಮೀರಿದ ಅಧಿಕ ವೆಚ್ಚದ ಪ್ರಕರಣಗಳು | 121 |
| **2.3** | ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು | 122 |
| **2.4** | ಹೊಸ ಸೇವೆ/ ಹೊಸ ಸೇವೆಗಳ ಸಾಧನದ ಪ್ರಕರಣಗಳು | 124 |
| **2.5** | ರಾಜಸ್ವ ಮತ್ತು ಬಂಡವಾಳಗಳ ನಡುವಿನ ವರ್ಗೀಕರಣದ ದೋಷಗಳು | 125 |
| **2.6** | ಪುರಸ್ಕೃತ ಮತ್ತು ಪ್ರಭೃತ ವರ್ಗೀಕರಣಗಳಲ್ಲಿನ ದೋಷಗಳು | 127 |
| **2.7** | ಆಯವ್ಯಯದ ದೋಷಗಳು – ಪ್ರಧಾನ ಲೆಕ್ಕಶೀರ್ಷಿಕೆಯಡಿಯಲ್ಲಿ ತಪ್ಪು ಅವಕಾಶಗಳನ್ನು ಒದಗಿಸಿರುವುದು | 128 |
| **2.8** | ಉದ್ದೇಶ ಶೀರ್ಷಿಕೆ '059 – ಇತರೆ ಖರ್ಚುಗಳು' ಅಡಿ ತಪ್ಪು ವರ್ಗೀಕರಣಗಳ ವಿವರಗಳು | 129 |
| **2.9** | ₹ 100 ಕೋಟಿಗಳಿಗೂ ಮತ್ತು ಅದಕ್ಕಿಂತ ಹೆಚ್ಚಾದ ಬಳಕೆಯಾಗದೆ ಉಳಿದ ಅವಕಾಶಗಳ ಅನುದಾನ/ವಿನಿಯೋಗಗಳು | 130 |
| **2.10** | ₹25 ಕೋಟಿಗೂ ಹೆಚ್ಚು ಮೊತ್ತ ಬಳಕೆಯಾಗದ ಅವಕಾಶಗಳು ಸಂಭವಿಸಿದ ಪ್ರಧಾನ ಲೆಕ್ಕಶೀರ್ಷಿಕೆಗಳು | 132 |
| **2.11** | ಅನಗತ್ಯ ಪೂರಕ ಅಂದಾಜುಗಳು | 136 |
| **2.12** | ಅಧಿಕವಾದ ಪೂರಕ ಅನುದಾನಗಳು | 138 |
| **2.13** | ಅಪರ್ಯಾಪ್ತ ಪೂರಕ ಅನುದಾನಗಳು | 140 |
| **2.14** | ಅನವಶ್ಯಕ/ಅಧಿಕತಮ/ಅಸಮರ್ಪಕ ಪುನರ್ವಿನಿಯೋಗ | 142 |
| **2.15** | ದೋಷಪೂರಿತ ಪುನರ್ವಿನಿಯೋಗ ಆದೇಶಗಳು | 145 |
| **2.16** | ಅವಕಾಶಗಳು ಬಳಕೆಯಾಗದೆ ಉಳಿದು ಅದರ ಯಾವುದೇ ಭಾಗವನ್ನು ಅಧ್ಯರ್ಪಣೆ ಮಾಡದಿರುವ ವಿವಿಧ ಅನುದಾನಗಳು/ವಿನಿಯೋಗಗಳು | 149 |
| **2.17** | ಬಳಕೆಯಾಗದೆ ಉಳಿದ ಅವಕಾಶಗಳ ಭಾಗಶ: ಅಧ್ಯರ್ಪಣೆ | 150 |
| **2.18** | ಮಾರ್ಚ್ 30 ಮತ್ತು 31, 2018ರಂದು ಅಧ್ಯರ್ಪಣೆ ಮಾಡಲಾದ ₹ಐದು ಕೋಟಿಗೂ ಮೀರಿದ ಅವಕಾಶಗಳು | 152 |

| ಅನುಬಂಧಗಳ ಪಟ್ಟಿ | ವಿಷಯ | ಪುಟ ಸಂಖ್ಯೆ |
|---|---|---|
| **2.19** | ಪ್ರಸಕ್ತ ವರ್ಷದಲ್ಲಿ ಗಣನೀಯ ಅಧ್ಯರ್ಪಣೆಗಳ ಸಮೀಕ್ಷೆಯ ಫಲಿತಾಂಶಗಳ | 153 |
| **2.20** | ವೆಚ್ಚದ ಒತ್ತಡ– ಅನುದಾನ 08– ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 156 |
| **2.21** | ಕುಟುಂಬ ಪಿಂಚಣಿಯ ಅಧಿಕ ಪಾವತಿ | 157 |
| **2.22** | ಕುಟುಂಬ ಪಿಂಚಣಿಯ ಮುಂದುವರೆದ ಅಧಿಕ ಪಾವತಿ | 158 |
| **2.23** | ತಪ್ಪಿಸಬಹುದಾಗಿದ್ದ ಬಡ್ಡಿಯ ನಷ್ಟ | 159 |
| **3.1** | ಪ್ರಧಾನ ಶೀರ್ಷಿಕೆವಾರು ಇಲಾಖಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳು | 160 |
| **3.2** | ಸರ್ಕಾರದಿಂದ ಗಣನೀಯವಾಗಿ ಹಣ ಸಹಾಯ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವುದು | 161 |
| **3.3** | ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 162 |
| **3.4** | ಬಾಕಿ ಇರುವ ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆ ವಾಣಿಜ್ಯ ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ವಿವರಗಳು | 163 |
| **3.5** | ಉಗ್ರಾಣ ಮತ್ತು ದಾಸ್ತಾನಿನ ಲೆಕ್ಕಪತ್ರಗಳನ್ನು ಸಲ್ಲಿಸದಿರುವ ಇಲಾಖಾವಾರು ವಿವರಗಳು | 165 |
| **3.6** | ನಿಷ್ಕ್ರಿಯ ಠೇವಣಿ ಲೆಕ್ಕಗಳಲ್ಲಿ ಉಳಿದಿರುವ ಶಿಲ್ಕುಗಳು | 173 |
| **3.7** | ಬೇಡಿಕೆಗಳಡಿ ಹೆಚ್ಚುವರಿ ಪಾವತಿಗಳ ವಸೂಲಿಗಾಗಿ ಅವಕಾಶ ಕಲ್ಪಿಸಿರುವುದು | 174 |
| | **ಪಾರಿಭಾಷಿಕ ಪದಗಳು** | 176 |

# ಮುನ್ನುಡಿ

1. ಈ ವರದಿಯನ್ನು ಸಂವಿಧಾನದ ಅನುಚ್ಛೇದ 151ರ ಅನ್ವಯ ರಾಜ್ಯಪಾಲರಿಗೆ ಕರ್ನಾಟಕ ವಿಧಾನಮಂಡಲದಲ್ಲಿ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯ ಅಧ್ಯಾಯ– I ಮತ್ತು II ಕ್ರಮವಾಗಿ, ರಾಜ್ಯ ಸರ್ಕಾರದ 31 ಮಾರ್ಚ್ 2018ಕ್ಕೆ ಅಂತ್ಯಗೊಂಡ ವರ್ಷದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಹೊಂದಿವೆ. ಅಗತ್ಯವಿದ್ದ ಕಡೆ ರಾಜ್ಯ ಸರ್ಕಾರದಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

3. 'ಆರ್ಥಿಕ ನಿರೂಪಣೆ'ಗೆ ಸಂಬಂಧಿಸಿದ ಅಧ್ಯಾಯ–III, 2017–18ನೇ ವರ್ಷದಲ್ಲಿ ರಾಜ್ಯ ಸರ್ಕಾರದ ಹಣಕಾಸು ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳ ಸ್ಥೂಲ ಸಮೀಕ್ಷೆಯೊಂದಿಗೆ ಅನುಪಾಲನೆಯ ಸ್ಥಿತಿಯನ್ನು ನಿರೂಪಿಸುತ್ತದೆ.

4. 31.3.2010ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಗೆ, ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸಿನ ಮೇಲೆ (ಹದಿಮೂರನೇ ವರದಿ – ಡಿಸೆಂಬರ್ 2011) ಸರ್ಕಾರವು ತೆಗೆದುಕೊಂಡ ಕ್ರಮದ ವರದಿಯ ಮೇಲಿನ ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸುಗಳನ್ನು (ಐದನೇ ವರದಿ – ಜುಲೈ 2015) ಗಣನೆಗೆ ತೆಗೆದುಕೊಂಡು ವರದಿಯನ್ನು ತಯಾರಿಸಲಾಗಿದೆ.

5. ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆಯ ಮತ್ತು ವಿವಿಧ ಇಲಾಖೆಗಳ ವಹಿವಾಟುಗಳ ಲೆಕ್ಕಪರಿಶೋಧನಾ ಫಲಿತಾಂಶಗಳ, ಸರ್ಕಾರದ ಕಂಪನಿಗಳ, ಶಾಸನಬದ್ಧ ನಿಗಮಗಳ, ಮಂಡಳಿಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಭಿಪ್ರಾಯಗಳು ಮತ್ತು ರಾಜಸ್ವ ಸ್ವೀಕೃತಿಗಳ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಒಳಗೊಂಡ ವರದಿಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿದೆ.

6. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## ಹಿನ್ನೆಲೆ

ಕರ್ನಾಟಕದಲ್ಲಿ ಹನ್ನೊಂದನೆ ಹಣಕಾಸು ಆಯೋಗವು ರೂಪಿಸಿದ ಸ್ಥೂಲ ಪ್ರಮಿತಿಗಳನ್ನು ಆಧಾರವಾಗಿಟ್ಟುಕೊಂಡು ರಾಜ್ಯ ಸರ್ಕಾರವು 2000–05ರ ಅವಧಿಯ ಮೊದಲ ಮಧ್ಯಂತರ ವಿತ್ತೀಯ ಯೋಜನೆಯನ್ನು (ಎಂಟಿಎಫ್‌ಪಿ) ರೂಪಿಸುವುದರ ಮೂಲಕ ಹಣಕಾಸು ಸುಧಾರಣೆ ಮತ್ತು ಕ್ರೋಢೀಕರಣಗಳನ್ನು ಮುಂಚೂಣಿಗೆ ತರಲಾಯಿತು. ಮಧ್ಯಂತರ ವಿತ್ತೀಯ ಯೋಜನೆಯು ಆವರ್ತನ ವಾರ್ಷಿಕ ದಾಖಲೆಯಾಗುವುದಲ್ಲದೆ, ಮಧ್ಯಂತರ ವಿತ್ತೀಯ ಯೋಜನೆಗಳಲ್ಲಿ ನಿಗದಿಪಡಿಸಿದ ವಿತ್ತೀಯ ಗುರಿಗಳು ಮತ್ತು ಕಾರ್ಯನೀತಿಗಳು ವಾರ್ಷಿಕ ಆಯವ್ಯಯ ತಯಾರಿಕೆಗೆ ಮತ್ತು ಯೋಜನೆಗಳ ಪುನರ್ವ್ಯವಸ್ಥೆಗೆ ಪೂರಕವಾಗುತ್ತವೆ. ಕರ್ನಾಟಕವು ಮಧ್ಯಂತರ ವಿತ್ತೀಯ ಯೋಜನೆಗೆ ಶಾಸನಬದ್ಧ ಆಧಾರವನ್ನು ಒದಗಿಸಲು ವಿತ್ತೀಯ ಜವಾಬ್ದಾರಿ ಕಾಯಿದೆಯನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ (ಸೆಪ್ಟೆಂಬರ್ 2002). ಈ ಕಾಯಿದೆಯು ರಾಜಸ್ವ ಹೆಚ್ಚಳ, ವಿತ್ತೀಯ ಕೊರತೆಯಲ್ಲಿ ಇಳಿಕೆ, ಹಣಕಾಸು ನೀತಿಯ ಪರಿಣಾಮಕಾರಿ ಜಾರಿಯಲ್ಲಿನ ಅಡಚಣೆಗಳ ನಿವಾರಣೆ, ಮತ್ತು ಸಾಲ, ಋಣ ಮತ್ತು ಕೊರತೆಗಳಲ್ಲಿ ಮಿತಿ ಸಾಧನೆಯ ಮೂಲಕ ವಿವೇಚನಾಯುಕ್ತ ಋಣ ನಿರ್ವಹಣೆ, ಮಧ್ಯಂತರ ವಿತ್ತೀಯ ಚೌಕಟ್ಟಿನ ಮೂಲಕ ಹಣಕಾಸು ನಿರ್ವಹಣೆಯಲ್ಲಿ ಅಧಿಕ ಪಾರದರ್ಶಕತ್ವವನ್ನು ಸಾಧಿಸಿ ವಿತ್ತೀಯ ಸ್ಥಿರತೆ ಮತ್ತು ಸಮರ್ಥತೆಗಳನ್ನು ಖಚಿತ ಪಡಿಸುವ, ಸಾಮಾಜಿಕ ಹಾಗೂ ಭೌತಿಕ ಮತ್ತು ಮಾನವ ಸಂಪನ್ಮೂಲಗಳ ವೃದ್ಧಿಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

## ವರದಿ

ಈ ವರದಿಯು ರಾಜ್ಯ ಸರ್ಕಾರದ 31 ಮಾರ್ಚ್ 2018ರ ಅಂತ್ಯದ ಪರಿಶೋಧಿತ ಲೆಕ್ಕಪತ್ರಗಳನ್ನು ಆಧರಿಸಿ ವಾರ್ಷಿಕ ಲೆಕ್ಕಗಳ ವಿಶ್ಲೇಷಣಾತ್ಮಕ ಸಮೀಕ್ಷೆಯನ್ನು ನೀಡುತ್ತದೆ. ರಾಜ್ಯದ ಹಣಕಾಸಿನ ನಿರ್ವಹಣೆಯನ್ನು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ, ಆಯವ್ಯಯ ದಾಖಲೆಗಳು, ಹದಿನಾಲ್ಕನೇ ಹಣಕಾಸು ಆಯೋಗದ ವರದಿ ಮತ್ತು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದುಕೊಂಡ ಹಣಕಾಸು ದತ್ತಾಂಶಗಳನ್ನು ಆಧರಿಸಿ ತುಲನೆ ಮಾಡಲಾಗಿದೆ. ಈ ವರದಿಯು ಮೂರು ಅಧ್ಯಾಯಗಳನ್ನು ಹೊಂದಿದೆ.

**ಅಧ್ಯಾಯ–I** ಈ ಅಧ್ಯಾಯವು ರಾಜ್ಯ ಸರ್ಕಾರದ ಹಣಕಾಸು ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದ್ದು, 31 ಮಾರ್ಚ್ 2018ರಲ್ಲಿದ್ದಂತೆ ಕರ್ನಾಟಕ ರಾಜ್ಯಸರ್ಕಾರದ ವಿತ್ತ ಸ್ಥಿತಿಯನ್ನು ಮಾಪನ ಮಾಡುತ್ತದೆ. ಜೊತೆಗೆ ಈ ವರದಿಯು, ಬದ್ಧವೆಚ್ಚಗಳ ಪ್ರವೃತ್ತಿ, ಸಾಲವಿಧಾನಗಳ, ವಿತ್ತೀಯ ಪ್ರಮಿತಿಗಳ ಮೇಲೆ ಪರಿಣಾಮ ಬೀರುವ ಕೆಲವು ಲೆಕ್ಕ ಹೊಂದಾಣಿಕೆಗಳ ಒಳನೋಟವನ್ನು ನೀಡುತ್ತವೆ.

**ಅಧ್ಯಾಯ–II** ಈ ಅಧ್ಯಾಯವು ಧನವಿನಿಯೋಗ ಲೆಕ್ಕಗಳನ್ನು ಆಧರಿಸಿದ್ದು, ಧನವಿನಿಯೋಗ ವಿವರಗಳನ್ನು ಮತ್ತು ಸೇವೆಗಳನ್ನು ಒದಗಿಸುವ ಇಲಾಖೆಗಳು, ಹಂಚಿಕೆಯಾದ ಸಂಪನ್ಮೂಲಗಳನ್ನು ಹೇಗೆ ನಿರ್ವಹಿಸಿವೆ ಎಂಬ ವಿವರಗಳನ್ನು ನೀಡುತ್ತದೆ. ವ್ಯವಹಾರಗಳ ಪಾರದರ್ಶಕತೆಯನ್ನು ಬಾಧಿಸುವ ಆಯವ್ಯಯದ ಅಂಶಗಳನ್ನೂ ಸಹ ಈ ಅಧ್ಯಾಯದಲ್ಲಿ ಸೇರಿಸಲಾಗಿದೆ.

**ಅಧ್ಯಾಯ–III** ಈ ಅಧ್ಯಾಯವು ಕರ್ನಾಟಕ ಸರ್ಕಾರದ ವಿವಿಧ ವರದಿ ಸಲ್ಲಿಕಾ ಅಗತ್ಯಗಳು ಮತ್ತು ಹಣಕಾಸು ನಿಯಮಗಳ ಪಾಲನೆಯ ವಿವರಗಳನ್ನು ನೀಡುತ್ತದೆ.

ಈ ವರದಿಯು, ಲೆಕ್ಕಪರಿಶೋಧನಾ ಅಂಶಗಳ ಸಮರ್ಥನೆಗೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹೆಚ್ಚುವರಿ ದತ್ತಾಂಶಗಳ ಅನುಬಂಧಗಳನ್ನೂ ಸಹ ಒಳಗೊಂಡಿದೆ. ಆಯ್ದ ಪಾರಿಭಾಷಿಕ ಪದಗಳ ಪಟ್ಟಿಯನ್ನು ವರದಿಯ ಕೊನೆಯಲ್ಲಿ ನೀಡಲಾಗಿದೆ.

## ಲೆಕ್ಕಪರಿಶೋಧನೆಯ ಆವಿಷ್ಕಾರಗಳು ಮತ್ತು ಶಿಫಾರಸುಗಳು

### ಆರ್ಥಿಕ ಸ್ಥಿತಿ

2013–14ರಿಂದ 2017–18ರ ನಡುವೆ ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳವನ್ನು ಮುಂದುವರೆಸಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಾಪೇಕ್ಷವಾಗಿ ವಿತ್ತೀಯ ಕೊರತೆಯನ್ನು ವಿತ್ತೀಯ ಜವಾಬ್ದಾರಿ ಕಾಯಿದೆಯಡಿ ಕಾಲಕಾಲಕ್ಕೆ ತಿದ್ದುಪಡಿಯಾದ ಮಿತಿಯ ಒಳಗಡೆ ನಿರ್ವಹಿಸಿದೆ. 2017–18ರಲ್ಲಿ ರಾಜ್ಯವು ₹4,518 ಕೋಟಿಗಳ ರಾಜಸ್ವ ಹೆಚ್ಚಳವನ್ನು

ಹೊಂದಿದ್ದು, ಹಿಂದಿನ ವರ್ಷಕ್ಕಿಂತ ₹3,225 ಕೋಟಿಗಳಷ್ಟು ಏರಿಕೆಯಾಗಿದೆ. ರಾಜಸ್ವ ವೆಚ್ಚಗಳಲ್ಲಿ ಕಳೆದ ವರ್ಷಕ್ಕಿಂತ ಶೇಕಡ 8ರಷ್ಟು ಹೆಚ್ಚಳ ಉಂಟಾಗಿದ್ದರೆ ರಾಜಸ್ವ ಸ್ವೀಕೃತಿಗಳ ವೃದ್ಧಿಯು ಶೇಕಡ 10ರಷ್ಟಿದೆ.

ವಿತ್ತೀಯ ಕೊರತೆಯು 2016–17ರಲ್ಲಿ ₹28,664 ಕೋಟಿಗಳಿದ್ದು, ಈ ವರ್ಷದಲ್ಲಿ ₹31,101 ಕೋಟಿಗಳಾಗಿ ಕಳೆದ ವರ್ಷಕ್ಕಿಂತ ₹2,437 ಕೋಟಿಯಷ್ಟು (ಶೇಕಡಾ 9) ಹೆಚ್ಚಳವಾಗಿದೆ. ಈ ವರ್ಷ ಪ್ರಾಥಮಿಕ ಕೊರತೆಯು ₹16,128 ಕೋಟಿಗಳಿದ್ದು ಕಳೆದ ಸಾಲಿಗಿಂತ ₹314 ಕೋಟಿಗಳಷ್ಟು ಹೆಚ್ಚಳವಾಗಿದೆ. ವೃದ್ಧಿತ ಋಣೇತರ ಸ್ವೀಕೃತಿಯು ₹13,800 ಕೋಟಿಗಳಿದ್ದು, ಇದು ವೃದ್ಧಿತ ಪ್ರಾಥಮಿಕ ವೆಚ್ಚ ₹14,114 ಕೋಟಿಗಿಂತ ಕಡಿಮೆ ಇದೆ.

## ರಾಜ್ಯದ ಸ್ವಂತ ಸಂಪನ್ಮೂಲಗಳು

2013–14 ರಿಂದ 2017–18ರ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು ಶೇಕಡಾ 6.65 ರಿಂದ 7.69ರ ನಡುವೆಯಿದ್ದಿತು. ಇದು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಮಂಡಳಿ, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಗಳಿಂದ ಬರಬೇಕಾದ ಖಾತರಿ ಶುಲ್ಕ (₹13.80 ಕೋಟಿ) ಮತ್ತು ಸಾರಿಗೆ ನಿಗಮಗಳಿಂದ ಬಾಕಿಯಿದ್ದ ಮೋಟಾರು ವಾಹನ ತೆರಿಗೆ ಬಾಕಿಗಳನ್ನು ಸಹಾಯಧನವೆಂದು ಹೊಂದಾಣಿಕೆ ಮಾಡಿದ್ದು (₹125.66 ಕೋಟಿ) ಒಟ್ಟು ₹139.46 ಕೋಟಿಗಳ ಪುಸ್ತಕ ಹೊಂದಾಣಿಕೆಯಿಂದ, ರಾಜಸ್ವ ಸ್ವೀಕೃತಿಗಳನ್ನು ಕೃತಕವಾಗಿ ಹೆಚ್ಚಿಸಿದೆ.

ರಾಜಸ್ವ ಸ್ವೀಕೃತಿಗಳಿಗೆ ತೆರಿಗೆಯೇತರ ಆದಾಯದ ಅನುಪಾತವು 2013–14ರಲ್ಲಿದ್ದ ಶೇಕಡ 4.50ರಿಂದ ಈ ವರ್ಷ ಶೇಕಡ 4.41ಕ್ಕೆ ಇಳಿದಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (₹13,10,879 ಕೋಟಿ) ಇದರ ಅನುಪಾತವು ನಗಣ್ಯವಾಗಿದ್ದು (2017–18ರಲ್ಲಿ ಶೇಕಡಾ 0.49) ಮುಂಬರುವ ವರ್ಷಗಳಲ್ಲಿ ವೆಚ್ಚ ಸುಧಾರಣಾ ಆಯೋಗವು ಶಿಫಾರಸು ಮಾಡಿದಂತೆ ಬಳಕೆದಾರರ ಕರದ ಪರಿಷ್ಕರಣೆಯ ಮೂಲಕ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವ ಅಗತ್ಯವಿದೆ. 2017–18ರಲ್ಲಿ ಸ್ವಾಮ್ಯಶುಲ್ಕದ ಶತಾಂಶವಾದ ಹುಲಿ ಸಂರಕ್ಷಣಾ ಪ್ರತಿಷ್ಠಾನಕ್ಕೆ ಸಂಬಂಧಿಸಿದ ಬಳಕೆದಾರರ ಕರ (₹46.75 ಕೋಟಿ) ಮತ್ತು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ವಂತಿಗೆಯನ್ನು (₹909.96 ಕೋಟಿ 31.03.2018 ಅಂತ್ಯಕ್ಕೆ) ರಾಜ್ಯ ಸಂಚಿತ ನಿಧಿಗೆ ಜಮೆ ಮಾಡಿರಲಿಲ್ಲ. ಬಳಕೆದಾರರ ಕರವನ್ನು ಜಮೆ ಮಾಡದಿರುವುದು ವಿಧಾನಮಂಡಲದ ಪರಿಶೀಲನೆಯನ್ನು ತಪ್ಪಿಸಿಕೊಳ್ಳುತ್ತದೆ. ಆದ್ದರಿಂದ ರಾಜಸ್ವ/ವೆಚ್ಚದ ಜಾಡನ್ನು ಗುರುತಿಸಲು ಮತ್ತು ಒಂದು ವಲಯದಲ್ಲಿ ಉತ್ಪನ್ನವಾದ ಮೊತ್ತಗಳು ಅದೇ ವಲಯಕ್ಕೆ ಬಳಕೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಇಂತಹ ಮೊತ್ತಗಳು ಜಮೆ/ಬಿಡುಗಡೆಗಳಿಗೆ ಸೂಕ್ತ ಕ್ರಮವನ್ನು ನೆಲೆಗೊಳಿಸುವ ಅಗತ್ಯವಿದೆ.

## ಹದಿನಾಲ್ಕನೆಯ ಹಣಕಾಸು ಆಯೋಗದ ಅನುದಾನಗಳ ಪ್ರಶಸ್ತ ಬಳಕೆ

2017–18ನೇ ಸಾಲಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೂಲ ಅನುದಾನದಡಿ ₹24.24 ಕೋಟಿಗಳಷ್ಟು ಕಡಿಮೆ ಬಿಡುಗಡೆಯಾಗಿದ್ದವು. ಜಿಎಸ್‌ಟಿಯು 2017–18ರಿಂದ ಜಾರಿಯಾಗಿದ್ದರೂ ವಿಪತ್ತು ಪರಿಹಾರದಡಿಯ ಮೇಲಿನ ಅನುದಾನಗಳು ಹದಿಮೂರನೇ ಹಣಕಾಸು ಆಯೋಗದ ಶಿಫಾರಸಿನಂತೆ 75:25 ಅನುಪಾತದಲ್ಲಿಯೇ ಮುಂದುವರಿದಿದ್ದವು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳು ಮಾರ್ಚ್ 2018ರ ಅಂತ್ಯದವರೆಗೂ ಬಿಡುಗಡೆಯಾಗಿರಲಿಲ್ಲ.

## ನಾಲ್ಕನೆಯ ರಾಜ್ಯ ಹಣಕಾಸು ಆಯೋಗ

ನಾಲ್ಕನೆಯ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳು 2018–19ರಿಂದ 2022–23ರವರೆಗೆ ಅನ್ವಯವಾಗುವುದರಿಂದಾಗಿ, ಮೂರನೆಯ ರಾಜ್ಯ ಹಣಕಾಸು ಆಯೋಗದ ಶಿಫಾರಸಿನ ಅನುಷ್ಠಾನದ ಅವಧಿಯನ್ನು 2017–18ರವರೆಗೆ ವಿಸ್ತರಿಸಲಾಗಿತ್ತು. ಉದ್ಧರಿಯೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯಲ್ಲಿ ಸ್ಥಳೀಯ ಸಂಸ್ಥೆಗಳ ಪಾಲು ಶೇಕಡ 42ರಿಂದ ಶೇಕಡ 48ಕ್ಕೆ ಏರಿಕೆಯಾಗುತ್ತದೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅದು ಹಂತಹಂತವಾಗಿ ಶೇಕಡ 10ರಿಂದ ಶೇಕಡ 12ಕ್ಕೆ ಏರಿಕೆಯಾಗುವುದು.

## ರಾಜಸ್ವ ವೆಚ್ಚ

ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ವಿಭಾಗದಡಿ ವೆಚ್ಚವು ಹಿಂದಿನ ವರ್ಷಕ್ಕಿಂತ ಕ್ರಮವಾಗಿ ಶೇಕಡ 8 ಮತ್ತು ಶೇಕಡ 6ರಷ್ಟು ವೃದ್ಧಿಯಾಗಿದ್ದರೆ ಅದು ಸಾಮಾನ್ಯ ಸೇವೆಗಳಡಿ ಶೇಕಡ 10ರಷ್ಟು ವೃದ್ಧಿಯಾಗಿತ್ತು. ಶೇಕಡ 78ರಷ್ಟು ರಾಜಸ್ವ ವೆಚ್ಚವು ಸಂಬಳ, ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ, ಬಡ್ಡಿ ಪಾವತಿ, ನಿವೃತ್ತಿ ವೇತನ, ಸಹಾಯಧನಗಳು, ಆಡಳಿತ ವೆಚ್ಚ, ಸಹಾಯಾನುದಾನ ಮತ್ತು ಆರ್ಥಿಕ ಬೆಂಬಲಗಳ ಬದ್ಧ ವೆಚ್ಚಕ್ಕೆ ವಿನಿಯೋಗವಾಗಿದೆ. ಬದ್ಧ ವೆಚ್ಚಗಳು ರಾಜಸ್ವ ಸ್ವೀಕೃತಿಗಳ ಶೇಕಡ 75ರಷ್ಟಿದೆ. ಸಹಾಯಧನವು 2016–17ರಲ್ಲಿ ₹14,387 ಕೋಟಿಯಿದ್ದು, 2017–18ರಲ್ಲಿ ₹14,148 ಕೋಟಿಗೆ ಇಳಿದಿದೆ ಮತ್ತು ಆರ್ಥಿಕ ಬೆಂಬಲ, ಉತ್ತೇಜನ ರೂಪದ ಸಹಾಯಧನವು, 2016–17ರಲ್ಲಿ ₹3,714 ಕೋಟಿಗಳಿದ್ದು, 2017–18ರಲ್ಲಿ ₹3,318 ಕೋಟಿಗೆ ಇಳಿದಿದೆ. ಹನ್ನೆರಡನೇ ಹಣಕಾಸು ಆಯೋಗವು ಪಾರದರ್ಶಕತೆ ತರಲು ಆರ್ಥಿಕ ಬೆಂಬಲ, ಉತ್ತೇಜನ ರೂಪದ ಮುಂತಾದ ಸಹಾಯಧನಗಳ ವೆಚ್ಚಗಳನ್ನು ಹಣಕಾಸು ಲೆಕ್ಕಗಳಲ್ಲಿ ಸೇರಿಸಬೇಕೆಂದು ಶಿಫಾರಸು ಮಾಡಿತ್ತು. ಆದರೆ ಇದನ್ನು ಪಾಲಿಸಲಾಗಿಲ್ಲ.

## ವೆಚ್ಚದ ಗುಣಮಟ್ಟ

2017–18ರಲ್ಲಿ ಬಂಡವಾಳ ವೆಚ್ಚದ ಪಾಲು ಒಟ್ಟು ವೆಚ್ಚದ ಶೇಕಡ 20ರಷ್ಟಿದ್ದು, (₹35,760 ಕೋಟಿ). ಇದು ಕಳೆದ ವರ್ಷದಲ್ಲಿ ಶೇಕಡ 19ರಷ್ಟಿತ್ತು (₹30,084 ಕೋಟಿ). 2017–18ರ ಅಂತ್ಯದಲ್ಲಿದ್ದಂತೆ ₹967 ಕೋಟಿಗಳನ್ನು ಅಪೂರ್ಣ ಕಾಮಗಾರಿಗಳಲ್ಲಿ ತೊಡಗಿಸಿದ್ದು, ಈ ಮೊತ್ತವು ನಿರ್ಬಂಧಿತವಾಗಿದೆ. 31 ಮಾರ್ಚ್ 2018ರ ಅಂತ್ಯಕ್ಕೆ ಕಂಪೆನಿಗಳಲ್ಲಿ/ನಿಗಮಗಳಲ್ಲಿ ಹೂಡಿರುವ ₹65,146 ಕೋಟಿಗಳಿಂದ ಬಂದ ಪ್ರತಿಫಲವು ನಗಣ್ಯವಾಗಿದೆ (₹78.83 ಕೋಟಿ). ಹೂಡಿಕೆಯು ನಷ್ಟದಲ್ಲಿರುವ ಕಂಪೆನಿಗಳು/ ನಿಗಮಗಳಲ್ಲಿ ಹೂಡಿರುವ ₹38,912 ಕೋಟಿಗಳನ್ನು (ಶೇಕಡ 60) ಒಳಗೊಂಡಿದೆ.

## ನಿಧಿಗಳು ಮತ್ತು ಇತರ ಜವಾಬ್ದಾರಿಗಳು

ವ್ಯವಹಾರವು ಸರ್ಕಾರದ ಲೆಕ್ಕ ಪುಸ್ತಕಗಳ ಮೂಲಕ ಹಾದು ಹೋಗಿಲ್ಲವಾದ್ದರಿಂದ ಸಂಚಿತ ಋಣ ಪರಿಹಾರ ನಿಧಿಯಿಂದ ಮಾಡಿದ್ದ ₹2,070 ಕೋಟಿಗಳ ಹೂಡಿಕೆಯ ಮೇಲೆ ಸಂಚಯವಾದ ₹484.36 ಕೋಟಿಗಳಷ್ಟು ಬಡ್ಡಿಯು ರಾಜ್ಯ ಸರ್ಕಾರದ ಆಸ್ತಿಯ ಭಾಗವಾಗಿರಲಿಲ್ಲ. ಹಸಿರು ತೆರಿಗೆ ಉಪಕರದ ₹62.25 ಕೋಟಿಗಳನ್ನು ಹಾಗೂ ತತ್ಸಂಬಧವಾದ ವೆಚ್ಚವನ್ನು ಹಸಿರು ತೆರಿಗೆ ನಿಧಿಗೆ ವರ್ಗಾಯಿಸಿರಲಿಲ್ಲ. ಸಂಚಿತ ನಿಧಿಯಿಂದ ಸಾರ್ವಜನಿಕ ಲೆಕ್ಕಗಳಲ್ಲಿನ ಮೂಲ ಸೌಕರ್ಯ ಉಪಕ್ರಮಣ ನಿಧಿಗೆ (ಐಐಎಫ್) ಬಿಎಮ್‌ಆರ್‌ಸಿಎಲ್ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗೆ ಮಾಡಿದ ₹2,768 ಕೋಟಿಗಳ ವರ್ಗಾವಣೆ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಅರಣ್ಯ ಅಭಿವೃದ್ಧಿ ನಿಧಿಗೆ ವೆಚ್ಚವನ್ನು (₹299.09 ಕೋಟಿ) ವರ್ಗಾಯಿಸದಿರುವುದು ರಾಜಸ್ವ ವೆಚ್ಚವನ್ನು ಕೃತಕವಾಗಿ ಹಿಗ್ಗಿಸಿದ್ದವು. ಖಾತರಿ ವಿಮೋಚನಾ ನಿಧಿಯನ್ನು ಪುನಶ್ಚೇತನ ಗೊಳಿಸಿರಲಿಲ್ಲ.

## ಋಣ ಸಹಿಷ್ಣುತೆ

ರಾಜ್ಯದ ಒಟ್ಟು ವಿತ್ತೀಯ ಜವಾಬ್ದಾರಿಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳ ಪ್ರಮಾಣವು ಗಣನೀಯವಾಗಿತ್ತು (ಶೇಕಡಾ 51). 2017–18ಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಋಣದ ಶತಾಂಶವು ಶೇಕಡ 18.78 ರಷ್ಟಿದ್ದು, ಇದು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರ ನಿಗದಿತ ಶೇಕಡ 25 ಮಿತಿಯ ಒಳಗಿದೆ. ರಾಜ್ಯಕ್ಕೆ ಲಭ್ಯವಿದ್ದ ನಿವ್ವಳ ಋಣವು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ 2017–18ರಲ್ಲಿ (₹5,005 ಕೋಟಿ) ಶೇಕಡ 63ರಷ್ಟು ಕಡಿಮೆಯಾಗಿತ್ತು.

## ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

2017–18ರಲ್ಲಿ ಒಟ್ಟು ಆಯವ್ಯಯ ಅವಕಾಶ ₹2,09,479 ಕೋಟಿಗಳಿಗೆ ಪ್ರತಿಯಾಗಿ ವೆಚ್ಚವು ₹1,92,320 ಕೋಟಿಗಳಷ್ಟಿದ್ದು ₹17,159 ಕೋಟಿ ಬಳಕೆಯಾಗದೇ ಉಳಿದಿತ್ತು. (ಶೇಕಡ ಎಂಟು). ಅನುಷ್ಠಾನಾಧಿಕಾರಿಗಳಿಗೆ ಸಂಚಿತ ನಿಧಿಯಿಂದ ಬಿಡುಗಡೆಯಾಗುವ ಮೊತ್ತವು ಅಗತ್ಯವನ್ನು ಆಧರಿಸಿರಬೇಕೇ ಹೊರತು ಆಯವ್ಯಯ ಅವಕಾಶ ರದ್ದಾಗುವುದನ್ನು ತಪ್ಪಿಸಲು ಆಗಬಾರದು. ವೆಚ್ಚವನ್ನು ₹903.02 ಕೋಟಿಗಳಷ್ಟು ಅಧಿಕವಾಗಿ ತೋರಿಸಿದ್ದು, ಇದು ಪ್ರಮುಖವಾಗಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಿದ ಮೊತ್ತಗಳು ಬಳಕೆ ಆಗದಿರುವುದರಿಂದಾಗಿತ್ತು, ₹199.44 ಕೋಟಿಗಳ ಅವಕಾಶ ಮೀರಿದ ವೆಚ್ಚವು (ಅನುದಾನ ಸಂಖ್ಯೆ 3ರ ಅಡಿ, ₹12 ಕೋಟಿ, ಅನುದಾನ ಸಂಖ್ಯೆ 8ರ ಅಡಿ

₹80.98 ಕೋಟಿ, ಅನುದಾನ ಸಂಖ್ಯೆ 24ರ ಅಡಿ ₹12.95 ಕೋಟಿ, ಅನುದಾನ ಸಂಖ್ಯೆ 29ರ ಅಡಿ ₹93.51 ಕೋಟಿ) ಸಂವಿಧಾನದ ಅನುಚ್ಛೇದ 205ರ ಅನ್ವಯ ಸಕ್ರಮಗೊಳಿಸಬೇಕಾಗಿದೆ.

13 ಪ್ರಕರಣಗಳಲ್ಲಿ ಪಡೆದ ಪೂರಕ ಅಂದಾಜುಗಳ ಮೊತ್ತ ₹171.53 ಕೋಟಿಗಳು ಅನಗತ್ಯವಾಗಿದ್ದು, 44 ಪ್ರಕರಣಗಳಲ್ಲಿ ಪುನರ್ವಿನಿಯೋಗವು ಅನುಚಿತವಾಗಿದ್ದು ಅವಕಾಶದ ಬಳಕೆಯಾಗದಿರುವುದು ಅಥವಾ ಅವಕಾಶಕ್ಕಿಂತ ಹೆಚ್ಚು ವೆಚ್ಚವಾಗಿರುವದರಲ್ಲಿ ಫಲಿತವಾಗಿದೆ. ₹5 ಕೋಟಿಗಿಂತಲೂ ಹೆಚ್ಚಿನ ಉಳಿತಾಯವಾಗಿದ್ದ 17 ಅನುದಾನಗಳಲ್ಲಿ ಒಟ್ಟು ₹2,246.23 ಕೋಟಿಗಳ ಮೊತ್ತವು ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ಅಧ್ಯರ್ಪಣೆಯಾಗಿದೆ.

ಆರು ಅನುದಾನಗಳ ಆರು ಪ್ರಕರಣಗಳಲ್ಲಿ, ₹436.56 ಕೋಟಿಗಳ ಹೆಚ್ಚುವರಿ ವೆಚ್ಚವು ಹೊಸ ಸೇವೆ/ಹೊಸ ಸೇವಾಸಾಧನ ಎಂದು ಪರಿಗಣಿಸಬೇಕಿದ್ದು, ಶಾಸಕಾಂಗದ ಅನುಮೋದನೆ ಇಲ್ಲದೇ ವೆಚ್ಚ ಮಾಡಲಾಗಿದೆ.

ಬಂಡವಾಳ/ರಾಜಸ್ವ ವೆಚ್ಚಗಳ ನಡುವೆ ₹3,476.63 ಕೋಟಿಗಳು ತಪ್ಪು ವರ್ಗೀಕರಣಗೊಂಡಿದ್ದು ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರಿದೆ. ಸಂಯುಕ್ತ ಉದ್ದೇಶ ಶೀರ್ಷಿಕೆ 059–ಇತರೆ ವೆಚ್ಚಗಳ ಅಡಿಯ ವೆಚ್ಚವು ಕನಿಷ್ಠವಾಗಿರಬೇಕಿದ್ದು ಅದು ₹1,597.83 ಕೋಟಿಗಳಷ್ಟು ತಪ್ಪು ವರ್ಗೀಕರಣವಾಗಿರುವುದು ಕಂಡುಬಂದಿದೆ.

ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದಲ್ಲಿ ಹೇಳಿರುವಂತೆ ಪ್ರಸಕ್ತ ವರ್ಷದ ಆಯವ್ಯಯ ಗುರಿಗಳಿಗೆ ಸಂಬಂಧಿಸಿದಂತೆ ಪೂರಕ ಅನುದಾನಗಳ ಪರಿಣಾಮವನ್ನು ಪೂರ್ತಿಯಾಗಿ ನಿವಾರಿಸಲು ವೆಚ್ಚಗಳ ಕಡಿತ/ಆದಾಯದ ಶೇಖರಣೆಯನ್ನು ಸೂಚಿಸುವ ವಿವರಣಾಪಟ್ಟಿಯೊಂದನ್ನು ನೀಡುವಲ್ಲಿ ವಿಫಲವಾದ್ದರಿಂದ ಪೂರಕ ಅನುದಾನಗಳನ್ನು ವಿತ್ತೀಯ ತಟಸ್ಥವಾಗಿದ್ದವೆಂದು ನಿರ್ಧರಣೆ ಮಾಡಲಾಗಲಿಲ್ಲ.

93 ಪ್ರಕರಣಗಳಲ್ಲಿ ₹1.11 ಕೋಟಿಗಳಷ್ಟು ಕುಟುಂಬ ಪಿಂಚಣಿಯು ಅಧಿಕವಾಗಿ ಪಾವತಿಯಾಗಿದ್ದು, 66 ಪ್ರಕರಣಗಳಲ್ಲಿ ₹1.15 ಕೋಟಿ ಕುಟುಂಬ ಪಿಂಚಣಿಯ ಪಾವತಿಯು, ಪುನರಾವರ್ತನೆಯಾಗಿದ್ದು ಅಧಿಕ ಕುಟುಂಬ ಪಿಂಚಣಿ ಪಾವತಿಯು ಮುಂದುವರೆದಿತ್ತು.

ಅನೇಕ ಅನುದಾನಗಳಲ್ಲಿ ಭಾರಿ ಪ್ರಮಾಣದ ಅವಕಾಶಗಳು ಬಳಕೆಯಾಗದೆ ಉಳಿದಿರುವುದು ಕಂಡುಬಂದಿದ್ದು, ಅವಕಾಶಗಳು ಬಳಕೆಯಾಗದೆ ಉಳಿದಿರುವುದನ್ನು ತಪ್ಪಿಸಲು ಎಲ್ಲಾ ಇಲಾಖೆಗಳಲ್ಲೂ ಆಯವ್ಯಯ ನಿಯಂತ್ರಣವನ್ನು ಬಲಪಡಿಸಬೇಕಾಗಿದೆ. ಸತತವಾಗಿ ಭಾರಿ ಪ್ರಮಾಣದ ಆಯವ್ಯಯ ಅವಕಾಶಗಳು ಬಳಕೆಯಾಗದಿರುವುದು, ಅಧಿಕ ವೆಚ್ಚವಾಗಿರುವುದು ಕಂಡು ಬಂದಿರುವುದರಿಂದ, ಆಯವ್ಯಯ ಕಸರತ್ತು ಹೆಚ್ಚು ವಾಸ್ತವಿಕವಾಗಿರಬೇಕಾಗಿದ್ದು, ಸತತ ಉಳಿಕೆಗಳು, ಅಧಿಕವೆಚ್ಚವನ್ನು ತಪ್ಪಿಸಬೇಕಾಗಿದೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳ ಬಿಡುಗಡೆ ಮತ್ತು ಲೆಕ್ಕವಿಧಾನದಲ್ಲಿ ತಪ್ಪಾದ ಆಯವ್ಯಯ ಮಾರ್ಗಗಳನ್ನು ಅನುಸರಿಸಿರುವುದರಿಂದ ಆಯವ್ಯಯ ವೆಚ್ಚಗಳು ನ್ಯೂನತೆಗೊಳಗಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವಿಭಾಗದ ಆಯವ್ಯಯ ವೆಚ್ಚಗಳನ್ನು ಹೊಂದಿಸಲು ನಿಖರವಾದ ಶೀರ್ಷಿಕೆಗಳನ್ನು ತೆರೆಯಬೇಕಾಗಿದ್ದು, ಇವು ಬಿಡುಗಡೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು ಎಂದು ಮಾತ್ರ ಸೂಚಿಸಬೇಕು. ನಗರ ಸ್ಥಳೀಯ ಸಂಸ್ಥೆಗಳ (ವೆಚ್ಚ ವರ್ಗೀಕರಣವು ರಾಜ್ಯ ಆಯವ್ಯಯದಲ್ಲಿ ಸೇರಿಕೊಳ್ಳುವ ಸಾಧ್ಯತೆಯನ್ನು ತಪ್ಪಿಸಲು) ಹಂಚಿಕೆಯ ಆಯವ್ಯಯ ದಾಖಲೆಗಳನ್ನು ಪರಿಶೀಲಿಸುವ ಅಗತ್ಯವಿದೆ.

## ಆರ್ಥಿಕ ನಿರೂಪಣೆ

ಶಾಸಕಾಂಗದ ಹಣಕಾಸು ನಿಯಂತ್ರಣದ ತತ್ವಗಳಿಗೆ ವ್ಯತಿರಿಕ್ತವಾಗಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯು ದೀರ್ಘಕಾಲದಿಂದ ಬಾಕಿ ಉಳಿದಿದೆ ಮತ್ತು ದೊಡ್ಡ ಪ್ರಮಾಣದ ಮೊತ್ತಗಳನ್ನು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಉಳಿಸಿಕೊಳ್ಳಲಾಗಿದೆ. ವೆಚ್ಚ ಹೊಂದಾಣಿಕೆಯಾಗದಿರುವುದು ಕ್ರಮವಾಗಿ ಒಟ್ಟು ವೆಚ್ಚದ ಶೇಕಡ 20ರಷ್ಟಿದೆ. ಕೆಲವು ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಗಳಲ್ಲಿ ವ್ಯತಿರಿಕ್ತ ಶಿಲ್ಕುಗಳಿದ್ದು ಅವುಗಳನ್ನು ಬಗೆಹರಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಅಮಾನತ್ತು ಲೆಕ್ಕಗಳು ಸರ್ಕಾರದ ನಗದು ಶಿಲ್ಕುಗಳ ಮೇಲೆ ಪರಿಣಾಮ ಬೀರುವುದರಿಂದ ಅವುಗಳ ತೀರುವಳಿಗೆ ಸಂಬಂಧಿತ ಪ್ರಾಧಿಕಾರಗಳೊಂದಿಗೆ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಸರ್ಕಾರದ ಪರವಾಗಿ ಸ್ವೀಕರಿಸಿದ ರಾಜಸ್ವಗಳನ್ನು ಇಲಾಖೆಗಳು ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ಸಂಚಿತ ನಿಧಿಗೆ ಜಮೆ ಮಾಡಬೇಕು. ರಾಜಸ್ವ ಲೆಕ್ಕಶೀರ್ಷಿಕೆಗೆ ಸಂಬಂಧಿಸಿದ ವೆಚ್ಚವನ್ನು ಬಂಡವಾಳ/ಸಾಲದ ಲೆಕ್ಕಶೀರ್ಷಿಕೆಗಳಡಿ ತಪ್ಪು ವರ್ಗೀಕರಣ ಮಾಡಿದ್ದ ಪ್ರಕರಣಗಳಿದ್ದು ಸರ್ಕಾರಿ ಲೆಕ್ಕಗಳಲ್ಲಿನ ವ್ಯವಹಾರಗಳು ಲೆಕ್ಕ ಶೀರ್ಷಿಕೆಗಳನ್ನು ಸರಿಯಾಗಿ ಬಿಂಬಿಸುವ ಮೂಲಕ ಪಾರದರ್ಶಕವಾಗಿರಬೇಕು.

# ಅಧ್ಯಾಯ - I

# ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

# 1

# ಅಧ್ಯಾಯ 1
# ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು

## ರಾಜ್ಯದ ಚಿತ್ರಣ

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ ಭಾರತದ ಆರನೆಯ ಅತಿದೊಡ್ಡ ರಾಜ್ಯವಾಗಿದ್ದು (1,91,791 ಚ.ಕಿ.ಮೀ) ಜನಸಂಖ್ಯೆಯಲ್ಲಿ ಎಂಟನೆಯ ಸ್ಥಾನದಲ್ಲಿದೆ. ರಾಜ್ಯದ ಜನಸಂಖ್ಯೆಯು ದಶಕದಲ್ಲಿ ಶೇಕಡ 16ರಷ್ಟು ಹೆಚ್ಚಳವನ್ನು ದಾಖಲಿಸಿದೆ. ಬಡತನ ರೇಖೆಯ ಕೆಳಗಿರುವ ಜನಸಂಖ್ಯೆಯು ಭಾರತದ ಸರಾಸರಿ 21.90 ಶತಾಂಶಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಇದು 20.90ರಷ್ಟಿದೆ (2011–12). ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ರಾಒಆಂಉ) 2017–18ರಲ್ಲಿ ಮಾರುಕಟ್ಟೆ ಬೆಲೆಗಳಲ್ಲಿ ₹13,10,879 ಕೋಟಿಗಳಷ್ಟಿದೆ. ರಾಜ್ಯದ ಸಾಕ್ಷರತೆಯ ದರವು 2001–11ರ ಅವಧಿಯಲ್ಲಿ ಶೇಕಡ 66.60ರಿಂದ ಶೇಕಡ 75.40ಕ್ಕೆ ಹೆಚ್ಚಿದೆ. ರಾಜ್ಯದ ತಲಾದಾಯವು ₹1,74,551 ಗಳಷ್ಟಿದ್ದು, ರಾಷ್ಟ್ರದ ಸರಾಸರಿಯು ₹1,11,782 ರಷ್ಟಿದೆ (ಮಾರ್ಚ್ 2018 ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ 2017–18). ರಾಜ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ದತ್ತಾಂಶಗಳನ್ನು **ಅನುಬಂಧ 1.1**ರಲ್ಲಿ ನೀಡಲಾಗಿದೆ.

## ರಾಜ್ಯದ ಒಟ್ಟು ಆಂತರಿಕ ಉತ್ಪನ್ನ

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಒಂದು ನಿರ್ದಿಷ್ಟ ಅವಧಿಯಲ್ಲಿ ರಾಜ್ಯದ ಒಳಗೆ ಉತ್ಪಾದಿಸಲಾಗಿರುವ ಹಾಗೂ ಅಧಿಕೃತವಾಗಿ ಅಂಗೀಕರಿಸಲ್ಪಟ್ಟಿರುವ ಅಂತಿಮ ಸರಕುಗಳ ಮತ್ತು ಸೇವೆಗಳ ಮೌಲ್ಯವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯು ರಾಜ್ಯದ ಜನತೆಯ ಜೀವನ ಮಟ್ಟವನ್ನು ಸೂಚಿಸುವುದರಿಂದ ಅದು ರಾಜ್ಯದ ಆರ್ಥಿಕ ಸ್ಥಿತಿಯ ಪ್ರಮುಖ ಸೂಚಕವಾಗಿದೆ. ಪ್ರಸಕ್ತ ದರಗಳಲ್ಲಿ ಭಾರತದ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿನ ವೃದ್ಧಿಯ ಪ್ರವೃತ್ತಿಯನ್ನು **ಅನುಬಂಧ 1.1**ರಲ್ಲಿ ತೋರಿಸಲಾಗಿದೆ. ಅನುಬಂಧದಲ್ಲಿ ಗಮನಿಸಿದಂತೆ, 2013–14ರಿಂದ 2017–18ರ ವರ್ಷಗಳಲ್ಲಿ ಕರ್ನಾಟಕದ ರಾಒಆಂಉದ ವೃದ್ಧಿದರವು ಪ್ರಸಕ್ತ ಬೆಲೆಗಳಲ್ಲಿ ಭಾರತದ ಸರಾಸರಿ ವೃದ್ಧಿ ದರಕ್ಕಿಂತ ಅಧಿಕವಾಗಿತ್ತು.

## 1.1 ಪೀಠಿಕೆ

ಈ ಅಧ್ಯಾಯವು ಕರ್ನಾಟಕ ರಾಜ್ಯ ಸರ್ಕಾರದ 2017–18ರಲ್ಲಿನ ಹಣಕಾಸಿನ ವ್ಯವಹಾರಗಳ ಯಥಾದೃಷ್ಟಿಯ ಸ್ಥೂಲ ಚಿತ್ರಣವನ್ನು ಒದಗಿಸುತ್ತದೆ. ಅದು, ಕಳೆದ ಐದು ವರ್ಷಗಳಲ್ಲಿನ ಒಟ್ಟಾರೆ ಪ್ರವೃತ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಹಣಕಾಸಿನ ಸೂಚಕಗಳಲ್ಲಿನ ಪ್ರಮುಖ ಬದಲಾವಣೆಗಳನ್ನು ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಯು ಹಣಕಾಸು ಲೆಕ್ಕಗಳು ಹಾಗೂ ರಾಜ್ಯಸರ್ಕಾರದಿಂದ ಪಡೆದ ಮಾಹಿತಿಗಳನ್ನು ಆಧರಿಸಿದೆ. ಸರ್ಕಾರದ ಲೆಕ್ಕಗಳ ವಿನ್ಯಾಸ ಹಾಗೂ ಹಣಕಾಸು ಲೆಕ್ಕಗಳ ರೂಪುರೇಖೆಗಳನ್ನು **ಅನುಬಂಧ 1.2**ರಲ್ಲಿ ವಿವರಿಸಲಾಗಿದೆ.

### 1.1.1 2017–18ರಲ್ಲಿನ ವಿತ್ತ ವ್ಯವಹಾರಗಳ ಸಾರಾಂಶ

**ಕೋಷ್ಟಕ 1.1** ಮತ್ತು **ಅನುಬಂಧ 1.3**ರಲ್ಲಿ ರಾಜ್ಯ ಸರ್ಕಾರದ ಪ್ರಸಕ್ತ ವರ್ಷದ (2017–18) ವಿತ್ತ ವ್ಯವಹಾರಗಳ ಸಂಕ್ಷಿಪ್ತ ಸಾರಾಂಶವನ್ನು ಹಿಂದಿನ ವರ್ಷಕ್ಕೆ (2016–17) ಹೋಲಿಸಿದಂತೆ ನೀಡಲಾಗಿದ್ದು, **ಅನುಬಂಧ 1.4**ರಲ್ಲಿ ಸ್ವೀಕೃತಿಗಳ ಮತ್ತು ಬಟವಾಡೆಗಳ ವಿವರಗಳೊಂದಿಗೆ ಕಳೆದ ನಾಲ್ಕು ವರ್ಷಗಳಲ್ಲಿನ ಒಟ್ಟಾರೆ ವಿತ್ತೀಯ ಸ್ಥಿತಿಯನ್ನು ಸೂಚಿಸಲಾಗಿದೆ.

***ಕೋಷ್ಟಕ 1.1: 2017–18 ರಲ್ಲಿ ವಿತ್ತ ವ್ಯವಹಾರಗಳ ಸಾರಾಂಶ***

*(ಕೋಟಿ ರೂಪಾಯಿಗಳಲ್ಲಿ)*

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| | 2016-17 | 2017-18 | | 2016-17 | 2017-18 |
| ಭಾಗ–ಎ ರಾಜಸ್ವ | | | | | |
| ರಾಜಸ್ವ ಸ್ವೀಕೃತಿಗಳು | **1,33,213.79** | **1,46,999.65** | **ರಾಜಸ್ವ ವೆಚ್ಚ** | **1,31,920.75** | **1,42,482.33** |
| ತೆರಿಗೆ ಆದಾಯ | **82,956.13** | **87,130.38*** | **ಸಾಮಾನ್ಯ ಸೇವೆಗಳು** | **31,264.56** | **34,484.44** |
| ತೆರಿಗೆಯೇತರ ರಾಜಸ್ವ | **5,794.53** | **6,476.53** | **ಸಾಮಾಜಿಕ ಸೇವೆಗಳು** | **54,549.24** | **58,652.35** |
| ಕೇಂದ್ರ ತೆರಿಗೆಗಳು/ಸುಂಕಗಳಲ್ಲಿನ ಪಾಲು | 28,759.94 | 31,751.96^ | ಆರ್ಥಿಕ ಸೇವೆಗಳು | 40,421.37 | 42,855.78 |
| ಭಾರತ ಸರ್ಕಾರದಿಂದ ಪಡೆದ ಸಹಾಯಾನುದಾನಗಳು ಮತ್ತು ವಂತಿಗೆಗಳು | 15,703.19 | 21,640.78# | ಸಹಾಯಾನುದಾನಗಳು ಮತ್ತು ವಂತಿಗೆಗಳು | 5,685.58 | 6,489.76 |
| ಭಾಗ–ಬಿ: ಬಂಡವಾಳ ಮತ್ತು ಇತರೆ | | | | | |
| ಇತರೆ ಬಂಡವಾಳ ಸ್ವೀಕೃತಿಗಳು | **26.96** | **3.70** | **ಬಂಡವಾಳ ವೆಚ್ಚ** | **28,150.43** | **30,666.76** |
| | | | ಸಾಮಾನ್ಯ ಸೇವೆಗಳು | 1,060.39 | 977.45 |
| | | | ಸಾಮಾಜಿಕ ಸೇವೆಗಳು | 6,896.84 | 8,676.76 |
| | | | ಆರ್ಥಿಕ ಸೇವೆಗಳು | 20,193.20 | 21,012.55 |
| ಸಾಲಗಳ ಮತ್ತು ಮುಂಗಡಗಳ ವಸೂಲಿಗಳು | **99.84** | **136.93** | **ಸಾಲಗಳ ಮತ್ತು ಮುಂಗಡಗಳ ಬಟವಾಡೆ** | **1,934.38** | **5,092.22** |
| ಸಾರ್ವಜನಿಕ ಋಣ ಸ್ವೀಕೃತಿಗಳು** | **31,155.92** | **25,121.86** | **ಸಾರ್ವಜನಿಕ ಋಣ ಮರುಪಾವತಿ**** | **7,420.24** | **8,269.16** |
| ಸಾದಿಲ್ವಾರು ನಿಧಿ | - | - | **ಸಾದಿಲ್ವಾರು ನಿಧಿ** | - | - |
| ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು | **1,79,318.45** | **2,00,615.43** | **ಸಾರ್ವಜನಿಕ ಲೆಕ್ಕ ಬಟವಾಡೆಗಳು** | **1,67,153.81** | **1,94,536.63** |
| ಪ್ರಾರಂಭಿಕ ನಗದು ಶಿಲ್ಕು | **27,118.23** | **34,353.58** | **ಅಂತಿಮ ನಗದು ಶಿಲ್ಕು** | **34,353.58** | **26,184.05** |
| ಒಟ್ಟು | **3,70,933.19** | **4,07,231.15** | **ಒಟ್ಟು** | **3,70,933.19** | **4,07,231.15** |

*ಆಕರ: ಹಣಕಾಸು ಲೆಕ್ಕಗಳು 2017–18.*

* ₹24,182 ಕೋಟಿ ಎಸ್‌ಜಿಎಸ್‌ಟಿಯನ್ನೊಳಗೊಂಡಿದೆ

^ ಐಜಿಎಸ್‌ಟಿಯ ₹3,204.72 ಕೋಟಿ ಮತ್ತು ಸಿಜಿಎಸ್‌ಟಿ ₹447.56 ಕೋಟಿಗಳನ್ನೊಳಗೊಂಡಿದೆ

# ಜಿಎಸ್‌ಟಿಯ ಅನುಷ್ಠಾನದಿಂದ ಉಂಟಾದ ರಾಜಸ್ವ ನಷ್ಟದ ಪರಿಹಾರದೆಡೆಗಿನ ₹6,246 ಕೋಟಿಗಳನ್ನೊಳಗೊಂಡಿದೆ

** ಅರ್ಥೋಪಾಯ ಮುಂಗಡಗಳು ಮತ್ತು ಓವರ್‌ಡ್ರಾಫ್ಟ್‌ಗಳ ನಿವ್ವಳ ವ್ಯವಹಾರಗಳನ್ನು ಹೊರತುಪಡಿಸಿ.

ಹಿಂದಿನ ಸಾಲಿಗೆ ಹೋಲಿಸಿದಲ್ಲಿ 2017–18ರಲ್ಲಿನ ಗಮನಾರ್ಹ ಬದಲಾವಣೆಗಳು ಈ ಕೆಳಗಿನಂತಿವೆ:

- ರಾಜಸ್ವ ಸ್ವೀಕೃತಿಗಳು ₹13,785.86 ಕೋಟಿಗಳಷ್ಟು (ಶೇಕಡ 10) ಹೆಚ್ಚಾಗಿದೆ.
- ರಾಜಸ್ವ ವೆಚ್ಚವು ₹10,561.58 ಕೋಟಿಗಳಷ್ಟು (ಶೇಕಡ 8) ಹೆಚ್ಚಾಗಿದೆ.
- ಇತರೆ ಬಂಡವಾಳ ಸ್ವೀಕೃತಿಗಳು ₹23.26 ಕೋಟಿಗಳಷ್ಟು ಇಳಿಕೆಯಾಗಿದೆ (ಶೇಕಡಾ 86).
- ಸಾರ್ವಜನಿಕ ಋಣ ಸ್ವೀಕೃತಿಗಳಲ್ಲಿ ಶೇಕಡ 19ರಷ್ಟು ಇಳಿಕೆಯಾಗಿದ್ದರೂ ರಾಜ್ಯವು ಹಿಂದಿನ ವರ್ಷಕ್ಕಿಂತ ಬಂಡವಾಳ ಹಂಚಿಕೆಯನ್ನು ಶೇಕಡ 9ರಷ್ಟು ಹೆಚ್ಚಿಸುವಲ್ಲಿ ಸಫಲವಾಗಿತ್ತು. ಋಣ ಸ್ವೀಕೃತಿಗಳು ಬಹಳಷ್ಟು ಕಡಿಮೆಯಿದ್ದಾಗ್ಯೂ, ಹೆಚ್ಚಿದ ಬಂಡವಾಳ ವೆಚ್ಚವನ್ನು ನಿರ್ವಹಿಸಿದಲ್ಲಿ, ಅದು ರಾಜ್ಯದ ಆರ್ಥಿಕ ಆರೋಗ್ಯದ ಒಂದು ಉತ್ತಮ ಸೂಚಕವಾಗಿದೆ.
- ಸಾಲ ಮತ್ತು ಮುಂಗಡಗಳ ವಸೂಲಾತಿಯಲ್ಲಿ ₹37.09 ಕೋಟಿ (ಶೇಕಡ 37) ಗಳಷ್ಟು ಹೆಚ್ಚಿದ್ದು ಸಾಲ ಮತ್ತು ಮುಂಗಡಗಳ ವಿತರಣೆಯಲ್ಲಿ ₹3,157.84 ಕೋಟಿಗಳಷ್ಟು (ಶೇಕಡ 163) ಹೆಚ್ಚಾಗಿದೆ. ಇದು ಬಂಡವಾಳ ವೆಚ್ಚವೆಂದು ಪರಿಗಣಿಸಲಾದ ಸಾಲ ಮನ್ನಾ ಮೊತ್ತ ₹3,400.67 ಕೋಟಿಗಳನ್ನು ಒಳಗೊಂಡಿದೆ.
- ವಿದ್ಯುಚ್ಛಕ್ತಿ ವಲಯದಲ್ಲಿ, ಸಾಲಗಳ ವಸೂಲಿಯನ್ನು (₹14.44 ಕೋಟಿ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಕರ್ನಾಟಕ ಸರ್ಕಾರದಿಂದ ಕೊಡಬೇಕಿದ್ದ ಗ್ರಾಮೀಣ ವಿದ್ಯುದೀಕರಣದ ಸಹಾಯಧನಕ್ಕೆ ಹೊಂದಾಣಿಕೆ ಮಾಡಲಾಗಿತ್ತು.

- ಸಾರ್ವಜನಿಕ ಋಣ ಸ್ವೀಕೃತಿಗಳು (ಅರ್ಥೋಪಾಯ ಮುಂಗಡಗಳನ್ನು ಹೊರತುಪಡಿಸಿ) ₹6,034.06 ಕೋಟಿಗಳಷ್ಟು ಇಳಿಕೆಯಾಗಿದ್ದು (ಶೇಕಡ 19), ಮರುಪಾವತಿಯು ₹848.92 ಕೋಟಿ (ಶೇಕಡ 11) ಗಳಷ್ಟು ಹೆಚ್ಚಾಗಿದೆ.

- ಸಾರ್ವಜನಿಕ ಲೆಕ್ಕಗಳ ಸ್ವೀಕೃತಿಗಳು ಹಾಗೂ ಬಟವಾಡೆಗಳು ಕ್ರಮವಾಗಿ ₹21,296.98 ಕೋಟಿ (ಶೇಕಡ 12) ಮತ್ತು ₹27,382.82 ಕೋಟಿ (ಶೇಕಡ 16) ಗಳಷ್ಟು ಹೆಚ್ಚಳಗೊಂಡಿದ್ದವು.

- 31 ಮಾರ್ಚ್ 2018ರ ಅಂತ್ಯಕ್ಕೆ ನಗದು ಶಿಲ್ಕು ₹26,184 ಕೋಟಿಗಳಷ್ಟಿದ್ದು, ಹಿಂದಿನ ವರ್ಷಕ್ಕಿಂತ ಶೇಕಡ 24ರಷ್ಟು ಇಳಿಕೆಯಾಗಿದ್ದರೂ ಈ ಮಟ್ಟದ ನಗದು ಶಿಲ್ಕು ರಾಜ್ಯದ ಸಾಲಗಳ ಬೆಲೆಗೆ ಸಮಾನವಾಗಿದ್ದು ಅನವಶ್ಯಕ ವೆಚ್ಚವನ್ನು ಪ್ರತಿನಿಧಿಸುವುದರಿಂದ ಆರ್ಥಿಕವಾಗಿ ವಿವೇಚನಾಯುಕ್ತವಲ್ಲ. ಕರ್ನಾಟಕ ಸರ್ಕಾರವು ಬಂಡವಾಳ ವೆಚ್ಚ/ ಹಂಚಿಕೆಯನ್ನು ಭರಿಸಲು ತನ್ನ ಸಾಲಗಳನ್ನು ಕಡಿಮೆಗೊಳಿಸಲು ಅಷ್ಟು ದೊಡ್ಡ ಮೊತ್ತದ ನಗದು ಶಿಲ್ಕಿನ ಅಗತ್ಯವಿದೆಯೇ ಎಂದು ಪರೀಕ್ಷಿಸಬೇಕಿದೆ.

### 1.1.2 ವಿತ್ತೀಯ ಸ್ಥಿತಿಯ ಸಮೀಕ್ಷೆ

ವಿತ್ತೀಯ ನಿರ್ವಹಣೆಯಲ್ಲಿ ಅಂತರ ಅವಧಿಯ ನೀತಿ ಹಾಗೂ ದೀರ್ಘಾವಧಿಯ ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ, 2002 (ಕೆಎಫ್‌ಆರ್‌ಎ) ರನ್ನು ಕಾಯಿದೆಯಾಗಿಸಿ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿದೆ.

ಸಾಲಗಳು, ಋಣಗಳು ಮತ್ತು ಕಡಿತಗಳ ಮೇಲಿನ ಮಿತಿಗಳ ಮೂಲಕ ವಿವೇಚನಾಯುಕ್ತ ಋಣ ನಿರ್ವಹಣೆ ಮತ್ತು ಸಾಕಷ್ಟು ರಾಜಸ್ವ ಹೆಚ್ಚಳವನ್ನು ಕೆಎಫ್‌ಆರ್‌ಎಯು ಆಲೋಚಿಸಿತ್ತು. ರಾಜ್ಯ ಸರ್ಕಾರವು ವಿತ್ತೀಯ ಕ್ರೋಢೀಕರಣ ಪಥದಲ್ಲಿದೆ ಮತ್ತು ಖಾತರಿಗಳನ್ನು ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಪರಿಮಿತಿ ಅಧಿನಿಯಮ, 1999ರಡಿ ವಿಧಿಸಿದ ಮಿತಿಯೊಳಗೆ ನಿರ್ವಹಿಸಿದೆ.

ರಾಜ್ಯ ಸರ್ಕಾರವು 2004–05ರಿಂದಲೂ ರಾಜಸ್ವ ಹೆಚ್ಚಳವನ್ನು ದಾಖಲಿಸಿದೆ ಮತ್ತು ವಿತ್ತೀಯ ಕೊರತೆಯು ಅಧಿನಿಯಮದಲ್ಲಿ ನಿಗದಿಪಡಿಸಿರುವಂತೆ ರಾಒಆಂಉದ ಶೇಕಡ ಮೂರರ ಮಿತಿಯಲ್ಲಿದೆ. ಹದಿಮೂರನೇ ಹಾಗೂ ಹದಿನಾಲ್ಕನೇ ಹಣಕಾಸು ಆಯೋಗದ ಅವಧಿಗಳಿಗೆ ನಿಗದಿಪಡಿಸಿದ ರಾಜಸ್ವ ಮತ್ತು ವಿತ್ತೀಯ ಕೊರತೆ ಹಾಗೂ ಋಣ/ರಾಒಆಂಉದ ಅನುಪಾತ ಗುರಿಗಳು ಮತ್ತು ಅವುಗಳ ನೈಜ ಮಟ್ಟಗಳನ್ನು **ಕೋಷ್ಟಕ 1.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.2 : ಕೆಎಫ್‌ಆರ್‌ಎ ಅಡಿಯ ಗುರಿಗಳು ಮತ್ತು ಪರಿಣಾಮಗಳು**

| ಅವಧಿ | ರಾಜಸ್ವ ಹೆಚ್ಚಳ/ಕೊರತೆ | | ವಿತ್ತೀಯ ಕೊರತೆ/ರಾಒಆಂಉ (ಶೇಕಡಾವಾರು) | | ಋಣ/ರಾಒಆಂಉ ಅನುಪಾತ (ಶೇಕಡಾವಾರು) | |
|---|---|---|---|---|---|---|
| | ಕೆಎಫ್‌ಆರ್‌ಎ ಯಲ್ಲಿ ನಿಗದಿಪಡಿಸಿದ ಗುರಿ | ಸಾಧನೆ | ಕೆಎಫ್‌ಆರ್‌ಎ ಯಲ್ಲಿ ನಿಗದಿಪಡಿಸಿದ ಮಿತಿ | ಸಾಧನೆ | ಮಿತಿ | ಸಾಧನೆ |
| **ಹದಿಮೂರನೇ ಹಣಕಾಸು ಆಯೋಗ (2010–15)** | | | | | | |
| 2013–14 | ರಾಜಸ್ವ ಹೆಚ್ಚಳ ನಿರ್ವಹಣೆ | ಗುರಿ ಸಾಧಿಸಲಾಯಿತು | 3.00 | 2.09 | 25.40 | 16.93 |
| 2014–15 | | | 3.00 | 2.14 | 25.20 | 18.00 |
| **ಹದಿನಾಲ್ಕನೇ ಹಣಕಾಸು ಆಯೋಗ (2015–20)** | | | | | | |
| 2015–16 | ರಾಜಸ್ವ ಹೆಚ್ಚಳ ನಿರ್ವಹಣೆ | ಗುರಿ ಸಾಧಿಸಲಾಯಿತು | 3.00 | 1.89 | 25.00 | 18.10 |
| 2016–17 | | | 3.00 | 2.53 | 25.00 | 19.54 |
| 2017–18 | | | 3.00 | 2.37 | 25.00 | 18.78 |

ಫೆಬ್ರವರಿ 2014ರಲ್ಲಿ ಕಾಯಿದೆಗೆ ತಿದ್ದುಪಡಿ ತರುವುದರ ಮೂಲಕ ಪರಿಚ್ಛೇದ 2(ಜಿ) ಅಡಿಯಲ್ಲಿ ಸೂಚಿಸಿರುವ ಸಾರ್ವಜನಿಕ ವಿಭಾಗದ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮತ್ತು ಇತರ ಸಮಾನ ಸಾಧನಗಳು ಮಾಡುವ ಸಾಲಗಳ ಅಸಲು ಮತ್ತು ಬಡ್ಡಿಗಳ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯನ್ನು ರಾಜ್ಯದ ಆಯವ್ಯಯದ ಮೂಲಕವೇ ಭರಿಸುವಂತೆ ಹಿಗ್ಗಿಸಲಾಯಿತು. ಉತ್ತರೋತ್ತರ ಹಣಕಾಸು ಆಯೋಗಗಳು ವಿಧಿಸಿರುವ ಪ್ರಮಿತಿಗಳನ್ನು ಗಮನದಲ್ಲಿರಿಸಿ ರಾಜ್ಯ ಸರ್ಕಾರವು ತನ್ನ ವಿತ್ತೀಯ ಜವಾಬ್ದಾರಿ ಅಧಿನಿಯಮವನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಿತು.

2017–18ಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (₹13,10,879 ಕೋಟಿ) ಬಾಕಿ ಇರುವ ಋಣ (ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ಮತ್ತು ವಿತ್ತೀಯ ಕೊರತೆಯ ಅನುಪಾತವು ಕ್ರಮವಾಗಿ ಶೇಕಡ 18.78 ಮತ್ತು ಶೇಕಡ 2.37ಗಳಷ್ಟಿದ್ದು, ಇವು ನಿಗದಿತ ಶೇಕಡ 25 ಮತ್ತು ಶೇಕಡ ಮೂರರ ಮಿತಿಯೊಳಗೆ ಇದ್ದವು.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮುಖ್ಯಸ್ಥರಾಗಿರುವ ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯನ್ನು ಜುಲೈ 2011ರಲ್ಲಿ ರಚಿಸಲಾಯಿತು. ಸದರಿ ಸಮಿತಿಯು ತೆರಿಗೆಯೇತರ ರಾಜಸ್ವಗಳನ್ನು ಹೆಚ್ಚಿಸಲು ಎಲ್ಲ ಇಲಾಖೆಗಳು ಕ್ರಮ ಕೈಗೊಳ್ಳಬೇಕೆಂದು ಶಿಫಾರಸು ಮಾಡಿದೆ (ಜುಲೈ 2018). ವಿವರಗಳನ್ನು **ಕಂಡಿಕೆ 1.3.1.2**ರಲ್ಲಿ ಚರ್ಚಿಸಲಾಗಿದೆ.

### 2017–18ನೇ ವರ್ಷದ ಕೆಲವು ಮೇಲ್ಸ್ತರದ ವ್ಯವಹಾರಗಳ ಪರಿಶೀಲನೆ

2017–18ನೇ ವರ್ಷದ ಕೆಲವು ಮೇಲ್ಸ್ತರದ ವ್ಯವಹಾರಗಳ ಪರಿಶೀಲನೆಯು ವಿತ್ತೀಯ ಕೊರತೆ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಜವಾಬ್ದಾರಿಗಳು ಕೆಲವು ಲೆಕ್ಕ ಹೊಂದಾಣಿಕೆಗಳಿಂದ ಬಾಧಿತವಾಗಿದೆಯೆಂದು ತೋರಿಸಿತು. ಅಂತಹ ಹೊಂದಾಣಿಕೆಗಳನ್ನು ಲೆಕ್ಕಗಳ ಮೇಲಿನ ಟಿಪ್ಪಣಿಗಳಲ್ಲಿ ಹಾಗೂ **ಕೋಷ್ಟಕ 1.3**ರಲ್ಲಿ ನೀಡಲಾಗಿದೆ. ಇನ್ನಿತರ ವಿವರಗಳನ್ನು **ಕಂಡಿಕೆ 1.9.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3: 2017–18ರಲ್ಲಿ ಮೇಲ್ಸ್ತರದ ವ್ಯವಹಾರಗಳ ಪರಿಣಾಮ**

*(ಕೋಟಿ ರೂಪಾಯಿಗಳಲ್ಲಿ)*

| ಕ್ರಮ ಸಂಖ್ಯೆ | ವ್ಯವಹಾರದ ಸ್ವಭಾವ | ಮೊತ್ತ | ವಿತ್ತೀಯ ಸೂಚಕಗಳ ಮೇಲೆ ಪರಿಣಾಮ |
|---|---|---|---|
| 1 | ಸಾಮಾನ್ಯ ರಾಜಸ್ವದಿಂದ ವರ್ಗಾವಣೆ | 1,578.00 | ನಿಧಿಗಳಿಗೆ ವರ್ಗಾಯಿಸಬೇಕಿದ್ದ ಉಪಕರದೊಂದಿಗೆ ₹2,768 ಕೋಟಿಗಳನ್ನು ಹೆಚ್ಚುವರಿಯಾಗಿ ಸಾಮಾನ್ಯ ರಾಜಸ್ವದಿಂದ ನಿಧಿ ಲೆಕ್ಕಗಳಿಗೆ ವರ್ಗಾಯಿಸಲಾಯಿತು. ಈ ವರ್ಗಾವಣೆಯು ರಾಜಸ್ವ ಹೆಚ್ಚಳವನ್ನು ಕಡಿಮೆ ಬಿಂಬಿಸುವುದಲ್ಲದೆ ರಾಜಸ್ವ ವೆಚ್ಚ ಮತ್ತು ವಿತ್ತೀಯ ಕೊರತೆಯನ್ನು ಅಧಿಕವಾಗಿ ಸೂಚಿಸುವ ಪರಿಣಾಮವನ್ನು ಹೊಂದಿತ್ತು. |
| ಅ | ಮೂಲ ಸೌಲಭ್ಯ ಉಪಕ್ರಮನಿಧಿ | | |
| ಬ | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ನಿಧಿ | 775.00 | |
| ಕ | ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ (ಸಿಎಮ್‌ಆರ್‌ಆರ್‌ಡಿ) | 415.00 | |
| 2 | ರಾಜ್ಯ ನಗರ ಸಾರಿಗೆ ನಿಧಿಗೆ ವೆಚ್ಚವನ್ನು ವರ್ಗಾಯಿಸದಿದ್ದುದು | 71.22 | ವೆಚ್ಚವನ್ನು ಬಿಟ್ಟು ಕೇವಲ ಉಪಕರವನ್ನು ಮಾತ್ರ ವರ್ಗಾಯಿಸಿದ್ದು ವಿತ್ತೀಯಕೊರತೆಯನ್ನು ಅಷ್ಟರಮಟ್ಟಿಗೆ ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. |
| 3 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ವೆಚ್ಚವನ್ನು ವರ್ಗಾಯಿಸದಿದ್ದುದು | 299.09 | ವೆಚ್ಚವನ್ನು ವರ್ಗಾಯಿಸದಿದ್ದುದು ರಾಜಸ್ವ ವೆಚ್ಚ ಮತ್ತು ವಿತ್ತೀಯಕೊರತೆಯನ್ನು ಅಧಿಕ ಹೇಳುವಲ್ಲಿ ಮತ್ತು ಕಡಿಮೆ ರಾಜಸ್ವ ಹೆಚ್ಚಳವನ್ನು ತೋರುವ ಪರಿಣಾಮ ಬೀರಿತ್ತು. |
| 4 | ಮನ್ನಾ ಮಾಡಲಾದ ಸಾಲಗಳನ್ನು ರಾಜಸ್ವ ವೆಚ್ಚವೆಂದು ಪರಿಗಣಿಸುವ ಬದಲಾಗಿ ಬಂಡವಾಳ ವೆಚ್ಚವೆಂದು ಪರಿಗಣಿಸಲಾಗಿರುವುದು | 3,400.67 | ಇದು ಬಂಡವಾಳ ವೆಚ್ಚವನ್ನು ಅಧಿಕವಾಗಿ ಹೇಳುವಲ್ಲಿ, ರಾಜಸ್ವ ವೆಚ್ಚವನ್ನು ಕಡಿಮೆಗೊಳಿಸುವಲ್ಲಿ ಮತ್ತು ರಾಜಸ್ವ ಹೆಚ್ಚಳವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. |

*ಆಕರ:ಲೆಕ್ಕಗಳಿಗೆ ಟಿಪ್ಪಣಿ*

### 1.1.3 ಪ್ರಮುಖ ವಿತ್ತೀಯ ವ್ಯತ್ಯಯಗಳು

ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿಯಂತೆ ಮತ್ತು ಆಯವ್ಯಯದಲ್ಲಿ ಒದಗಿಸಿದ ಪ್ರಮುಖ ವಿತ್ತೀಯ ವ್ಯತ್ಯಯಗಳನ್ನು ಕೆಳಗಿನ **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.4: ಪ್ರಮುಖ ವಿತ್ತೀಯ ವ್ಯತ್ಯಯಗಳು**

| ವಿತ್ತೀಯ ವ್ಯತ್ಯಯಗಳು | 2017–18 | | | |
|---|---|---|---|---|
| | ವಿತ್ತೀಯ ಸುಧಾರಣಾ ಅಧಿನಿಯಮದಲ್ಲಿ ನಿಗದಿಪಡಿಸಿದ ಗುರಿಗಳು/ಮಿತಿಗಳು | ಆಯವ್ಯಯದಲ್ಲಿ ಸೂಚಿಸಿದ ಗುರಿಗಳು/ ಮಿತಿಗಳು | ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿನ ಪ್ರಕ್ಷೇಪಗಳು 2014–18 | ವಾಸ್ತವಗಳು |
| ವಿತ್ತೀಯ ಕೊರತೆ (–)/ ಹೆಚ್ಚಳ (+) (ಕೋಟಿಗಳಲ್ಲಿ) | - | 137 | 1,538 | 4,518 |
| ವಿತ್ತೀಯ ಕೊರತೆ/ ರಾಒಆಉ(ಶೇ.) | 3.00 | 2.61* | 2.86 | 2.37 |
| ಸರ್ಕಾರದ ಒಟ್ಟು ಬಾಕಿ ಇರುವ ಋಣಕ್ಕೆ ರಾಒಆಉನ ಅನುಪಾತ (ಶೇಕಡ) | 25.00 | 18.93* | 23.03 | 18.78 |

** ಆಯವ್ಯಯ ಅಂದಾಜುಗಳಲ್ಲಿ ಅಂಗೀಕರಿಸಿದ ಅಂಕಿಯು ₹12,80,465 ಕೋಟಿಗಳಾಗಿದ್ದು (ಮಧ್ಯಮಾವಧಿ ವಿತ್ತೀಯ ಯೋಜನೆ 2018–22) ಆಯವ್ಯಯ ಮಂಡನೆಯಾದ ಬಳಿಕ ₹13,10,879 ಕೋಟಿಗಳಿಗೆ ಪರಿಷ್ಕರಿಸಲಾಯಿತು.*

ಮೇಲಿನ ಕೋಷ್ಟಕದಲ್ಲಿ ಕಂಡಂತೆ, ವಿತ್ತೀಯ ಸುಧಾರಣಾ ಕಾಯಿದೆಯಡಿ ನಿಗದಿಪಡಿಸಿದ ಮಿತಿಯೊಳಗೆ ಇದೆ.

### 1.1.4 ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳು 2017–18

ರಾಜ್ಯ ಸರ್ಕಾರವು ಮಂಡಿಸುವ ಆಯವ್ಯಯವು ನಿರ್ದಿಷ್ಟ ವಿತ್ತ ವರ್ಷದ ಆದಾಯ ಮತ್ತು ವೆಚ್ಚಗಳ ಅಂದಾಜುಗಳ ವಿವರಗಳನ್ನು ನಿರೂಪಿಸುತ್ತದೆ. ವಿತ್ತೀಯ ಕಾರ್ಯನೀತಿ ಮತ್ತು ಸಮಗ್ರ ಆರ್ಥಿಕ ನಿರ್ವಹಣೆಯ ದೃಷ್ಟಿಯಲ್ಲಿ, ಆದಾಯ ಮತ್ತು ವೆಚ್ಚಗಳ ಅಂದಾಜುಗಳ ಖಚಿತತೆಯ ಪ್ರಾಮುಖ್ಯತೆಯನ್ನು ಒಟ್ಟಾರೆ ಆರ್ಥಿಕ ನಿರ್ವಹಣೆಗೆ, ವಿತ್ತೀಯ ಕಾರ್ಯಸೂಚಿಗಳ ಪರಿಣಾಮಕಾರಿ ಅನುಷ್ಠಾನದ ಸಂದರ್ಭದಲ್ಲಿ ಬಹುಮಟ್ಟಿಗೆ ಅಂಗೀಕರಿಸಲಾಗಿದೆ. ಆಯವ್ಯಯದ ಅಂದಾಜುಗಳಿಂದ ಆದಂತಹ ಮಾರ್ಗಪಲ್ಲಟಗಳು ಉದ್ದೇಶಿತ ವಿತ್ತೀಯ ಗುರಿಗಳನ್ನು ಸಾಧಿಸಲಾಗದಿರುವುದನ್ನು ಮತ್ತು ವಿತ್ತೀಯ ಭರವಸೆಗಳು ಈಡೇರದಿರುವುದನ್ನು ಸೂಚಿಸುತ್ತವೆ. ಇವು ಸರ್ಕಾರದ ನಿಯಂತ್ರಣದಲ್ಲಿರುವ ಮತ್ತು ನಿಯಂತ್ರಣ ಮೀರಿದ ಕೆಲವು ಅಂಶಗಳಿಂದ ಉಂಟಾಗುತ್ತವೆ.

2017–18ರಲ್ಲಿ ಕೆಲವು ಪ್ರಮುಖ ವಿತ್ತೀಯ ಪ್ರಮಿತಿಗಳ ಆಯವ್ಯಯ ಅಂದಾಜುಗಳು ಮತ್ತು ವಾಸ್ತವಗಳನ್ನು **ನಕ್ಷೆ 1.1** ತೋರಿಸುತ್ತದೆ.

**ನಕ್ಷೆ–1.1: ಆಯ್ದ ವಿತ್ತೀಯ ಪ್ರಮಿತಿಗಳು–2017–18ರ ಆಯವ್ಯಯ ಅಂದಾಜುಗಳಿಗೆ ಪ್ರತಿಯಾಗಿ ವಾಸ್ತವಗಳು**




*ಆಕರ: ವಾರ್ಷಿಕ ಹಣಕಾಸು ತಃಖ್ತೆಗಳು ಮತ್ತು ಹಣಕಾಸು ಲೆಕ್ಕಗಳು.*

** ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಹೊರತುಪಡಿಸಿ.*

ಆಯವ್ಯಯ ಅಂದಾಜುಗಳು ₹1,44,892 ಕೋಟಿಗಳ ರಾಜಸ್ವ ಸ್ವೀಕೃತಿಗಳನ್ನು ಅಂದಾಜು ಮಾಡಿತ್ತು. ಇದಕ್ಕೆ ಪ್ರತಿಯಾಗಿ ವಾಸ್ತವ ಸಂಗ್ರಹವು ₹1,47,000 ಕೋಟಿಗಳಾಗಿದ್ದು, ₹2,108 ಕೋಟಿಗಳಷ್ಟು ಹೆಚ್ಚಾಗಿದ್ದಿತು (ಶೇಕಡ ಒಂದು). ಹಾಗೂ ಈ ಹೆಚ್ಚಳವು ಮುಖ್ಯವಾಗಿ ಭಾರತ ಸರ್ಕಾರದಿಂದ ಸಹಾಯಾನುದಾನಗಳು ಮತ್ತು ವಂತಿಗೆ (₹5,559 ಕೋಟಿಗಳು) ಯಿಂದ ಉಂಟಾಗಿತ್ತು, ಇದು ಜಿಎಸ್‌ಟಿಯ ಅನುಷ್ಠಾನದಿಂದ ಉಂಟಾದ ರಾಜಸ್ವ ನಷ್ಟ ₹6,246 ಕೋಟಿಗಳ ಪರಿಹಾರವನ್ನು ಒಳಗೊಂಡಿತ್ತು ಮತ್ತು ಸ್ವಂತ ತೆರಿಗೆ ಆದಾಯದಲ್ಲಿ (₹2,826 ಕೋಟಿ) ಮತ್ತು ತೆರಿಗೆಯೇತರ ಆದಾಯದಲ್ಲಿ (₹468 ಕೋಟಿ) ಮತ್ತು ಕೇಂದ್ರ ತೆರಿಗೆ ವರ್ಗಾವಣೆ (₹156 ಕೋಟಿ) ಗಳಲ್ಲಿ ಉಂಟಾದ ಇಳಿಕೆಯಿಂದ ಉತ್ತಾರವಾಗಿದೆ.

ರಾಜಸ್ವ ವೆಚ್ಚವು ₹1,44,755 ಕೋಟಿಗಳು ಎಂದು ಅಂದಾಜಿಸಿದ್ದು ವಾಸ್ತವ ವೆಚ್ಚವು ₹1,42482 ಕೋಟಿಗಳಾಗಿದ್ದು ವೆಚ್ಚದಲ್ಲಿನ ಇಳಿಕೆ ₹2,273 ಕೋಟಿಗಳಷ್ಟಿತ್ತು (ಶೇಕಡ ಎರಡು). ವಾಸ್ತವ ವೆಚ್ಚದಲ್ಲಿನ ಇಳಿಕೆಯು ಸಾಮಾನ್ಯ ಸೇವೆಗಳು (₹3,515 ಕೋಟಿಗಳು), ಆರ್ಥಿಕ ಸೇವೆಗಳು (₹825 ಕೋಟಿ) ಮತ್ತು ಸಹಾಯಾನುದಾನ ಮತ್ತು ವಂತಿಗೆಗಳಲ್ಲಿ (₹697 ಕೋಟಿಗಳು) ಉಂಟಾಗಿದ್ದು, ಸಾಮಾಜಿಕ ಸೇವೆಗಳಲ್ಲಿನ (₹2,765 ಕೋಟಿಗಳು) ಹೆಚ್ಚಳದಿಂದ ಉತ್ತಾರವಾಗಿದೆ.

ಬಡ್ಡಿ ಪಾವತಿಗಳನ್ನು ₹14,159 ಕೋಟಿಗಳು ಎಂದು ಅಂದಾಜಿಸಲಾಗಿತ್ತು (ಆಯವ್ಯಯ ಹೊರಗಿನ ಸಾಲಗಳನ್ನು ಬಿಟ್ಟು – ಸರ್ಕಾರದ ಖಾತರಿಯ ಮೇಲೆ ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳ ಋಣಸೇವೆಯು ಸರ್ಕಾರದ್ದೇ ಜವಾಬ್ದಾರಿಯಾಗಿದೆ). ಈ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು ಲೆಕ್ಕ ಶೀರ್ಷಿಕೆ 2049ರಡಿ ತೋರಿಸಲಾಗುತ್ತಿದೆ. ವಾಸ್ತವ ವೆಚ್ಚವು ₹13,970 ಕೋಟಿಗಳು (ಆಯವ್ಯಯದ ಹೊರಗಿನ ಸಾಲ ₹1,043 ಕೋಟಿಗಳನ್ನು ಹೊರತುಪಡಿಸಿ) ಆಗಿದೆ. ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರನ್ವಯ (28.02.2014ರಂದು ಪರಿಷ್ಕರಿಸಿದಂತೆ) ಆಯಾ ಸೇವಾ ಶೀರ್ಷಿಕೆಗಳಡಿ ದಾಖಲಿಸಲಾದ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಸಹ ರಾಜ್ಯದ ಬಡ್ಡಿ ಜವಾಬ್ದಾರಿ ಎಂದು ಪರಿಗಣಿಸಬೇಕಾಗಿದೆ.

ರಾಜಸ್ವ ಸ್ವೀಕೃತಿಗಳ ಪ್ರಧಾನ ಆಕರವು ರಾಜ್ಯದ ಸ್ವಂತ ತೆರಿಗೆ ಆದಾಯವಾಗಿದ್ದು ಇದು ಶೇಕಡ 59ಷ್ಟಿತ್ತು. 2017–18ರಲ್ಲಿ ತೆರಿಗೆಯೇತರ ಆದಾಯವೂ ಸೇರಿದಂತೆ ರಾಜ್ಯದ ಸ್ವಂತ ಸಂಪನ್ಮೂಲಗಳು ಸುಮಾರು ಶೇಕಡ 64ರಷ್ಟಿತ್ತು.

### 1.1.5 ಮಹಿಳಾ ಉದ್ದೇಶಿತ ಆಯವ್ಯಯ

ರಾಜ್ಯದ ಮಹಿಳಾ ಉದ್ದೇಶಿತ ಆಯವ್ಯಯವು ಸಮಗ್ರ ಆಯವ್ಯಯದೊಳಗೆ ಮಹಿಳೆಯರಿಗಾಗಿ ಪೂರ್ಣವಾದ ಅಥವಾ ಭಾಗಶ: ಸೌಲಭ್ಯ ದೊರಕಿಸಿಕೊಡಲು ರೂಪಿಸಿದ ಕಾರ್ಯಕ್ರಮಗಳ ವೆಚ್ಚದ ಪ್ರಸ್ತಾವನೆಯನ್ನು ಸೂಚಿಸುತ್ತದೆ. ರಾಜ್ಯ ಸರ್ಕಾರವು ಮಹಿಳಾ ಉದ್ದೇಶಿತ ಆಯವ್ಯಯ ಕೋಶವನ್ನು ಸ್ಥಾಪಿಸಿದ್ದು (ಜನವರಿ 2007), 2007–08ರಿಂದ ಮಹಿಳಾ ಉದ್ದೇಶಿತ ಆಯವ್ಯಯವನ್ನು ಪ್ರಾರಂಭಿಸಿತು.

2013–14 ರಿಂದ 2017–18ರ ಅವಧಿಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಒಟ್ಟು ಹಂಚಿಕೆ ಮತ್ತು ಒಟ್ಟು ವೆಚ್ಚದಲ್ಲಿನ ಪ್ರವೃತ್ತಿಯನ್ನು **ನಕ್ಷೆ 1.2**ರಲ್ಲಿ ನೀಡಲಾಗಿದೆ.

**ನಕ್ಷೆ 1.2: ಒಟ್ಟು ಹಂಚಿಕೆಗೆ ಪ್ರತಿಯಾಗಿ ಒಟ್ಟು ವೆಚ್ಚದ ಪ್ರವೃತ್ತಿಗಳು** (₹ ಕೋಟಿಗಳಲ್ಲಿ)




ಮೇಲಿನ ನಕ್ಷೆಯಲ್ಲಿ ಗಮನಿಸಿದಂತೆ, 2013–14 ಹಾಗೂ 2014–15ರಲ್ಲಿ ಒಟ್ಟು ವೆಚ್ಚವು ಒಟ್ಟು ಹಂಚಿಕೆಗಿಂತ ಕಡಿಮೆಯಿದ್ದು 2015–16ರಿಂದ 2017–18ರಲ್ಲಿ ಹಂಚಿಕೆಗಿಂತ ವೆಚ್ಚವು ಅಧಿಕವಾಗಿದ್ದು ಇದು ವೆಚ್ಚವು ಆಯವ್ಯಯಕ್ಕೆ ಅನುಗುಣವಾಗಿರಲಿಲ್ಲವೆಂದು ಸೂಚಿಸಿದೆ. 2013–14ರಿಂದ 2017–18ರಲ್ಲಿ 28 ಬೇಡಿಕೆಗಳಿಗೆ ಬರುವ ಪ್ರವರ್ಗ ಎ[1] ಮತ್ತು ಪ್ರವರ್ಗ ಬಿ[2] ಯೋಜನೆಗಳ ಒಟ್ಟು ಹಂಚಿಕೆ ಮತ್ತು ಒಟ್ಟು ವೆಚ್ಚದಲ್ಲಿನ ಪ್ರವೃತ್ತಿಯನ್ನು **ನಕ್ಷೆ 1.3**ರಲ್ಲಿ ನೀಡಲಾಗಿದೆ.

ನಕ್ಷೆ 1.3: ವರ್ಗ ಎ ಮತ್ತು ವರ್ಗ ಬಿ ಯೋಜನೆಗಳಲಿ ಹಂಚಿಕೆ ಮತ್ತು ವೆಚ್ಚ ಪ್ರವೃತ್ತಿ




*2017–18ರ ವೆಚ್ಚವು ಪರಿಷ್ಕೃತ ಅಂದಾಜಾಗಿದ್ದು ವಾಸ್ತವವಲ್ಲ*

**ನಕ್ಷೆ 1.3**ರಲ್ಲಿ ಗಮನಿಸಿದಂತೆ, 2013–14ರಲ್ಲಿ ವರ್ಗ 'ಎ' ಯೋಜನೆಗಳಲ್ಲಿ ವೆಚ್ಚವು ಹಂಚಿಕೆಗಿಂತ ಅಧಿಕವಾಗಿತ್ತು ಮತ್ತು 2014–15ರಿಂದ 2016–17ರಲ್ಲಿ ವೆಚ್ಚವು ಹಂಚಿಕೆಗಿಂತ ಕಡಿಮೆಯಿದ್ದಿತು. ಆದಾಗ್ಯೂ, 2017–18ರಲ್ಲಿ ಹಂಚಿಕೆಗಿಂತ ವೆಚ್ಚವು ಅಧಿಕವಾಗಿದ್ದು ಸಂಪೂರ್ಣ ಆಯವ್ಯಯವು ಬಳಕೆಯಾಗಿತ್ತೆಂದು ಸೂಚಿಸಿತು. ವರ್ಗ 'ಬಿ' ಯೋಜನೆಗಳಲ್ಲಿ 2013–14ರಿಂದ 2014–15ರಲ್ಲಿ ವೆಚ್ಚವು ಹಂಚಿಕೆಗಿಂತ ಕಡಿಮೆಯಿದ್ದು, 2015–16ರಿಂದ 2017–18ರಲ್ಲಿ ವೆಚ್ಚವು ಹಂಚಿಕೆಗಿಂತ ಅಧಿಕವಾಗಿತ್ತು. 2017–18ರಲ್ಲಿ ವರ್ಗ 'ಎ' ಮತ್ತು 'ಬಿ' ಅಡಿ ಒಟ್ಟು ಯೋಜನೆಗಳು 724ರಷ್ಟಿದ್ದು ಅವುಗಳಲ್ಲಿ 58 ಯೋಜನೆಗಳು ವರ್ಗ

[1] ಶೇಕಡಾ 100ರಷ್ಟು ಮಹಿಳಾ ಫಲಾನುಭವಿಗಳನ್ನೊಳಗೊಂಡ ಯೋಜನೆಗಳಿಗೆ ಆಯವ್ಯಯ ಹಂಚಿಕೆ.

[2] ಕನಿಷ್ಠ ಶೇಕಡ 30ರಷ್ಟು ಮಹಿಳಾ ಫಲಾನುಭವಿಗಳನ್ನೊಳಗೊಂಡ ಯೋಜನೆಗಳಿಗೆ ಆಯವ್ಯಯ ಹಂಚಿಕೆ.

'ಎ' ರಡಿಯಿದ್ದು 666 ಯೋಜನೆಗಳು ವರ್ಗ 'ಬಿ' ಅಡಿಯಲ್ಲಿದ್ದವು. ಮಹಿಳಾ ಉದ್ದೇಶಿತ ಆಯವ್ಯಯವು ಅಂತಹ ಯೋಜನೆಗಳ ಉದ್ದೇಶದ ಬಗ್ಗೆ ಸಂಕ್ಷಿಪ್ತ ವಿವರಣಾ ಟಿಪ್ಪಣಿಯನ್ನೂ ಸಹ ನೀಡುತ್ತದೆ.

ಕೆಲವು ವರ್ಗ 'ಎ' ಅಡಿಯ ಯೋಜನೆಗಳ ವಿಶ್ಲೇಷಣೆಯನ್ನು ಕೆಳಕಂಡ ಕಂಡಿಕೆಗಳಲ್ಲಿ ನೀಡಲಾಗಿದೆ:

### (ಎ) ಸಮೃದ್ಧಿ

ಅತಿ ಹೆಚ್ಚಿನ ಬಡ್ಡಿದರದಲ್ಲಿ ಮಹಿಳೆಯರು ಸಾಲ ಪಡೆಯುವುದನ್ನು ತಪ್ಪಿಸುವ ಮೂಲಕ ಮಹಿಳೆಯರ ಶೋಷಣೆಯನ್ನು ನಿಲ್ಲಿಸುವುದು ಮತ್ತು ನಿರುದ್ಯೋಗ ನಿವಾರಣೆಯು ಸದರಿ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ ರಸ್ತೆ ಬದಿಯಲ್ಲಿ ವ್ಯಾಪಾರ ನಡೆಸುವ 10,000 ಮಹಿಳೆಯರಿಗೆ ತಲಾ ₹10,000ಗಳ ಧನಸಹಾಯವನ್ನು ಒದಗಿಸಲಾಗುವುದು. ಈ ಯೋಜನೆಯನ್ನು 2016–17ರಿಂದ ಮಹಿಳಾ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿದೆ. ಯೋಜನೆಯ ಭೌತಿಕ ಮತ್ತು ಆರ್ಥಿಕ ಗುರಿಗಳು, ಸಾಧನೆ ಮತ್ತು ಕೊರತೆಗಳನ್ನು **ಕೋಷ್ಟಕ 1.5** ಮತ್ತು **ಕೋಷ್ಟಕ 1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5: ಆರ್ಥಿಕ ಗುರಿ**

*(ಕೋಟಿ ರೂಪಾಯಿಗಳಲ್ಲಿ)*

| ವರ್ಷ | ಆಯವ್ಯಯ | ಬಿಡುಗಡೆಗಳು | ವೆಚ್ಚ | ಉಳಿಕೆ |
|---|---|---|---|---|
| 2016–17 | 10.00 | 10.00 | 8.87 | 1.13 |
| 2017–18 | 10.02 | 10.02 | 9.81 | 0.21 |

**ಕೋಷ್ಟಕ 1.6: ಭೌತಿಕ ಗುರಿ ಮತ್ತು ಸಾಧನೆ**

*(ಕೋಟಿ ರೂಪಾಯಿಗಳಲ್ಲಿ)*

| ವರ್ಷ | ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ನೀಡುವ ಧನಸಹಾಯ | | ಕೊರತೆ | ಕೊರತೆಯ ಶತಾಂಶ |
|---|---|---|---|---|
| | ಗುರಿ | ಸಾಧನೆ | | |
| 2016–17 | 10,000 | 8,871 | 1,129 | 11 |
| 2017–18 | 10,520 | 9,810 | 710 | 7 |

2016–17ರಲ್ಲಿ ಆರ್ಥಿಕ ಗುರಿಗಳ ಸಾಧನೆಯಾಗಿದ್ದರೂ ಸಹ ಆಯ್ಕೆ ಸಮಿತಿಯು ಫಲಾನುಭವಿಗಳ ಆಯ್ಕೆಯನ್ನು ವಿಳಂಬ ಮಾಡಿದ್ದರಿಂದ ಭೌತಿಕ ಸಾಧನೆಯಾಗಲಿಲ್ಲವೆಂದು ಇಲಾಖೆಯು ತಿಳಿಸಿತು. 2017–18ರಲ್ಲಿ ಚುನಾವಣಾ ನೀತಿ ಸಂಹಿತೆಯಿಂದ ಮಾರ್ಚ್ 2018ರ ಅಂತ್ಯದಲ್ಲಿ ಸಂಪೂರ್ಣ ಭೌತಿಕ ಗುರಿ ಸಾಧನೆಯಾಗಲಿಲ್ಲ ಹಾಗೂ ಮಾರ್ಚ್ 2018ರ ನಂತರ ಸ್ವೀಕರಿಸಲಾದ ಪ್ರಸ್ತಾವನೆಗಳು ಪರಿಗಣನೆಯಲ್ಲಿವೆ ಎಂದೂ ಹೇಳಿತು.

### (ಬಿ) ಬಾಲಿಕಾ ಗೈಡುಗಳು

ಈ ಯೋಜನೆಯು ಶಿಕ್ಷಣ ಇಲಾಖೆಯಡಿ ಭಾರತ್ ಸ್ಕೌಟುಗಳು ಮತ್ತು ಗೈಡುಗಳು ಎಂಬ ಸ್ವಯಂ ಸೇವಾ ಸಂಸ್ಥೆಗೆ ಬೆಂಬಲಿಸಲು ಪ್ರಾರಂಭಿಸಲಾಗಿದೆ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಾಲಕ ಹಾಗೂ ಬಾಲಕಿಯರಲ್ಲಿ ಶಿಸ್ತು ಹಾಗೂ ಸೇವಾ ಮನೋಭಾವವನ್ನು ಬೆಳೆಸುವುದು ಸಂಸ್ಥೆಯ ಉದ್ದೇಶವಾಗಿದೆ. ಯೋಜನೆಯ ಭೌತಿಕ ಗುರಿ, ಸಾಧನೆ ಮತ್ತು ಕೊರತೆಯನ್ನು ಈ ಕೆಳಗಿನ **ಕೋಷ್ಟಕ 1.7**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.7: ನಿಗದಿಪಡಿಸಿದ ಭೌತಿಕ ಗುರಿ ಮತ್ತು ಸಾಧನೆ**

| ವರ್ಷ | ತರಬೇತಿ ನೀಡಬೇಕಾದ ಬಾಲಿಕಾ ಗೈಡುಗಳ ಸಂಖ್ಯೆ | | ಕೊರತೆ | ಕೊರತೆಯ ಶೇಕಡಾವಾರು |
|---|---|---|---|---|
| | ಗುರಿ | ಸಾಧನೆ | | |
| 2012–13 | 1,85,700 | 1,38,878 | 46,822 | 25.21 |
| 2013–14 | 2,68,600 | 2,03,664 | 64,936 | 24.18 |
| 2014–15 | 2,52,000 | 2,03,685 | 48,315 | 19.17 |
| 2015–16 | 2,13,000 | 1,62,939 | 50,061 | 23.50 |
| 2016–17 | 2,45,000 | 1,73,542 | 71,458 | 29.17 |
| 2017–18 | 2,76,500 | 2,22,868 | 53,632 | 19.40 |

2012–13ರಿಂದ 2017–18ರ ಅವಧಿಯಲ್ಲಿ ತರಬೇತಿ ನೀಡಬೇಕಿದ್ದ ಬಾಲಿಕಾ ಗೈಡುಗಳ ಕೊರತೆಯ ಶೇಕಡಾವಾರು 19.17ರಿಂದ 29.17ರಷ್ಟಿತ್ತು. ಬಾಲಿಕಾ ಗೈಡುಗಳಿಗೆ ತರಬೇತಿ ನೀಡುವ ಶಿಕ್ಷಕರಿಗೆ ನಡೆಸಲಾಗುವ ತರಬೇತಿ ಕೋರ್ಸುಗಳಲ್ಲಿ ಶಿಕ್ಷಕರ ಕೊರತೆಯ ಕಾರಣ ಕಡಿಮೆಯಾಗಿದೆಯೆಂದು ಇಲಾಖೆಯು ತಿಳಿಸಿತು. ಶಿಸ್ತು ಮತ್ತು ಸೇವಾ ಮನೋಭಾವನೆಯನ್ನು ರೂಢಿಸಲು ಹೆಚ್ಚು ಬಾಲಿಕಾ ಗೈಡುಗಳಿಗೆ ತರಬೇತಿ ನೀಡಲು ಕಠಿಣ ಪರಿಶ್ರಮದ ಅವಶ್ಯಕತೆಯಿದೆ.

### 1.1.6 2017–18ನೇ ಸಾಲಿನ ಆಯವ್ಯಯದ ಪ್ರಮುಖ ಕಾರ್ಯನೀತಿ ಉಪಕ್ರಮಗಳು

2017–18ರ ಆಯವ್ಯಯದಲ್ಲಿ ಘೋಷಿಸಿದ ವಿವಿಧ ಇಲಾಖೆಗಳಲ್ಲಿನ ಪ್ರಮುಖ ಕಾರ್ಯನೀತಿ ಉಪಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳನ್ನು 2018–19ರಲ್ಲಿ ಆಯವ್ಯಯ ದಾಖಲೆಗಳೊಂದಿಗೆ ಮಂಡಿಸಲಾದ ಕ್ರಮ ಕೈಗೊಂಡ ವರದಿಯ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಅಧ್ಯಯನವೊಂದನ್ನು ಕೈಗೊಂಡಿತು.

ಅದಕ್ಕಾಗಿ ರಾಜಸ್ವ ಲೆಕ್ಕದಡಿ ₹7,071 ಕೋಟಿ ಹಾಗೂ ಬಂಡವಾಳ ಲೆಕ್ಕದಡಿ ₹1,162 ಕೋಟಿಗಳ ಆಯವ್ಯಯ ಹೊಂದಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ಆಯ್ಕೆ ಮಾಡಲಾಯಿತು. ರಾಜಸ್ವ ಲೆಕ್ಕದಡಿ ₹6,667 ಕೋಟಿಗಳು ಹಾಗೂ ಬಂಡವಾಳ ಲೆಕ್ಕದಡಿ ₹1,133 ಕೋಟಿಗಳು ಖರ್ಚಾಗಿದ್ದು ರಾಜಸ್ವ ಮತ್ತು ಬಂಡವಾಳ ಲೆಕ್ಕಗಳಡಿ ಕ್ರಮವಾಗಿ ₹404 ಕೋಟಿ ಮತ್ತು ₹30 ಕೋಟಿಗಳಷ್ಟು ಬಳಕೆಯಾಗದೇ ಉಳಿದಿದ್ದು, ಅವು ಆಯವ್ಯಯ ಅವಕಾಶದ ಶೇಕಡಾ ಆರು ಹಾಗೂ ಶೇಕಡಾ ಮೂರುರಷ್ಟಿತ್ತು. ಕೆಲವು ಅಂಶಗಳನ್ನು ಈ ಕೆಳಗೆ ಹಾಗೂ **ಅನುಬಂಧ–1.5**ರಲ್ಲಿ ನೀಡಲಾಗಿದೆ.

(ಅ) ಕರ್ನಾಟಕ ಆಯುಷ್ ಔಷಧಿ ತಯಾರಿಕಾ ಸೊಸೈಟಿಯು ಮಂತ್ರಿಮಂಡಲದಿಂದ ಅನುಮೋದನೆಯಾಗದ ಕಾರಣ ಸ್ಥಾಪಿತವಾಗಲಿಲ್ಲ;

(ಬ) ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನಿರ್ಮಾಣವಾಗಬೇಕಿದ್ದ 54 ಶವಾಗಾರಗಳ ಪೈಕಿ ಎರಡು ಪೂರ್ಣಗೊಂಡಿದ್ದು, ಒಂದರ ನಿರ್ಮಾಣ ಪ್ರಗತಿಯಲ್ಲಿದ್ದು, 13 ಇನ್ನೂ ಪ್ರಾರಂಭವಾಗಬೇಕಿದ್ದು, ಉಳಿದ 38ಕ್ಕೆ ಸರ್ಕಾರದ ಅನುಮೋದನೆಯಾಗಿರಲಿಲ್ಲ;

(ಕ) 116 ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರಸ್ತಾಪಿಸಲಾಗಿದ್ದ ಆಯುಷ್ ಚಿಕಿತ್ಸಾ ಕೇಂದ್ರಗಳಲ್ಲಿ 93 ಕಾರ್ಯಗತವಾಗಿದ್ದು 23 ಕಾರ್ಯ ನಿರ್ವಹಿಸುತ್ತಿರಲಿಲ್ಲ; ಮತ್ತು

(ಡ) 14 ಮತ್ತು 6 ಜಿಲ್ಲಾ ಆಸ್ಪತ್ರೆಗಳಿಗೆ ಪ್ರತಿಯಾಗಿ 10 ಮತ್ತು 2 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಟಿ ಮತ್ತು ಎಮ್‌ಆರ್‌ಐ ಸ್ಕ್ಯಾನ್ ವ್ಯವಸ್ಥೆಯನ್ನು ಒದಗಿಸಲಾಗಿದೆ.

## 1.2 ರಾಜ್ಯದ ಸಂಪನ್ಮೂಲಗಳು

### 1.2.1 ವಾರ್ಷಿಕ ಹಣಕಾಸಿನ ಲೆಕ್ಕಗಳ ಪ್ರಕಾರ ರಾಜ್ಯದ ಸಂಪನ್ಮೂಲಗಳು

ರಾಜಸ್ವ ಮತ್ತು ಬಂಡವಾಳಗಳು ಸ್ವೀಕೃತಿಗಳ ಎರಡು ಹರಿವುಗಳಾಗಿದ್ದು, ರಾಜ್ಯಸರ್ಕಾರದ ಸಂಪನ್ಮೂಲಗಳ ಆಕರವಾಗಿವೆ. ರಾಜಸ್ವ ಸ್ವೀಕೃತಿಗಳು ತೆರಿಗೆ ಆದಾಯಗಳು, ತೆರಿಗೆಯೇತರ ಆದಾಯಗಳು, ಕೇಂದ್ರ ಸುಂಕ ತೆರಿಗೆಗಳಲ್ಲಿನ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ನೀಡುವ ಸಹಾಯಾನುದಾನ ಮತ್ತು ವಂತಿಗೆಗಳನ್ನು ಹೊಂದಿದೆ. ಬಂಡವಾಳ ಸ್ವೀಕೃತಿಯು ಹೂಡಿಕೆಗಳ ಹಿಂಪಡೆತ, ಸಾಲ ಮತ್ತು ಮುಂಗಡಗಳ ವಸೂಲಿ, ಆಂತರಿಕ ಮೂಲಗಳಿಂದ (ಮಾರುಕಟ್ಟೆ ಸಾಲಗಳು, ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕುಗಳಿಂದ ಸಮಾಲೋಚಿತ ಸಾಲಗಳು), ಋಣ ಸ್ವೀಕೃತಿಗಳು ಮತ್ತು ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮುಂಗಡಗಳು ಮುಂತಾದ ಇತರ ಬಂಡವಾಳ ಸ್ವೀಕೃತಿಗಳನ್ನು ಹೊಂದಿದೆ. ಜೊತೆಗೆ ಸಾರ್ವಜನಿಕ ಲೆಕ್ಕದಲ್ಲಿನ ನಿವ್ವಳ ಸ್ವೀಕೃತಿಗಳನ್ನೂ ಸಹ ಸರ್ಕಾರವು ತನ್ನ ಕೊರತೆಗಳನ್ನು ತುಂಬಿಕೊಳ್ಳಲು ಬಳಸಿಕೊಳ್ಳುತ್ತದೆ. **ನಕ್ಷೆ 1.4**ರಲ್ಲಿ 2013–14ರಿಂದ 2017–18ರ ಅವಧಿಯಲ್ಲಿ ಸ್ವೀಕೃತಿಗಳ ವಿವಿಧ ಅಂಗಗಳ

ಪ್ರವೃತ್ತಿಯನ್ನು ತೋರಿಸಲಾಗದೆ. **ನಕ್ಷೆ 1.5**ರಲ್ಲಿ 2017–18ನೇ ಸಾಲಿನಲ್ಲಿ ರಾಜ್ಯದ ಸಂಪನ್ಮೂಲಗಳ ವಿವಿಧ ಅಂಗಗಳ ಮತ್ತು ಉಪ ಅಂಗಗಳನ್ನು ತೋರಿಸಲಾಗಿದೆ.

**ನಕ್ಷೆ 1.4: 2013–14ರಿಂದ 2017–18ರವರೆಗೆ ಸ್ವೀಕೃತಿಗಳ ಪ್ರವೃತ್ತಿ**




*#ಸಾದಿಲ್ವಾರು ನಿಧಿ ಸ್ವೀಕೃತಿಗಳನ್ನು ಹೊರತುಪಡಿಸಿ*

**ನಕ್ಷೆ 1.5: ಸಂಪನ್ಮೂಲಗಳ ಅಂಗಗಳು ಮತ್ತು ಉಪ–ಅಂಗಗಳು**




*ಆಕರ: ಹಣಕಾಸು ಲೆಕ್ಕಗಳು.*

ಒಟ್ಟಾರೆ ಸ್ವೀಕೃತಿಗಳು (ಸಾದಿಲ್ವಾರು ನಿಧಿ ಸ್ವೀಕೃತಿಗಳನ್ನು ಹೊರತುಪಡಿಸಿ) 2013–14ರಲ್ಲಿದ್ದ ₹1,15,896 ಕೋಟಿಯಿಂದ 2017–18ರಲ್ಲಿ ₹1,78,342 ಕೋಟಿಗೆ ಏರಿದ್ದು, ಹೆಚ್ಚಳವು ಶೇಕಡ 54ರಷ್ಟಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ (₹1,76,661 ಕೋಟಿ), 2017–18ರಲ್ಲಿ (₹1,78,342 ಕೋಟಿ) ಸ್ವೀಕೃತಿಗಳು ₹1,681 ಕೋಟಿಯಷ್ಟು ಹೆಚ್ಚಳಗೊಂಡಿತ್ತು (ಶೇಕಡ ಒಂದಕ್ಕಿಂತ ಕಡಿಮೆ).

2017–18ರಲ್ಲಿ ಒಟ್ಟಾರೆ ಸ್ವೀಕೃತಿಗಳಲ್ಲಿ ರಾಜಸ್ವ ಸ್ವೀಕೃತಿಯ ಪಾಲು ಶೇಕಡ 82ರಷ್ಟಿದ್ದು, ಮುಂದಿನ ವಿವರಗಳನ್ನು **ಕಂಡಿಕೆ 1.3**ರಲ್ಲಿ ಒದಗಿಸಲಾಗಿದೆ.

ಬಂಡವಾಳ ಸ್ವೀಕೃತಿಗಳು 2013–14ರಲ್ಲಿನ ₹17,484 ಕೋಟಿಯಿಂದ 2017–18ರಲ್ಲಿ ₹25,263 ಕೋಟಿಗೆ ಏರಿ ಶೇಕಡ 44ರಷ್ಟು ಹೆಚ್ಚಳವಾಗಿದೆ. 2017–18ರಲ್ಲಿ ಬಂಡವಾಳ ಸ್ವೀಕೃತಿಗಳು ಒಟ್ಟು ಸ್ವೀಕೃತಿಗಳ ಶೇಕಡ 14ರಷ್ಟಿದ್ದವು. ಬಂಡವಾಳ ಸ್ವೀಕೃತಿಗಳ ಮುಖ್ಯ ಅಂಗವಾದ ಋಣ ಸ್ವೀಕೃತಿಗಳು ಹಿಂದಿನ ವರ್ಷಕ್ಕಿಂತ ₹6,034 ಕೋಟಿಗಳಷ್ಟು ಕಡಿಮೆಯಾಗಿತ್ತು. ಆಂತರಿಕ ಋಣ ಸ್ವೀಕೃತಿಗಳ ವೃದ್ಧಿಯು ಶೇಕಡ 21ರಷ್ಟು ಕಡಿಮೆಯಾಗಿತ್ತು. ಸಾಲಗಳು ಮತ್ತು ಮುಂಗಡಗಳು ಹಿಂದಿನ ವರ್ಷಕ್ಕಿಂತ ಶೇಕಡ ಒಂದರಷ್ಟು ಹೆಚ್ಚಾಗಿತ್ತು. 2017–18ರಲ್ಲಿ ಋಣೇತರ ಬಂಡವಾಳ ಸ್ವೀಕೃತಿಗಳು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಶೇಕಡ 11ರಷ್ಟು ವೃದ್ಧಿಯನ್ನು ತೋರಿಸಿದ್ದವು.

ಸಾರ್ವಜನಿಕ ಹಣಕ್ಕೆ ಸರ್ಕಾರವು ಬ್ಯಾಂಕರ್/ಟ್ರಸ್ಟಿಯಾಗಿ ಕಾರ್ಯನಿರ್ವಹಿಸುವಂತಹ ಸ್ವೀಕೃತಿಗಳನ್ನು ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು ಉಲ್ಲೇಖಿಸುತ್ತದೆ. 2013–14 ರಿಂದ 2017–18ರ ಅವಧಿಯಲ್ಲಿ ಒಟ್ಟು ಸ್ವೀಕೃತಿಗಳಿಗೆ ಅವು ಸರಾಸರಿ ಶೇಕಡ ಏಳರಷ್ಟಿತ್ತು. ನಿವ್ವಳ ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು 2013–14ರಲ್ಲಿ ₹8,870 ಕೋಟಿ ಇದ್ದು 2016–17ರಲ್ಲಿ ₹12,164 ಕೋಟಿಗೆ ಏರಿದ್ದು 2017–18ರಲ್ಲಿ ₹6,079 ಕೋಟಿಗಳಿಗೆ ಇಳಿಯಿತು.

## 1.3 ರಾಜಸ್ವ ಸ್ವೀಕೃತಿಗಳು

ಕರ್ನಾಟಕ ಸರ್ಕಾರದ ವಿತ್ತಪರಿಸ್ಥಿತಿಯು ಬಹುಪಾಲು ರಾಜಸ್ವದೆಡೆಯಿಂದ ಪ್ರಭಾವಿತವಾಗಿದೆ. 2013–14ರಿಂದ 2017–18ರ ಅವಧಿಯಲ್ಲಿ ಸರಾಸರಿ ಶೇಕಡ 69ರಷ್ಟು ಆದಾಯವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. ಉಳಿದ ಭಾಗ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಮತ್ತು ಸಹಾಯಾನುದಾನ ಮತ್ತು ವಂತಿಗೆಗಳ ರೂಪದಲ್ಲಿ ಕೇಂದ್ರ ಸರ್ಕಾರದಿಂದ ವರ್ಗಾವಣೆಯಾಗಿದೆ.

ತೆರಿಗೆಯ ವಿನ್ಯಾಸದ ಪುನರ್ವ್ಯವಸ್ಥೆ ಮತ್ತು ಸರಳೀಕರಣದ ಜೊತೆಗೆ ತೆರಿಗೆ ಸಲ್ಲಿಕೆಗಳ ಕ್ರಿಯೆಯನ್ನು ಸುಲಭಗೊಳಿಸಿರುವುದು, ವಿದ್ಯುನ್ಮಾನ ತೆರಿಗೆ ಪಾವತಿ ಮತ್ತು ಎಲ್ಲಿ ಬೇಕಾದರೂ ನೋಂದಣಿ ಯಂತಹವುಗಳಿಂದ ವಿವಿಧ ತೆರಿಗೆಗಳ ಸಂಪನ್ಮೂಲ ಸಂಗ್ರಹವು ಪ್ರಭಾವಶಾಲಿಯಾಗಿ ತೆರಿಗೆ ವಸೂಲಿಯಲ್ಲಿ ಸತತವಾಗಿ ಉತ್ತಮ ಕಾರ್ಯವನ್ನು ಖಚಿತಪಡಿಸಿದೆ. ತೆರಿಗೆ ಆದಾಯವು ಸುಸಂಗತವಾಗಿ ಏರುತ್ತಿದ್ದರೂ ಕರ್ನಾಟಕ ಸರ್ಕಾರವು ತೆರಿಗೆಯೇತರ ಆದಾಯ ಸಂಗ್ರಹವನ್ನು ಉತ್ತಮ ಪಡಿಸಿಲ್ಲವಾದ್ದರಿಂದ ಅದು 2013–14 ರಿಂದ 2017–18ರ ಅವಧಿಯಲ್ಲಿ ರಾಜಸ್ವ ಆದಾಯದ ಶೇಕಡ 4ರಿಂದ 5ರ ನಡುವೆಯೇ ಇದೆ. ಇದನ್ನು **ಕಂಡಿಕೆ 1.3.1.2**ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.

2013–14ರಿಂದ 2017–18ರ ಅವಧಿಯಲ್ಲಿ ರಾಒಆಂಉಕ್ಕೆ ಸಾಪೇಕ್ಷವಾಗಿ ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಯನ್ನು ಹಾಗೂ ಸಂಯೋಜನೆಯನ್ನು **ಅನುಬಂಧ 1.4**ರಲ್ಲಿ ನೀಡಲಾಗಿದೆ ಹಾಗೂ **ನಕ್ಷೆ 1.6**ರಲ್ಲಿ ತೋರಿಸಲಾಗಿದೆ.

**ನಕ್ಷೆ 1.6: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು.*

ಅನುಬಂಧದಲ್ಲಿನ ವಿವರಗಳನ್ನು ಗಮನಿಸಿದಂತೆ

- ರಾಜಸ್ವ ಪ್ಲವನತೆಯು[3] ರಾಜಸ್ವ ಸ್ವೀಕೃತಿಗಳ ಮತ್ತು ರಾಒಆಂಉದ ವೃದ್ಧಿಗೆ ನೇರ ಪ್ರಮಾಣವನ್ನು ಹೊಂದಿದ್ದು ತೂಗಾಡುವ ಪ್ರವೃತ್ತಿಯನ್ನು ತೋರಿಸಿತು ಮತ್ತು 0.83 ಮತ್ತು 1.39ರ ನಡುವೆ ಇದ್ದಿತು. ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವು 2013–14ರಲ್ಲಿ ಶೇಕಡಾ 14.54 ಇದ್ದದ್ದು 2017–18ರಲ್ಲಿ 10.35ಕ್ಕೆ ಇಳಿಯಿತು.

- ತೆರಿಗೆ ರಾಜಸ್ವದಲ್ಲಿನ ವೃದ್ಧಿಯಲ್ಲಿನ ಏರುಪೇರಿನಿಂದ ರಾಜ್ಯದ ಸ್ವಂತ ತೆರಿಗೆ ಹಾಗೂ ರಾಒಆಂಉದ ಪ್ಲವನತೆಯು ಅನಿಶ್ಚಿತತೆಯ ಪ್ರವೃತ್ತಿಯನ್ನು ತೋರಿಸಿದ್ದು, 2017–18ರಲ್ಲಿ ತೀವ್ರ ಕುಸಿತವನ್ನು ಕಂಡಿತು. ಪ್ಲವನತೆಯ ಅನುಪಾತವು 2013–14ರಲ್ಲಿ ಇದ್ದ 0.94 ರಿಂದ 2015–16ರಲ್ಲಿ 0.70ಕ್ಕೆ ಇಳಿದು 2016–17ರಲ್ಲಿ 0.83ಕ್ಕೆ ಏರಿ 2017–18ರಲ್ಲಿ ಕನಿಷ್ಠ 0.32ರಷ್ಟು ಕಡಿಮೆಯಾಗಿತ್ತು.

**ನಕ್ಷೆ 1.7** ರಾಜಸ್ವ ಸ್ವೀಕೃತಿಗಳನ್ನು ರಾಒಆಂಉಕ್ಕೆ ಹೋಲಿಸಿದಂತೆ ವೃದ್ಧಿಯ ದರವನ್ನು ತೋರಿಸುತ್ತದೆ ಮತ್ತು **ನಕ್ಷೆ 1.8** ಪ್ಲವನತೆಯ ಅನುಪಾತಗಳ ಪ್ರವೃತ್ತಿಯನ್ನು ಬಿಂಬಿಸುತ್ತದೆ.

---

[3] ಪ್ಲವನತೆಯ ಅನುಪಾತವು ಮೂಲ ಅಸ್ಥಿರತೆಯ ಬದಲಾವಣೆಗೆ ಸಂಬಂಧಿಸಿದಂತೆ ವಿತ್ತೀಯ ವ್ಯತ್ಯಯದ ಸ್ಥಿತಿಸ್ಥಾಪಕತ್ವವನ್ನು ಅಥವಾ ಪ್ರತಿಕ್ರಿಯೆ ನೀಡುವ ಮಟ್ಟವನ್ನು ಸೂಚಿಸುತ್ತದೆ. ಉದಾಹರಣೆಗೆ ರಾಜಸ್ವ ಪ್ಲವನತೆಯು 0.4ರಲ್ಲಿದೆ ಎಂದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇಕಡ ಒಂದರಷ್ಟು ಹೆಚ್ಚಾದಲ್ಲಿ ರಾಜಸ್ವ ಸ್ವೀಕೃತಿಗಳು ಶೇಕಡ 0.4 ಅಂಕಗಳಷ್ಟು ಹೆಚ್ಚುತ್ತವೆ ಎಂಬುದನ್ನು ಸೂಚಿಸುತ್ತದೆ.

**ನಕ್ಷೆ 1.7: ರಾಒಆಂಉಗೆ ಸಂಬಂಧಿಸಿದಂತೆ ರಾಜಸ್ವ ಸ್ವೀಕೃತಿಗಳ ವೃದ್ಧಿ**




*ಆಕರ: ಹಣಕಾಸು ಲೆಕ್ಕಗಳು ಮತ್ತು 2017–18ರ ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ ಮತ್ತು ಹಣಕಾಸು ಸಚಿವಾಲಯ, ಭಾರತ ಸರ್ಕಾರ ಪತ್ರ ದಿನಾಂಕ 28 ಆಗಸ್ಟ್ 2017*

* *ಹಿಂದಿನ ವರ್ಷಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಅಳವಡಿಸಿಕೊಂಡಿರುವ ರಾಒಆಂಉದ ಅಂಕಿಗಳಿಗೆ **ಅನುಬಂಧ 1.4**ನ್ನು ನೋಡಿ.*

**ನಕ್ಷೆ 1.8: ರಾಜಸ್ವ ಪ್ಲವನತೆಯ ಪ್ರವೃತ್ತಿ**




ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜಸ್ವ ಪ್ಲವನತೆಯು 2014–15ರ ವರೆಗೆ ವೃದ್ಧಿಯನ್ನು ತೋರಿಸಿದ್ದು, ಮುಂದೆ ಇಳಿಕೆಯಾಗಿದೆ. ರಾಒಆಂಉಕ್ಕೆ ಸಂಬಂಧಿಸಿದಂತೆ ರಾಜ್ಯದ ಸ್ವಂತ ತೆರಿಗೆ ಪ್ಲವನತೆಯು 2013–14ರಿಂದ 2014–15ರವರೆಗೆ ಸ್ವಲ್ಪ ಮಟ್ಟಿನ ಏರಿಕೆಯಾಗಿದ್ದು ತದನಂತರ ಅಂತರವರ್ಷಗಳ ವ್ಯತ್ಯಾಸದಿಂದ ಇಳಿಕೆಯಾಗಿದೆ.

### 1.3.1 ರಾಜ್ಯದ ಸ್ವಂತ ಸಂಪನ್ಮೂಲಗಳು

#### 1.3.1.1 ತೆರಿಗೆ ಆದಾಯ

2017–18ರಲ್ಲಿ ರಾಜ್ಯದಲ್ಲಿ ಮಾರಾಟಗಳು ಮತ್ತು ವ್ಯಾಪಾರದ ಮೇಲಿನ ತೆರಿಗೆಗಳು (ಶೇಕಡ 29) ಮತ್ತು ರಾಜ್ಯ ಸರಕು ಮತ್ತು ಸೇವಾ ತೆರಿಗೆಗಳು (ಶೇಕಡ 28) ಪ್ರಮುಖ ಮೂಲವಾಗಿದ್ದು ರಾಜ್ಯ ಅಬಕಾರಿ (ಶೇಕಡ 21) ಮುದ್ರಾಂಕ ಮತ್ತು ನೋಂದಣಿ ಶುಲ್ಕ (ಶೇಕಡ 10) ಮತ್ತು ವಾಹನಗಳ ಮೇಲಿನ ತೆರಿಗೆಗಳು (ಶೇಕಡ ಏಳು) ನಂತರದ ಸ್ಥಾನದಲ್ಲಿದ್ದವು. 2013–14ರಿಂದ 2017–18ರ ಅವಧಿಯಲ್ಲಿ ತೆರಿಗೆ ಆದಾಯದ ಪ್ರಮುಖ ಅಂಗಗಳ ಪ್ರವೃತ್ತಿಯನ್ನು **ಅನುಬಂಧ 1.4** ಮತ್ತು **ನಕ್ಷೆ 1.9**ರಲ್ಲಿ ತೋರಿಸಲಾಗಿದೆ.

**ನಕ್ಷೆ 1.9: ಪ್ರಮುಖ ತೆರಿಗೆ ಆದಾಯಗಳ ವೃದ್ಧಿ ಪ್ರವೃತ್ತಿ**




** ₹24,182 ಕೋಟಿಗಳ ರಾಜ್ಯ ಸರಕು ಮತ್ತು ಸೇವಾ ತೆರಿಗೆಯನ್ನು ಒಳಗೊಂಡಿದೆ*
*ಆವರಣದಲ್ಲಿರುವ ಅಂಕೆಗಳು ವೃದ್ಧಿಯ ದರವನ್ನು ಸೂಚಿಸುತ್ತವೆ.*

2013–14ರಲ್ಲಿ ₹33,719 ಕೋಟಿಯಷ್ಟಿದ್ದ ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಯು 2017–18ರಲ್ಲಿ ₹49,275 ಕೋಟಿಗಳಿಗೆ ಏರಿ ಶೇಕಡ 46ರಷ್ಟು ಹೆಚ್ಚಾಗಿತ್ತು (₹15,576 ಕೋಟಿ). ಇದು ₹24,182 ಕೋಟಿಗಳ ರಾಜ್ಯ ಸರಕು ಮತ್ತು ಸೇವಾ ತೆರಿಗೆಯನ್ನೂ ಒಳಗೊಂಡಿದೆ. ರಾಜ್ಯ ಅಬಕಾರಿಯು ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ ಎರಡನೇ ಅತಿ ದೊಡ್ಡ ಕೊಡುಗೆ ನೀಡಿದ್ದು ಸದರಿ ಅವಧಿಯಲ್ಲಿ ಶೇಕಡಾ 40ರಷ್ಟು ಏರಿತು. ಮುಂದ್ರಾಂಕ ಮತ್ತು ನೋಂದಣಿ ಶುಲ್ಕಗಳು ₹6,189 ಕೋಟಿಗಳಿಂದ ₹9,024 ಕೋಟಿಗಳಿಗೆ ಏರಿದ್ದು, ಏರಿಕೆಯು ಶೇಕಡ 46 ರಷ್ಟಿದೆ. ವಾಹನಗಳ ಮೇಲಿನ ತೆರಿಗೆಯು ಸ್ವಂತ ತೆರಿಗೆ ಆದಾಯದ ಗಣನಾರ್ಹ ಕೊಡುಗೆಯ ಭಾಗವಾಗಿದೆ. 2013–14ರಿಂದ 2017–18ರ ಅವಧಿಯಲ್ಲಿ ಇದು ಶೇಕಡಾ 59ರಷ್ಟು ಏರಿದೆ (₹2,298 ಕೋಟಿ).

### ಸಂಗ್ರಹಣಾ ವೆಚ್ಚ

2014–15 ರಿಂದ 2016–17ರ ಅವಧಿಯಲ್ಲಿ ವಾಹನಗಳ ಮೇಲಿನ ತೆರಿಗೆ, ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ, ಮುದ್ರಾಂಕ ಮತ್ತು ನೋಂದಣಿ ಶುಲ್ಕ ಮತ್ತು ರಾಜ್ಯ ಅಬಕಾರಿ ಮೇಲಿನ ತೆರಿಗೆಯ ಒಟ್ಟು ಸಂಗ್ರಹಣೆ, ಸಂಗ್ರಹಣೆಗಾಗಿ ಮಾಡಿದ ವೆಚ್ಚ ಮತ್ತು ಸಂಗ್ರಹಣೆಯ ಮೊತ್ತಕ್ಕೆ ಸಂಗ್ರಹಣಾ ವೆಚ್ಚದ ಶೇಕಡಾವಾರುಗಳನ್ನು, ಆಯಾ ವರ್ಷಗಳಿಗೆ ಹಿಂದಿನ ವರ್ಷದ ಅಖಿಲ ಭಾರತ ಸರಾಸರಿ ಸಂಗ್ರಹಣಾ ವೆಚ್ಚವನ್ನು **ಅನುಬಂಧ 1.6**ರಲ್ಲಿ ನೀಡಲಾಗಿದೆ. ಅನುಬಂಧವನ್ನು ಗಮನಿಸಿದಂತೆ, 2013–18ರ ಅವಧಿಯಲ್ಲಿ ಒಟ್ಟು ಸಂಗ್ರಹಣಾ ಮೊತ್ತಕ್ಕೆ ಹೋಲಿಸಿದಲ್ಲಿ 2013–14 ಮತ್ತು 2014–15ರಲ್ಲಿ ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆಯನ್ನು ಹೊರತುಪಡಿಸಿ ಶೇಕಡಾವಾರು ಸಂಗ್ರಹಣಾ ವೆಚ್ಚವು ಅಖಿಲ ಭಾರತ ಸರಾಸರಿಗಿಂತ ಗಮನಾರ್ಹವಾಗಿ ಕಡಿಮೆ ಪ್ರಮಾಣದಲ್ಲಿದ್ದು ಕರ್ನಾಟಕದಲ್ಲಿ ಸಂಗ್ರಹಣಾ ವೆಚ್ಚವು ಭಾರತದ ವೆಚ್ಚಕ್ಕಿಂತ ಕಡಿಮೆಯಿತ್ತೆಂದು ಸೂಚಿಸಿದೆ.

### ರಾಒಆಂಉಕ್ಕೆ ಸ್ವಂತ ತೆರಿಗೆ ಆದಾಯದ ಹೋಲಿಕೆ

2017–18ರಲ್ಲಿ ಕರ್ನಾಟಕದ ರಾಒಆಂಉಕ್ಕೆ ರಾಜ್ಯದ ಸ್ವಂತ ತೆರಿಗೆಯನ್ನು ನೆರೆ ರಾಜ್ಯಗಳಿಗೆ ಹೋಲಿಸಿ **ಕೋಷ್ಟಕ 1.8**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.8: ನೆರೆ ರಾಜ್ಯಗಳಿಗೆ ರಾಒಆಂಉಕ್ಕೆ ಸ್ವಂತ ತೆರಿಗೆ ರಾಜಸ್ವದ ಹೋಲಿಕೆ**

*(₹ ಕೋಟಿಗಳಲ್ಲಿ)*

| ಕ್ರಮ ಸಂಖ್ಯೆ | ಅಂಗ | ಕರ್ನಾಟಕ | ಕೇರಳ | ತಮಿಳುನಾಡು | ಮಹಾರಾಷ್ಟ್ರ |
|---|---|---|---|---|---|
| 1 | ಸ್ವಂತ ತೆರಿಗೆ ರಾಜಸ್ವ | 87,130 | 46,460 | 93,737 | 1,67,932 |
| 2 | ರಾಒಆಂಉ | 13,10,879 | 6,86,116 | 14,27,074 | 24,96,505 |
| 3 | ಸ್ವಂತ ತೆರಿಗೆ/ರಾಒಆಂಉ (ಶೇಕಡವಾರು) | 6.65 | 6.77 | 6.57 | 6.73 |

2017–18ರಲ್ಲಿ ರಾಒಆಂಉದ ಶೇಕಡಾವಾರಾಗಿ ಸ್ವಂತ ತೆರಿಗೆ ಆದಾಯವು ತಮಿಳುನಾಡಿಗೆ ಹೋಲಿಸಿದಾಗ (ಶೇಕಡಾ 6.57) ಕರ್ನಾಟಕವು (ಶೇಕಡ 6.65) ಉತ್ತಮವಾಗಿತ್ತು. ಆದರೆ, ಮಹಾರಾಷ್ಟ್ರ (ಶೇಕಡ 6.73) ಮತ್ತು ಕೇರಳ (ಶೇಕಡಾ 6.77) ಕ್ಕಿಂತ ಕಡಿಮೆಯಿದ್ದಿತು.

### 1.3.1.2 ತೆರಿಗೆಯೇತರ ಆದಾಯ

ತೆರಿಗೆಯೇತರ ಆದಾಯವನ್ನು (ಶುಲ್ಕ, ಬಳಕೆದಾರರ ಕರ, ಬಡ್ಡಿ ಸ್ವೀಕೃತಿಗಳು, ಇತ್ಯಾದಿ) ಸಾಮಾನ್ಯವಾಗಿ ಶಾಸನಬದ್ಧವಲ್ಲದ ಅಧ್ಯಾದೇಶಗಳ ಮೂಲಕ ಸಂಗ್ರಹಿಸಲಾಗುತ್ತದೆ. ತೆರಿಗೆಯೇತರ ಸ್ವೀಕೃತಿಗಳ ಮೂಲಗಳು ಬಾಕಿ ಇರುವ ಮುಂಗಡಗಳ ಮೇಲಿನ ಬಡ್ಡಿ ಸ್ವೀಕೃತಿಗಳು, ಈಕ್ವಿಟಿ ಹೂಡಿಕೆಗಳ ಮೇಲಿನ ಡಿವಿಡೆಂಡುಗಳು ಮತ್ತು ಲಾಭಾಂಶಗಳು, ಖನಿಜಗಳು, ಅರಣ್ಯ ಮತ್ತು ವನ್ಯಜೀವಿ ಅಥವಾ ಇಂತಹ ಸೇವೆಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿದ್ದಕ್ಕೆ ಕೊಡಬೇಕಾದ ರಾಜಧನ ಶುಲ್ಕಗಳು ಮತ್ತು ಸರ್ಕಾರದ ಯಂತ್ರವು ಒದಗಿಸುವ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಬಳಕೆದಾರರು ನೀಡಬೇಕಾದ ಬೆಲೆಗಳು ಮುಂತಾದ ವಿತ್ತೀಯ ಸೇವೆಗಳನ್ನು ಒಳಗೊಂಡಿರುತ್ತವೆ.

ರಾಜ್ಯದ ವಿತ್ತೀಯ ಸುಧಾರಣಾ ಮತ್ತು ಆಯವ್ಯಯ ನಿರ್ವಹಣಾ ಸಮಿತಿಯು (ಎಫ್‌ಆರ್‌ಬಿಎಮ್‌ಸಿ) ತೆರಿಗೆಯೇತರ ರಾಜಸ್ವವನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಗುರುತಿಸಿತು ಮತ್ತು ತೆರಿಗೆಯೇತರ ರಾಜಸ್ವವನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ಗಣಿ ಮತ್ತು ಖನಿಜಗಳಿಂದ ರಾಜಸ್ವವನ್ನು ಹೆಚ್ಚಿಸಲು ಹರಾಜಿನ ಮಾರ್ಗವನ್ನು ಅಳವಡಿಸಿಕೊಳ್ಳಲು ಇಲಾಖೆಗಳಿಗೆ ಸಲಹೆ ನೀಡಿತ್ತು. ಸರ್ಕಾರದಿಂದ ಜಾರಿ ಮಾಡಲಾದ ಆಯವ್ಯಯ ಸುತ್ತೋಲೆಯು (2017–18) ಸಹ ಪ್ರಸಕ್ತ ಮಟ್ಟದ ಸಂಗ್ರಹಣೆಗಿಂತಲೂ ತೆರಿಗೆಯೇತರ ರಾಜಸ್ವದ ಸಂಗ್ರಹಣೆಯನ್ನು ಹೆಚ್ಚಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದೆ. ಎಲ್ಲ ಆಡಳಿತಾತ್ಮಕ ಇಲಾಖೆಗಳು ಎಲ್ಲ ತೆರಿಗೆಯೇತರ ರಾಜಸ್ವದ ಆಕರಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ತೆರಿಗೆಯೇತರ ರಾಜಸ್ವ/ ಬಳಕೆದಾರರ ಶುಲ್ಕಗಳ ದರಗಳನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಬೇಕು.

ಅಂತೆಯೇ, ಸಾಲಗಳ ನಿಬಂಧನೆಗಳು ಮತ್ತು ಷರತ್ತುಗಳು, ಹೂಡಿಕೆ ಮತ್ತು ಮರುಪಾವತಿಯ ಕಾಲಾವಧಿಗಳ ಆಧಾರದ ಮೇಲೆ ವಿವಿಧ ಸಾರ್ವಜನಿಕ ಉದ್ದಿಮೆಗಳು, ಸಹಕಾರಿ ಸಂಸ್ಥೆಗಳು, ಸ್ವಾಯುತ್ತ ಸಂಸ್ಥೆಗಳು ಮತ್ತಿತರ ಇಲಾಖಾ ಸಾಲಗಳ ಮೇಲಿನ ಬಡ್ಡಿ, ಡಿವಿಡೆಂಡುಗಳು ಮತ್ತು ಬಂಡವಾಳ ವಸೂಲಾತಿಗಳನ್ನು ಸಂಗ್ರಹಿಸಲು ಶ್ರಮ ವಹಿಸಬೇಕು.

ತೆರಿಗೆಯೇತರ ರಾಜಸ್ವ ಸಂಗ್ರಹಣೆಯ ಪ್ರವೃತ್ತಿಯನ್ನು **ಅನುಬಂಧ 1.4ರಲ್ಲಿ** ನೀಡಲಾಗಿದೆ. 2017–18ರಲ್ಲಿನ ತೆರಿಗೆಯೇತರ ರಾಜಸ್ವದ ಘಟಕಗಳನ್ನು **ನಕ್ಷೆ 1.10ರಲ್ಲಿ** ತೋರಿಸಲಾಗಿದೆ ಮತ್ತು 2013–14ರಿಂದ 2017–18ರ ಅವಧಿಯಲ್ಲಿ ತೆರಿಗೆಯೇತರ ರಾಜಸ್ವ, ಮತ್ತದರ ವೃದ್ಧಿ ದರದ ಪ್ರವೃತ್ತಿಯನ್ನು **ನಕ್ಷೆ 1.11ರಲ್ಲಿ** ನೀಡಲಾಗಿದೆ.

**ನಕ್ಷೆ 1.10: 2017–18ರಲ್ಲಿ ತೆರಿಗೆಯೇತರ ರಾಜಸ್ವದ ಘಟಕಗಳು**




ನಕ್ಷೆ 1.11: ತೆರಿಗೆಯೇತರ ರಾಜಸ್ವ ಮತ್ತು ಅದರ ವೃದ್ಧಿಯ ದರ




ಮೇಲಿನ ನಕ್ಷೆಯಲ್ಲಿ ನೋಡಿದಂತೆ, ತೆರಿಗೆಯೇತರ ರಾಜಸ್ವದ ವೃದ್ಧಿ ದರವು 2013–14ರಲ್ಲಿನ ಶೇಕಡ 1.7ರಿಂದ 2017–18ರಲ್ಲಿ ಅಂತರವರ್ಷ ವ್ಯತ್ಯಾಸಗಳೊಡನೆ ಶೇಕಡ 11.8ಕ್ಕೆ ಏರಿತು.

2017–18ರ ಆರ್ಥಿಕ ಸಮೀಕ್ಷೆಯಲ್ಲಿ ತೆರಿಗೆಯೇತರ ರಾಜಸ್ವಗಳು ರಾಜ್ಯವು ಎದುರಿಸುತ್ತಿರುವ ಮುಖ್ಯವಾದ ಒಂದು ವಿತ್ತೀಯ ತೊಡಕಾಗಿದೆಯೆಂದು ಮತ್ತು ಬಳಕೆದಾರರ ಶುಲ್ಕವನ್ನು ಉತ್ತಮ ಮಟ್ಟದಲ್ಲಿ ವಸೂಲಿ ಮಾಡಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಒಪ್ಪಲಾಗಿತ್ತು. ಒಟ್ಟು ಸ್ವೀಕೃತಿಗಳಿಗೆ ತೆರಿಗೆಯೇತರ ರಾಜಸ್ವದ ಅನುಪಾತವು ನಿರಂತರವಾಗಿ ಕಡಿಮೆಯಿದೆ. ಇದು ಬಳಕೆದಾರರ ಶುಲ್ಕಗಳ ಕಡಿಮೆ ವಸೂಲಿಯಿಂದಾಗಿದೆ. ಅನೇಕ ಇಲಾಖೆಗಳಲ್ಲಿ ಬಳಕೆದಾರರ ಶುಲ್ಕಗಳು, ಶುಲ್ಕ ಮತ್ತು ದಂಡಗಳು ಹಾಗೂ ಮತ್ತಿತರ ತೆರಿಗೆಯೇತರ ರಾಜಸ್ವಗಳ ಪರಿಷ್ಕರಣೆಯು ಅನೇಕ ವರ್ಷಗಳಿಂದ ಮಾಡಲಾಗಿಲ್ಲ.

ಎಲ್ಲ ಆಡಳಿತಾತ್ಮಕ ಇಲಾಖೆಗಳಿಗೆ ತೆರಿಗೆಯೇತರ ರಾಜಸ್ವಗಳನ್ನು ಪರಿಷ್ಕರಿಸಲು ಸೂಚಿಸಲಾಗಿದೆಯೆಂದು ಆರ್ಥಿಕ ಇಲಾಖೆಯು ತಿಳಿಸಿತು. ಸೂಚನೆಗಳ ಮೇರೆಗೆ ಗೃಹ ಇಲಾಖೆಯು ತನ್ನ ಬಳಕೆದಾರ ಶುಲ್ಕವನ್ನು 27.10.2017 ಮತ್ತು 20.11.2017ರ ಸರ್ಕಾರಿ ಆದೇಶದ ಮೂಲಕ ಪರಿಷ್ಕರಿಸಿತು. ಅಂತೆಯೇ ಕಾರ್ಮಿಕ ಇಲಾಕೆಯು ಲೈಸೆನ್ಸ್‌ಗಾಗಿನ ಶುಲ್ಕ ಮತ್ತು ಕಾರ್ಖಾನೆಗಳಿಗೆ ವಾರ್ಷಿಕ ನವೀಕರಣ ಶುಲ್ಕವನ್ನು ತನ್ನ 11.10.2017 ಮತ್ತು 24.03.2018 ದಿನಾಂಕಗಳ ಅಧಿಸೂಚನೆಯ ಮೂಲಕ ಪರಿಷ್ಕರಿಸಿತು. ಸಿಬ್ಬಂದಿ ಮತ್ತು

ಆಡಳಿತ ಸುಧಾರಣಾ ಇಲಾಖೆಯು ಕರ್ನಾಟಕ ಭವನ ನವದೆಹಲಿ ಮತ್ತು ಕುಮಾರಕೃಪ ಗೆಸ್ಟ್‌ಹೌಸ್ ಬೆಂಗಳೂರು ಇವುಗಳ ಬಳಕೆದಾರ ಶುಲ್ಕವನ್ನು ಕ್ರಮವಾಗಿ ಜನವರಿ 2018 ಮತ್ತು ಆಗಸ್ಟ್ 2018ರಲ್ಲಿ ಪರಿಷ್ಕರಿಸಿತು. ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಜಾರಿ ಮಾಡುವ ಸೂಚನೆ/ನಿರ್ದೇಶನಗಳ ಆಧಾರದ ಮೇಲೆ ಎಲ್ಲ ಇಲಾಖೆಗಳು ತೆರಿಗೆಯೇತರ ರಾಜಸ್ವ/ಬಳಕೆದಾರರ ಶುಲ್ಕವನ್ನು ಪರಿಷ್ಕರಿಸಬೇಕು.

ಹಿಂದಿನ ರಾಜ್ಯ ಹಣಕಾಸಿನ ವರದಿಗಳಲ್ಲಿ ಆಸ್ಪತ್ರೆಗಳು, ತೋಟಗಾರಿಕೆಯಂತಹ ಇಲಾಖೆಗಳು, ಬಳಕೆದಾರರ ಶುಲ್ಕ/ಬಾಡಿಗೆಯನ್ನು ಸಂಗ್ರಹಿಸಿ ಅದನ್ನು ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡದೆ ಬಳಸಿಕೊಂಡಿದ್ದನ್ನು ಉಲ್ಲೇಖಿಸಲಾಗಿದೆ. ದರಗಳ ಪರಿಷ್ಕರಣೆ ಮತ್ತು ಸುಧಾರಿತ ಸಂಗ್ರಹಣಾ ವ್ಯವಸ್ಥೆಯಿಂದಲೂ ಈ ಮೂಲಕದ ರಾಜಸ್ವದಲ್ಲಿನ ಹೆಚ್ಚಳವು ಪ್ರಸಕ್ತ ಕಡಿಮೆ ವ್ಯಾಪ್ತಿಯ ಕಾರಣ ಹೆಚ್ಚಾಗಿರಲಾರದು. ವೆಚ್ಚ ಸುಧಾರಣೆಗಳ ಆಯೋಗವು 2010ರಲ್ಲಿ ಬಳಕೆದಾರರ ಶುಲ್ಕವನ್ನು ಹೆಚ್ಚಿಸಲು ಅನೇಕ ಶಿಫಾರಸುಗಳನ್ನು ಮಾಡಿದ್ದರೂ, ಸಾಧನೆಯು ಅತ್ಯಂತ ಕಡಿಮೆಯಿದ್ದಿತು.

### ಬಡ್ಡಿ ಸ್ವೀಕೃತಿಗಳು, ಡಿವಿಡೆಂಡುಗಳು ಮತ್ತು ಲಾಭಾಂಶಗಳು

ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ಸ್ವೀಕೃತಿಯ ಜೊತೆಗೆ ಮತ್ತೊಂದು ಪ್ರಮುಖವಾದ ಬಡ್ಡಿ ಉತ್ಪನ್ನದ ಮೂಲವು ರಾಜ್ಯದ ಹೆಚ್ಚುವರಿ ನಗದು ಶಿಲ್ಕುಗಳ ಹೂಡಿಕೆಯಿಂದ ಬಂದದ್ದಾಗಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ನಿಯಮಾವಳಿಯಂತೆ ರಾಜ್ಯ ಸರ್ಕಾರವು ನಿರ್ವಹಿಸುವ ನಗದು ಉಳಿಕೆಯನ್ನು 14 ದಿನಗಳ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡಲಾಗುವುದು. ನಗದು ನಿರ್ವಹಣೆಯನ್ನು ಉತ್ತಮಗೊಳಿಸಲು ರಾಜ್ಯಸರ್ಕಾರವು ಹೆಚ್ಚುವರಿ ನಗದನ್ನು (ತಕ್ಷಣದ ಅಗತ್ಯಕ್ಕಿಂತ ಹೆಚ್ಚಿನ) ಭಾಗಶ: ಸರಾಸರಿ ವಾರ್ಷಿಕ ಬಡ್ಡಿದರ ಶೇಕಡ 3.35ರಂತೆ 14 ದಿನಗಳ ಮಧ್ಯಂತರ ಖಜಾನೆ ಬಿಲ್ಲುಗಳಲ್ಲಿ ಮತ್ತು ಭಾಗಶ: ಸರಾಸರಿ ವಾರ್ಷಿಕ ಬಡ್ಡಿದರ ಶೇಕಡಾ 6.17ರಂತೆ 91 ದಿನಗಳ ಮಧ್ಯಂತರ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡುತ್ತಿದೆ. ಆದರೆ ಸಾಲಗಳನ್ನು ಸರಾಸರಿ ವಾರ್ಷಿಕ ಬಡ್ಡಿದರ ಶೇಕಡ 7.69ರಂತೆ ಮಾಡಲಾಗುತ್ತದೆ. ಪ್ರಸಕ್ತ ವರ್ಷದಲ್ಲಿ ಆಯವ್ಯಯದಲ್ಲಿ ಅಂದಾಜು ಮಾಡಲಾಗಿದ್ದ ₹1,097 ಕೋಟಿಗೆ ಪ್ರತಿಯಾಗಿ ಸಂಗ್ರಹವಾದ ಆದಾಯವು ₹1,078.30 ಕೋಟಿಗಳಾಗಿದ್ದು, ಇದರಲ್ಲಿ 14 ದಿನದ ಟ್ರೆಜರಿ ಬಿಲ್ಲುಗಳಿಂದ ₹331.14 ಕೋಟಿಗಳು ಸಂಗ್ರಹವಾಗಿದ್ದರೆ, 91 ದಿನಗಳ ಟ್ರೆಜರಿ ಬಿಲ್ಲುಗಳು ₹747.16 ಕೋಟಿಗಳನ್ನು ಗಳಿಸಿದೆ.

ಸರ್ಕಾರವು ತನ್ನ ಕಂಪೆನಿ/ನಿಗಮಗಳಿಗೆ ನೀಡಿದ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ಸಂಗ್ರಹಣೆಯು ₹99.45 ಕೋಟಿಗಳಷ್ಟಿದ್ದು, ಇದು ವರ್ಷದ ಕೊನೆಯಲ್ಲಿ ಉಳಿದಿರುವ ಸಾಲಗಳ ಬಾಕಿಯ ಶೇಕಡ ಒಂದಕ್ಕಿಂತ ಕಡಿಮೆಯಿತ್ತು. ಸ್ವೀಕೃತಿಗಳು ಇಲಾಖಾ ವತಿಯ ವಾಣಿಜ್ಯ ಉದ್ದಿಮೆಯ[4] ಬಂಡವಾಳದ ಮೇಲಿನ ಬಡ್ಡಿಯ ಮೊತ್ತವನ್ನೂ ಒಳಗೊಂಡಿದೆ.

ಹಣಕಾಸು ನಿಯಮಗಳು, ಇಲಾಖಾ ಅಧಿಕಾರಿಗಳು ಉಳಿತಾಯ ಖಾತೆಗಳಲ್ಲಿ ಹಣವನ್ನು ಠೇವಣಿ ಇಡುವುದನ್ನು ನಿರ್ಬಂಧಿಸುತ್ತದೆ. ಆದಾಗ್ಯೂ ಇಲಾಖಾ ಅಧಿಕಾರಿಗಳಿಂದ ದೊಡ್ಡ ಮೊತ್ತದ ಹಣವನ್ನು ಬ್ಯಾಂಕುಗಳಲ್ಲಿ ಇಡಲಾಗಿತ್ತು. ಇಲಾಖೆಗಳಿಗೆ ಹಿಂದಿನ ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿದ್ದ ಬಳಕೆಯಾಗದ ಅನುದಾನಗಳು ಬ್ಯಾಂಕುಗಳಲ್ಲಿ ಇಡಲಾಗಿದೆ. ಆರ್ಥಿಕ ಇಲಾಖೆಯು ಅಂತಹ ಶಿಲ್ಕುಗಳು/ಶಿಲ್ಕುಗಳ ಮೇಲಿನ ಬಡ್ಡಿಗಳನ್ನು ಜಮೆ ಮಾಡಲು ನಿರ್ದೇಶನಗಳನ್ನು ನೀಡುವ (ಮೇ 2018) ಮೂಲಕ ಕ್ರಮ ಕೈಗೊಂಡಿತ್ತು. 2017–18ರಲ್ಲಿ ಉಳಿತಾಯ ಖಾತೆಗಳ ಮೇಲಿನ ಬಡ್ಡಿಯಾದ ₹62.62 ಕೋಟಿಗಳನ್ನು 0049–04–800–6–01–ಠೇವಣಿಗಳ ಮೇಲೆ ಸ್ವೀಕರಿಸಿದ ಬಡ್ಡಿಯಡಿ ಲೆಕ್ಕ ಹಾಕಲಾಗಿತ್ತು.

2017–18ನೇ ವರ್ಷದಲ್ಲಿ ಕಂಪನಿಗಳು ಹೂಡಿಕೆಯ ಮೇಲಿನ ಪ್ರತಿಫಲಗಳನ್ನು ಡಿವಿಡೆಂಡ್ ರೂಪದಲ್ಲಿ ಪ್ರಕಟಿಸಿ ಸರ್ಕಾರಿ ಲೆಕ್ಕಕ್ಕೆ ಜಮಾ ಮಾಡಿದ ಮೊತ್ತವು ₹78.83 ಕೋಟಿಗಳಷ್ಟಿತ್ತು. ಸರ್ಕಾರದ ಹೂಡಿಕೆಯ ಪ್ರಮಾಣವನ್ನು (₹65,146 ಕೋಟಿ) ಪರಿಗಣಿಸಿದಾಗ ಪ್ರತಿಫಲವು ನಗಣ್ಯವಾದ ಶೇಕಡ 0.12ರಷ್ಟಿತ್ತು.

[4] ರೇಷ್ಮೆ ಫಿಲೇಚರುಗಳ ಮೇಲಿನ ಬಂಡವಾಳದ ಮೇಲಿನ ಬಡ್ಡಿ ₹0.63 ಕೋಟಿ, ಇದು ಪುಸ್ತಕ ಹೊಂದಾಣಿಕೆ ಮೂಲಕ ಆಗಿದೆ.

### ಇತರ ತೆರಿಗೆಯೇತರ ಸ್ವೀಕೃತಿಗಳು

ಇತರ ತೆರಿಗೆಯೇತರ ಆದಾಯವು ಭಾರಿ ಹಾಗೂ ಸಣ್ಣ ಖನಿಜಗಳ ಮೇಲಿನ ರಾಜಧನವನ್ನು ಒಳಗೊಂಡಿದೆ. ಆಯವ್ಯಯ ಅಂದಾಜುಗಳ ₹2,251 ಕೋಟಿಗಳಿಗೆದುರಾಗಿ ವಾಸ್ತವ ಸಂಗ್ರಹವು ₹2,590 ಕೋಟಿಗಳಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ₹361 ಕೋಟಿಗಳಷ್ಟು ಏರಿಕೆಯಾಗಿದೆ.

### ಬಳಕೆದಾರರ ಶುಲ್ಕ/ಶುಲ್ಕಗಳನ್ನು ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡದಿರುವುದು

ಸಂವಿಧಾನದ ಪರಿಚ್ಛೇದ 266(1)ರ ಅನುಸಾರ ರಾಜ್ಯ ಸರ್ಕಾರವು ಸ್ವೀಕರಿಸಿದ ಎಲ್ಲ ರಾಜಸ್ವಗಳು, ಖಜಾನೆ ಬಿಲ್ಲುಗಳು, ಸಾಲಗಳು ಅಥವಾ ಮಾರ್ಗೋಪಾಯ ಮುಂಗಡಗಳ ಮೂಲಕ ಪಡೆದ ಎಲ್ಲ ಸಾಲಗಳು, ಸಾಲಗಳ ಮರುಪಾವತಿಯ ಮೂಲಕ ಸರ್ಕಾರವು ಸ್ವೀಕರಿಸಿದ ಮೊತ್ತಗಳೆಲ್ಲವೂ ಸೇರಿ ರಾಜ್ಯದ ಸಂಚಿತ ನಿಧಿಯಾಗುತ್ತದೆ. ಕಾನೂನಿನ ಅನ್ವಯ ಮತ್ತು ಸಂವಿಧಾನದಲ್ಲಿ ವಿಧಿಸಿದ ಉದ್ದೇಶ ಮತ್ತು ರೀತಿಯಲ್ಲಿ ಹೊರತುಪಡಿಸಿ ಸಂಚಿತ ನಿಧಿಯಿಂದ ಯಾವುದೇ ಮೊತ್ತವನ್ನು ಬಳಸುವಂತಿಲ್ಲ.

ಸಂಚಿತ ನಿಧಿಗೆ ಜಮೆಯಾಗದ ಬಳಕೆದಾರ ಶುಲ್ಕ/ಶುಲ್ಕಗಳಿಗೆ ಸಂಬಂಧಿಸಿದ ಎರಡು ಪ್ರಕರಣಗಳನ್ನು ಕೆಳಗೆ ನೀಡಲಾಗಿದೆ:

#### (ಎ) ಹುಲಿ ಸಂರಕ್ಷಣಾ ಪ್ರತಿಷ್ಠಾನ

ಕರ್ನಾಟಕ ಸರ್ಕಾರವು ಹುಲಿ ಮೀಸಲು ಪ್ರದೇಶವಾದ ಬಂಡಿಪುರ, ಭದ್ರ ಮತ್ತು ಅಂಶಿ–ದಾಂಡೇಲಿ ಎಂಬ ಮೂರು ಸ್ಥಳಗಳಲ್ಲಿ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳನ್ನು ಸ್ಥಾಪಿಸಲು ಅನುಮೋದಿಸಿತು (ಡಿಸೆಂಬರ್ 2007). ಪ್ರತಿಷ್ಠಾನವು ಪ್ರವೇಶ ಶುಲ್ಕ, ವಾಹನ ನಿಲುಗಡೆ ಶುಲ್ಕ ಮತ್ತಿತರ ಶುಲ್ಕಗಳ ಸಂಗ್ರಹಣೆಯ ಮೂಲಕ ಆದಾಯ ಗಳಿಸಿತ್ತು.

ಈ ಹುಲಿ ಮೀಸಲು ಪ್ರದೇಶಗಳ ದಾಖಲೆಗಳ ಪರಿಶೀಲನೆಯು ಹುಲಿ ಸಂರಕ್ಷಣಾ ಪ್ರತಿಷ್ಠಾನಕ್ಕೆ ವಹಿಸಲಾಗಿದ್ದ ಬಳಕೆದಾರ ಶುಲ್ಕಗಳನ್ನು ಬ್ಯಾಂಕ್ ಲೆಕ್ಕಗಳಿಗೆ ಜಮೆ ಮಾಡಲಾಗುತ್ತಿದ್ದದ್ದನ್ನು ತೋರಿಸಿದೆ. 2012–13ರಿಂದ 2017–18ರ ಅವಧಿಯಲ್ಲಿ ಸಂಗ್ರಹಿಸಿದ ₹46.75 ಕೋಟಿಗಳ ಬಳಕೆದಾರ ಶುಲ್ಕಗಳನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ **ಕೋಷ್ಟಕ–1.9**ರಲ್ಲಿ ತೋರಿಸಿರುವಂತೆ ಠೇವಣಿ ಮಾಡಲಾಗಿತ್ತು.

**ಕೋಷ್ಟಕ 1.9: ಬಳಕೆದಾರರ ಶುಲ್ಕವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಿರುವುದು**

*(₹ ಕೋಟಿಗಳಲ್ಲಿ)*

| ಕ್ರಮ ಸಂಖ್ಯೆ | ಪ್ರತಿಷ್ಠಾನದ ಹೆಸರು | 2012–13 | 2013–14 | 2014–15 | 2015–16 | 2016–17 | 2017–18 | ಒಟ್ಟು |
|---|---|---|---|---|---|---|---|---|
| 1 | ಬಂಡೀಪುರ | 3.08 | 4.50 | 5.52 | 6.69 | 7.14 | 7.07 | **34.00** |
| 2 | ಭದ್ರ | 0.21 | 0.32 | 0.44 | 0.53 | 0.71 | 1.01 | **3.22** |
| 3 | ಅಂಶಿ–ದಾಂಡೇಲಿ | 1.00 | 0.92 | 1.51 | 2.10 | 1.91 | 2.09 | **9.53** |
| | **ಒಟ್ಟು** | **4.29** | **5.74** | **7.47** | **9.32** | **9.76** | **10.17** | **46.75** |

ಈ ಬಳಕೆದಾರ ಶುಲ್ಕ/ಶುಲ್ಕಗಳನ್ನು ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡಿರಲಿಲ್ಲ. ಆದರೆ, ಹುಲಿ ಸಂರಕ್ಷಣಾ ಪ್ರತಿಷ್ಠಾನಗಳು ಜೀವವೈವಿಧ್ಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಬಳಸುತ್ತಿವೆ.

#### (ಬಿ) ಜಿಲ್ಲಾ ಖನಿಜ ಪ್ರತಿಷ್ಠಾನ (ಡಿಎಮ್‌ಎಫ್) ನಿಧಿ

ಭಾರತ ಸರ್ಕಾರದ ಅಧಿಸೂಚನೆ ದಿನಾಂಕ 17.09.2015ರ ಅನುಸಾರ 12.01.2015ರ (ಎಮ್‌ಎಮ್‌ಡಿಆರ್ ತಿದ್ದುಪಡಿ ಅಧಿನಿಯಮ ಜಾರಿಯಾದ ದಿನಾಂಕ) ಪೂರ್ವದಲ್ಲಿ ನಿರ್ವಹಿಸಲಾದ ಗಣಿಗಾರಿಕೆ ಗುತ್ತಿಗೆದಾರರು ಪಾವತಿಸಬೇಕಾದ ರಾಜಧನದ ಶೇಕಡಾ 30ರಷ್ಟು ಮೊತ್ತವನ್ನು ಡಿಎಮ್‌ಎಫ್ ನಿಧಿಗೆ ವಂತಿಗೆಯಾಗಿ ನೀಡಬೇಕು. 12.01.2015ರ ನಂತರ ನೀಡಲಾದ ಗಣಿಗಾರಿಕೆ ಗುತ್ತಿಗೆಗಳಿಗೆ ವಂತಿಗೆಯ ದರವು ಪಾವತಿಸಬೇಕಾದ ರಾಜಸ್ವದ ಶೇಕಡಾ 10ರಷ್ಟಿತ್ತು.

ರಾಜ್ಯ ಸರ್ಕಾರವು ಆದೇಶ ದಿನಾಂಕ 05.11.2015ರ ಮೂಲಕ ಪ್ರತಿ ಜಿಲ್ಲೆಯಲ್ಲೂ ಡಿಎಮ್‌ಎಫ್ ನಿಧಿಯನ್ನು 12.01.2015 ರಿಂದ ಸ್ಥಾಪಿಸಲು ಅಧಿಸೂಚಿಸಿತು ಮತ್ತು ಗಣಿಗಾರಿಕೆ ನಡೆಯುವ ಪ್ರತಿ ಜಿಲ್ಲಾ ಖಜಾನೆಯಲ್ಲಿ ಸಾರ್ವಜನಿಕ ಲೆಕ್ಕದ ಲೆಕ್ಕ ಶೀರ್ಷಿಕೆ 8449–00–120–9–45–ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಠೇವಣಿ ಖಾತೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಿತು (ಜನವರಿ 2016). ಅದನ್ನು ಕಲ್ಯಾಣ ಕಾರ್ಯಕ್ರಮಗಳಿಗೆ[5] ಮತ್ತು ನಿರ್ದಿಷ್ಟ ಕಾರಣಗಳಿಗಾಗಿ ಬಳಸಬೇಕಾಗಿದೆ.

ದಿನಾಂಕ 11.01.2016ರ ಅಧಿಸೂಚನೆಯನುಸಾರ, ಡಿಎಮ್‌ಎಫ್ ನಿಧಿಯನ್ನು ಪ್ರತಿ ಜಿಲ್ಲೆಗೊಂದರಂತೆ ಸಾರ್ವಜನಿಕ ಲೆಕ್ಕಗಳಡಿ ಬಡ್ಡಿಯಿಲ್ಲದ ಠೇವಣಿ ಲೆಕ್ಕದಲ್ಲಿಡಬೇಕಾಗುತ್ತದೆ ಮತ್ತು ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಕಾರ್ಯಸೂಚಿಗಳ ಮೂಲಕ ಅನುಮತಿ ಪಡೆದು ರಾಜ್ಯ ಸರ್ಕಾರದ ಅನುಮೋದನೆಯ ಮೂಲಕ ಖಜಾನೆ ಅಥವಾ ಗುರುತಿಸಿದ ಬ್ಯಾಂಕಿನಲ್ಲಿ ಬಡ್ಡಿ ದುಡಿಯುವ ಲೆಕ್ಕದಲ್ಲಿಡಬಹುದು. 08.03.2018ರ ಅಧಿಸೂಚನೆಯ ಅನ್ವಯ ಡಿಎಮ್‌ಎಫ್ ಸಂಸ್ಥೆಯು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಬ್ಯಾಂಕ್ ಖಾತೆಯನ್ನು ತೆರೆಯಬಹುದು ಮತ್ತು ಸಂಸ್ಥೆಯ ಮಾರ್ಗಸೂಚಿಗಳ ಅನುವುಗಳಂತೆ ಲೆಕ್ಕವನ್ನು ನಿರ್ವಹಿಸಬಹುದಾಗಿದೆ. ಮಾರ್ಚ್ 31, 2018ರಲ್ಲಿದ್ದಂತೆ ನಿಧಿಯಲ್ಲಿನ ಶಿಲ್ಕು ₹909.96 ಕೋಟಿಗಳಷ್ಟಿತ್ತು.

ಡಿಎಮ್‌ಎಫ್ ನಿಧಿಯ ವಂತಿಗೆಯು ಗಣಿಗಾರರು ಪಾವತಿಸುವ ರಾಜಧನದ ಶತಾಂಶವಾಗಿದ್ದು ರಾಜ್ಯದ ತೆರಿಗೆಯೇತರ ರಾಜಸ್ವದ ಸ್ವರೂಪದಲ್ಲಿದೆ. ಆದ್ದರಿಂದ ಡಿಎಮ್‌ಎಫ್ ನಿಧಿಗೆ ಬರುವ ವಂತಿಗೆಯು ರಾಜ್ಯದ ಸಂಚಿತ ನಿಧಿಯ ಭಾಗವಾಗಬೇಕು. ಹಾಗಾಗಿ ಖಜಾನೆಗಳಲ್ಲಿ 07.03.2018ರವರೆಗೂ ನೇರವಾಗಿ ಸಾರ್ವಜನಿಕ ಲೆಕ್ಕದಲ್ಲಿ, ತದನಂತರ ಬ್ಯಾಂಕುಗಳಲ್ಲಿ ಲೆಕ್ಕ ಮಾಡುವುದು ಸರಿಯಲ್ಲ.

ಸ್ವೀಕೃತವಾದ ರಾಜಧನದ ಭಾಗವು ರಾಜ್ಯದ ಸಂಚಿತ ನಿಧಿಗೆ ಜಮೆಯಾಗದೇ ಇರುವುದು ಭಾರತ ಸಂವಿಧಾನದ ಅನುಚ್ಛೇದ 266(1)ರ ಅನುವುಗಳಿಗೆ ವ್ಯತಿರಿಕ್ತವಾಗಿರುವ ಅಂಶವನ್ನು ಇಲಾಖೆಯ ಗಮನಕ್ಕೆ ತಂದಾಗ, ರಾಜ್ಯ ಸರ್ಕಾರದ ಕಾರ್ಯದರ್ಶಿ (ಎಮ್‌ಎಸ್‌ಎಮ್‌ಇಎಮ್) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಅವರು ಡಿಎಮ್‌ಎಫ್ ಕಡೆಗಿನ ವಂತಿಗೆಯನ್ನು ಗಣಿಗಾರರಿಂದ ಸಂಗ್ರಹಿಸಲಾಗುತ್ತಿದ್ದು ಅದನ್ನು ಜಿಲ್ಲೆಯಲ್ಲಿನ ಗಣಿಗಾರಿಕೆಯಿಂದ ಬಾಧಿತವಾಗಿರುವ ಪ್ರದೇಶಗಳಿಗಷ್ಟೇ ಬಳಸಬೇಕೆಂದು ಉತ್ತರಿಸಿದರು (ಆಗಸ್ಟ್ 2018). ಆದ್ದರಿಂದ ವಂತಿಗೆಯು ರಾಜ್ಯದ ಸಂಚಿತ ನಿಧಿಯ ಭಾಗವಾಗಿರದೇ ಆ ಪ್ರದೇಶದ ಜನರ ಕಲ್ಯಾಣಕ್ಕಾಗಿ ಮಾತ್ರ ಬಳಸಬೇಕಾಗುವ ಖನಿಜ ಸಂಪತ್ತಿನ ಭಾಗವಾಗಿದೆ.

ಲೆಕ್ಕಪರಿಶೋಧನೆಯು ಡಿಎಮ್‌ಎಫ್ ನಿಧಿಯಲ್ಲಿ ಸಂಗ್ರಹವಾಗುವ ಸ್ವೀಕೃತಿಗಳ ಲೆಕ್ಕ ಹಾಕುವಿಕೆಯ ಬಗ್ಗೆ ಆಕ್ಷೇಪಿಸುತ್ತಿರುವುದೇ ಹೊರತು ಅದರ ಬಳಕೆಯನ್ನಲ್ಲವಾದ್ದರಿಂದ ಇಲಾಖೆಯ ಉತ್ತರವು ಒಪ್ಪಲರ್ಹವಲ್ಲ. ಮುಂದುವರೆದು, ಬಳಕೆದಾರರ ಶುಲ್ಕವು ವಿಧಾನಮಂಡಲದ ಪರಿಶೀಲನೆಯಿಂದ ತಪ್ಪಿಹೋಗುತ್ತದೆ. ಆದ್ದರಿಂದ ಈ ಆದಾಯಗಳು/ವೆಚ್ಚದ ಜಾಡು ಹಿಡಿಯಲು ಅಂತಹ ಮೊತ್ತಗಳ ಜಮೆ/ಬಿಡುಗಡೆಗೆ ವ್ಯವಸ್ಥೆಯೊಂದನ್ನು ಜಾರಿ ಮಾಡಬೇಕಿದೆ.

### 1.3.2 ಕೇಂದ್ರ ಸರ್ಕಾರದಿಂದ ಸಹಾಯಾನುದಾನ

**ಅನುಬಂಧ 1.4**ರಲ್ಲಿ ತೋರಿಸಿರುವಂತೆ ಭಾರತ ಸರ್ಕಾರದಿಂದ ಸಹಾಯಾನುದಾನಗಳು ಮತ್ತು ವಂತಿಗೆಗಳು 2013–14ರಲ್ಲಿ ₹9,099 ಕೋಟಿ ಇದ್ದುದು 2017–18ರಲ್ಲಿ ₹21,641 ಕೋಟಿಗಳಿಗೆ ಏರಿಕೆಯಾಗಿದ್ದಿತು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಈ ವರ್ಷದಲ್ಲಿ ₹5,938 ಕೋಟಿಗಳಷ್ಟು ಇಳಿಕೆಯಾಗಿದೆ. 2017–18ರಿಂದ ಯೋಜನೆ ಹಾಗೂ ಯೋಜನೇತರವೆಂಬ ವಿಂಗಡಣೆಯನ್ನು ತೆಗೆದುಹಾಕಿರುವುದರಿಂದ ಸ್ವೀಕೃತಿಗಳಲ್ಲಿನ ಹೆಚ್ಚಳವು ಪ್ರಮುಖವಾಗಿ ಕೇಂದ್ರ ಪುರಸ್ಕೃತ ಯೋಜನೆಗಳು (₹11,177 ಕೋಟಿ), ಇತರೆ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನಗಳು (₹7,316 ಕೋಟಿಗಳು) ಇದ್ದು ಅವು ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದ ಉಂಟಾದ ರಾಜಸ್ವ ನಷ್ಟದ ಪರಿಹಾರ (₹6,246 ಕೋಟಿ) ಮತ್ತು ಹಣಕಾಸು ಆಯೋಗದ ಅನುದಾನಗಳನ್ನು (₹2,708 ಕೋಟಿ) ಒಳಗೊಂಡಿದೆ.

[5] ಗಣಿಗಾರಿಕೆಯಿಂದುಂಟಾಗುವ ಋಣಾತ್ಮಕ ಪರಿಣಾಮಗಳಿಂದ ಗಣಿಪ್ರದೇಶಗಳಲ್ಲಿನ ಜನರು ಮತ್ತು ಪರಿಸರಕ್ಕೆ ಆಗಿರುವ ತೊಂದರೆಯನ್ನು ನೀಗಿಸಲು, ಕುಡಿಯುವ ನೀರು ಸರಬರಾಜು, ಆರೋಗ್ಯ, ಶಿಕ್ಷಣ, ನೈರ್ಮಲ್ಯ ಕಾರ್ಯಕ್ರಮಗಳಂತಹವು ಮತ್ತು ಅಂತಹ ಜನರಿಗೆ ದೀರ್ಘಕಾಲೀನ ಜೀವನೋಪಾಯಗಳ ಅವಕಾಶಗಳನ್ನು ಸೃಷ್ಟಿಸುವುದು.

### 1.3.3 ಕೇಂದ್ರ ತೆರಿಗೆ ವರ್ಗಾವಣೆಗಳು

ಕೇಂದ್ರ ಸರ್ಕಾರವು ಕಾರ್ಪೊರೇಷನ್ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬಕಾರಿ ಸುಂಕಗಳು ಮುಂತಾದ ಕೇಂದ್ರ ತೆರಿಗೆ ಮತ್ತು ಸುಂಕಗಳ ರಾಜ್ಯ ಸರ್ಕಾರದ ಪಾಲನ್ನು ವರ್ಗಾಯಿಸುತ್ತದೆ. 2013–18ರ ಅವಧಿಯಲ್ಲಿ ಕೇಂದ್ರ ತೆರಿಗೆ ವರ್ಗಾವಣೆಗಳ ಪ್ರವೃತ್ತಿಯನ್ನು **ಕೋಷ್ಟಕ 1.10**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.10: ಕೇಂದ್ರ ತೆರಿಗೆ ವರ್ಗಾವಣೆಗಳ ಪ್ರವೃತ್ತಿಗಳು**

*(₹ ಕೋಟಿಗಳಲ್ಲಿ)*

| ವಿವರಗಳು | 2013–14 | 2014–15 | 2015–16 | 2016–17 | 2017–18 |
|---|---|---|---|---|---|
| ಕಾರ್ಪೊರೇಷನ್ ತೆರಿಗೆ | 4,643.76 | 5,117.21 | 7,547.57 | 9,211.05 | 9,721.29 |
| ಕಾರ್ಪೊರೇಷನ್ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ | 3,057.77 | 3,654.18 | 5,252.47 | 6,401.72 | 8,208.94 |
| ಸಂಪತ್ತಿನ ಮೇಲೆ ತೆರಿಗೆ | 12.75 | 13.81 | 1.65 | 21.08 | (–) 0.29 |
| ಸೀಮಾ ಶುಲ್ಕ | 2,252.90 | 2,369.95 | 3,830.22 | 3,962.25 | 3,203.80 |
| ಕೇಂದ್ರ ಅಬಕಾರಿ ಸುಂಕ | 1,591.16 | 1,338.24 | 3,181.60 | 4,524.54 | 3,348.80 |
| ಸೇವಾ ತೆರಿಗೆ | 2,249.93 | 2,160.75 | 4,153.56 | 4,639.22 | 3,617.15 |
| ಆದಾಯ ಮತ್ತು ವೆಚ್ಚದ ಮೇಲಿನ ಇತರ ತೆರಿಗೆಗಳು | – | 0.12 | 0.15 | – | – |
| ಸರಕುಗಳು ಮತ್ತು ಸೇವೆಗಳ ಮೇಲಿನ ಇತರೆ ತೆರಿಗೆಗಳು ಮತ್ತು ಸುಂಕಗಳು | 0.01 | (–) 0.01 | 16.12 | 0.08 | (–) 0.01 |
| ಸಂಯೋಜಿತ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) | – | – | – | – | 3,204.72 |
| ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) | – | – | – | – | 447.56 |
| ಒಟ್ಟು | **13,808.28** | **14,654.25** | **23,983.34** | **28,759.94** | **31,751.96** |

*ಆಕರ: ಆಯಾ ವರ್ಷಗಳ ಹಣಕಾಸು ಲೆಕ್ಕಗಳು*

ಮುಂದುವರೆದು, ಕೇಂದ್ರ ತೆರಿಗೆಗಳ ನಿವ್ವಳ ಹುಟ್ಟುವಳಿಯಲ್ಲಿನ (ಸೇವಾ ತೆರಿಗೆಯನ್ನು ಹೊರತುಪಡಿಸಿ) ಮತ್ತು ಸೇವಾ ತೆರಿಗೆಯ ನಿವ್ವಳ ಹುಟ್ಟುವಳಿಯಲ್ಲಿನ ರಾಜ್ಯದ ಪಾಲನ್ನು ಕ್ರಮವಾಗಿ ಶೇಕಡ 4.713 ಮತ್ತು ಶೇಕಡ 4.822ರಷ್ಟಕ್ಕೆ ನಿಗದಿಪಡಿಸಬೇಕೆಂದು ಹದಿನಾಲ್ಕನೇ ಹಣಕಾಸು ಆಯೋಗವು ಶಿಫಾರಸು ಮಾಡಿತು. 2017–18ರಲ್ಲಿ ₹6,73,012 ಕೋಟಿಗಳ ನಿವ್ವಳ ಸಂಗ್ರಹಣೆಯಲ್ಲಿ ರಾಜ್ಯ ಪಾಲಿನ ನಿವ್ವಳ ಹಂಚಿಕೆಯು ₹31,751.96 ಕೋಟಿಗಳಷ್ಟಿತ್ತು ಮತ್ತು ಕಾರ್ಪೊರೇಷನ್ ತೆರಿಗೆ, ಆದಾಯದ ಮೇಲಿನ ತೆರಿಗೆ, ಸೀಮಾ ಶುಲ್ಕ ಮತ್ತು ಐಜಿಎಸ್‌ಟಿಯ ಪಾಲು ಶೇಕಡ 4.713ರಷ್ಟಿದ್ದು, ಕೇಂದ್ರ ಅಬಕಾರಿ ಶುಲ್ಕವು ಶೇಕಡ 4.666 ರಷ್ಟು, ಸಿಜಿಎಸ್‌ಟಿಯು ಶೇಕಡ 4.628 ರಷ್ಟು ಮತ್ತು ಸೇವಾ ತೆರಿಗೆಯು ಶೇಕಡ 4.812 ರಷ್ಟಿತ್ತು.

### 1.3.4 ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಗಳು

#### 1.3.4.1 ಪೀಠಿಕೆ

ಭಾರತ ಸಂವಿಧಾನದ ಅನುಚ್ಛೇದ 280ರಡಿ ರಾಷ್ಟ್ರಪತಿಗಳಿಂದ 2 ಜನವರಿ 2013ರಂದು ರಚಿಸಲ್ಪಟ್ಟ ಹದಿನಾಲ್ಕನೇ ಹಣಕಾಸು ಆಯೋಗದ ಉಲ್ಲೇಖಿತ ನಿಬಂಧನೆಗಳನುಸಾರ ರಾಜ್ಯದ ಪಂಚಾಯತ್ ಮತ್ತು ಮುನಿಸಿಪಾಲಿಟಿಗಳ ಸಂಪನ್ಮೂಲಗಳಿಗೆ ಪೂರಕವಾಗುವಂತೆ ರಾಜ್ಯದ ಸಂಚಿತ ನಿಧಿಯನ್ನು ಅಧಿಕಗೊಳಿಸುವ ಅಗತ್ಯವಿರುವ ಕ್ರಮಗಳ ಬಗ್ಗೆ ಆಯೋಗವು ಶಿಫಾರಸು ಮಾಡಬೇಕು.

#### 1.3.4.2 ಪಂಚಾಯತ್‌ರಾಜ್ ಸಂಸ್ಥೆಗಳಿಗೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು

2017–18ರಲ್ಲಿ ಆಯೋಗವು **ಕೋಷ್ಟಕ 1.11**ರಲ್ಲಿ ಸೂಚಿಸಿರುವ ರಾಜ್ಯದಲ್ಲಿನ ಕ್ಷೇತ್ರಗಳಿಗೆ ₹2,969.74 ಕೋಟಿಗಳ ವರ್ಗಾವಣೆಗೆ ಶಿಫಾರಸು ಮಾಡಿತು.

**ಕೋಷ್ಟಕ 1.11: 2017–18ರಲ್ಲಿ ವರ್ಗಾವಣೆಗೆ ಶಿಫಾರಸು ಮಾಡಿದ ಹಾಗೂ ವಾಸ್ತವವಾಗಿ ಬಿಡುಗಡೆಯಾದ ಅನುದಾನಗಳು**

*(₹ ಕೋಟಿಗಳಲ್ಲಿ)*

| ಕ್ರಮ ಸಂಖ್ಯೆ | ವರ್ಗಾವಣೆಗಳು | ಶಿಫಾರಸ್ಸು ಮಾಡಿದ ಮೊತ್ತ | ವಾಸ್ತವ ಬಿಡುಗಡೆ | ಕಡಿಮೆ |
|---|---|---|---|---|
| (ಅ) | ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮೂಲ ಅನುದಾನಗಳು | 1,604.42 | 1,580.18 | 24.24 |
| (ಬ) | ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳು | 206.13 | – | 206.13 |
| (ಕ) | ನಗರ ಸ್ಥಳೀಯ ಸಂಸ್ಥೆಗಳಿಗೆ ಮೂಲ ಅನುದಾನಗಳು | 899.25 | 899.25 | – |
| (ಡ) | ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳು | 259.94 | – | 259.94 |
| | **ಒಟ್ಟು** | **2,969.74** | **2,479.43** | **490.31** |

ಮಾರ್ಚ್ 2018ರಲ್ಲಿದ್ದಂತೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ₹1,604.42 ಕೋಟಿಗಳಿಗೆದುರಾಗಿ ₹1,580.18 ಕೋಟಿಗಳನ್ನು ಮತ್ತು ರಾಜ್ಯ ಸ್ಥಳೀಯ ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ಮೂಲ[6] ಅನುದಾನವಾದ ಸಂಪೂರ್ಣ ₹899.25 ಕೋಟಿಗಳನ್ನು ರಾಜ್ಯ ಸರ್ಕಾರವು ಸ್ವೀಕರಿಸಿತ್ತು.

ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಣಾ ಅನುದಾನಕ್ಕೆ ಅರ್ಹವಾಗಲು ಗ್ರಾಮ ಪಂಚಾಯತಿಗಳು ಯಾವ ವರ್ಷಕ್ಕೆ ಕಾರ್ಯನಿರ್ವಹಣಾ ಅನುದಾನಕ್ಕೆ ಮನವಿ ಮಾಡುತ್ತಾರೋ ಆ ವರ್ಷದ ಹಿಂದಿನ ಎರಡು ವರ್ಷಕ್ಕಿಂತ ಹಳೆಯದಲ್ಲದ ವರ್ಷದ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಗಳನ್ನು ಸಲ್ಲಿಸಬೇಕಾಗುತ್ತದೆ ಎಂದು ಹದಿನಾಲ್ಕನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿತು. ವಾರ್ಷಿಕ ಲೆಕ್ಕಗಳಲ್ಲಿ ಬಿಂಬಿಸಿದಂತೆ ಸ್ಥಳೀಯ ಸಂಸ್ಥೆಯ ಸ್ವಂತ ಆದಾಯದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಳವನ್ನು ತೋರಿಸಬೇಕು. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನದ ಬಿಡುಗಡೆಯು 2016–17ರಿಂದ ಪ್ರಾರಂಭಗೊಂಡಿತು. ಹದಿನಾಲ್ಕನೇ ಹಣಕಾಸು ಆಯೋಗದಡಿ ಕಾರ್ಯ ನಿರ್ವಹಣಾ ಅನುದಾನಗಳನ್ನು ಪಡೆಯಲು ಕಾರ್ಯಾಚರಣೆಯ ಮಾನದಂಡಗಳಿಗೆ ಸಂಬಂಧಿಸಿದಂತೆ ಅರ್ಹತೆಯನ್ನು ನಿರ್ಧರಿಸಲು ರಾಜ್ಯ ಸರ್ಕಾರವು ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮಾರ್ಗಸೂಚಿಗಳನ್ನು ಜಾರಿ ಮಾಡಿದೆ.

2017–18ರ ಸಾಲಿನಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳನ್ನು[7] ಮಾರ್ಚ್ 2018ರ ಅಂತ್ಯದವರೆಗೂ ಬಿಡುಗಡೆಗೊಳಿಸಿರಲಿಲ್ಲ. ಭಾರತ ಸರ್ಕಾರವು ಸೂಚಿಸಿದಂತೆ ಅನುಪಾಲನೆಯನ್ನು ಮಾಡಿ 2017–18ರ ಸಾಲಿನ ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯನಿರ್ವಹಣಾ ಅನುದಾನಗಳ ಬೇಡಿಕೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ (ಫೆಬ್ರವರಿ 2018) ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ತನ್ನ ಉತ್ತರದಲ್ಲಿ ಹೇಳಿದೆ(ನವೆಂಬರ್ 2018). ನಗರ ಸ್ಥಳೀಯ ಸಂಸ್ಥೆಗಳಿಂದ ಉತ್ತರವು ಬಂದಿರುವುದಿಲ್ಲ.

### 1.3.5 ವಿಪತ್ತು ಪರಿಹಾರದಡಿ ಬಿಡುಗಡೆಗಳು

ರಾಜ್ಯ ವಿಪತ್ತು ಪರಿಹಾರ ನಿಧಿಗೆ (ಎಸ್‌ಡಿಆರ್‌ಎಫ್) ಶಿಫಾರಸು ಮಾಡಲಾದ ₹305.00 ಕೋಟಿಗಳಿಗೆದುರಾಗಿ ಕೇವಲ ₹228.75 ಕೋಟಿಗಳನ್ನು (ಶೇಕಡ 75) ಬಿಡುಗಡೆ ಮಾಡಲಾಗಿದ್ದು, ಹಿಂದಿನ ವರ್ಷಕ್ಕಿಂತ ₹11.25 ಕೋಟಿಗಳಷ್ಟು ಹೆಚ್ಚಳವಾಗಿತ್ತು (ಶೇಕಡ ಐದು). ಹದಿನಾಲ್ಕನೇ ಹಣಕಾಸು ಆಯೋಗವು ನಿಧಿಗೆ ವಂತಿಗೆಯು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ 90:10ರ

[6] ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ 2016–17ರ ಮೂಲ ಅನುದಾನಗಳು ಕ್ರಮವಾಗಿ ₹1,368.21 ಕೋಟಿ ಮತ್ತು ₹778.29 ಕೋಟಿಗಳಾಗಿವೆ.

[7] 2016–17ರಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳು ಕ್ರಮವಾಗಿ ₹179.45 ಕೋಟಿ ಮತ್ತು ₹229.70 ಕೋಟಿಗಳಷ್ಟಿದ್ದವು.

ಅನುಪಾತದಲ್ಲಿರಬೇಕೆಂದು ಶಿಫಾರಸು ಮಾಡಿತ್ತು. ರಾಜ್ಯಗಳ ಪಾಲಿನ ಶೇಕಡಾವಾರು ಮುಂಚಿನಂತೆ 75:25ರ ಅನುಪಾತದಂತೆ ಮುಂದುವರೆದು ಹರಿವುಗಳು ಕೂಡ ಪ್ರಸ್ತುತ ವ್ಯವಸ್ಥೆಯಲ್ಲೇ ನಡೆಯುವಂತೆ ಹಾಗೂ ಸರಕು ಮತ್ತು ಸೇವಾ ತೆರಿಗೆಯು ಜಾರಿಯಾದ ನಂತರ ವಿಪತ್ತು ಪರಿಹಾರದ ಬಗೆಗಿನ ಹದಿನಾಲ್ಕನೇ ಹಣಕಾಸು ಆಯೋಗದ ಶಿಫಾರಸುಗಳನ್ನು ಸಂಪೂರ್ಣವಾಗಿ ಅನುಷ್ಠಾನ ಗೊಳಿಸಲಾಗುವುದೆಂಬ ಬದಲಾವಣೆಯೊಂದಿಗೆ ಈ ಶಿಫಾರಸನ್ನು ಭಾರತ ಸರ್ಕಾರವು ಅಂಗೀಕರಿಸಿತು.

2017–18ರಿಂದ ಜಿಎಸ್‌ಟಿಯು ಜಾರಿಯಾಗಿದ್ದರೂ ಸಹ, ಎಸ್‌ಡಿಆರ್‌ಎಫ್ ಕಡೆಗೆ ಭಾರತ ಸರ್ಕಾರದ ವಂತಿಗೆಯು ಶೇಕಡಾ 90ರ ಬದಲಾಗಿ ಶೇಕಡ 75ರಲ್ಲಿಯೇ ಇದ್ದಿತು. ಈ ವಿಷಯವನ್ನು ಭಾರತ ಸರ್ಕಾರದೊಂದಿಗೆ ಅನುಸರಣೆ ಮಾಡುವಲ್ಲಿ ರಾಜ್ಯ ಸರ್ಕಾರದ ವಿಫಲತೆಯು ರಾಜ್ಯ ಸರ್ಕಾರಕ್ಕೆ ₹45.75 ಕೋಟಿಗಳ ಅನುದಾನವು ತಪ್ಪಿಹೋಗುವಲ್ಲಿ ಪರಿಣಮಿಸಿತು.

### 1.3.6 ಬಿಟ್ಟುಕೊಡಲ್ಪಟ್ಟ ಆದಾಯಗಳು

ವಿತ್ತೀಯ ಜವಾಬ್ದಾರಿ ಅಧಿನಿಯಮದ ಪರಿಚ್ಛೇದ 5(2)(ಸಿ)ಯ ಪ್ರಕಾರ ಮಧ್ಯಮಾವಧಿ ವಿತ್ತೀಯ ಯೋಜನೆ 2017–21 ರಲ್ಲಿ ಮೌಲ್ಯವರ್ಧಿತ ತೆರಿಗೆ, ಕೇಂದ್ರ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆಗಳ ವಿನಾಯಿತಿ ಅಥವಾ ಮುಂದೂಡಿಕೆಗಳ ಮೂಲಕ ತೆರಿಗೆ ವೆಚ್ಚ/ಆದಾಯ ಬಿಟ್ಟುಕೊಡುವಿಕೆಗಳ ವಿವರಗಳನ್ನು ನೀಡುವ ಹೆಚ್ಚುವರಿ ವಿವರಣಾ ಪಟ್ಟಿಗಳನ್ನು ನೀಡಬೇಕಾಗಿರುತ್ತದೆ. 2016–17 ರಿಂದ 2017–18ರ ಅವಧಿಯಲ್ಲಿ ಅಂತಹ ವಿನಾಯತಿಗಳನ್ನು ಬಿಟ್ಟುಕೊಟ್ಟ ಆದಾಯದ ವಿವರಗಳನ್ನು **ಕೋಷ್ಟಕ 1.12**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.12: ವಿನಾಯಿತಿಗಳು/ಬಿಟ್ಟುಕೊಟ್ಟ ಆದಾಯಗಳ ವಿವರಗಳು**

*(ಕೋಟಿ ರೂಪಾಯಿಗಳಲ್ಲಿ)*

| ವಿವರಗಳು | 2016-17 | 2017-18# |
|---|---|---|
| ತೆರಿಗೆ ವೆಚ್ಚ/ಕಬ್ಬಿನ ಮೇಲಿನ ಖರೀದಿ ತೆರಿಗೆಯನ್ನು ಮುಂದೂಡಿದ್ದರಿಂದ ಬಿಟ್ಟುಕೊಡಲ್ಪಟ್ಟ ಆದಾಯ | 78.20 | 29.10 |
| ಪ್ರವೇಶ ತೆರಿಗೆ ವಿನಾಯಿತಿ/ಮೌಲ್ಯವರ್ಧಿತ ತೆರಿಗೆ ಮುಂದೂಡುವಿಕೆ/ಕೇಂದ್ರ ಮಾರಾಟ ತೆರಿಗೆ ಮುಂದೂಡುವಿಕೆ | 712.00 | 137.38 |
| ಒಟ್ಟು | **790.20** | **166.48** |

*ಆಕರ: ಮಧ್ಯಮಾವಧಿ ವಿತ್ತೀಯ ಯೋಜನೆ 2018–22*

*# 2017–18ರ ಮೊದಲ ಮೂರು ತ್ರೈಮಾಸಿಕಕ್ಕೆ.*

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ 13ನೇ ವರದಿಯಲ್ಲಿ ಆದಾಯದ ಸಂಗ್ರಹಣೆಯ ಮೇಲ್ವಿಚಾರಣೆಗೆ ವ್ಯವಸ್ಥೆಯನ್ನು ಶಿಫಾರಸು ಮಾಡುವಾಗ ತೆರಿಗೆ ಸಂಗ್ರಹಣೆಯಲ್ಲಿ ರಿಯಾಯಿತಿಗಳನ್ನು ನೀಡುವ, ಮನ್ನಾ ಮಾಡುವ ಮತ್ತು ವಿನಾಯಿತಿ ನೀಡುವ ರೂಢಿಯನ್ನು ನಿಲ್ಲಿಸಿಬಿಡಲು ಸಲಹೆ ನೀಡಿತ್ತು. ರಾಜ್ಯ ಸರ್ಕಾರವು ಇದನ್ನು ಪಾಲಿಸಲು ವಿಫಲವಾಗಿದೆ.

ಆರ್ಥಿಕ ಇಲಾಖೆಯು, ಕೆಲವು ವಿಭಾಗಗಳ ಆರ್ಥಿಕ ಸ್ವರೂಪವನ್ನು ಉತ್ತೇಜಿಸುವ ಕಾರ್ಯನೀತಿಯಂತೆ ಮನ್ನಾ/ಕಡಿತ/ವಿನಾಯಿತಿಗಳನ್ನು ನೀಡುವುದು ರಾಜ್ಯವು ತೆಗೆದುಕೊಂಡ ಪ್ರಜ್ಞಾಪೂರ್ವಕ ನಿರ್ಧಾರವಾಗಿದೆ ಎಂದು ಉತ್ತರಿಸಿದೆ. ರಾಜ್ಯದಲ್ಲಿ ಹೆಚ್ಚಿನ ಉದ್ದಿಮೆಗಳನ್ನು ಆಕರ್ಷಿಸುವ ವಾತಾವರಣವನ್ನು ಸೃಷ್ಟಿಸುವ ಉದ್ದೇಶದಿಂದ ಇಂತಹ ರಿಯಾಯಿತಿಗಳನ್ನು ಒದಗಿಸಲಾಗಿದೆ. ಇದು ಸ್ಥಳೀಯರಿಗೆ ಉದ್ಯೋಗವನ್ನು ಒದಗಿಸುವುದರೊಂದಿಗೆ ಆರ್ಥಿಕ ಸ್ಥಿತಿಯನ್ನೂ ಉತ್ತಮಪಡಿಸುವ ಅನುಕೂಲವನ್ನು ಹೊಂದಿದೆ. ಇದು ಅಂತಿಮವಾಗಿ ಒಟ್ಟಾರೆ ತೆರಿಗೆ ಸಂಗ್ರಹದಲ್ಲಿನ ಸುಧಾರಣೆ ಮತ್ತು ರಾಒಆಂಉದ ತ್ವರಿತ ವೃದ್ಧಿಯ ಮೂಲಕ ಬಿಟ್ಟುಕೊಟ್ಟ ಆದಾಯವನ್ನು ಸರಿತೂಗಿಸುತ್ತದೆ ಎಂದು ಹೇಳಿದೆ.

### 1.3.7 ಕರ್ನಾಟಕದಲ್ಲಿ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನ

ರಾಜ್ಯ ಸರ್ಕಾರವು 1ನೇ ಜುಲೈ 2017ರಿಂದ ಅನ್ವಯವಾಗುವಂತೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಧಿನಿಯಮವನ್ನು ಅನುಷ್ಠಾನಗೊಳಿಸಿತು. ಜಿಎಸ್‌ಟಿ (ರಾಜ್ಯಗಳಿಗೆ ಪರಿಹಾರ) ಅಧಿನಿಯಮ, 2017ರ ಅನ್ವಯ ಜಿಎಸ್‌ಟಿಯ ಅನುಷ್ಠಾನದಿಂದ ಉಂಟಾದ ರಾಜಸ್ವ ನಷ್ಟವನ್ನು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಐದು ವರ್ಷಗಳವರೆಗೆ ತುಂಬಿಕೊಡುತ್ತದೆ. ರಾಜ್ಯಗಳಿಗೆ ಪಾವತಿಸಬೇಕಾದ ಪರಿಹಾರವನ್ನು ಪ್ರತಿ ಆರ್ಥಿಕ

ವರ್ಷಕ್ಕೆ ಸಿಎಜಿಯವರ ಲೆಕ್ಕಪರಿಶೋಧನೆಯ ನಂತರ ಲಭ್ಯವಾಗುವ ಅಂತಿಮ ರಾಜಸ್ವದ ಅಂಕಿಗಳ ಆಧಾರದ ಮೇಲೆ ಲೆಕ್ಕ ಹಾಕಲಾಗುತ್ತದೆ. ಜಿಎಸ್‌ಟಿ ಅಧಿನಿಯಮದಡಿ ಜಿಎಸ್‌ಟಿಯೊಡನೆ ಸಮ್ಮಿಳಿತವಾದ ತೆರಿಗೆಗಳ ಮೂಲ ವರ್ಷದ ರಾಜಸ್ವ ಅಂಕಿಯನ್ನು (2015–16) ಅಂತಿಮಗೊಳಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ ಮೂಲ ವರ್ಷದಲ್ಲಿ (2015–16) ರಾಜಸ್ವವು ₹36,144.15 ಕೋಟಿಗಳಷ್ಟಿತ್ತು. ಯಾವುದೇ ವರ್ಷಕ್ಕೆ ಪ್ರಕ್ಷೇಪಿಸಲಾಗುವ ರಾಜಸ್ವವನ್ನು ರಾಜ್ಯದ ಮೂಲ ವರ್ಷ ರಾಜಸ್ವದ ಮೇಲೆ ಪ್ರಕ್ಷೇಪಿತ ವೃದ್ಧಿದರವನ್ನು (ವಾರ್ಷಿಕ ಶೇಕಡ 14) ಅನ್ವಯಿಸುವ ಮೂಲಕ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ 2017–18ರ ಸಾಲಿಗೆ ಪ್ರಕ್ಷೇಪಿತ ರಾಜಸ್ವವು ಶೇಕಡ 14ರ ವೃದ್ಧಿ ದರದಂತೆ ₹46,972.94 ಕೋಟಿಗಳಷ್ಟಾಗುತ್ತದೆ.

1 ಜುಲೈ 2017ರಿಂದ 31 ಮಾರ್ಚ್ 2018ರವರೆಗೆ ಮೂಲ ವರ್ಷದ ಅಂಕಿಗಳನುಸಾರ ಪ್ರಕ್ಷೇಪಿತ ರಾಜಸ್ವ ₹35,229.69 ಕೋಟಿಗಳಿಷ್ಟಿತ್ತು (₹3,914.41 ಕೋಟಿ x 9 ತಿಂಗಳು). 2017–18ನೇ ಸಾಲಿಗೆ, ಸರಕು ಮತ್ತು ಸೇವಾ ತೆರಿಗೆಯಡಿ, ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಎಸ್‌ಜಿಎಸ್‌ಟಿ), ಪ್ರವೇಶ ತೆರಿಗೆ ಜಮೆ, ಎಸ್‌ಜಿಎಸ್‌ಟಿಯ ಪ್ರತಿಬಳಕೆ, ಸಂಯೋಜಿತ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) ಮತ್ತು ಅದರ ಹಂಚಿಕೆ, ಎಸ್‌ಜಿಎಸ್‌ಟಿಗೆ ತೆರಿಗೆ ಭಾಗದ ವರ್ಗಾವಣೆ ಮತ್ತು ಐಜಿಎಸ್‌ಟಿಯ ಮುಂಗಡ ಹಂಚಿಕೆಗಳ ಸ್ವೀಕೃತಿ ಸ್ವರೂಪವನ್ನು ಆಧರಿಸಿ ರಾಜ್ಯದ ಹಣಕಾಸು ಲೆಕ್ಕಗಳಲ್ಲಿ ರಾಜಸ್ವ ಅಂಕಿಗಳನ್ನು ತೋರಿಸಲಾಗಿದೆ.

1 ಜುಲೈ 2017ರಿಂದ 31 ಮಾರ್ಚ್ 2018ರವರೆಗೆ ಪ್ರಕ್ಷೇಪಿತ ರಾಜಸ್ವ ₹35,229.69 ಕೋಟಿಗಳಿಗೆ ಪ್ರತಿಯಾಗಿ ರಾಜ್ಯದಿಂದ ಸಂಗ್ರಹಿಸಲಾದ ತೆರಿಗೆಗಳು (ಜಿಎಸ್‌ಟಿಯ ಪೂರ್ವ ಹಾಗೂ ಎಸ್‌ಜಿಎಸ್‌ಟಿ) ಕೇಂದ್ರ ಸರ್ಕಾರದಿಂದ ಸ್ವೀಕೃತವಾದ ಐಜಿಎಸ್‌ಟಿ ಪಾಲು (ಐಜಿಎಸ್‌ಟಿಯ ಹಂಗಾಮಿ/ಮುಂಗಡ ಪಾಲುದಾರಿಕೆಯನ್ನೂ ಸೇರಿದಂತೆ) ಮತ್ತು ಸ್ವೀಕರಿಸಿದ ಜಿಎಸ್‌ಟಿ ಪರಿಹಾರವೂ ಸೇರಿದಂತೆ ₹35,095.12 ಕೋಟಿ ಮತ್ತು ಸ್ವೀಕರಿಸಬೇಕಾದ ಜಿಎಸ್‌ಟಿ ಪರಿಹಾರದ ಶಿಲ್ಕು ₹134.57 ಕೋಟಿಗಳಿಷ್ಟಿತ್ತು. ವಿವರಗಳನ್ನು **ಅನುಬಂಧ 1.7ರಲ್ಲಿ** ನೀಡಲಾಗಿದೆ.

## 1.4 ಬಂಡವಾಳ ಸ್ವೀಕೃತಿಗಳು

ರಾಜ್ಯ ಸರ್ಕಾರದ ಬಂಡವಾಳ ಸ್ವೀಕೃತಿಗಳು, ಋಣ ಮತ್ತು ಋಣೇತರ (ಇತರೆ ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಿ) ಸ್ವೀಕೃತಿಗಳನ್ನು ಒಳಗೊಂಡಿದೆ. ಪ್ರಸಕ್ತ ವರ್ಷದಲ್ಲಿ ₹25,122 ಕೋಟಿಗಳ ಸಾರ್ವಜನಿಕ ಋಣ ಸ್ವೀಕೃತಿಯು ₹23,179 ಕೋಟಿಗಳ ಆಂತರಿಕ ಋಣ (ಶೇಕಡ 92) ಮತ್ತು ₹1,943 ಕೋಟಿಗಳಷ್ಟು ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳನ್ನು (ಶೇಕಡ ಎಂಟು) ಒಳಗೊಂಡಿದೆ. ಆಂತರಿಕ ಋಣದಲ್ಲಿ ಮಾರುಕಟ್ಟೆ ಸಾಲಗಳು ಪ್ರಧಾನ ಪಾಲನ್ನು ಹೊಂದಿದ್ದು ಇದು ಶೇಕಡ 95ರಷ್ಟಿದ್ದರೆ, ನಂತರದ ಸ್ಥಾನಗಳು ಸಮಾಲೋಚಿತ ಸಾಲಗಳದ್ದಾಗಿವೆ (ಶೇಕಡ ಐದು). ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಇತರೆ ಸಾಲಗಳನ್ನು ಮಾತ್ರ ಒಳಗೊಂಡಿದೆ. 2013–14 ರಿಂದ 2017–18ರ ಅವಧಿಯಲ್ಲಿ ಬಂಡವಾಳ ಸ್ವೀಕೃತಿಗಳ ಸಂಯೋಜನೆಯಲ್ಲಿನ ಪ್ರವೃತ್ತಿಯನ್ನು **ಅನುಬಂಧ 1.4ರಲ್ಲಿ** ನೀಡಿದೆ.

ಒಟ್ಟಾರೆ, 2013–14ರಲ್ಲಿ ₹17,484ಕೋಟಿಗಳಿದ್ದ ಬಂಡವಾಳ ಸ್ವೀಕೃತಿಗಳು 2017–18ರಲ್ಲಿ ₹25,263 ಕೋಟಿಗಳಿಗೆ ಏರಿದೆ. 2013–14 ರಿಂದ 2017–18ರ ಅವಧಿಯಲ್ಲಿ ಋಣ ಸ್ವೀಕೃತಿಗಳು, ಬಂಡವಾಳ ಸ್ವೀಕೃತಿಗಳ ಪ್ರಧಾನ ಭಾಗವಾಗಿದ್ದು ಇದು ಶೇಕಡ 98 ಮತ್ತು 99ರ ನಡುವೆ ಇದ್ದಿತು. ಈ ಅವಧಿಯಲ್ಲಿ ಸಾಲ ಮತ್ತು ಮುಂಗಡಗಳ ವಸೂಲಿಯು ಅತ್ಯಲ್ಪವಾಗಿದ್ದು, 2017–18ರ ಅಂತ್ಯಕ್ಕೆ ಬಾಕಿ ಇರುವ ಸಾಲ ಮತ್ತು ಮುಂಗಡಗಳ ಮೊತ್ತದ ಶೇಕಡ ಒಂದಕ್ಕಿಂತಲೂ ಕಡಿಮೆಯಿತ್ತು. ಇದು ಪುಸ್ತಕ ಹೊಂದಾಣಿಕೆಯ ಮೂಲಕ ವಿದ್ಯುಚ್ಛಕ್ತಿ ಸರಬರಾಜು ಸಂಸ್ಥೆಗಳ ಬಾಕಿ ಇದ್ದ ಸಾಲಗಳನ್ನು ರಾಜಸ್ವ ಲೆಕ್ಕದಲ್ಲಿ ಸಹಾಯ ಧನವಾಗಿ ಪರಿವರ್ತಿಸಿದ ₹14.44 ಕೋಟಿಗಳನ್ನು ಸಹ ಒಳಗೊಂಡಿದೆ.

## 1.5 ಸಾರ್ವಜನಿಕ ಲೆಕ್ಕಗಳ ಸ್ವೀಕೃತಿಗಳು

ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿ, ಠೇವಣಿಗಳು, ಅಮಾನತ್ತು, ಇರಸಾಲುಗಳು ಮುಂತಾದ ಸಂಚಿತ ನಿಧಿಯ ಭಾಗವಲ್ಲದ ಕೆಲವು ವ್ಯವಹಾರಗಳ ಸ್ವೀಕೃತಿ ಮತ್ತು ಬಟವಾಡೆಗಳನ್ನು ಸಂವಿಧಾನದ ಅನುಚ್ಛೇದ 266(2) ರ ಅಡಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇಡಲಾಗುತ್ತದೆ ಮತ್ತು ಇದಕ್ಕೆ ಶಾಸನ ಸಭೆಯ ಅನುಮೋದನೆಯ ಅಗತ್ಯವಿರುವುದಿಲ್ಲ. ಈ ಸಂದರ್ಭಗಳಲ್ಲಿ ಸರ್ಕಾರವು

ಸಾರ್ವಜನಿಕ ಹಣದ ಬ್ಯಾಂಕರ್/ಟ್ರಸ್ಟಿಯಾಗಿ ಪಾತ್ರವಹಿಸುತ್ತದೆ. 2013–14 ರಿಂದ 2017–18ರ ಅವಧಿಯಲ್ಲಿ ಸಾರ್ವಜನಿಕ ಲೆಕ್ಕದಡಿಯ ನಿವ್ವಳ ವ್ಯವಹಾರಗಳನ್ನು **ಕೋಷ್ಟಕ 1.13**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.13: ಸಾರ್ವಜನಿಕ ಲೆಕ್ಕದಡಿಯ ನಿವ್ವಳ ವ್ಯವಹಾರಗಳು**

*(ಕೋಟಿ ರೂಪಾಯಿಗಳಲ್ಲಿ)*

| ಸಾರ್ವಜನಿಕ ಲೆಕ್ಕದ ವಿಭಾಗಗಳಲ್ಲಿನ ಸಂಪನ್ಮೂಲಗಳು (ನಿವ್ವಳ) | 2013–14 | 2014–15 | 2015–16 | 2016–17 | 2017–18 |
|---|---|---|---|---|---|
| ಐ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತರೆ | 3,107 | 2,156 | 2,086 | 2,657 | 2,811 |
| ಜೆ. ಮೀಸಲು ನಿಧಿಗಳು | 1,264 | 1,547 | 2,081 | 6,013 | 3,019 |
| ಕೆ. ಠೇವಣಿಗಳು ಮತ್ತು ಮುಂಗಡಗಳು | 2,840 | 3,702 | 284 | 3,041 | 1,834 |
| ಎಲ್. ಅಮಾನತ್ತು ಮತ್ತು ಇತರೆ | 2,671 | 3,282 | 990 | 491 | (–) 1,509 |
| ಎಂ. ಇರಸಾಲುಗಳು | (–) 12 | (–) 32 | (–) 17 | (–) 38 | (–) 76 |
| **ಒಟ್ಟು** | **8,870** | **10,655** | **5,424** | **12,164** | **6,079** |

2013–14ರಲ್ಲಿ ₹8,870 ಕೋಟಿಗಳಷ್ಟಿದ್ದ ಸಾರ್ವಜನಿಕ ಲೆಕ್ಕದಲ್ಲಿನ ನಿವ್ವಳ ಸ್ವೀಕೃತಿಯು 2016–17ರಲ್ಲಿ ₹12,164 ಕೋಟಿಗಳಿಗೆ ಏರಿದೆ ಮತ್ತು 2017–18ರಲ್ಲಿ ₹6,080 ಕೋಟಿಗಳಿಗೆ ಇಳಿದಿದೆ. ಇದು ರಾಜ್ಯದ ಸಾಮಾನ್ಯ ಮೀಸಲುಗಳಿಂದ ಸಾರ್ವಜನಿಕ ಲೆಕ್ಕಗಳಲ್ಲಿನ ಮೂಲಸೌಕರ್ಯ ನಿಧಿಗಳಿಗೆ ₹2,768 ಕೋಟಿಗಳ ವರ್ಗಾವಣೆಯನ್ನೊಳಗೊಂಡಿದೆ. ಅಂತೆಯೇ ₹71.22 ಕೋಟಿಗಳನ್ನು ಸಾರ್ವಜನಿಕ ಲೆಕ್ಕಗಳಲ್ಲಿನ ಎಸ್‌ಯುಟಿಎಫ್‌ಗೆ ವರ್ಗಾಯಿಸಲಾಗಿದೆ. ಮೀಸಲು ನಿಧಿಗಳು, ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳಲ್ಲಿನ ನಿವ್ವಳ ಮೊತ್ತಗಳು ವಿತ್ತೀಯ ಕೊರತೆಯನ್ನು ತುಂಬುವಲ್ಲಿ ಪ್ರಧಾನ ಪಾಲು ಹೊಂದಿವೆ. ಠೇವಣಿಗಳು ಮತ್ತು ಮುಂಗಡಗಳಡಿಯ ಸ್ವೀಕೃತಿಗಳು ಪಂಚಾಯತ್ ಸಂಸ್ಥೆಗಳ ನಿಧಿಯಲ್ಲಿ ಮಾಡಿದ ₹1,807 ಕೋಟಿಗಳ ಠೇವಣಿಯನ್ನು ಒಳಗೊಂಡಿದೆ. ಈ ವರ್ಷದಲ್ಲಿ ಅಮಾನತ್ತು ಮತ್ತು ಇತರ ವಿಭಾಗದಡಿಯ ವ್ಯವಹಾರಗಳಲ್ಲಿ ಏರಿಕೆಯಾಗಿದ್ದು ಇದು 2017–18ರಲ್ಲಿ ₹1,521 ಕೋಟಿಗಳಷ್ಟು ಮೊತ್ತದ ನಗದೀಕರಿಸಿಲ್ಲದ ಚೆಕ್ಕುಗಳಿಗೆ ಸಂಬಂಧಿಸಿದೆ. **ಕಂಡಿಕೆ 1.8.6**ರಲ್ಲಿ ಈ ವ್ಯವಹಾರದ ವಿಶ್ಲೇಷಣೆಯನ್ನು ನೀಡಲಾಗಿದೆ.

## 1.6 ಸಂಪನ್ಮೂಲಗಳ ಅನ್ವಯ

ಪ್ರಧಾನವಾದ ವೆಚ್ಚ ಜವಾಬ್ದಾರಿಗಳು ಸರ್ಕಾರಕ್ಕೆ ವಹಿಸಲ್ಪಟ್ಟಿರುವುದರಿಂದ ರಾಜ್ಯ ಸರ್ಕಾರದ ಮಟ್ಟದಲ್ಲಿ ವೆಚ್ಚದ ಹಂಚಿಕೆಯ ವಿಶ್ಲೇಷಣೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ಹಣಕಾಸು ಹೊಣೆಗಾರಿಕೆಯ ಶಾಸನಗಳ ಚೌಕಟ್ಟಿನೊಳಗೆ ಸಾಲ ಅಥವಾ ಕೊರತೆಯ ಮೂಲಕ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು ಆಯವ್ಯಯದ ನಿರ್ಬಂಧಗಳಿವೆ. ಅದೇ ವೇಳೆಯಲ್ಲಿ, ರಾಜ್ಯ ಮಟ್ಟದಲ್ಲಿ ಚಾಲ್ತಿಯಲ್ಲಿರುವ ವಿತ್ತೀಯ ತಿದ್ದುಪಡಿ ಮತ್ತು ಕ್ರೋಢೀಕರಣ ಪ್ರಕ್ರಿಯೆಯು ವೆಚ್ಚದ ಬೆಲೆಯಲ್ಲಿ ಅದರಲ್ಲೂ ಸಾಮಾಜಿಕ ಮತ್ತು ಆರ್ಥಿಕ ವಲಯದ ಅಭಿವೃದ್ಧಿ ಗಮನದ ವೆಚ್ಚದಲ್ಲಿ ಅಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವುದು ಮುಖ್ಯವಾಗುತ್ತದೆ.

ವಿವೇಚನಾಯುಕ್ತ ಹಣಕಾಸು ನಿರ್ವಹಣೆಯು ರಾಜಸ್ವ ವೆಚ್ಚಕ್ಕಿಂತಲೂ ಹೆಚ್ಚಿನ ರಾಜಸ್ವ ಸ್ವೀಕೃತಿಗಳನ್ನು ಗಳಿಸಿ ಉಳಿತಾಯವನ್ನು ಸಾಧಿಸುವ ಗುರಿಯನ್ನು ಹೊಂದಿರಬೇಕು. ರಾಜಸ್ವ ಉಳಿಕೆಯು ಸರ್ಕಾರದ ಉಳಿತಾಯವೆಂದು ಕರೆಯಲ್ಪಟ್ಟು ಇದು ಬಂಡವಾಳ ವೆಚ್ಚವನ್ನು ಭರಿಸಲು ಬಳಕೆಯಾಗುತ್ತದೆ. ಸಾಲವಾಗಿ ಪಡೆದ ಮೊತ್ತಗಳನ್ನು ಆದಾಯ ಉತ್ಪತ್ತಿಮಾಡುವ ಚಟುವಟಿಕೆಗಳಿಗೆ ಅಥವಾ ಪರೋಕ್ಷವಾಗಿ ತೆರಿಗೆ ಅಥವಾ ತೆರಿಗೆಯೇತರ ಆದಾಯವನ್ನು ಸೃಷ್ಟಿಸುವ ಉತ್ಪಾದನೆಗೆ ಬಳಸಿದಲ್ಲಿ ಅವು ಋಣಸೇವೆಗೆ ಮತ್ತು ಸಾಲಗಳ ಮರುಪಾವತಿಗೆ ಬಳಕೆಯಾಗಬಹುದು.

### 1.6.1 ವೆಚ್ಚದ ವೃದ್ಧಿ ಮತ್ತು ಸಂಯೋಜನೆ

ಒಟ್ಟು ವೆಚ್ಚದ ಮೂಲ ಪ್ರಮಿತಿಗಳು, ವೃದ್ಧಿ ಮತ್ತು ರಾ.ಒ.ಆಂ.ಉ.ದ ಜೊತೆಗೆ ಹೋಲಿಕೆ ಮುಂತಾದವುಗಳನ್ನು **ಅನುಬಂಧ 1.4**ರಲ್ಲಿ ನೀಡಿದೆ. **ನಕ್ಷೆ 1.12** ಐದು ವರ್ಷಗಳ ಅವಧಿಯಲ್ಲಿ (2013–14ರಿಂದ 2017–18) ಒಟ್ಟು ವೆಚ್ಚದ ಪ್ರವೃತ್ತಿಯನ್ನು ಮತ್ತು ರಾಜಸ್ವ, ಬಂಡವಾಳ ಮತ್ತು ಸಾಲ ಹಾಗೂ ಮುಂಗಡಗಳಡಿ ಅದರ ಸಂಯೋಜನೆಯನ್ನೂ ತೋರಿಸುತ್ತದೆ.

**ನಕ್ಷೆ 1.12: ಒಟ್ಟು ವೆಚ್ಚ ಪ್ರವೃತ್ತಿಗಳು ಮತ್ತು ಸಂಯೋಜನೆ**




2013–14ರಲ್ಲಿ ₹1,06,831 ಕೋಟಿಯಿದ್ದ ಒಟ್ಟು ವೆಚ್ಚವು 2017–18ರಲ್ಲಿ ₹1,78,242 ಕೋಟಿಗೆ ಏರಿ ಇದು ರಾಜಸ್ವ ವೆಚ್ಚದಲ್ಲಿನ (₹53,293 ಕೋಟಿ), ಬಂಡವಾಳ ವೆಚ್ಚದಲ್ಲಿನ (₹13,720 ಕೋಟಿ) ಮತ್ತು ಸಾಲಗಳು ಮತ್ತು ಮುಂಗಡಗಳ ವಿತರಣೆಯಲ್ಲಿನ (₹4,398 ಕೋಟಿ) ಏರಿಕೆಯಿಂದ ಶೇಕಡಾ 67ರಷ್ಟು ಹೆಚ್ಚಳವಾಗಿದೆ.

2013–14 ರಿಂದ 2017–18ರ ಅವಧಿಯಲ್ಲಿ, ಒಟ್ಟಾರೆ ವೆಚ್ಚದ ಸರಾಸರಿ 83ರಷ್ಟು ರಾಜಸ್ವ ಲೆಕ್ಕದಲ್ಲಿ ಆಗಿತ್ತು. 2017–18ರಲ್ಲಿ ಇದು ಶೇಕಡ 80ರಷ್ಟಿದೆ. ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಶೇಕಡ 20ರಷ್ಟಿದೆ.

2013–14ರಿಂದ 2017–18ರ ಅವಧಿಗೆ ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳು ಇವುಗಳ ಪಾಲನ್ನು **ನಕ್ಷೆ 1.13**ರಲ್ಲಿ ನೀಡಲಾಗಿದೆ.

**ನಕ್ಷೆ 1.13: ಒಟ್ಟು ವೆಚ್ಚ–ಸಂಯೋಜನೆಗಳ ಪ್ರವೃತ್ತಿ** **ಪಾಲಿನ ಶೇಕಡಾವಾರು**



ಒಟ್ಟು ವೆಚ್ಚದಲ್ಲಿ ರಾಜಸ್ವ ವೆಚ್ಚವು ಬಹು ದೊಡ್ಡ ಪಾಲನ್ನು ಹೊಂದಿದ್ದು, ಶೇಕಡ 62ರಷ್ಟು ವೆಚ್ಚವು ಬದ್ಧವೆಚ್ಚಗಳಾಗಿದ್ದು ಬಂಡವಾಳ ವೆಚ್ಚವನ್ನು ಹೆಚ್ಚಿಸಲು ಕಡಿಮೆ ಅವಕಾಶವಿತ್ತು. ಒಟ್ಟು ವೆಚ್ಚದಲ್ಲಿ ಸಾಮಾನ್ಯ, ಸಾಮಾಜಿಕ, ಆರ್ಥಿಕ, ಸಾಲಗಳು ಮತ್ತು ಮುಂಗಡಗಳು ಮತ್ತು ಸಹಾಯಾನುದಾನ ಇವುಗಳ ಚಟುವಟಿಕೆಗಳ ಪ್ರವೃತ್ತಿಯನ್ನು **ಕೋಷ್ಟಕ 1.14**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.14: ಒಟ್ಟು ವೆಚ್ಚ–ಚಟುವಟಿಕೆಗಳ ಪ್ರವೃತ್ತಿ**

*(ಪಾಲಿನ ಶೇಕಡಾವಾರು)*

| | 2013-14 | 2014-15 | 2015-16 | 2016-17 | 2017-18 |
|---|---|---|---|---|---|
| ಸಾಮಾನ್ಯ ಸೇವೆಗಳು | 23.83 | 23.33 | 22.97 | 19.95 | 19.90 |
| ಸಾಮಾಜಿಕ ಸೇವೆಗಳು | 33.39 | 35.17 | 37.30 | 37.93 | 37.77 |
| ಆರ್ಥಿಕ ಸೇವೆಗಳು | 37.43 | 36.17 | 34.87 | 37.42 | 35.83 |
| ಸಾಲಗಳು ಮತ್ತು ಮುಂಗಡಗಳು | 0.65 | 0.47 | 0.47 | 1.19 | 2.86 |
| ಸಹಾಯಾನುದಾನ ಮತ್ತು ವಂತಿಗೆಗಳು | 4.70 | 4.86 | 4.39 | 3.51 | 3.64 |

*ಆಕರ: ಸಂಬಂಧಿತ ವರ್ಷಗಳ ಹಣಕಾಸು ಲೆಕ್ಕಗಳು.*

ಈ ಅಂಶಗಳ ಸಾಪೇಕ್ಷ ಪಾಲಿನ ನಡೆಯು, 2013–14ರಿಂದ 2017–18ರ ಅವಧಿಯಲ್ಲಿ ಅಂತರ ವರ್ಷದ ಅಲ್ಪ ಭಿನ್ನತೆಯೊಂದಿಗೆ ಸಾಪೇಕ್ಷ ಸ್ಥಿರತೆಯನ್ನು ಪ್ರದರ್ಶಿಸಿತು. 2017–18ರಲ್ಲಿ ಸಾಮಾನ್ಯ ಸೇವೆಗಳ ಪಾಲು ಕ್ರಮೇಣವಾಗಿ ಇಳಿದರೆ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಪಾಲು ಇಳಿದಿತ್ತು. ಸಾಲ ಮತ್ತು ಮುಂಗಡಗಳು 2013–14ರಿಂದ 2015–16ರಲ್ಲಿ ನಿಶಿತವಾಗಿ ಇಳಿಕೆಯಾಗಿ 2017–18ರಲ್ಲಿ ಶೇಕಡ 2.86ಕ್ಕೆ ಏರಿತು.

ವೆಚ್ಚ ಸುಧಾರಣಾ ಆಯೋಗವು (ಇಆರ್‌ಸಿ) ತನ್ನ ಮೊದಲ ವರದಿಯಲ್ಲಿ (ಫೆಬ್ರವರಿ 2010) ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಬೇಕು ಮತ್ತು ವಿವೇಚನಾಯುಕ್ತ ಹಂಚಿಕೆಗಳ ಮೂಲಕ ವಿತ್ತೀಯ ಅನಿಶ್ಚಿತತೆಗಳನ್ನು ತಡೆಯಬೇಕೆಂದು ಶಿಫಾರಸು ಮಾಡಿದೆ. ಅದು ಬಂಡವಾಳ ವೆಚ್ಚವನ್ನು (ಋಣ ಸೇವೆಯನ್ನು ಬಿಟ್ಟು) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಷ್ಟಿರುವಂತೆ ನಿರ್ವಹಿಸಬೇಕೆಂದು ಸಹಾ ಶಿಫಾರಸು ಮಾಡಿದೆ. ಬಂಡವಾಳ ವೆಚ್ಚ ಮತ್ತು ರಾಒಆಂಉದ ಅನುಪಾತವು 2013–14ರಿಂದ 2015–16ರಲ್ಲಿ ಶೇಕಡ ಎರಡರಷ್ಟಿದ್ದು, 2016–17 ಮತ್ತು 2017–18ರಲ್ಲಿ ಶೇಕಡ ಮೂರಕ್ಕೆ ಏರಿದೆ.

### 1.6.2 ರಾಜಸ್ವ ವೆಚ್ಚ

ರಾಜಸ್ವ ವೆಚ್ಚವು ಸರ್ಕಾರದ ದಿನನಿತ್ಯದ ವೆಚ್ಚಗಳನ್ನು, ಕೂಲಿ ಹಾಗೂ ಸಂಬಳ, ಪಿಂಚಣಿಗಳು, ಬಡ್ಡಿಪಾವತಿಗಳು, ಬಂಡವಾಳ ಕಾಮಗಾರಿಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಳ ವೆಚ್ಚ, ಸಹಾಯಧನಗಳು, ಸ್ಥಳೀಯ ಸಂಸ್ಥೆಗಳಿಗೆ, ಸಹಕಾರಿ ಸಂಸ್ಥೆಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ ಮತ್ತು ಇತರರಿಗೆ ಮಾಡುವ ವರ್ಗಾವಣೆಗಳನ್ನು ಒಳಗೊಂಡಿದೆ. ವೆಚ್ಚವನ್ನು ಆಡಳಿತ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳು ಎಂದು ವಿವಿಧ ಕಾರ್ಯವರ್ಗಗಳಾಗಿ ವಿಂಗಡಿಸಬಹುದು. ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಮೇಲಿನ ವೆಚ್ಚವು ಭೌತಿಕ ಮೂಲಸೌಕರ್ಯಗಳ ನಿರ್ಮಾಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಿಸಿದ್ದು ಇದನ್ನು ಉತ್ಪಾದಕ ವೆಚ್ಚ ಎಂದು, ಸಾಮಾನ್ಯ ಆಡಳಿತ ಮತ್ತು ಋಣ ಸೇವೆಗಳ ಮೇಲಿನ ವೆಚ್ಚವನ್ನು ಅನುತ್ಪಾದಕ ಎಂದು ಪರಿಗಣಿಸಲಾಗುತ್ತದೆ.

ರಾಜಸ್ವ ವೆಚ್ಚವು 2013–14ರಲ್ಲಿ ₹89,189 ಕೋಟಿಗಳಿದ್ದು 2017–18 ರಲ್ಲಿ ₹1,42,482 ಕೋಟಿಗಳಿಗೆ ಏರಿ ಶೇಕಡ 60ರಷ್ಟು ಹೆಚ್ಚಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ ಎಂಟರಷ್ಟು ಹೆಚ್ಚಾಗಿದ್ದು, ಇದು ಸಂಬಳವೆಚ್ಚ (₹1,250 ಕೋಟಿ), ಬಡ್ಡಿಪಾವತಿ (₹2,057 ಕೋಟಿ), ಪಿಂಚಣಿ (₹389 ಕೋಟಿ) ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ (₹1,665 ಕೋಟಿ) ಯಲ್ಲಿನ ಏರಿಕೆಯಿಂದ ಉಂಟಾಗಿದೆ.

2017–18ರಲ್ಲಿ ರಾಜಸ್ವ ವೆಚ್ಚವು ಖಾತರಿ ಶುಲ್ಕ[8] (₹13.80 ಕೋಟಿ), ಕರ್ನಾಟಕ ಸರ್ಕಾರ ವಿಮಾ ನಿಧಿಯ ಬಡ್ಡಿಯ ಹೊಂದಾಣಿಕೆ (₹190.48 ಕೋಟಿ), ಕರ್ನಾಟಕ ಸರ್ಕಾರಿ ವಿಮೆ ಯೋಜನೆಗಳ ನಿಧಿ ಶಿಲ್ಕುಗಳ

[8] ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹11.63 ಕೋಟಿ), ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ (₹0.01 ಕೋಟಿ), ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಮಂಡಳಿ (₹0.52 ಕೋಟಿ) ಮತ್ತು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (₹1.64 ಕೋಟಿ).

ಮೇಲಿನ ಬಡ್ಡಿ ಹೊಂದಾಣಿಕೆ (₹832.27 ಕೋಟಿ), ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿಯಡಿಯ ಭವಿಷ್ಯ ನಿಧಿಯ ಶಿಲ್ಕುಗಳ ಮೇಲಿನ ಬಡ್ಡಿಯ ಹೊಂದಾಣಿಕೆ (₹1,054.67 ಕೋಟಿ), ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುತ್ ತೆರಿಗೆ (₹1,290.24 ಕೋಟಿ) ಬಾಕಿಯನ್ನು ಸಹಾಯಧನವೆಂದು ಪರಿಗಣಿಸಿರುವುದು ಮತ್ತು ಸರ್ಕಾರಿ ಸ್ವಾಮ್ಯದ ವಾಣಿಜ್ಯ ಉದ್ಯಮಗಳಲ್ಲಿ ಹೂಡಿದ ಬಂಡವಾಳದ ಮೇಲಿನ ಬಡ್ಡಿಯ ಪುಸ್ತಕ ಹೊಂದಾಣಿಕೆ (₹0.65 ಕೋಟಿ)ಗಳ ಒಟ್ಟು ಮೊತ್ತವಾದ ₹3,382.21 ಕೋಟಿಗಳನ್ನು ಸಹ ಒಳಗೊಂಡಿದೆ.

### 1.6.3 ಬದ್ಧ ವೆಚ್ಚಗಳು

ಬಹುಪಾಲು ರಾಜಸ್ವ ವೆಚ್ಚಗಳು ಸಂಬಳಗಳು, ಪಿಂಚಣಿ, ಬಡ್ಡಿ ಪಾವತಿಗಳು, ಸಹಾಯಧನ ಮುಂತಾದ ಬದ್ದ ವೆಚ್ಚಗಳ ರೂಪದಲ್ಲಿದ್ದು, ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯದ ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಬಂಡವಾಳ ಹೂಡಿಕೆಗಳ ಮೂಲಕ ಪೂರೈಸುವಲ್ಲಿ ಮತ್ತು ವೆಚ್ಚದ ಆದ್ಯತೀಕರಣವನ್ನು ಬಾಧಿಸುತ್ತದೆ. ಈ ಅಂಗಗಳಡಿಯ ವೆಚ್ಚವನ್ನು ಮತ್ತು ಮಧ್ಯಮಾವಧಿಯ ವಿತ್ತೀಯ ಯೋಜನೆ ಮತ್ತು ಮಧ್ಯಂತರ ವಿತ್ತೀಯ ಯೋಜನೆ 2018–22ರಲ್ಲಿ ಬದ್ದವೆಚ್ಚವೆಂದು ಪರಿಗಣಿಸಲಾದ ಸಾಮಾಜಿಕ ಭದ್ರತೆಯಡಿಯ ಪಿಂಚಣಿಗಳು, ಸಹಾಯಾನುದಾನ ಮತ್ತಿತರ ಆರ್ಥಿಕ ಸಹಾಯಗಳು, ಆಡಳಿತ ವೆಚ್ಚ, ಸರ್ಕಾರದ ವಿವಿಧ ಯೋಜನೆಗಳಡಿ ಬರುವ ಅಂತರ್ಗತ ಸಹಾಯಧನ, ಸಹಾಯಾನುದಾನ ಮತ್ತು ಆರ್ಥಿಕ ನೆರವು, ಆಡಳಿತ ವೆಚ್ಚ, ಸ್ಥಳೀಯ ಸಂಸ್ಥೆ ಮುಂತಾದವುಗಳಿಗೆ ವರ್ಗಾವಣೆ ಮುಂತಾದ ಕೆಲವು ವೆಚ್ಚಗಳ ವಿವರಗಳನ್ನು 2013–14 ರಿಂದ 2017–18ರ ಅವಧಿಯಲ್ಲಿದ್ದಂತೆ **ಕೋಷ್ಟಕ 1.15** ರಲ್ಲಿ ಮತ್ತು **ನಕ್ಷೆ 1.14**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.15: ಬದ್ಧ ವೆಚ್ಚಗಳ ಪ್ರವೃತ್ತಿ**

*(ಕೋಟಿ ರೂಪಾಯಿಗಳಲ್ಲಿ)*

| ಕ್ರಮ ಸಂಖ್ಯೆ | ವಿಷಯಗಳು | 2013–14 | 2014–15 | 2015–16 | 2016–17 | 2017–18 | |
|---|---|---|---|---|---|---|---|
| | | | | | | ಆಯವ್ಯಯ ಅಂದಾಜು | ವಾಸ್ತವ |
| 1 | ವೇತನಗಳು*–ಇದರಲ್ಲಿ | 18,027 | 19,952 | 20,774 | 21,708 | 25,405 | 22,958 |
| | ಯೋಜನೇತರ ಶೀರ್ಷಿಕೆ | 15,211 | 16,733 | 17,342 | 18,366 | | |
| | ಯೋಜನಾ ಶೀರ್ಷಿಕೆ** | 2,816 | 3,219 | 3,432 | 3,342 | | |
| 2 | ಬಡ್ಡಿ ಪಾವತಿಗಳು# | 8,027 | 9,804 | 11,343 | 12,850 | 14,159@ | 14,973 |
| 3 | ವಿಶ್ರಾಂತಿ ವೇತನಗಳ ಮೇಲಿನ ವೆಚ್ಚ | 9,152 | 10,118 | 11,251 | 11,295 | 13,183 | 11,684 |
| 4 | ಸಾಮಾಜಿಕ ಭದ್ರತೆ ಪಿಂಚಣಿಗಳು | 1,870 | 2,322 | 2,247 | 2,503 | 3,992 | 4,055 |
| 5 | (ಎ) ಸಹಾಯಧನಗಳು | 13,323 | 11,153 | 13,149 | 14,387 | 23,328 | 14,148 |
| | (ಬಿ) ಆರ್ಥಿಕ ಬೆಂಬಲದ ಸ್ವರೂಪದ ಸಹಾಯಧನಗಳು | 1,690 | 2,973 | 3,913 | 3,714 | | 3,318^ |
| 6 | ಸಹಾಯಾನುದಾನಗಳು ಮತ್ತು ಆರ್ಥಿಕ ಬೆಂಬಲ | 8,471 | 9,737 | 10,840 | 13,163 | 9,534 | 11,812 |
| 7 | ಆಡಳಿತಾತ್ಮಕ ವೆಚ್ಚ | 1,549 | 1,708 | 1,958 | 1,966 | 1,077 | 2,404 |
| 8 | ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ | 15,570 | 19,952 | 21,163 | 23,466 | 26,452 | 25,131 |
| 9 | **ಒಟ್ಟು ಬದ್ಧ ವೆಚ್ಚಗಳು** | **77,679** | **87,719** | **96,638** | **1,05,052** | **1,17,040** | **1,10,483** |
| 10 | **ರಾಜಸ್ವ ವೆಚ್ಚಗಳು** | **89,189** | **1,03,614** | **1,17,028** | **1,31,921** | **1,44,755** | **1,42,482** |
| 11 | **ರಾಜಸ್ವ ಸ್ವೀಕೃತಿಗಳು** | **89,542** | **1,04,142** | **1,18,817** | **1,33,214** | **1,44,893** | **1,47,000** |
| 12 | **ಬದ್ಧ ವೆಚ್ಚಗಳಿಗೆ ರಾಜಸ್ವ ಸ್ವೀಕೃತಿಗಳ ಶೇಕಡಾವಾರು** | **87** | **84** | **81** | **79** | **81** | **75** |
| 13 | **ಬದ್ಧ ವೆಚ್ಚಗಳಿಗೆ ರಾಜಸ್ವ ವೆಚ್ಚಗಳ ಶೇಕಡಾವಾರು** | **87** | **85** | **83** | **80** | **81** | **78** |

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಾಗೂ ಇತರ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾದ ಅನುದಾನಗಳಿಂದ ಪಾವತಿಸಲಾದ ವೇತನಗಳನ್ನು ಒಳಗೊಂಡಿದೆ.*

*** ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿನ ಸಂಬಳಗಳನ್ನು ಒಳಗೊಂಡಿದೆ.*
*# ಆಯವ್ಯಯದ ಹೊರಗಿನ ಸಾಲಗಳಿಗೆ ಸಂಬಂಧಿತ ಬಡ್ಡಿ ಪಾವತಿಗಳು.*
*@2049ಕ್ಕೆ ಮಾತ್ರ ಸೇರಿದ ಬಡ್ಡಿಗಳನ್ನೊಳಗೊಂಡಿದೆ.*
*^ ಇಂದಿರಾ ಆವಾಸ್ ಯೋಜನೆಯಡಿ ಆರ್ಥಿಕ ಬೆಂಬಲವಾಗಿ ಬಿಡುಗಡೆಯಾದ ಸಬ್ಸಿಡಿಯನ್ನೊಳಗೊಂಡಿಲ್ಲ.*

**ನಕ್ಷೆ 1.14: 2013–18ರ ಅವಧಿಯಲ್ಲಿ ಬದ್ಧ ವೆಚ್ಚಗಳು**




ಬದ್ಧ ವೆಚ್ಚಕ್ಕೆ ರಾಜಸ್ವ ವೆಚ್ಚದ ಅನುಪಾತವು 2013–14ರಲ್ಲಿದ್ದ ಶೇಕಡ 87ರಿಂದ 2017–18ರಲ್ಲಿ ಶೇಕಡ 78ಕ್ಕೆ ಇಳಿಕೆಯಾಗಿದ್ದರೂ ಮತ್ತು ಬದ್ಧವೆಚ್ಚಕ್ಕೆ ರಾಜಸ್ವ ಸ್ವೀಕೃತಿಗಳ ಅನುಪಾತವು 2013–14ರಿಂದ 2017–18ಕ್ಕೆ ಇಳಿದಿದ್ದರೂ ಬದ್ಧ ವೆಚ್ಚ ಮತ್ತು ರಾಜಸ್ವ ಸ್ವೀಕೃತಿಗಳ ಅನುಪಾತದ ಹೆಚ್ಚಿನ ಶತಾಂಶವು, ತನ್ನ ಸಂಪನ್ಮೂಲಗಳನ್ನು ಹೊಸ ಯೋಜನೆಗಳಿಗೆ ಹಂಚಿಕೆ ಮಾಡಲು ರಾಜ್ಯಕ್ಕೆ ಸೀಮಿತ ನಮ್ಯತೆ ಇದೆಯೆಂಬುದನ್ನು ಸೂಚಿಸುತ್ತದೆ. ಇಂತಹ ಬದ್ಧ ವೆಚ್ಚಗಳಿಗೆ ವೆಚ್ಚ ಭಾಗದಲ್ಲಿ ಮಧ್ಯಂತರ ಕಟ್ಟುಪಾಡಿನ ಅಗತ್ಯವಿದೆ. ಶಿಕ್ಷಣ ಹಕ್ಕು, ಆಹಾರ ಭದ್ರತೆ ಕಾಯಿದೆ ಮತ್ತು ಉದ್ಯೋಗ ಖಾತರಿ ಕ್ರಮಗಳಂತಹ ಶಾಸನ ಬದ್ಧತೆಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಸಂಪನ್ಮೂಲಗಳ ಮೇಲೆ ಹೆಚ್ಚುತ್ತಿರುವ ಬೇಡಿಕೆಗಳಿವೆ. ಈ ರೀತಿಯ ಹೊಸ ಆಸ್ತಿಗಳು ಅವುಗಳ ಹಂಚಿಕೆ ಹಾಗೂ ತಾಂತ್ರಿಕ ದಕ್ಷತೆಗಳನ್ನು ನಿರ್ಣಯಿಸಲು ಒಟ್ಟಾರೆ ಸಾರ್ವಜನಿಕ ಸಂಪನ್ಮೂಲಗಳ ಪರಿಶೀಲನೆಯ ಅಗತ್ಯವನ್ನು ಉಂಟುಮಾಡಿದೆ.

### ಸಂಬಳದ ಮೇಲಿನ ವೆಚ್ಚ

ಸಂಬಳದ ಮೇಲಿನ ವೆಚ್ಚವು 2013–14ರಲ್ಲಿ ₹18,027 ಕೋಟಿಗಳಿದ್ದು, 2017–18ರಲ್ಲಿ ₹22,958 ಕೋಟಿಗಳಿಗೆ ಏರಿತ್ತು. ಅದು ಕಳೆದ ವರ್ಷಕ್ಕಿಂತ ಶೇಕಡ ಆರರಷ್ಟು ವೃದ್ಧಿಯಾಗಿತ್ತು. ಹಣಕಾಸು ಲೆಕ್ಕಗಳಲ್ಲಿನ ಸಂಬಳ ವೆಚ್ಚದ ಮಾಹಿತಿಯು ರಾಜ್ಯ ವಲಯಕ್ಕೆ ಮಾತ್ರ ಸಂಬಂಧಿಸಿದ್ದು, ಪಂಚಾಯತ್‌ರಾಜ್ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದ ಸಂಬಳ ವೆಚ್ಚವನ್ನು (₹12,412 ಕೋಟಿ) ಒಳಗೊಂಡಿಲ್ಲ. ಜಿಲ್ಲಾ ವಲಯಕ್ಕೆ (ಪಂಚಾಯತ್‌ರಾಜ್ ಸಂಸ್ಥೆಗಳ ನೌಕರರು) ಸಂಬಂಧಿಸಿದಂತೆ ಸಂಬಳಗಳನ್ನು ಆಯಾ ಸಂಸ್ಥೆಗಳಿಗೆ ಸಹಾಯಾನುದಾನಗಳಾಗಿ ಬಿಡುಗಡೆ ಮಾಡಲಾಗುವುದರಿಂದ ರಾಜ್ಯ ಲೆಕ್ಕಗಳಲ್ಲಿ ಸಂಬಳಗಳ ಒಟ್ಟು ವೆಚ್ಚವನ್ನು ತೋರಿಸುವುದಿಲ್ಲ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಸಂಬಳ ಅನುದಾನಗಳನ್ನು ಹೊರತುಪಡಿಸಿದ ಒಟ್ಟು ಸಂಬಳ ವೆಚ್ಚವು (₹524.21 ಕೋಟಿ) ಬಡ್ಡಿ ಪಾವತಿಗಳು ಮತ್ತು ಪಿಂಚಣಿಗಳನ್ನು ಬಿಟ್ಟು ನಿವ್ವಳ ರಾಜಸ್ವ ವೆಚ್ಚದ ಶೇಕಡ 20ರಷ್ಟಿತ್ತು. ಇದು ಹನ್ನೆರಡನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ಶೇಕಡ 35ರ ಮಿತಿಯೊಳಗೆ ಇದ್ದಿತು.

ಆರ್ಥಿಕ ಇಲಾಖೆಯು, ಸಂವಿಧಾನದ ಅಗತ್ಯದಂತೆ ಪಂಚಾಯತ್‌ರಾಜ್ ಸಂಸ್ಥೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳನ್ನು ಒಟ್ಟು ಮೊತ್ತವಾಗಿ ಬಿಡುಗಡೆ ಮಾಡಲಾಗುತ್ತದೆ, ಅಲ್ಲದೆ ಸಂಬಳ ಮತ್ತು ಸಂಬಳೇತರ ಬಾಬ್ತುಗಳ ಯೋಜನಾವಾರು ವೆಚ್ಚ ವಿವರಗಳು ಸಂಪರ್ಕ ಸಂಪುಟಗಳಲ್ಲಿ ಲಭ್ಯವಿದೆ ಮತ್ತು

ಈ ಮಾಹಿತಿಯನ್ನು ಪಂಚಾಯತ್‌ರಾಜ್ ಸಂಸ್ಥೆ/ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಗಳ ಭಾಗವಾಗಿ ತೋರಿಸಲಾಗುತ್ತಿದೆ ಎಂದು ಉತ್ತರಿಸಿದೆ (ನವಂಬರ್ 2014).

ಸಾರ್ವಜನಿಕ ಲೆಕ್ಕ ಸಮಿತಿಯು ತನ್ನ 5ನೇ ವರದಿಯಲ್ಲಿ (ಜುಲೈ 2015) ಆರ್ಥಿಕ ಇಲಾಖೆಗೆ ಸಂಬಳದ ವಿವರಗಳನ್ನು ಹೊಂದಿದ ಜಿಲ್ಲಾ ವಲಯದ ದತ್ತಾಂಶವನ್ನು ಹಣಕಾಸು ಲೆಕ್ಕಗಳ ಅನುಬಂಧದಲ್ಲಿ ಬಿಂಬಿಸಲು ಕ್ರೋಢೀಕರಿಸಬೇಕೆಂಬ ತನ್ನ ಮೊದಲಿನ ಶಿಫಾರಸನ್ನು ಪುನರುಚ್ಚರಿಸಿತು.

ಅಲ್ಲದೆ ನಗರ ಸ್ಥಳೀಯ ಸಂಸ್ಥೆಗಳ ನೌಕರರ ಸಂಬಳ ವೆಚ್ಚವು ರಾಜ್ಯ ವಿಭಾಗದ (ಸಾಂವಿಧಾನಿಕ ಗಣ್ಯರ) ವೆಚ್ಚದಲ್ಲಿ ಮೇಲು ವ್ಯಾಪಿಸಿದೆ. ಇದನ್ನು ವರದಿಯ **ಕಂಡಿಕೆ 2.4.5**ರಲ್ಲಿ ಚರ್ಚಿಸಲಾಗಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ನಂತರವೂ ಜಿಲ್ಲಾ ವಲಯದ ಸಂಬಳದ ವಿವರಗಳನ್ನು ಹಣಕಾಸು ಲೆಕ್ಕಗಳಲ್ಲಿ ಅನುಬಂಧವಾಗಿ ಬಿಂಬಿಸಲು ರಾಜ್ಯ ಸರ್ಕಾರವು ಕ್ರಮ ಕೈಗೊಂಡಿಲ್ಲ.

### ನಿವೃತ್ತಿ ವೇತನ ಪಾವತಿಗಳು

2017–18 ರಲ್ಲಿ ನಿವೃತ್ತಿ ವೇತನದ ವೆಚ್ಚವು ₹11,684 ಕೋಟಿಗಳಷ್ಟಿದ್ದು ಹಿಂದಿನ ವರ್ಷಕ್ಕಿಂತ ಸಾಮಾನ್ಯ ಹೆಚ್ಚಳವಾಗಿತ್ತು (₹389 ಕೋಟಿ).

1 ಏಪ್ರಿಲ್ 2008ಕ್ಕೆ ಹಿಂದಿನ, ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ಪಾವತಿಯು ರಾಜ್ಯ ಸರ್ಕಾರದ ಬಾಧ್ಯತೆಯಾಗಿದ್ದಿತು. ಏಪ್ರಿಲ್ 2008ರಿಂದ ಈ ಅಧಿಕಾರಿಗಳ ಪಿಂಚಣಿ ಪಾವತಿಯನ್ನು ಕೇಂದ್ರ ಸರ್ಕಾರ ಭರಿಸಬೇಕಾಗಿದ್ದು, ಈ ಪಾವತಿಗಳನ್ನು 8658–ಅಮಾನತ್ತು ಶೀರ್ಷಿಕೆಗೆ ಹಾಕಿ ನಂತರ ಕೇಂದ್ರ ಸರ್ಕಾರದಿಂದ ಆ ಮೊತ್ತದ ಮರುಪಾವತಿಗೆ ಬೇಡಿಕೆಯನ್ನು ಸಲ್ಲಿಸಬೇಕಾಗಿದೆ. ಮಾರ್ಚ್ 2017ರಲ್ಲಿದ್ದ ₹50.65 ಕೋಟಿಗಳಿಗೆ ಹೋಲಿಸಿದಲ್ಲಿ, ₹92.18 ಕೋಟಿಗಳ (ಮಾರ್ಚ್ 2018) ಮೊತ್ತವು ಇತ್ಯರ್ಥವಾಗದೆ ಬಾಕಿ ಉಳಿದಿದ್ದು ರಾಜ್ಯ ಸರ್ಕಾರವು ತನಗೆ ಬರಬೇಕಾದ ಮೊತ್ತವನ್ನು ಇನ್ನೂ ಪಡೆಯಬೇಕಾಗಿದೆ.

### ನೂತನ ಪಿಂಚಣಿ ಯೋಜನೆ

01 ಏಪ್ರಿಲ್ 2006ರಂದು ಅಥವಾ ನಂತರ ರಾಜ್ಯ ಸರ್ಕಾರದ ಸೇವೆಗೆ ಸೇರಿದ ಎಲ್ಲಾ ಉದ್ಯೋಗಿಗಳಿಗೆ ನೂತನ ಪಿಂಚಣಿ ಯೋಜನೆ ಎಂದು ಕರೆಯಲಾಗುವ ನಿರ್ದಿಷ್ಟ ವಂತಿಗೆ ನಿವೃತ್ತಿ ವೇತನ ಯೋಜನೆಯು 01 ಏಪ್ರಿಲ್ 2010ರಿಂದ ಪೂರ್ಣವಾಗಿ ಜಾರಿಗೊಂಡಿದೆ. ಖಜಾನೆ ನಿರ್ದೇಶನಾಲಯದ ನಿಯಂತ್ರಣದಲ್ಲಿ ಇದಕ್ಕಾಗಿ ಒಂದು ಪ್ರತ್ಯೇಕ ಹೊಸ ನಿವೃತ್ತಿ ವೇತನ ಯೋಜನಾ ಕೋಶವನ್ನು ಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರವು ಪಿಂಚಣಿ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರವು ವಿನ್ಯಾಸಗೊಳಿಸಿದ ಹೊಸ ಪಿಂಚಣಿ ಯೋಜನೆಯ ರೀತಿಯನ್ನು ಅಂಗೀಕರಿಸಿದ್ದು, ಕೇಂದ್ರ ದಾಖಲೆ ನಿರ್ವಹಣಾ ಏಜೆನ್ಸಿಯಾಗಿ ರಾಷ್ಟ್ರೀಯ ಭದ್ರತೆಗಳ ಭಂಡಾರ ನಿಯಮಿತವನ್ನು ನೇಮಿಸಿದೆ. ಪಿಂಚಣಿ ನಿಧಿಗಳನ್ನು ನಿರ್ವಹಿಸಲು ಏಕ್ಸಿಸ್ ಬ್ಯಾಂಕನ್ನು ಟ್ರಸ್ಟಿ ಬ್ಯಾಂಕ್‌ಆಗಿ ಆಯ್ಕೆ ಮಾಡಲಾಗಿದೆ.

ಯೋಜನೆಯ ಹಾಗೂ ಸರ್ಕಾರಿ ನೌಕರರ ಮತ್ತು ಸರ್ಕಾರವು ಮಾಡಿದ ವಂತಿಗೆಗಳ ವಿವರಗಳು ಖಜಾನೆ ನಿರ್ದೇಶಕರು ಒದಗಿಸಿದಂತೆ (ಅಕ್ಟೋಬರ್ 2018) ಕೆಳಗೆ ಕೊಡಲಾಗಿದೆ.

- 01.04.2006 ಮತ್ತು 31.03.2018ರ ನಡುವೆ ಸೇವೆಗೆ ಸೇರಿದ 2,00,433 ನೌಕರರಲ್ಲಿ 1,99,316 ನೌಕರರಿಗೆ ಖಾಯಂ ನಿವೃತ್ತಿ ಖಾತೆ ಸಂಖ್ಯೆ (ಪಿಆರ್‌ಎಎನ್) ನೀಡಲಾಗಿತ್ತು.
- ಮಾರ್ಚ್ 31, 2018ರವರೆಗೆ ನೌಕರರ ವಂತಿಗೆಯು (ಮಾಹೆಯಾನ ಹಾಗೂ ಬಾಕಿ[9]) ₹2,369.29 ಕೋಟಿಗಳಿದ್ದು ಪ್ರಾರಂಭದಿಂದ ಸರ್ಕಾರವು ನೀಡಿದ ಸರ್ಕಾರದ ವಂತಿಗೆಯು ₹2,358.99 ಕೋಟಿಗಳಷ್ಟಿತ್ತು. ಇದು ಪ್ರಸಕ್ತ ವರ್ಷದಲ್ಲಿನ ₹581.70 ಕೋಟಿಗಳ ಸರ್ಕಾರಿ ವಂತಿಗೆ ಹಾಗೂ ₹462.18 ಕೋಟಿಗಳ ನೌಕರರ ವಂತಿಗೆಗಳನ್ನೊಳಗೊಂಡಿತ್ತು.
- ಸರ್ಕಾರಿ ಬಾಕಿ ಉಳಿದ ವಂತಿಗೆಯನ್ನು ಸ್ವೀಕರಿಸಲು ಅರ್ಹರಿದ್ದ 1,18,995 ನೌಕರರ ಪೈಕಿ 25,959 ನೌಕರರು ಸರ್ಕಾರದ ಬಾಕಿಯನ್ನು ಇನ್ನೂ ಪಡೆಯಬೇಕಾಗಿದೆ. ಇದು ಹಣ

[9] ಸರ್ಕಾರಿ ನೌಕರನು ಸೇವೆಗೆ ಸೇರಿದ ದಿನಾಂಕದಿಂದ ಯೋಜನೆಯ ಅನುಷ್ಠಾನದವರೆಗಿನ ವಂತಿಗೆಗೆ ಸಂಬಂಧಿಸಿದೆ.

ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ನೌಕರವಾರು ಶೆಡ್ಯೂಲುಗಳನ್ನು ನೀಡದಿದ್ದುದರಿಂದಾಗಿತ್ತು.

- ಪ್ರಸಕ್ತ ವರ್ಷದಲ್ಲಿನ ಒಟ್ಟು ಜಮೆಗಳಲ್ಲಿ ಪ್ರಾರಂಭಶಿಲ್ಕು ₹37.64 ಕೋಟಿಗಳೂ ಸೇರಿದಂತೆ ₹1,173.30 ಕೋಟಿಗಳನ್ನು ಟ್ರಸ್ಟಿ ಬ್ಯಾಂಕ್ ವರ್ಗಾಯಿಸಲಾಗಿದ್ದು (ನೌಕರರ ಹಾಗೂ ಸರ್ಕಾರದ ವಂತಿಗೆ) 31 ಮಾರ್ಚ್ 2018ರ ಅಂತ್ಯಕ್ಕೆ ಠೇವಣಿ ಲೆಕ್ಕದಲ್ಲಿ ₹6.23 ಕೋಟಿಗಳ ಅಂತಿಮ ಶಿಲ್ಕು ಉಳಿದಿತ್ತು.

- 2017–18ರಲ್ಲಿ ₹5.20 ಕೋಟಿಗಳನ್ನು ಸಂಚಿತ ನಿಧಿಯಿಂದ 'ಹೊಸ ವಂತಿಗೆ ಪಿಂಚಣಿ ಯೋಜನೆಗಳು' ಯೋಜನೆಯ ಉಪಯೋಗವನ್ನು ಸೇವೆಯಲ್ಲಿ ನಿವೃತ್ತಿ/ಮರಣ ಹೊಂದಿದ ನೌಕರರು/ಕುಟುಂಬದವರು–ಹೊಸ ನಿರ್ದಿಷ್ಟ ಪಿಂಚಣಿ ಯೋಜನೆಗೆ ಸೇರಿದವರಿಗೆ ಪಾವತಿಸಲಾಗಿದೆ.

- ಸರ್ಕಾರವು 01.04.2010ರಿಂದ ಅನ್ವಯವಾಗುವಂತೆ ಸರ್ಕಾರಿ ಬಾಕಿ ವಂತಿಗೆಯ ಮೇಲೆ ಶೇಕಡ ಎಂಟರ ಚಕ್ರಬಡ್ಡಿಯನ್ನು ನೀಡುತ್ತಿದೆ. ಸರ್ಕಾರಿ ಬಾಕಿ ವಂತಿಗೆಯ ಮೇಲೆ 31.03.2018ರ ಅಂತ್ಯದವರೆಗೆ ನೀಡಿದ ಬಡ್ಡಿಯು ₹73.86 ಕೋಟಿಗಳಾಗಿದ್ದು ಪ್ರಸಕ್ತ ವರ್ಷಕ್ಕೆ ಅದು ₹3.65 ಕೋಟಿಗಳಷ್ಟಿತ್ತು. ಆದರೆ, ಡಿಡಿಓಗಳು ಶೆಡ್ಯೂಲುಗಳನ್ನು ಸಲ್ಲಿಸದಿದ್ದುದರಿಂದ ರಾಜ್ಯ ಸರ್ಕಾರವು 01.07.2016ರಿಂದ ಸರ್ಕಾರಿ ಬಾಕಿ ವಂತಿಗೆ ಮೇಲೆ ಬಡ್ಡಿ ಪಾವತಿಯನ್ನು ನಿಲ್ಲಿಸಲು ಆದೇಶ ಹೊರಡಿಸಿತು.

- ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯು (ಹೆಚ್ಆರ್ಎಮ್ಎಸ್) ನೌಕರರಿಗೆ ಪಾವತಿಸಬೇಕಾದ ಬಾಕಿ ಪಟ್ಟಿಯ ಶೆಡ್ಯೂಲನ್ನು ತಯಾರಿಸುವಾಗ ಬಡ್ಡಿಯನ್ನು 30.06.2016ರವರೆಗೆ ನಿಯಂತ್ರಿಸುವಂತಹ ಬದಲಾವಣೆಯನ್ನು ತಂತ್ರಾಂಶದಲ್ಲಿ ಅಳವಡಿಸಬೇಕಾಗಿದೆ. ಸರ್ಕಾರಿ ಬಾಕಿ ಪಾವತಿಯನ್ನು ಜನವರಿ 2018ರಿಂದ ನಿಲ್ಲಿಸಲಾಗಿದ್ದು ಅದು ಸರ್ಕಾರದ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ.

- ರಾಜ್ಯ ಸರ್ಕಾರದ ಎಲ್ಲ ಸಚಿವಾಲಯ ಹಾಗೂ ಇಲಾಖೆಗಳ ಮಂಡಳಿಗಳು/ನಿಗಮಗಳು/ಸೊಸೈಟಿಗಳು/ವಿಶ್ವವಿದ್ಯಾಲಯಗಳು/ರಾಜ್ಯ ಅನುದಾನಿತ ಸಂಸ್ಥೆಗಳು/ರಾಜ್ಯ ಸ್ವಾಯುತ್ತ ಸಂಸ್ಥೆಗಳಲ್ಲಿ ಎರವಲು ಸೇವೆಯಲ್ಲಿರುವ ನೌಕರರಿಗೆ ಎನ್‌ಪಿಎಸ್ ಕಡಿತವನ್ನು ಮಾಡಲು 113 ಸಂಸ್ಥೆಗಳಿಗೆ ವಿಶಿಷ್ಟವಾದ ಖಜಾನೆಯದಲ್ಲದ ಪಿಎಓ/ಡಿಡಿಓ ಸಂಖ್ಯೆಗಳನ್ನು ಹಂಚಿಕೆ ಮಾಡಲಾಗಿದ್ದು ಇವುಗಳಲ್ಲಿ 104 ಸಂಸ್ಥೆಗಳು 31.03.2018ರಲ್ಲಿದ್ದಂತೆ ಸಿಆರ್ಎ ನಿಂದ ನೋಂದಣಿಯಾಗಿದ್ದು ಪಿಎಓ ಹಾಗೂ ಡಿಡಿಓ ನೋಂದಣಿ ಸಂಖ್ಯೆಗಳನ್ನು ನೀಡಲಾಗಿತ್ತು.

**ಬಡ್ಡಿ ಪಾವತಿಗಳು**

ಬಡ್ಡಿ ಪಾವತಿಗಳು 2013–14ರಲ್ಲಿದ್ದ ₹8,027 ಕೋಟಿಯಿಂದ 2017–18ರಲ್ಲಿ ₹14,973 ಕೋಟಿಗೆ ಏರಿದ್ದು, ₹6,946 ಕೋಟಿಯಷ್ಟು ಹೆಚ್ಚಾಗಿದೆ. 2017–18ರಲ್ಲಿನ ಬಡ್ಡಿ ಪಾವತಿಗಳು, ಆಂತರಿಕ ಸಾಲಗಳ ಮೇಲಿನ ಬಡ್ಡಿ (₹11,196 ಕೋಟಿ), ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ (₹2,081 ಕೋಟಿ), ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ (₹652 ಕೋಟಿ) ಹಾಗೂ ಆಯವ್ಯಯದ ಹೊರಗೆ ಮಾಡಲಾದ ಸಾಲಗಳ ಮೇಲಿನ ಬಡ್ಡಿ (₹1,043 ಕೋಟಿ) ಇವುಗಳನ್ನು ಒಳಗೊಂಡಿವೆ.

ಆಂತರಿಕ ಸಾಲಗಳ ಮೇಲಿನ ಬಡ್ಡಿಯು 2016–17ರಲ್ಲಿದ್ದ, ₹9,468 ಕೋಟಿಯಿಂದ 2017–18ರಲ್ಲಿ ₹11,196 ಕೋಟಿಗೆ ಏರಿ ಶೇಕಡ 18ರಷ್ಟು ಹೆಚ್ಚಾಗಿದೆ. ಇದು ಮಾರುಕಟ್ಟೆ ಸಾಲಗಳ ಮೇಲಿನ ಬಡ್ಡಿಪಾವತಿ ₹1,765 ಕೋಟಿ (ಶೇಕಡ 25) ಇತರ ಆಂತರಿಕ ಋಣಗಳ ಮೇಲಿನ ಬಡ್ಡಿ ₹9 ಕೋಟಿಯ (ಶೇಕಡ ಮೂರು) ಹೆಚ್ಚಳದಿಂದ ಉಂಟಾಗಿದೆ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು, ಇತ್ಯಾದಿಗಳ ಮೇಲಿನ ಬಡ್ಡಿಯು 2016–17ರಲ್ಲಿನ ₹1,904 ಕೋಟಿಯಿಂದ 2017–18ರಲ್ಲಿ ₹2,081 ಕೋಟಿಗೆ ಏರಿದ್ದು, ₹177 ಕೋಟಿಗಳಷ್ಟು ಹೆಚ್ಚಾಗಿದೆ. ಇದು ರಾಜ್ಯ ಭವಿಷ್ಯ ನಿಧಿ ಮತ್ತು ವಿಮಾ ಮತ್ತು ನಿವೃತ್ತಿ ವೇತನ ನಿಧಿಗಳ ಮೇಲಿನ ಬಡ್ಡಿಯ ದರವು ಶೇಕಡ 9ರಷ್ಟು ಹೆಚ್ಚಳಗೊಂಡಿದ್ದುದರಿಂದ ಉಂಟಾಗಿದೆ.

### ಸಹಾಯಧನಗಳು

2013–14ರಲ್ಲಿ ₹13,323 ಕೋಟಿಯಿದ್ದ ಸಹಾಯಧನದ ವೆಚ್ಚವು 2017–18ರಲ್ಲಿ ₹14,148 ಕೋಟಿಗಳಿಗೆ ಏರಿದ್ದು, ರಾಜಸ್ವ ಸ್ವೀಕೃತಿಗಳ ಶೇಕಡ 10ರಷ್ಟಿದೆ. ರಾಜ್ಯದ ನಾಲ್ಕು ಪ್ರಧಾನವಾದ ನೇರ ಸಹಾಯಧನ ವೆಚ್ಚವು ಕೃಷಿ ಪಂಪ್‌ಸೆಟ್‌ಗಳ ಬಳಕೆಗೆ ರೈತರಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು ನೀಡುವ ಸಹಾಯಧನ, ಆಹಾರ ಸಹಾಯಧನ ಮತ್ತು ಕೃಷಿ ಸಾಲಗಳಿಗೆ ಬಡ್ಡಿ ಸಹಾಯಧನ ಮತ್ತು ಸಾರಿಗೆಗಳಿಗೆ ಸಂಬಂಧಿಸಿದೆ. ಪ್ರಸಕ್ತ ವರ್ಷದ ರಾಜ್ಯ ಹಣಕಾಸು ಲೆಕ್ಕಗಳು (ಅನುಬಂಧ–II) ₹14,148 ಕೋಟಿಗಳ ನೇರ ಸಹಾಯಧನ ನೀಡಿಕೆಯನ್ನು ತೋರಿಸಿದ್ದು, ಇದು ಹಿಂದಿನ ವರ್ಷಕ್ಕಿಂತ ₹240 ಕೋಟಿಯಷ್ಟು ಕಡಿಮೆಯಾಗಿತ್ತು. ಇಳಿಕೆಯು ಹಿಂದಿನ ವರ್ಷಕ್ಕಿಂತ ಶೇಕಡ ಎರಡರಷ್ಟಿತ್ತು. ವಿವಿಧ ಸಹಾಯಧನಗಳ ವಿವರಗಳನ್ನು **ಅನುಬಂಧ 1.8**ರಲ್ಲಿ ನೀಡಲಾಗಿದೆ.

ವೈದ್ಯನಾಥನ್ ಸಮಿತಿ ವರದಿಯಂತೆ (ಮಾರ್ಚ್ 2008) ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಪುನರುಚ್ಚರಿಸಿರುವಂತೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕಾರಿ ಸಾಲ ವ್ಯವಸ್ಥೆಯು ಕ್ಷೀಣಿಸುವುದನ್ನು ತಡೆಗಟ್ಟಲು, ಸಾಲ ವಸೂಲಾತಿಯನ್ನು ಮತ್ತು ಬಡ್ಡಿಪಾವತಿಯನ್ನು ಮನ್ನಾ ಮಾಡುವ ಪದ್ಧತಿಯನ್ನು ನಿಲ್ಲಿಸಬೇಕಾಗಿದೆ. ಆದಾಗ್ಯೂ, 2017–18ರಲ್ಲಿ ಸಾಲಗಳ ಮನ್ನಾ ₹3,400.67 ಕೋಟಿಗಳಿದ್ದು **ಕಂಡಿಕೆ 3.10.2**ರಲ್ಲಿ ವಿವರವಾಗಿ ಚರ್ಚಿಸಲಾಗಿದೆ.

### ಆರ್ಥಿಕ ಬೆಂಬಲ, ಉತ್ತೇಜನ ಮುಂತಾದ ರೂಪದಲ್ಲಿ ಸಹಾಯಧನಗಳು

ಸರ್ಕಾರವು ಇನ್ನಿತರವುಗಳ ಜೊತೆಗೆ ಸಾಮಾಜಿಕ ಹಾಗೂ ಆರ್ಥಿಕ ಸರಕುಗಳ/ ಸೇವೆಗಳ ಅನುವುಗಳಲ್ಲಿ ಅದು ಭರಿಸುವ ವೆಚ್ಚಗಳನ್ನು ಹಿಂತಿರುಗಿ ಪಡೆಯಲು ಸಾಧ್ಯವಾಗದಿದ್ದಲ್ಲಿ ಸಹಾಯಧನ ನೀಡಿಕೆಯು ಉದ್ಭವಿಸುತ್ತವೆ. ಅವು ಕೆಲವೊಮ್ಮೆ ವಿಸ್ತರಿಸಿದ ಸೌಲಭ್ಯಗಳಾಗಬಹುದು. ಇದು, ವಸ್ತು ರೂಪ ಅಥವಾ ತೆರಿಗೆ ರಿಯಾಯಿತಿಯ ರೂಪದಲ್ಲಿ ಪರೋಕ್ಷವಾಗಿರಬಹುದು. 2017–18ರಲ್ಲಿ ನೀಡಲಾದ ಕೆಲವು ಪರೋಕ್ಷ ಸಹಾಯಧನಗಳ ವಿವರಗಳನ್ನು **ಅನುಬಂಧ 1.9**ರಲ್ಲಿ ವಿವರಿಸಲಾಗಿದೆ.

2013–14ರಲ್ಲಿ ₹1,690 ಕೋಟಿಗಳಷ್ಟಿದ್ದ ಈ ಸಹಾಯಧನವು 2017–18ರಲ್ಲಿ ₹3,318 ಕೋಟಿಗಳಿಗೆ ಏರಿತ್ತು. ಇದು ಪ್ರಮುಖವಾಗಿ ಬೀಜ ಸರಬರಾಜಿಗೆ ನೀಡಿದ ಆರ್ಥಿಕ ಸಹಾಯ, ನೇಕಾರರ ಪ್ಯಾಕೇಜ್, ಆಶ್ರಯ ಯೋಜನೆ, ಕಿರು/ಹನಿ ನೀರಾವರಿ, ಕನಿಷ್ಠದರ ಯೋಜನೆ, ದುರ್ಬಲ ವರ್ಗದವರಿಗೆ ವಸತಿ, ಭೂಹೀನರಿಗೆ ಮನೆ ನಿವೇಶನಗಳು ಮುಂತಾದವುಗಳಿಗೆ ನೀಡಿದ ಆರ್ಥಿಕ ಸಹಾಯವನ್ನು ಒಳಗೊಂಡಿದೆ.

2017–18ರಲ್ಲಿ ಇಂದಿರಾ ಆವಾಸ್ ಯೋಜನೆಯಡಿಯ ಸಹಾಯಧನವು (₹1,219 ಕೋಟಿ) ಲೆಕ್ಕಶೀರ್ಷಿಕೆ 2216–80–103–0–21 (ಇಂದಿರಾ ಆವಾಸ್ ಯೋಜನೆ) ಮತ್ತು 2216–80–800–0–04 (ಇಂದಿರಾ ಆವಾಸ್ ಯೋಜನೆ – ರಾಜ್ಯಪಾಲು) ಬದಲಾಗಿ ಲೆಕ್ಕಶೀರ್ಷಿಕೆ 2216–80–198–6–02–300 ರಲ್ಲಿ ಹಣಕಾಸಿನ ನೆರವು/ಗ್ರಾಮ ಪಂಚಾಯತ್‌ಗಳಿಗೆ ಬ್ಲಾಕ್ ಅನುದಾನವೆಂದು ಲೆಕ್ಕ ಮಾಡಲಾಗಿದೆ.

### ಸ್ಥಳೀಯ ಸಂಸ್ಥೆಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಹಣಕಾಸು ಸಹಾಯ

2017–18ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಇನ್ನಿತರ ಸಂಸ್ಥೆಗಳಿಗೆ ಅನುದಾನಗಳ ರೂಪದಲ್ಲಿ ಒದಗಿಸಲಾದ ಸಹಾಯದ ಪರಿಮಾಣವನ್ನು, ಹಿಂದಿನ ವರ್ಷಗಳಿಗೆ ಹೋಲಿಸಿದಂತೆ **ಕೋಷ್ಟಕ 1.16**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.16: ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಇನ್ನಿತರ ಸಂಸ್ಥೆಗಳಿಗೆ ಹಣಕಾಸಿನ ಸಹಾಯ**

*(ಕೋಟಿ ರೂಪಾಯಿಗಳಲ್ಲಿ)*

| | ಸಂಸ್ಥೆಗಳು | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|
| ಎ | ಪಂಚಾಯತ್ ರಾಜ್ ಸಂಸ್ಥೆಗಳು | 20,512.71 | 24,991.27 | 26,694.94 | 29,697.94 | 31,054.63 |
| ಬಿ | ನಗರ ಸ್ಥಳೀಯ ಸಂಸ್ಥೆಗಳು* | 5,020.43* | 6,011.45* | 6,076.05 | 5,685.58 | 6,489.76 |
| ಸಿ | ಶೈಕ್ಷಣಿಕ ಸಂಸ್ಥೆಗಳು (ವಿಶ್ವವಿದ್ಯಾನಿಲಯಗಳೂ ಸೇರಿದಂತೆ) | 961.62 | 1,145.04 | 1,406.50 | 1,449.75 | 1,293.70 |
| ಡಿ | ಸಹಕಾರಿ ಸಂಘಗಳು ಹಾಗೂ ಸಹಕಾರಿ ಸಂಸ್ಥೆಗಳು | 849.85 | 818.09 | 1,023.13 | 1,009.47 | 1,191.32 |
| ಇ | ಇತರ ಸಂಸ್ಥೆಗಳು ಹಾಗೂ ಮಂಡಳಿಗಳು (ಶಾಸನಬದ್ಧ ಮಂಡಳಿಗಳೂ ಸೇರಿ) | 5,267.90 | 5,782.63 | 4,820.87 | 6,656.29 | 7,067.08 |
| | ರಾಜಸ್ವ ವೆಚ್ಚದಲ್ಲಿ ಶೇಕಡಾವಾರು ಸಹಾಯ | 37 | 37 | 34 | 34 | 33 |
| | ಒಟ್ಟು | **32,612.51** | **38,748.48** | **40,021.49** | **44,499.03** | **47,096.49** |

*ಆಕರ: ಹಣಕಾಸು ಲೆಕ್ಕಗಳು.*

** ನಗರ ಸ್ಥಳೀಯ ಸಂಸ್ಥೆಗಳಡಿ ತೋರಿಸಿರುವ ಅಂಕಿಗಳು ಹಿಂದಿನ ವರದಿಗಳಲ್ಲಿ ತೋರಿಸಿರುವ ಅಂಕಿಗಳಿಗಿಂತ ಒಳಶೀರ್ಷಿಕೆ '200–ಇತರೆ ಪರಿಹಾರಗಳು ಮತ್ತು ಹಂಚಿಕೆಗಳು' ಇದರಡಿ ವರ್ಗಾವಣೆಗಳನ್ನು ಸೇರಿಸಿದ್ದರಿಂದ ಭಿನ್ನವಾಗಿದೆ.*

ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸಿನ ಮುಂದಿನ ಹಂತವಾಗಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅನುದಾನವನ್ನು 196, 197 ಮತ್ತು 198 ಎಂಬ ಮೂರು ಸುಸ್ಪಷ್ಟ ಕಾರ್ಯಕ್ರಮ ಒಳಶೀರ್ಷಿಕೆಗಳಡಿ ಬಿಡುಗಡೆ ಮಾಡಲಾಗುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮಾಡಲಾದ ಸಹಾಯವು 2013–14ರಲ್ಲಿದ್ದ ₹20,513 ಕೋಟಿಯಿಂದ 2017–18ರಲ್ಲಿ ₹31,055 ಕೋಟಿಗೆ ಏರಿಕೆಯಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ಸಹಾಯವು 2013–14ರಲ್ಲಿನ ₹5,020 ಕೋಟಿಯಿಂದ 2017–18ರಲ್ಲಿ ₹6,490 ಕೋಟಿಗೆ ಏರಿಕೆಯಾಗಿದೆ.

2017–18ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಾಡಲಾದ ಒಟ್ಟು ಹಂಚಿಕೆಯ ಮೊತ್ತ ₹31,055 ಕೋಟಿಯ ಪೈಕಿ, ₹12,412 ಕೋಟಿ (ಶೇಕಡ 40) ಮೊತ್ತವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾದ ರಾಜ್ಯಸರ್ಕಾರದ ಕರ್ತವ್ಯ ಕಾರ್ಯಗಳಾದ ಶಿಕ್ಷಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಸತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇತ್ಯಾದಿ ಇಲಾಖೆಗಳ ಸಂಬಳಕ್ಕೆ ಸಂಬಂಧಿಸಿದೆ. ಇದು ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯಸರ್ಕಾರಕ್ಕೆ ಬಿಡಗಡೆ ಮಾಡಿದ (₹1,580.18 ಕೋಟಿ) ಅನುದಾನವನ್ನು ಒಳಗೊಂಡಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನಗಳು ₹804 ಕೋಟಿಗಳಷ್ಟು ಏರಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಸಹಾಯವು ಬಂಡವಾಳ ಆಸ್ತಿಗಳ ನಿರ್ಮಾಣಕ್ಕಾದ ₹1,971 ಕೋಟಿ ಮೊತ್ತವನ್ನು ಒಳಗೊಂಡಿದೆ. ಇದರಲ್ಲಿ ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯಕ್ಕೆ ಬಿಡುಗಡೆ ಮಾಡಿದ (₹899.25 ಕೋಟಿ) ಮೊತ್ತವು ಸೇರಿದೆ.

ಇತರ ಸಂಸ್ಥೆಗಳಿಗೆ ಮಾಡಲಾದ ಸಹಾಯವು (₹7,067 ಕೋಟಿ) ಇನ್ನಿತರವುಗಳ ಜೊತೆಗೆ ಶಾಸನಬದ್ಧ ಸಂಸ್ಥೆಗಳು ಮತ್ತು ಅಭಿವೃದ್ಧಿ ಪ್ರಾಧಿಕಾರಗಳಿಗೆ (₹2,340 ಕೋಟಿ), ಸರ್ಕಾರೇತರ ಸಂಸ್ಥೆಗಳಿಗೆ (₹1,762 ಕೋಟಿ), ಸಾರ್ವಜನಿಕ ವಲಯ ಉದ್ದಿಮೆಗಳಿಗೆ (₹75 ಕೋಟಿ) ಮತ್ತು ಇತರರಿಗೆ (₹2,890 ಕೋಟಿ) ನೀಡಿದ ಸಹಾಯವನ್ನು ಒಳಗೊಂಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಹಕಾರಿ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನಗಳು ₹182 ಕೋಟಿಗಳಷ್ಟು ಮತ್ತು ಇತರ ಸಂಸ್ಥೆಗಳಿಗೆ ₹411 ಕೋಟಿಗಳಷ್ಟು ಏರಿದೆ. 2017–18ರಲ್ಲಿ ಶಿಕ್ಷಣ ಸಂಸ್ಥೆಗಳಿಗೆ ನೀಡಿದ ಆರ್ಥಿಕ ಸಹಾಯವು ₹156 ಕೋಟಿಗಳಷ್ಟು ಇಳಿಕೆಯಾಯಿತು.

### 1.6.4 ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರವೇಶ ತೆರಿಗೆಯ ಹಂಚಿಕೆ

ರಾಜ್ಯ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು ಬಿಡುಗಡೆಯಾಗುತ್ತವೆ. ಮೂರನೇ ರಾಜ್ಯ ಹಣಕಾಸು ಆಯೋಗದ ಶಿಫಾರಸಿನ ಆಧಾರದ ಮೇಲೆ

(ಡಿಸೆಂಬರ್ 2008) ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನದ ಬಿಡುಗಡೆಗೆ 2011ರಲ್ಲಿ ಆದೇಶವನ್ನು ಜಾರಿ ಮಾಡಲಾಯಿತು. ನಾಲ್ಕನೇ ಹಣಕಾಸು ಆಯೋಗಕ್ಕೆ ತನ್ನ ವರದಿಯನ್ನು ಸಲ್ಲಿಸಲು ಸಮಯದ ವಿಸ್ತರಣೆ ಆಗಿದ್ದರಿಂದ, ಮೂರನೇ ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳನ್ನು 2017–18ರವರೆಗೂ ವಿಸ್ತರಿಸಲಾಯಿತು. 31 ಅಕ್ಟೋಬರ್ 2011ರ ಸರ್ಕಾರಿ ಆದೇಶದ ನಿರ್ವಹಣಾ ಭಾಗದನುಸಾರ 2011–12ರಿಂದ 2015–16ರವರೆಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು (ಪ್ರವೇಶ ತೆರಿಗೆಯ ಹಂಚಿಕೆಯೂ ಸೇರಿದಂತೆ) **ಕೋಷ್ಟಕ 1.17**ರಲ್ಲಿ ತೋರಿಸಿದಂತೆ ಮಾಡಲಾಯಿತು.

**ಕೋಷ್ಟಕ–1.17: ಪ್ರವೇಶ ತೆರಿಗೆಯಡಿಯ ಹಂಚಿಕೆ ಮತ್ತಿತರ ಹಂಚಿಕೆ**

| ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಪ್ರವೇಶ ತೆರಿಗೆಯ ಹಂಚಿಕೆ (ಕೋಟಿ ರೂಪಾಯಿಗಳಲ್ಲಿ) | 1,510 (3.3%) | ವಾಸ್ತವ ಸಂಗ್ರಹಣೆಯ ಅನುಸಾರ | | | |
| ಇತರ ಹಂಚಿಕೆ (ಎನ್‌ಎಲ್‌ಎನ್‌ಓಆರ್‌ಆರ್[10]ದ ಶೇಕಡಾವಾರು) | 5.2% | 5.7% | 6.2% | 6.7% | 6.7% |

ಪ್ರವೇಶ ತೆರಿಗೆ ಹಂಚಿಕೆಯ ಬಗ್ಗೆ 2011–12ರಿಂದ 2016–17ರ ಅವಧಿಯಲ್ಲಿ ತೆರಿಗೆ ರಾಜಸ್ವದಡಿ ಸಂಗ್ರಹಿಸಲಾದ ಪ್ರವೇಶ ತೆರಿಗೆಯು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಪೂರ್ಣವಾಗಿ ಹಂಚಿಕೆಯಾಗಿಲ್ಲವೆಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಅದನ್ನು **ಕೋಷ್ಟಕ 1.18**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 1.18: ಪ್ರವೇಶ ತೆರಿಗೆಯ ಸಂಗ್ರಹಣೆ ಮತ್ತು ಹಂಚಿಕೆ**

*(₹ ಕೋಟಿಗಳಲ್ಲಿ)*

| ವರ್ಷ | 2011–12 | 2012–13 | 2013–14 | 2014–15 | 2015–16 | 2016–17 | 2017–18 |
|---|---|---|---|---|---|---|---|
| ಪ್ರವೇಶ ತೆರಿಗೆಯ ಸಂಗ್ರಹಣೆ (0042–106) | 1,690 | 2,181 | 2,626 | 3,038 | 3,125 | 3,306 | 1,279 |
| ಪ್ರವೇಶ ತೆರಿಗೆಯ ಹಂಚಿಕೆ (3604 – 191,192,193) | 1,538 | 1,830 | 1,972 | 2,175 | 2,490 | 2,566 | 2,987 |

ಆದಾಗ್ಯೂ, 2017–18ರ ಪ್ರವೇಶ ತೆರಿಗೆಯ ಸಂಗ್ರಹಣೆಗೆ ಹೋಲಿಸಿದಾಗ ಪ್ರವೇಶ ತೆರಿಗೆಯ ಹಂಚಿಕೆಯು ಅಧಿಕವಾಗಿತ್ತು. ಅದಲ್ಲದೆ, ಅನುದಾನಗಳಿಗಾಗಿ ಬೇಡಿಕೆಯಡಿ ಧನವಿನಿಯೋಗ ಅಧಿನಿಯಮಗಳ ಮೂಲಕ ವಿಧಾನಮಂಡಲದ ಅನುಮೋದನೆ ಪಡೆದು ವೆಚ್ಚದ ಹಾದಿಯ ಮೂಲಕ ಹಂಚಿಕೆಯನ್ನು ಮಾಡಲಾಗಿದೆ. ಆದರೆ, ಕೇಂದ್ರದಲ್ಲಿ ಹಣಕಾಸು ಆಯೋಗದ ಶಿಫಾರಸಿನ ಮೇಲೆ ಕೇಂದ್ರ ತೆರಿಗೆ ಮತ್ತು ಸುಂಕಗಳ ನಿವ್ವಳ ಹುಟ್ಟುವಳಿಯನ್ನು ಸಂಸತ್ತಿನ ಅನುಮೋದನೆಗೆ ಒಳಪಡಿಸದೆ ತೆರಿಗೆ ರಾಜಸ್ವದ ಲೆಕ್ಕಶೀರ್ಷಿಕೆಯ ಮೂಲಕವೇ ರಾಜ್ಯಗಳಿಗೆ ವರ್ಗಾವಣೆ ಮಾಡಲಾಗುತ್ತದೆ.

### 1.6.5 ನಾಲ್ಕನೆಯ ಹಣಕಾಸು ಆಯೋಗ

21ನೇ ಡಿಸೆಂಬರ್ 2015ರ ಅಧಿಸೂಚನೆಯಂತೆ ಭಾರತ ಸಂವಿಧಾನದ ಅನುಚ್ಛೇದ 243 (ಐ) ಮತ್ತು (ವೈ) ಅಡಿ ಕರ್ನಾಟಕದ ರಾಜ್ಯಪಾಲರು ನಾಲ್ಕನೆಯ ರಾಜ್ಯ ಹಣಕಾಸು ಆಯೋಗವನ್ನು ರಚಿಸಿದರು.

ಹಣಕಾಸು ಆಯೋಗಕ್ಕೆ ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು, ನಗರಪೌರಸಭೆಗಳು, ಪಟ್ಟಣ ಪೌರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳ ಹಣಕಾಸಿನ ಸ್ಥಿತಿಗತಿಗಳನ್ನು ವಿಮರ್ಶಿಸಿ ಈ ಕೆಳಗಿನವುಗಳ ಬಗ್ಗೆ ಶಿಫಾರಸು ಮಾಡಲು ಹೇಳಲಾಗಿತ್ತು.

(ಅ) ರಾಜ್ಯ ಸರ್ಕಾರವು ವಿಧಿಸುವ ತೆರಿಗೆಗಳು, ಸುಂಕಗಳು, ಜಕಾತಿ ಮತ್ತು ಶಿಲ್ಕುಗಳಿಂದ ಪ್ರಾಪ್ತವಾಗುವ ನಿವ್ವಳ ರಾಜಸ್ವ ಸ್ವೀಕೃತಿಯನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ

[10] 2017–18ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾಗಬೇಕಿದ್ದ ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ (ಎನ್‌ಎಲ್‌ಎನ್‌ಓಆರ್‌ಆರ್) (₹93,606.91 ಕೋಟಿಗಳು) ಶೇಕಡಾ 10ಕ್ಕೆ (₹9,360.69 ಕೋಟಿಗಳು) ಪ್ರತಿಯಾಗಿ ರಾಜ್ಯ ಸರ್ಕಾರವು ಶೇಕಡಾ 6.93 ರಷ್ಟು (₹6,489.76 ಕೋಟಗಳು) ಮಾಡಿದ್ದು ₹2,870 ಕೋಟಿಗಳ ಕಡಿಮೆ ಬಿಡುಗಡೆಯಲ್ಲಿ ಪರಿಣಮಿಸಿತು.

ನಡುವೆ ವಿತರಿಸಲು ಹಾಗೂ ಅವುಗಳ ನಡುವೆ ಸಮರ್ಪಕ ಹಂಚುವಿಕೆಯನ್ನು ನಿರ್ಧರಿಸುವ ನಿಯಮಗಳನ್ನು ರೂಪಿಸುವುದು.

(ಆ) ರಾಜ್ಯದ ಸಂಚಿತ ನಿಧಿಯಿಂದ ಸ್ಥಳೀಯ ಸಂಸ್ಥೆಗಳಿಗೆ ಸಹಾಯಾನುದಾನ

(ಇ) ಸ್ಥಳೀಯ ಸಂಸ್ಥೆಗಳ ಹಣಕಾಸು ಸ್ಥಿತಿಗತಿಯನ್ನು ಉತ್ತಮಪಡಿಸಲು ಅಗತ್ಯವಾದ ಸುಧಾರಣಾ ಕ್ರಮಗಳು

(ಈ) ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗುವ ಅಥವಾ ಅವುಗಳಿಂದ ವಿನಿಯೋಗಿಸಬಹುದಾದ ತೆರಿಗೆಗಳು, ಸುಂಕಗಳು, ಜಕಾತಿ ಮತ್ತು ಶುಲ್ಕಗಳ ನಿರ್ಧರಣೆ

(ಉ) ಕಾಲಕಾಲಕ್ಕೆ ರಾಜ್ಯ ಸರ್ಕಾರವು ಸ್ಥಳೀಯ ಸಂಸ್ಥೆಗಳಿಗೆ ಒದಗಿಸುವ ಸಾಲ ಮತ್ತು ಮುಂಗಡಗಳ ಮರುಪಾವತಿ ಕುರಿತಂತೆ ಕೂಲಂಕುಶವಾಗಿ ವಿಶ್ಲೇಷಿಸುವುದು.

(ಊ) ಸ್ಥಳೀಯ ಸಂಸ್ಥೆಗಳು ತಮ್ಮ ವೆಚ್ಚವನ್ನು ಭರಿಸುವುದಕ್ಕೆ ಅವುಗಳಿಗೆ ಲಭ್ಯವಿರುವ ಸಂಪನ್ಮೂಲವನ್ನು ಯಾವ ರೀತಿಯಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಉತ್ತಮವಾಗಿ ಬಳಸಿಕೊಳ್ಳಬಹುದು ಎಂಬುದನ್ನು ಪರಿಶೀಲಿಸುವುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಕ್ರಮಗಳನ್ನು ಸಲಹೆ ಮಾಡುವುದು.

ಆಯೋಗವು ತನ್ನ ವರದಿಯನ್ನು ಆರು ತಿಂಗಳೊಳಗೆ ಸಲ್ಲಿಸಬೇಕಾಗಿತ್ತು. ಆದರೆ ಕರ್ನಾಟಕ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಎಫ್‌ಡಿ–02 ಜಿಡಿಪಿಎ 2015 ದಿನಾಂಕ 01.09.2016ರ ಮೂಲಕ ವರದಿಯನ್ನು ಸಲ್ಲಿಸಲು ನಾಲ್ಕನೆಯ ಹಣಕಾಸು ಆಯೋಗದ ಅವಧಿಯನ್ನು 30.09.2017ರವರೆಗೆ ವಿಸ್ತರಿಸಿರುವುದರ ಪರಿಣಾಮವಾಗಿ ಮೂರನೆಯ ಹಣಕಾಸು ಆಯೋಗದ ಶಿಫಾರಸುಗಳ ಅನ್ವಯದ ಅವಧಿಯನ್ನು 2017–18ರ ವರೆಗೆ ವಿಸ್ತರಣೆಗೊಳಿಸಲಾಗಿದೆ ಎಂದು ತಿಳಿಸಿದೆ. ನಿಗದಿಪಡಿಸಿದ ಸಮಯದಲ್ಲಿ ಆಯೋಗಕ್ಕೆ ತನ್ನ ಕಾರ್ಯವನ್ನು ಮುಗಿಸುವುದು ಸಾಧ್ಯವಾಗದೇ ಇದ್ದುದರಿಂದ ರಾಜ್ಯ ಸರ್ಕಾರವು ಆಯೋಗದ ಅವಧಿಯನ್ನು 31 ಮೇ 2018ರವರೆಗೆ ವಿಸ್ತರಿಸಿತು. ಆದ್ದರಿಂದ ಆಯೋಗದ ಶಿಫಾರಸುಗಳು 2018–19ರಿಂದ 2022–23ರ ಅವಧಿಗೆ ಅನ್ವಯವಾಗುತ್ತದೆ. ಆಯೋಗವು ತನ್ನ ಶಿಫಾರಸುಗಳನ್ನು ಮೇ 2018ರಲ್ಲಿ ಸಲ್ಲಿಸಿತು. ಕೆಲವು ಶಿಫಾರಸ್ಸುಗಳನ್ನು ಕೆಳಗೆ ನೀಡಲಾಗಿದೆ:

(i) ಉದ್ದರಿಯೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯಲ್ಲಿ ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ಪಾಲು 58:42 ಇದ್ದದ್ದು 52:48ರಂತೆ ಬದಲಾಗಿದೆ;

(ii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಗರ ಸ್ಥಳೀಯಸಂಸ್ಥೆಗಳ ಭಾಗವಾಗಿ ತನ್ನ ಪಾಲನ್ನು ಪಡೆಯುವುದರ ಜೊತೆಯಲ್ಲಿ ಉದ್ದರಿಯೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯಲ್ಲಿ ಶೇಕಡ ಒಂದರಷ್ಟು ವರ್ಗಾವಣೆಯನ್ನು ಅಧಿಕವಾಗಿ ಪಡೆಯುತ್ತದೆ. ಉಳಿದ ಶೇಕಡ 47 ಸ್ಥಳೀಯ ಸಂಸ್ಥೆಗಳ ಭಾಗವಾಗಿರುತ್ತದೆ (ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು). ಇದರ ಫಲವಾಗಿ ಉದ್ದರಿಯೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾಲು ಹಾಲಿ ಶೇಕಡಾ 32ರಿಂದ ಶೇಕಡಾ 35ಕ್ಕೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪಾಲು ಶೇಕಡ 10ರಿಂದ ಶೇಕಡಾ 12ಕ್ಕೆ ಏರಿಕೆಯಾಗುತ್ತದೆ;

(iii) ಪಂಚಾಯತ್‌ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರತಿ ಹಂತಕ್ಕೆ/ವರ್ಗಕ್ಕೆ ನೀಡುವ ಕಾರ್ಯಕ್ಷಮತೆ ಅನುದಾನವು ಎರಡು ಸೂಚಿಗಳ ಆಧಾರದ ಮೇಲೆ ಶೇಕಡಾ 95ರಷ್ಟು ತೆರಿಗೆ ರಾಜಸ್ವ/ಆಸ್ತಿ ತೆರಿಗೆಯ ಸಂಗ್ರಹ ಮತ್ತು ಹಿಂದಿನ ವರ್ಷದ ಲೆಕ್ಕಪರಿಶೋಧನೆ ವರದಿಯ ಸಲ್ಲಿಕೆ– ಇವುಗಳ ಮೇಲೆ ಶಿಫಾರಸ್ಸು ಮಾಡಲಾಗುತ್ತದೆ;

(iv) ಹೊಸದಾಗಿ ರಚನೆಯಾದ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಒಂದು ಬಾರಿ ಕ್ರಮವಾಗಿ ವ್ಯವಸ್ಥಾಪನಾ ಅನುದಾನವನ್ನು ಶಿಫಾರಸು ಮಾಡಲಾಗಿದೆ; ಮತ್ತು

(v) ಸ್ಥಳೀಯ ಸಂಸ್ಥೆಗಳಿಗೆ ವಹಿಸಿಕೊಟ್ಟ ಅನುದಾನ – ತಾಲ್ಲೂಕು ಪಂಚಾಯತಿಗಳು/ ಮುನಿಸಿಪಾಲಿಟಿಗಳು ಸ್ಟ್ಯಾಂಪ್ ಡ್ಯೂಟಿ ಮೇಲೆ ಶೇಕಡಾ ಮೂರು ಮೇಲುತೆರಿಗೆ

ವಿಧಿಸಬಹುದು. ಹೀಗೆ ವಿಧಿಸಿದ ಮೊತ್ತವನ್ನು ತಾಲ್ಲೂಕು ಪಂಚಾಯತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಕಾಯಿದೆಗಳ ಪ್ರಕಾರ ಹಂಚಬೇಕು.

ಸರ್ಕಾರವು ತನ್ನ ಆದೇಶ ದಿನಾಂಕ 7 ಡಿಸೆಂಬರ್ 2018ರಲ್ಲಿ ಈ ಕೆಳಕಂಡ ಶಿಫಾರಸುಗಳನ್ನು ಅಂಗೀಕರಿಸಿತು:

(ಅ) ಶಿಫಾರಸುಗಳನ್ನು ಆರ್ಥಿಕ ವರ್ಷ 2018–19ರಿಂದ ಐದು ವರ್ಷ 2022–23ರವರೆಗೆ ಅನುಷ್ಠಾನಗೊಳಿಸಲಾಗುವುದು;

(ಆ) ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯನ್ನು ಹಂತಹಂತವಾಗಿ ಹೆಚ್ಚಿಸುತ್ತಾ ಉದ್ದರಿಯೇತರ ನಿವ್ವಳ ರಾಜಸ್ವ ಸ್ವೀಕೃತಿಗಳ ಭಾಗವನ್ನು ಶೇಕಡ 42ರಿಂದ ಶೇಕಡಾ 48ಕ್ಕೆ ಹೆಚ್ಚಿಸುವುದು. ಇದು ಸಂಪನ್ಮೂಲಗಳ ಲಭ್ಯತೆಯ ಮೇಲೆ ಅವಲಂಬಿತವಾಗಿರುತ್ತದೆ;

(ಇ) ಕೇಂದ್ರ ಹಣಕಾಸು ಆಯೋಗದ ಅನುದಾನಗಳನ್ನು ರಾಜ್ಯ ಹಂಚಿಕೆಯ ಭಾಗವೆಂದು ಪರಿಗಣಿಸಲಾಗುವುದು;

(ಈ) ಉದ್ದರಿಯೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳಿಂದ ಜಿಎಸ್‌ಟಿ ಪರಿಹಾರವನ್ನು ಇದು ತಾತ್ಕಾಲಿಕ ಕ್ರಮವಾಗಿರುವುದರಿಂದ ಹೊರಗಿಡಲಾಗುವುದು;

(ಉ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರ ಮೆಟ್ರೋ ರೈಲು ನಿಗಮ ನಿಯಮಿತದಂತಹ ರಾಜ್ಯದ ಅಧೀನ ಸಂಸ್ಥೆಗಳಿಗೆ ಮಾಡುವ ಆಯವ್ಯಯ ಹಂಚಿಕೆಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಮಾಡುವ ಹಂಚಿಕೆಯ ಭಾಗವೆಂದು ಪರಿಗಣಿಸಲಾಗುತ್ತದೆ; ಮತ್ತು

(ಊ) ಒಟ್ಟು ಹಂಚಿಕೆಯಲ್ಲಿ ಶೇಕಡಾ 12ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಯೋಜಿತ ಹಂಚಿಕೆಯಾಗಿ ವರ್ಗಾವಣೆ ಮಾಡಬೇಕಿದ್ದು ಅದನ್ನು 2018–19ರಿಂದ 2022–23ರವರೆಗೆ ಹಂತಹಂತವಾಗಿ ಸಾಧಿಸಲಾಗುವುದು.

## 1.7 ವೆಚ್ಚದ ಗುಣಮಟ್ಟ

ರಾಜ್ಯದಲ್ಲಿನ ಉತ್ತಮ ಸಾಮಾಜಿಕ ಮತ್ತು ಭೌತಿಕ ಮೂಲಭೂತ ಸೌಕರ್ಯಗಳ ಲಭ್ಯತೆಯು ಸಾಮಾನ್ಯವಾಗಿ ಅದರ ವೆಚ್ಚದ ಗುಣಮಟ್ಟವನ್ನು ಪ್ರತಿಬಿಂಬಿಸುತ್ತದೆ. ವೆಚ್ಚದ ಗುಣಮಟ್ಟದಲ್ಲಿನ ಸುಧಾರಣೆಯು ಮೂಲತಃ ವೆಚ್ಚದ ಪರ್ಯಾಪ್ತತೆ (ಅಂದರೆ ಸಾರ್ವಜನಿಕ ಸೇವೆಗಳನ್ನು ಒದಗಿಸಲು ಸಾಕಾಗುವಷ್ಟು ಅನುವುಗಳು) ವೆಚ್ಚದ ದಕ್ಷತೆ ಹಾಗೂ ವೆಚ್ಚದ ಪರಿಣಾಮಕಾರಿತ್ವ ಎಂಬ ಮೂರು ಅಂಶಗಳನ್ನು ಒಳಗೊಂಡಿರುತ್ತದೆ.

### 1.7.1 ಸಾರ್ವಜನಿಕ ವೆಚ್ಚದ ಪರ್ಯಾಪ್ತತೆ

ರಾಜ್ಯ ಸರ್ಕಾರಕ್ಕೆ ವಹಿಸಲಾದ ಸಾಮಾಜಿಕ ವಲಯ ಹಾಗೂ ಆರ್ಥಿಕ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ವೆಚ್ಚ ಜವಾಬ್ದಾರಿಗಳು ಬಹುಪಾಲು ರಾಜ್ಯದ ವಿಷಯಗಳಾಗಿವೆ. ಮಾನವ ಅಭಿವೃದ್ಧಿಮಟ್ಟಗಳನ್ನು ಹೆಚ್ಚಿಸಲು ಪ್ರಮುಖ ಸಾಮಾಜಿಕ ಸೇವೆಗಳಾದ ಶಿಕ್ಷಣ ಮತ್ತು ಆರೋಗ್ಯ ಮುಂತಾದವುಗಳ ಮೇಲಿನ ವೆಚ್ಚವನ್ನು ಉನ್ನತ ಮಟ್ಟಕ್ಕೆ ತರಬೇಕಾಗುತ್ತದೆ. ನಿರ್ದಿಷ್ಟ ವೆಚ್ಚ ಶೀರ್ಷಿಕೆಗೆ ನೀಡಿದ ಆದ್ಯತೆಯು ಸಾಮಾನ್ಯ ವರ್ಗದ ರಾಜ್ಯಗಳ ಆ ವರ್ಷದ ಸರಾಸರಿಗಿಂತಲೂ ಕಡಿಮೆಯಿದ್ದರೆ, ಕಡಿಮೆ ವಿತ್ತ ಆದ್ಯತೆಯನ್ನು (ಒಟ್ಟು ವೆಚ್ಚಕ್ಕೆ–ವೆಚ್ಚವರ್ಗದ ಅನುಪಾತ) ಆ ವಿಭಾಗಕ್ಕೆ ಅನ್ವಯಿಸಲಾಗುತ್ತದೆ. **ಕೋಷ್ಟಕ 1.19** ರಾಜ್ಯದ ವೆಚ್ಚ ವರ್ಗಗಳಿಗೆ ನೀಡಿದ ವಿತ್ತೀಯ ಆದ್ಯತೆಯನ್ನು ಅಭಿವೃದ್ಧಿ ವೆಚ್ಚ, ಸಾಮಾಜಿಕ ವೆಚ್ಚ ಮತ್ತು ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದಂತೆ, ಸಾಮಾನ್ಯ ವರ್ಗದ ರಾಜ್ಯಗಳಿಗೆ ಹೋಲಿಸಿದಂತೆ 2013–14 ಹಾಗೂ ಪ್ರಸಕ್ತ ವರ್ಷ 2017–18ರ ವಿವರಗಳನ್ನು ನೀಡುತ್ತದೆ.

**ಕೋಷ್ಟಕ 1.19: 2013–14 ಮತ್ತು 2017–18ರಲ್ಲಿ ರಾಜ್ಯದ ವಿತ್ತೀಯ ಆದ್ಯತೆ**

| ರಾಜ್ಯದ ವಿತ್ತೀಯ ಆದ್ಯತೆ | ಒವೆ/ ರಾಒಆಉ | ಅವೆ#/ ಒವೆ | ಸಾವವೆ/ ಒವೆ | ಬಂವೆ/ ಒವೆ | ಶಿಕ್ಷಣ / ಒವೆ | ಆರೋಗ್ಯ/ ಒವೆ |
|---|---|---|---|---|---|---|
| 2013–14ರ ಸಾಮಾನ್ಯ ವರ್ಗ ರಾಜ್ಯಗಳ* ಸರಾಸರಿ (ಅನುಪಾತ) | 14.70 | 66.50 | 37.60 | 13.60 | 17.20 | 4.50 |
| 2013–14ರ ಕರ್ನಾಟಕ ರಾಜ್ಯದ (ಅನುಪಾತ) | 13.08 | 71.45 | 33.79 | 16.51 | 15.50 | 4.24 |
| 2017–18ರ ಸಾಮಾನ್ಯವರ್ಗ ರಾಜ್ಯಗಳ* ಸರಾಸರಿ (ಅನುಪಾತ ) | 16.10 | 67.90 | 36.70 | 14.40 | 15.50 | 4.90 |
| 2017–18ರ ಕರ್ನಾಟಕ ರಾಜ್ಯದ (ಅನುಪಾತ) | 13.60 | 76.46 | 38.43 | 20.06 | 12.60 | 4.55 |

*ಒವೆ: ಒಟ್ಟು ವೆಚ್ಚ, ಅವೆ: ಅಭಿವೃದ್ಧಿ ವೆಚ್ಚ, ಸಾವವೆ: ಸಾಮಾಜಿಕ ವಲಯ ವೆಚ್ಚ, ಬಂವೆ: ಬಂಡವಾಳ ವೆಚ್ಚ.*

*# ಅಭಿವೃದ್ಧಿ ವೆಚ್ಚವು ಅಭಿವೃದ್ಧಿ ರಾಜಸ್ವ ವೆಚ್ಚವನ್ನು, ಅಭಿವೃದ್ಧಿ ಬಂಡವಾಳ ವೆಚ್ಚವನ್ನು ಹಾಗೂ ವಿತರಿಸಲಾದ ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಿದೆ.*

*ಆಕರ: ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮಾಹಿತಿಯನ್ನು ಭಾರತ ಸರ್ಕಾರವು ತಿಳಿಸಿದ ಹಾಗೂ ರಾಜ್ಯ ಸರ್ಕಾರವು ತನ್ನ ಆಯವ್ಯಯ ದಾಖಲೆಗಳಲ್ಲಿ ಅಳವಡಿಸಿಕೊಂಡ ಅಂಕಿಗಳಾಗಿವೆ.*

**ಅನುಬಂಧ 1.1.ರ ಟಿಪ್ಪಣಿಯನ್ನು ಗಮನಿಸಿ.*

ತುಲನಾತ್ಮಕ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ತೋರಿಸಿಕೊಟ್ಟಿತು:

- ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ಒಟ್ಟಾರೆ ವೆಚ್ಚಕ್ಕೆ ರಾಜ್ಯದ ವೆಚ್ಚದ ಅನುಪಾತವು 2013–14ಕ್ಕೆ ಹೋಲಿಸಿದರೆ 2017–18ರಲ್ಲಿ ಅಲ್ಪವಾಗಿ ಏರಿಕೆಯಾಗಿದೆ. ಆದರೆ, ಅನುಪಾತವು ಸಾಮಾನ್ಯ ವರ್ಗ ರಾಜ್ಯಗಳ ಅನುಪಾತಕ್ಕಿಂತ ಕಡಿಮೆಯಿದೆ;

- ಅಭಿವೃದ್ಧಿ ವೆಚ್ಚವು ರಾಜ್ಯದ ಒಟ್ಟಾರೆ ವೆಚ್ಚಕ್ಕೆ ಅನುಪಾತವಾಗಿ ಸಾಮಾನ್ಯ ವರ್ಗದ ರಾಜ್ಯಗಳ ಸರಾಸರಿಗಿಂತ ಅಧಿಕವಾಗಿದ್ದಿತು. ಅಭಿವೃದ್ಧಿ ವೆಚ್ಚವು ಆರ್ಥಿಕ ಮತ್ತು ಸಾಮಾಜಿಕ ಸೇವಾ ವಲಯಗಳೆರಡರ ವೆಚ್ಚವನ್ನು ಒಳಗೊಂಡಿದೆ. ಸಾಮಾಜಿಕ ವಲಯ ವೆಚ್ಚವು ರಾಜ್ಯದಲ್ಲಿನ ಒಟ್ಟಾರೆ ವೆಚ್ಚಕ್ಕೆ ಒಂದು ಅನುಪಾತವಾಗಿ 2013–14ರಲ್ಲಿ ಕಡಿಮೆಯಿದ್ದು 2017–18ರಲ್ಲಿ ಸಾಮಾನ್ಯ ವರ್ಗದ ರಾಜ್ಯಗಳಿಗಿಂತ ಅಧಿಕವಾಗಿತ್ತು.

- **ಕೋಷ್ಟಕ 1.19** ಅನ್ನು ಗಮನಿಸಿದಂತೆ, ಶಿಕ್ಷಣ ವಲಯ ಅಡಿಯಲ್ಲಿನ ಅನುಪಾತವು 2013–14 ಮತ್ತು 2017–18ರಲ್ಲಿ ಸಾಮಾನ್ಯ ವರ್ಗದ ರಾಜ್ಯಗಳ ಸರಾಸರಿಗಿಂತ ಸಾಕಷ್ಟು ಕಡಿಮೆ ಪ್ರಮಾಣದಲ್ಲಿದ್ದುದರಿಂದ, ಈ ವಲಯಕ್ಕೆ ಸಾಕಷ್ಟು ಆದ್ಯತೆಯನ್ನು ನೀಡುವ ಅಗತ್ಯವಿದೆ; ಮತ್ತು

- ಆರೋಗ್ಯ ವಲಯದಡಿ ಅನುಪಾತವು 2013–14 ಮತ್ತು 2017–18ರಲ್ಲಿ ಸಾಮಾನ್ಯ ವರ್ಗದ ರಾಜ್ಯಗಳಿಗಿಂತ ಕಡಿಮೆಯಿದ್ದಿತು.

### 1.7.2 ವೆಚ್ಚದ ದಕ್ಷತೆ

ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅಭಿವೃದ್ಧಿ ಶೀರ್ಷಿಕೆಯ ಮೇಲೆ ಸಾರ್ವಜನಿಕ ವೆಚ್ಚದ ಪ್ರಾಮುಖ್ಯತೆಯ ದೃಷ್ಟಿಯಲ್ಲಿ ರಾಜ್ಯ ಸರ್ಕಾರವು ಸೂಕ್ತ ವೆಚ್ಚ ಪುನರ್ವ್ಯವಸ್ಥೆಯ ಕ್ರಮಗಳನ್ನು ತೆಗೆದುಕೊಂಡು ಅಭಿವೃದ್ಧಿ ವೆಚ್ಚಗಳಿಗೆ ಒತ್ತುಕೊಡಬೇಕಾಗಿದೆ. ಒಟ್ಟು ವೆಚ್ಚಕ್ಕೆ ಈ ಭಾಗಗಳ ಅನುಪಾತವು ಹೆಚ್ಚಾಗಿದ್ದಷ್ಟೂ, ವೆಚ್ಚದ ಗುಣಮಟ್ಟವು ಉತ್ತಮವಾಗಿರುತ್ತದೆ. **ಕೋಷ್ಟಕ 1.20**ರಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದಂತೆ 2017–18ರ ಸಾಲಿನ ಒಟ್ಟು ವೆಚ್ಚಕ್ಕೆ ಪ್ರತಿಯಾಗಿ ಅಭಿವೃದ್ಧಿ ವೆಚ್ಚದ ಪ್ರವೃತ್ತಿಯನ್ನು ತೋರಿಸುತ್ತದೆ.

**ಕೋಷ್ಟಕ 1.20: ಅಭಿವೃದ್ಧಿ ವೆಚ್ಚ**

*(ಕೋಟಿ ರೂಪಾಯಿಗಳಲ್ಲಿ)*

| | 2013–14 | 2014–15 | 2015–16 | 2016–17 | 2017–18 |
|---|---|---|---|---|---|
| ಅಭಿವೃದ್ಧಿ ವೆಚ್ಚ | 76,328 | 88,904 | 1,00,441 | 1,23,988 | 1,36,286 |
| ಒಟ್ಟು ವೆಚ್ಚಕ್ಕೆ ಅಭಿವೃದ್ಧಿ ವೆಚ್ಚದ ಶೇಕಡಾವಾರು | 71 | 72 | 73 | 77 | 76 |
| **ಅಭಿವೃದ್ಧಿ ವೆಚ್ಚದ ಅಂಗಗಳು** | | | | | |
| ರಾಜಸ್ವ | 59,215 (77) | 69,337 (78) | 80,153 (80) | 94,970 (76) | 1,01,508 (74) |
| ಬಂಡವಾಳ | 16,446 (22) | 19,004 (21) | 19,722 (20) | 27,090 (22) | 29,690 (22) |
| ಸಾಲ ಮತ್ತು ಮುಂಗಡ | 667(1) | 563(1) | 566(–) | 1,928(2) | 5,088(4) |

*ಆಕರ: ಹಣಕಾಸು ಲೆಕ್ಕಗಳು.*

*ಆವರಣದಲ್ಲಿರುವ ಅಂಕಿಗಳು ಅಭಿವೃದ್ಧಿ ವೆಚ್ಚದ ಶೇಕಡಾವಾರನ್ನು ತೋರಿಸುತ್ತದೆ.*

ಅಭಿವೃದ್ಧಿ ವೆಚ್ಚವು 2013–14ರಲ್ಲಿ ₹76,328 ಕೋಟಿ ಇದ್ದುದು 2017–18ರಲ್ಲಿ ₹1,36,286 ಕೋಟಿಗೆ ಏರಿದೆ. ಒಟ್ಟಾರೆ ವೆಚ್ಚಕ್ಕೆ, ಅದು 2013–14ರಲ್ಲಿದ್ದ ಶೇಕಡ 71ರಿಂದ 2016–17ರಲ್ಲಿ ಶೇಕಡ 77ಕ್ಕೆ ಏರಿ 2017–18ನೇ ವರ್ಷದಲ್ಲಿ ಶೇಕಡ 76ಕ್ಕೆ ಇಳಿಯಿತು. 2013–14 ರಿಂದ 2017–18ರ ಅವಧಿಯಲ್ಲಿ ಸರಾಸರಿಯಾಗಿ ಅಭಿವೃದ್ಧಿ ವೆಚ್ಚದ ಶೇಕಡ 77ರಷ್ಟು ರಾಜಸ್ವ ಲೆಕ್ಕದಡಿಯಿದ್ದರೆ ಉಳಿದ ಭಾಗ ಸಾಲ ಮತ್ತು ಮುಂಗಡಗಳೂ ಸೇರಿದಂತೆ ಬಂಡವಾಳ ವೆಚ್ಚದಡಿ ಉಂಟಾಗಿದೆ. 2017–18ರಲ್ಲಿ ಸಂಬಳ ವೆಚ್ಚ (₹16,764 ಕೋಟಿ) ಮತ್ತು ಸಹಾಯಧನ ವೆಚ್ಚಗಳು (₹14,145 ಕೋಟಿ) ಅಭಿವೃದ್ಧಿ ರಾಜಸ್ವ ವೆಚ್ಚದ ಎರಡು ಪ್ರಮುಖ ಅಂಶಗಳಾಗಿದ್ದವು.

ಈ ಕೆಳಗಿನ **ಕೋಷ್ಟಕ 1.21**ರಲ್ಲಿ ಆಯ್ದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ ಮತ್ತು ಸಂಬಳ ಮತ್ತು ನಿರ್ವಹಣೆಗಳ ಮೇಲಿನ ರಾಜಸ್ವ ವೆಚ್ಚದ ಅಂಶಗಳ ವಿವರಗಳನ್ನು ನೀಡಲಾಗಿದೆ.

**ಕೊಷ್ಟಕ 1.21:ಆಯ್ದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ**

*(ಅನುಪಾತವು ಶೇಕಡಾವಾರಿನಲ್ಲಿ)*

| ವಲಯ | 2016–17 | | | 2017–18 | | |
|---|---|---|---|---|---|---|
| | ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತ | ರಾಜಸ್ವ ವೆಚ್ಚ | | ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತ | ರಾಜಸ್ವ ವೆಚ್ಚ | |
| | | ಸಂಬಳ ಮತ್ತು ಮಜೂರಿ | ಕಾರ್ಯಾಚರಣೆ ಮತ್ತು ನಿರ್ವಹಣೆ | | ಸಂಬಳ ಮತ್ತು ಮಜೂರಿ | ಕಾರ್ಯಾಚರಣೆ ಮತ್ತು ನಿರ್ವಹಣೆ |
| **ಸಾಮಾಜಿಕ ಸೇವೆಗಳು** | | | | | | |
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 0.68 | 8.25 | 0.01 | 0.64 | 7.94 | 0.03 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 0.50 | 1.63 | 0.01 | 0.64 | 1.61 | 0.01 |
| ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 2.61 | 0.09 | 0.11 | 1.75 | 0.09 | 0.09 |
| ಇತರೆ | 1.54 | 0.51 | 0.02 | 1.84 | 0.49 | 0.02 |
| **ಒಟ್ಟು (ಸಾಮಾಜಿಕ ಸೇವೆಗಳು)** | **5.29** | **10.48** | **0.15** | **4.87** | **10.13** | **0.15** |
| **ಆರ್ಥಿಕ ಸೇವೆಗಳು** | | | | | | |
| ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು | 0.34 | 0.94 | 0.04 | 0.13 | 0.74 | 0.04 |
| ನೀರಾವರಿ ಮತ್ತು ನೆರೆ ನಿಯಂತ್ರಣ | 5.33 | 0.10 | 0.26 | 5.83 | 0.09 | 0.26 |
| ವಿದ್ಯುಚ್ಛಕ್ತಿ ಮತ್ತು ಇಂಧನ | 0.57 | – | – | 0.46 | 0.02 | – |
| ಸಾರಿಗೆ | 4.71 | 0.05 | 0.56 | 4.14 | 0.05 | 0.57 |
| ಇತರೆ | 1.69 | 0.67 | 0.03 | 1.23 | 0.67 | 0.03 |
| **ಒಟ್ಟು (ಆರ್ಥಿಕ ಸೇವೆಗಳು)** | **12.62** | **1.76** | **0.89** | **11.79** | **1.57** | **0.90** |
| **ಒಟ್ಟು (ಸಾ.ಸೇ.+ಆ.ಸೇ)** | **17.91** | **12.24** | **1.04** | **16.66** | **11.70** | **1.05** |

*ಆಕರ: ಹಣಕಾಸು ಲೆಕ್ಕಗಳು.*

### ಸಾಮಾಜಿಕ ಸೇವೆಗಳ ಮೇಲಿನ ವೆಚ್ಚ

ಸಾಮಾಜಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು 2016–17ರಲ್ಲಿದ್ದ ₹8,571 ಕೋಟಿಗಳಿಂದ 2017–18ರಲ್ಲಿ ₹9,855 ಕೋಟಿಗಳಿಗೆ ಏರಿಕೆಯಾಗಿದ್ದು, ಬಂಡವಾಳ ವೆಚ್ಚ ಮತ್ತು ಒಟ್ಟು ವೆಚ್ಚಗಳ ಅನುಪಾತವು 2016–17ರಲ್ಲಿ ಶೇಕಡ 5.29 ರಷ್ಟಿದ್ದು 2017–18ರಲ್ಲಿ ಶೇಕಡ 4.87ಕ್ಕೆ ಇಳಿದಿತ್ತು. ಒಟ್ಟು ರಾಜಸ್ವ ವೆಚ್ಚದಲ್ಲಿ ಸಂಬಳದ ಮೇಲಿನ ವೆಚ್ಚದ (ಸಾಮಾಜಿಕ ಸೇವೆಗಳಡಿ) ಪಾಲು 2017–18ರಲ್ಲಿ ಶೇಕಡ 10 ರಷ್ಟಿತ್ತು (**ಕೋಷ್ಟಕ 1.21**).

### ಆರ್ಥಿಕ ಸೇವೆಗಳ ಮೇಲಿನ ವೆಚ್ಚ

ಆರ್ಥಿಕ ವಿಭಾಗದಲ್ಲಿನ ಬಂಡವಾಳ ವೆಚ್ಚವು 2016–17ರಲ್ಲಿದ್ದ ₹20,447 ಕೋಟಿಗಳಿಂದ 2017–18ರಲ್ಲಿ ₹24,923 ಕೋಟಿಗಳಿಗೆ ಏರಿದೆ ಮತ್ತು ಒಟ್ಟು ವೆಚ್ಚಕ್ಕೆ ಅದರ ಅನುಪಾತವು 2016–17ರಲ್ಲಿದ್ದ ಶೇಕಡ 12.62ರಿಂದ 2017–18ರಲ್ಲಿ ಶೇಕಡ 11.79ಕ್ಕೆ ಇಳಿದಿದೆ. ರಾಜಸ್ವ ವೆಚ್ಚದಲ್ಲಿ (ಆರ್ಥಿಕ ಸೇವೆಗಳ ಅಡಿ) ಸಂಬಳದ ವೆಚ್ಚದ ಪಾಲು 2017–18ರಲ್ಲಿ ಶೇಕಡ 2ರಷ್ಟಿತ್ತು (**ಕೋಷ್ಟಕ 1.21**).

ರಾಜ್ಯ ಸರ್ಕಾರವು ಆರ್ಥಿಕ ಸೇವೆಗಳಲ್ಲಿ ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ ಮತ್ತು ಪ್ರವಾಹ ನಿಯಂತ್ರಣ, ಸಾರಿಗೆ ಮತ್ತು ಕೈಗಾರಿಕೆ ಮತ್ತು ಖನಿಜಗಳನ್ನು ಆದ್ಯತೆಯ ವಿಭಾಗಗಳಾಗಿ ಗುರುತಿಸಿದೆ. 2017–18ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಂಡವಾಳ ವೆಚ್ಚವು ಕ್ರಮವಾಗಿ ನೀರಾವರಿ, ಪ್ರವಾಹ ನಿಯಂತ್ರಣ, ಕೈಗಾರಿಕೆ ಮತ್ತು ಖನಿಜಗಳು ಗ್ರಾಮೀಣಾಭಿವೃದ್ಧಿ ಮತ್ತು ವಿಶೇಷ ಪ್ರದೇಶ ಕಾರ್ಯಕ್ರಮಗಳಲ್ಲಿ ಕ್ರಮವಾಗಿ ₹1,757 ಕೋಟಿ, ₹381 ಕೋಟಿ ಮತ್ತು ₹64 ಕೋಟಿ ಮತ್ತು ₹30 ಕೋಟಿಗಳಷ್ಟು ಹೆಚ್ಚಾಗಿದ್ದು ಕೃಷಿ, ಸಾರಿಗೆ ಮತ್ತು ಇಂಧನಗಳಲ್ಲಿ ಕ್ರಮವಾಗಿ ₹276 ಕೋಟಿ, ₹245 ಕೋಟಿ ಮತ್ತು ₹34 ಕೋಟಿಗಳಷ್ಟು ಇಳಿಕೆಯಾಗಿದೆ.

## 1.8 ರಾಜ್ಯ ಸರ್ಕಾರದ ವೆಚ್ಚ ಮತ್ತು ಹೂಡಿಕೆಗಳ ಆರ್ಥಿಕ ವಿಶ್ಲೇಷಣೆ

ವಿತ್ತೀಯ ಜವಾಬ್ದಾರಿ ಕಾಯಿದೆ ನಂತರದ ನಿರ್ಬಂಧಗಳನ್ವಯ ರಾಜ್ಯ ಸರ್ಕಾರವು ತನ್ನ ವಿತ್ತ ಕೊರತೆಯನ್ನು (ಸಾಲಗಳನ್ನು) ಕನಿಷ್ಠ ಮಟ್ಟದಲ್ಲಿಟ್ಟುಕೊಳ್ಳುವುದು ಮಾತ್ರವಲ್ಲದೆ ತನ್ನ ಬಂಡವಾಳ ವೆಚ್ಚ/ ಹೂಡಿಕೆಗಳ (ಸಾಲ ಮತ್ತು ಮುಂಗಡಗಳೂ ಸೇರಿ) ಅಗತ್ಯತೆಗಳನ್ನು ಪೂರೈಸಿಕೊಳ್ಳಬೇಕಾಗಿದೆ. ರಾಜ್ಯ ಸರ್ಕಾರವು ಇದನ್ನು ಪರೋಕ್ಷ ಸಹಾಯಧನಗಳ ರೂಪದಲ್ಲಿ ತನ್ನ ಆಯವ್ಯಯದ ಮೂಲಕ ಭರಿಸುವ ಬದಲು ತನ್ನ ಹೂಡಿಕೆಗಳ ಮೇಲಿನ ಪ್ರತಿಫಲಗಳನ್ನು ಮತ್ತು ಕಡವಾಗಿ ಪಡೆದ ಮೊತ್ತಗಳ ಬೆಲೆಯನ್ನು ಗಳಿಸಲು ಕ್ರಮಗಳನ್ನು ತೆಗೆದುಕೊಳ್ಳುವುದರೊಂದಿಗೆ ತನ್ನ ಹಣಕಾಸು ನಿರ್ವಹಣೆಯಲ್ಲಿ ಪಾರದರ್ಶಕವನ್ನು ತುಂಬಲು ಯತ್ನಿಸಬೇಕಾಗಿದೆ. ಈ ವಿಭಾಗವು ಹಿಂದಿನ ವರ್ಷಗಳಿಗೆ ಹೋಲಿಸಿದಂತೆ 2017–18ರಲ್ಲಿ ಸರ್ಕಾರವು ಮಾಡಿದ ಹೂಡಿಕೆಗಳ ಮತ್ತಿತರ ಬಂಡವಾಳ ವೆಚ್ಚಗಳ ಸ್ಥೂಲ ಆರ್ಥಿಕ ವಿಶ್ಲೇಷಣೆಯನ್ನು ನೀಡುತ್ತದೆ.

### 1.8.1 ಅಪೂರ್ಣ ಕಾಮಗಾರಿಗಳು

ದಾವೆ ಮುಂತಾದ ಕಾರಣಗಳೂ ಸೇರಿದಂತೆ ವಿವಿಧ ಕಾರಣಗಳಿಂದ ಅಪೂರ್ಣವಾಗಿ ಉಳಿದ ಕಾಮಗಾರಿಗಳಿಂದ ಅವುಗಳ ಮೇಲಿನ ವೆಚ್ಚವು ನಿರ್ಬಂಧಿತವಾಗಿ ವೆಚ್ಚದ ಗುಣಮಟ್ಟದ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತದೆ. 31 ಮಾರ್ಚ್ 2018ರಲ್ಲಿದ್ದಂತೆ, ಅಪೂರ್ಣ ಕಾಮಗಾರಿಗಳ ಇಲಾಖಾವಾರು ಮಾಹಿತಿಯನ್ನು **ಕೋಷ್ಟಕ 1.22**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.22: ಅಪೂರ್ಣ ಕಾಮಗಾರಿಗಳು**

*(ಕೋಟಿ ರೂಪಾಯಿಗಳಲ್ಲಿ)*

| ಇಲಾಖೆ | ಅಪೂರ್ಣ ಕಾಮಗಾರಿಗಳು* | | | | ಮಾರ್ಚ್ 2018ರ ಅಂತ್ಯಕ್ಕೆ ಸಂಚಿತ ವೆಚ್ಚ |
|---|---|---|---|---|---|
| | ಸಂಖ್ಯೆ | ಆಯವ್ಯಯ ಅಂದಾಜು | ವೆಚ್ಚದ ಅಧಿವ್ಯಾಪನೆ | | |
| | | | ಸಂಖ್ಯೆ | ಮೊತ್ತ | |
| ಲೋಕೋಪಯೋಗಿ | | | | | |
| ಕಟ್ಟಡಗಳು | 46 | 214.80 | 6 | 2.61 | 174.26 |
| ರಸ್ತೆಗಳು ಮತ್ತು ಸೇತುವೆಗಳು | 124 | 757.51 | 17 | 12.24 | 699.06 |
| ನೀರಾವರಿ | 66 | 123.81 | 8 | 20.31 | 94.13 |
| **ಒಟ್ಟು** | **236** | **1,096.12** | **31** | **35.16** | **967.45** |

*ಆಕರ: ಹಣಕಾಸು ಲೆಕ್ಕಗಳು.*

** 31 ಮಾರ್ಚ್ 2018ಕ್ಕೆ ಮುಂಚಿತವಾಗಿ ಪೂರ್ಣಗೊಳ್ಳಲು ಉದ್ದೇಶಿಸಿದ್ದ ಯೋಜನೆಗಳನ್ನು ಪರಿಗಣಿಸಲಾಗಿದೆ.*

₹1,096.12 ಕೋಟಿಗಳ ಮೂಲ ಅಂದಾಜು ಮೊತ್ತದ 236 ಕಾಮಗಾರಿಗಳು ಮಾರ್ಚ್ 2018 ಅಥವಾ ಅದಕ್ಕಿಂತಲೂ ಮುಂಚಿತವಾಗಿ ಪೂರ್ಣಗೊಳ್ಳಬೇಕಾಗಿದ್ದು, 31 ಮಾರ್ಚ್ 2018ರಲ್ಲಿದ್ದಂತೆ ಇವುಗಳ ಮೇಲಿನ ಸಂಚಿತ ವೆಚ್ಚವು ₹967.45 ಕೋಟಿಗಳಷ್ಟಿದೆ. ಇದರಲ್ಲಿ 31 ಪ್ರಕರಣಗಳಲ್ಲಿ ಅಧಿವ್ಯಾಪನ ವೆಚ್ಚವು ₹35.16 ಕೋಟಿಗಳಷ್ಟಿತ್ತು. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಆದ ವಿಳಂಬಕ್ಕೆ ಕಾರಣಗಳನ್ನು ನೀಡಿರುವುದಿಲ್ಲ.

### 1.8.2 ಹೂಡಿಕೆಗಳು ಮತ್ತು ಪ್ರತಿಫಲಗಳು

ರಾಜ್ಯ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕಂಪನಿ/ನಿಗಮ ಮುಂತಾದವುಗಳಲ್ಲಿನ ಸರ್ಕಾರದ ಷೇರು ಬಂಡವಾಳ ಹೂಡಿಕೆಯು ಲೆಕ್ಕಶೀರ್ಷಿಕೆ 4225–107 ಸಾಲ ಸಹಕಾರಿಗಳಲ್ಲಿನ ಹೂಡಿಕೆಗಳು, 4225–108 ಇತರ ಸಹಕಾರಿಗಳಲ್ಲಿನ ಹೂಡಿಕೆಗಳು, 4405–00–191 ಮೀನುಗಾರರ ಸಹಕಾರಿಗಳು ಮತ್ತು 4851–00–108–01 ವಿದ್ಯುತ್ ಚಾಲಿತ ಮಗ್ಗ ಸಹಕಾರಿ ಸಂಸ್ಥೆಗಳಿಗೆ ಷೇರು ಬಂಡವಾಳ ಸಹಾಯ ಮತ್ತು ವಿವಿಧ ಬಂಡವಾಳ ವೆಚ್ಚ ಶೀರ್ಷಿಕೆಗಳಡಿಯಲ್ಲಿನ ಒಳಶೀರ್ಷಿಕೆ 190–ಸಾರ್ವಜನಿಕ ವಿಭಾಗ ಮತ್ತು ಇತರ ಉದ್ದಿಮೆಗಳು ಮತ್ತು ವಿವಿಧ ಬಂಡವಾಳ ಶೀರ್ಷಿಕೆಯಡಿ 195– ಸಹಕಾರಿಗಳಡಿಯ ಹೂಡಿಕೆಗಳ ವೆಚ್ಚವನ್ನು ಒಳಗೊಂಡಿದೆ.

31 ಮಾರ್ಚ್ 2018ರಲ್ಲಿದ್ದಂತೆ ಸರ್ಕಾರವು ₹65,146 ಕೋಟಿಗಳನ್ನು 85 ಸರ್ಕಾರಿ ಕಂಪೆನಿಗಳು (₹68 ಕೋಟಿಗಳ ಹೂಡಿಕೆಯೂ ಸೇರಿದಂತೆ ₹59,355 ಕೋಟಿಗಳನ್ನು ಕೆಲಸ ಮಾಡದಿರುವ 16 ಸರ್ಕಾರಿ ಕಂಪನಿಗಳಲ್ಲಿ), ಒಂಭತ್ತು ಶಾಸನಬದ್ಧ ನಿಗಮಗಳು (₹2,595 ಕೋಟಿ), 43 ಕೂಡು ಬಂಡವಾಳ ಕಂಪೆನಿಗಳು (₹2,733 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ (₹441 ಕೋಟಿ) ಹೂಡಿದೆ. ಈ ಹೂಡಿಕೆಗಳಿಂದ ಬಂದ ಪ್ರತಿಫಲವು ನಗಣ್ಯವಾಗಿದೆ (**ಕೋಷ್ಟಕ 1.23**).

**ಕೋಷ್ಟಕ 1.23: ಹೂಡಿಕೆಗಳ ಮೇಲಿನ ಪ್ರತಿಫಲ**

| | 2013-14 | 2014-15 | 2015-16 | 2016-17 | 2017-18 |
|---|---|---|---|---|---|
| ವರ್ಷಾಂತ್ಯದಲ್ಲಿ ಹೂಡಿಕೆ (ಕೋಟಿ ರೂಪಾಯಿಗಳಲ್ಲಿ) | 55,048.00 | 61,726.92 | 61,335.89 | 63,115.06 | 65,145.88 |
| ಪ್ರತಿಫಲ (ಕೋಟಿ ರೂಪಾಯಿಗಳಲ್ಲಿ) | 55.49 | 74.84 | 69.40 | 82.50 | 78.83 |
| ಪ್ರತಿಫಲ (ಶೇಕಡ) | 0.1 | 0.1 | 0.1 | 0.1 | 0.1 |
| ಸರ್ಕಾರದ ಸಾಲದ ಮೇಲಿನ ಸರಾಸರಿ ಬಡ್ಡಿ (ಶೇಕಡ) | 6.2 | 6.5 | 6.5 | 6.3 | 7.7 |
| ಬಡ್ಡಿದರ ಮತ್ತು ಪ್ರತಿಫಲಗಳ ನಡುವಿನ ವ್ಯತ್ಯಾಸ (ಶೇಕಡ) | 6.1 | 6.4 | 6.4 | 6.2 | 7.6 |

ರಾಜ್ಯ ಸರ್ಕಾರವು ಈ ಹೂಡಿಕೆಗಳ ಮೇಲಿನ ಪ್ರತಿಫಲವು ನಗಣ್ಯವೆಂಬ ಸತ್ಯಾಂಶವನ್ನು ಒಪ್ಪಿಕೊಂಡಿದ್ದರೂ, ಅದು ದೀರ್ಘಕಾಲೀನ ಬೆಳವಣಿಗೆ ಮತ್ತು ಪ್ರತಿಫಲಾವಧಿಯಿರುವ ಸಾಮಾಜಿಕ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಲು ಹಿಂಜರಿಯುವುದಿಲ್ಲವೆಂದು ಹೇಳಿದೆ. ಮುಂದುವರೆದು, ಸರ್ಕಾರವು ನಿರ್ದಿಷ್ಟ ಪ್ರತಿಫಲವನ್ನು ಖಚಿತಪಡಿಸಿಕೊಳ್ಳಲು ತನ್ನ ಶ್ರಮವನ್ನು ಮುಂದುವರಿಸುವುದೆಂದು ಹೇಳಿದೆ. ಆದರೆ, ಶಾಸಕಾಂಗದ ಮುಂದೆ ಮಂಡಿಸಲಾಗುವ ಮಧ್ಯಮಾವಧಿ ವಿತ್ತೀಯ ಯೋಜನೆಗಳು ಹೂಡಿಕೆಗಳ ಮೇಲೆ ಸೂಕ್ತ ಪ್ರತಿಫಲ ಪಡೆಯಲು ಯಾವುದೇ ಮಾರ್ಗಸೂಚಿಗಳನ್ನು ಹೊಂದಿರಲಿಲ್ಲ.

ಮಾರ್ಚ್ 2018ರ ಅಂತ್ಯಕ್ಕೆ ಒಟ್ಟು ₹65,146 ಕೋಟಿಗಳ ಒಟ್ಟು ಹೂಡಿಕೆಯಲ್ಲಿ, ₹61,883 ಕೋಟಿಗಳ (ಶೇಕಡ 95) ಹೂಡಿಕೆಯನ್ನು ವಿವಿಧ ವಲಯಗಳಲ್ಲಿನ[11] 78 ಸರ್ಕಾರಿ ಕಂಪೆನಿಗಳು ಮತ್ತು ಶಾಸನಬದ್ಧ ನಿಗಮಗಳಲ್ಲಿ ಮಾಡಲಾಗಿದೆ. ಹೂಡಿಕೆಯು ಸತತ ನಷ್ಟದಲ್ಲಿರುವ ಈ ಕೆಳಗಿನ ಕಂಪೆನಿಗಳಲ್ಲಿ/ನಿಗಮಗಳಲ್ಲಿನ ₹38,912 ಕೋಟಿಗಳನ್ನು (ಶೇಕಡ 60) ಒಳಗೊಂಡಿದ್ದು, ಇವುಗಳಲ್ಲಿ ಹೂಡಿಕೆಯು ಗಣನೀಯ ಪ್ರಮಾಣದಲ್ಲಿದೆ (**ಕೋಷ್ಟಕ 1.24**).

**ಕೋಷ್ಟಕ 1.24: ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿನ ಹೂಡಿಕೆಗಳು**

*(ಕೋಟಿ ರೂಪಾಯಿಗಳಲ್ಲಿ)*

| ಕಂಪನಿ/ನಿಗಮ | 2017–18ರವರೆಗಿನ ಹೂಡಿಕೆ | ಸಂಚಿತ ನಷ್ಟ | ಇಲ್ಲಿಯವರೆಗೆ ಸಂಚಿತ ನಷ್ಟ |
|---|---|---|---|
| ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 266.85 | 720.50 | 2016–17 |
| ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ | 183.43 | 509.11 | 2016–17 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 1,145.70 | 130.41 | 2016–17 |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 23,745.34 | 2,448.13 | 2016–17 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 13,034.03 | 2,971.09 | 2016–17 |
| ಮೈಸೂರು ಸಕ್ಕರೆ ಕಂಪನಿ ನಿಯಮಿತ | 298.78 | 416.67 | 2012–13 |
| ಮೈಸೂರು ಪೇಪರ್ ಮಿಲ್ಸ್ ನಿಯಮಿತ | 237.37 | 425.94 | 2013–14 |
| ಒಟ್ಟು | **38,911.50** | **7,621.85** | |

*ಆಕರ:ಹಣಕಾಸು ಲೆಕ್ಕಗಳು.*

2017–18ರವರೆಗೆ ಈ ಕಂಪನಿಗಳಲ್ಲಿ ಸರ್ಕಾರವು ₹38,911.50 ಕೋಟಿಗಳನ್ನು ಹೂಡಿದ್ದು ಸಂಚಿತ ನಷ್ಟವು ₹7,621.85 ಕೋಟಿಗಳಷ್ಟಿತ್ತು. ಆದರೆ 2017–18ರಲ್ಲಿ ಈ ಕಂಪನಿಗಳಲ್ಲಿ ಯಾವುದೇ ಹೂಡಿಕೆಯನ್ನು ಮಾಡಿರಲಿಲ್ಲ.

2017–18ರಲ್ಲಿ ಸರ್ಕಾರವು ₹1,963.61 ಕೋಟಿಗಳನ್ನು ಸರ್ಕಾರಿ ಕಂಪನಿಗಳಲ್ಲಿ (ಕಾರ್ಯನಿರತ) (₹1,659.38 ಕೋಟಿ), ಕೂಡು ಬಂಡವಾಳ ಕಂಪನಿಗಳಲ್ಲಿ (₹209.14 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳಲ್ಲಿ (₹19.79 ಕೋಟಿ) ಹೂಡಿದೆ.

ಹೂಡಿಕೆ ಲೆಕ್ಕದಡಿ ಸಾಲಗಳನ್ನು ಷೇರು ಬಂಡವಾಳವಾಗಿ ಪರಿವರ್ತಿಸುವುದು ಮತ್ತು ಸರ್ಕಾರದ ಹೂಡಿಕೆಗಳನ್ನು ಕಂಪನಿಗಳ ಲೆಕ್ಕಪುಸ್ತಕಗಳಿಗೆ ಹೊಂದಾಣಿಕೆ ಮಾಡಿರುವಂತಹ ಕೆಲವು ನಗದಲ್ಲದ ವ್ಯವಹಾರಗಳು ಸೇರಿವೆ. ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದಲ್ಲಿನ ₹22 ಕೋಟಿಗಳು ಮತ್ತು ಸಹಕಾರಿ ಸ್ಪಿನ್ನಿಂಗ್ ಮಿಲ್ಸ್‌ನ ₹47.91 ಕೋಟಿಗಳನ್ನು ಸರ್ಕಾರಿ ಸಾಲದ ಬಾಕಿಯನ್ನು ಕಂಪನಿಯ ಬಂಡವಾಳ ಮೂಲವನ್ನು ಹೆಚ್ಚಿಸಲು ಈಕ್ವಿಟಿಯಾಗಿ ಮಾರ್ಪಡಿಸಲಾಯಿತು.

2017–18ರಲ್ಲಿ ಷೇರು ಬಂಡವಾಳದ ಸಂಸ್ಥೆಗಳಲ್ಲಿನ ಸರ್ಕಾರಿ ಹೂಡಿಕೆಗಳನ್ನು ಹಿಂತೆಗೆದುದರಿಂದ ಬಂದ ಹುಟ್ಟುವಳಿಗಳನ್ನು ಇತರ ಬಂಡವಾಳ ಸ್ವೀಕೃತಿಗಳಡಿ ಲೆಕ್ಕ ಹಾಕಿದ್ದು, 4425–ಸಹಕಾರದ ಮೇಲಿನ

[11] ನೀರಾವರಿ (₹36,779 ಕೋಟಿ), ವಿದ್ಯುಚ್ಛಕ್ತಿ (₹10,751 ಕೋಟಿ), ಮೂಲ ಸೌಕರ್ಯ (₹4,664 ಕೋಟಿ), ಹಣಕಾಸು ನೀಡಿಕೆ (₹3,155 ಕೋಟಿ), ಸಾರಿಗೆ (₹2,399 ಕೋಟಿ), ಸಾಮಾಜಿಕ (₹1,647 ಕೋಟಿ), ವಸತಿ (₹1,451 ಕೋಟಿ), ಕೈಗಾರಿಕೆ (₹936 ಕೋಟಿ), ನಿರ್ಮಾಣ (₹2 ಕೋಟಿ) ಮತ್ತು ಇತರ ವಲಯಗಳು (₹98 ಕೋಟಿ).

ಬಂಡವಾಳ ವೆಚ್ಚದಡಿ ಸಂಚಿತ ಬಂಡವಾಳವು ₹2.70 ಕೋಟಿಗಳಷ್ಟು ಕಡಿಮೆಯಾಗಿ ಹೂಡಿಕೆ ಲೆಕ್ಕಗಳನ್ನು ವಿದ್ಯುಕ್ತವಾಗಿ ಕಡಿಮೆಗೊಳಿಸಲಾಯಿತು.

### ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಠೇವಣಿ ಲೆಕ್ಕ

ಕಂಪನಿಗಳಲ್ಲಿ/ನಿಗಮಗಳಲ್ಲಿನ ಹೂಡಿಕೆಗಳು ಸಾರ್ವಜನಿಕ ಲೆಕ್ಕದ ಠೇವಣಿ ಲೆಕ್ಕಗಳಲ್ಲಿ ಉಳಿದಿದ್ದವು. ಈ ಹೂಡಿಕೆಗಳನ್ನು ಲೆಕ್ಕ ಶೀರ್ಷಿಕೆ 8449–00–120–9 ಹೂಡಿಕೆ ಲೆಕ್ಕಗಳು ಶೀರ್ಷಿಕೆಯಡಿ ಲೆಕ್ಕ ಹಾಕಲಾಗಿದೆ. 31 ಮಾರ್ಚ್ 2018ರ ಅಂತ್ಯಕ್ಕೆ ಋಣ, ಠೇವಣಿ ಮತ್ತು ಇರಸಾಲು ತ:ಖ್ತೆಯಲ್ಲಿ ಲಭ್ಯವಿದ್ದ ಹಾಗೂ ಕೆಲವು ಸಾರ್ವಜನಿಕ ವಲಯ ಉದ್ದಿಮೆಗಳು ನೀಡಿದ ಶಿಲ್ಕುಗಳನ್ನು **ಕೋಷ್ಟಕ 1.25**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.25: ಮಾರ್ಚ್ 2018ರಲ್ಲಿದ್ದಂತೆ ಸಾರ್ವಜನಿಕ ವಲಯ ಉದ್ದಿಮೆಗಳ ಠೇವಣಿ ಲೆಕ್ಕಗಳಲ್ಲಿನ ಶಿಲ್ಕುಗಳು**

*(ಕೋಟಿ ರೂಪಾಯಿಗಳಲ್ಲಿ)*

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಲೆಕ್ಕ ಶೀರ್ಷಿಕೆ | ಲೆಕ್ಕಗಳಿದ್ದಂತೆ ಅಂತಿಮ ಶಿಲ್ಕು | ಸಂಸ್ಥೆಯ ಲೆಕ್ಕದಂತೆ ಅಂತಿಮ ಶಿಲ್ಕು |
|---|---|---|---|---|
| 1 | ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ | 8449–00–120–9–52 | 7.13 | – |
| 2 | ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್ಐಡಿಸಿಎಲ್) | 8449–00–120–9–36* | 62.90 | – |
| 3 | ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (ಕೆಯುಐಡಿಎಫ್‌ಸಿ) | 8449–00–120–9–14 | 267.41 | 281.00 |
| 4 | ಕೃಷ್ಣಭಾಗ್ಯ ಜಲ ನಿಗಮ ನಿಯಮಿತ | 8449–00–120–9–10 | 128.70 | – |
| 5 | ಕರ್ನಾಟಕ ನೀರಾವರಿ ನಿಗಮ ನಿಯಮಿತ | 8449–00–120–9–16 | 0.33 | 0.0077 |

*ಆಕರ: ಋಣ, ಠೇವಣಿ ಮತ್ತು ಇರಸಾಲು ಲೆಡ್ಜರು ಮತ್ತು ಸಂಸ್ಥೆಗಳು ನೀಡಿದ ಮಾಹಿತಿ*

** (1) ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು, (2) ವಿಶೇಷ ಕಾರ್ಯದರ್ಶಿ, ಭೂಮಿ ಮೇಲ್ವಿಚಾರಣಾ ಕೋಶ, ಕಂದಾಯ ಇಲಾಖೆ ಮತ್ತು (3) ಕೆಆರ್ಐಡಿಸಿಎಲ್ ಎಂಬ ಮೂರು ಪ್ರಾಧಿಕಾರಗಳಿಂದ ನಿರ್ವಹಿಸಲಾಗುತ್ತಿದೆ.*

ಮೇಲಿನ ಕೋಷ್ಟಕದಲ್ಲಿ ನೋಡಿದಂತೆ ಡಿಡಿಆರ್ ಲೆಡ್ಜರುಗಳಲ್ಲಿನ ಶಿಲ್ಕುಗಳಿಗೂ, ಸಂಸ್ಥೆಗಳು ನೀಡಿರುವ ಶಿಲ್ಕುಗಳಿಗೂ ವ್ಯತ್ಯಯಗಳಿವೆ. ಆಡಳಿತಾಧಿಕಾರಿಗಳು ಖಜಾನೆ/ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕಛೇರಿಗಳೊಂದಿಗೆ ಲೆಕ್ಕವನ್ನು ಹೊಂದಾಣಿಕೆ ಮಾಡಿ ನಿಖರವಾದ ಶಿಲ್ಕುಗಳನ್ನು ಬಿಂಬಿಸಬೇಕು. ಮುಂದುವರೆದು ಕೆಯುಐಡಿಎಫ್‌ಸಿಯು ಕರ್ನಾಟಕ ಸರ್ಕಾರದಿಂದ ಮೊತ್ತಗಳು ಆರ್ಥಿಕ ವರ್ಷಾಂತ್ಯದಲ್ಲಿ ಬಿಡುಗಡೆಯಾದುದರಿಂದ ಮತ್ತು ಇಲಾಖೆಗಳಿಂದ ತೀರುವಳಿಗಳನ್ನು ಪಡೆಯುವಲ್ಲಿನ ವಿಳಂಬಗಳು/ ಭೂಸ್ವಾಧೀನ ಸಮಸ್ಯೆಗಳು ಮತ್ತು ಕಾಮಗಾರಿಯ ವ್ಯಾಪ್ತಿಯಲ್ಲಿನ ಬದಲಾವಣೆಗಳಿಂದ ಅಂತಿಮ ಶಿಲ್ಕನ್ನು ಬಿಂಬಿಸಲಾಗುತ್ತದೆಂದು ಹೇಳಿತು (ಜನವರಿ 2019).

### 1.8.3 ರಾಜ್ಯ ಸರ್ಕಾರವು ನೀಡಿದ ಸಾಲಗಳು ಮತ್ತು ಮುಂಗಡಗಳು

ಕಂಪೆನಿಗಳು, ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆಯಲ್ಲದೆ ಸರ್ಕಾರವು ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡವನ್ನು ನೀಡುತ್ತದೆ. **ಕೋಷ್ಟಕ 1.26**ರಲ್ಲಿ, 31 ಮಾರ್ಚ್ 2018ರ ಅಂತ್ಯಕ್ಕೆ ಕಳೆದ ಐದು ವರ್ಷಗಳಲ್ಲಿ ಬಾಕಿ ಇರುವ ಸಾಲ ಮತ್ತು ಮುಂಗಡಗಳ ಸ್ಥಿತಿಯನ್ನು ಮತ್ತು ಬಡ್ಡಿ ಸ್ವೀಕೃತಿಗಳಿಗೆ ಸಂವಾದಿಯಾಗಿ ಬಡ್ಡಿ ಪಾವತಿಗಳನ್ನು ನೀಡಲಾಗಿದೆ.

**ಕೋಷ್ಟಕ 1.26: ರಾಜ್ಯ ಸರ್ಕಾರ ನೀಡಿದ ಸಾಲಗಳ ಮೇಲೆ ಸ್ವೀಕೃತಿಯಾದ ಸರಾಸರಿ ಬಡ್ಡಿ**

*(ಕೋಟಿ ರೂಪಾಯಿಗಳಲ್ಲಿ)*

| | 2013–14 | 2014–15 | 2015–16 | 2016–17 | 2017–18 |
|---|---|---|---|---|---|
| ಆರಂಭಿಕ ಶಿಲ್ಕು | 12,142 | 12,724* | 13,216 | 13,813 | 15,578^ |
| ಪ್ರಸಕ್ತ ವರ್ಷದಲ್ಲಿ ನೀಡಿದ ಮುಂಗಡ | 695 | 576 | 657 | 1,934 | 5,092 |
| ಪ್ರಸಕ್ತ ವರ್ಷದ ಮರುಪಾವತಿ | 109 | 84 | 60 | 100 | 137 |
| ಅಂತಿಮ ಶಿಲ್ಕು | 12,729 | 13,216 | 13,813 | 15,648 | 20,533 |
| ನಿವ್ವಳ ಸೇರ್ಪಡೆ | 586 | 492 | 597 | 1,835 | 4,955 |

| | 2013–14 | 2014–15 | 2015–16 | 2016–17 | 2017–18 |
|---|---|---|---|---|---|
| ಬಡ್ಡಿ ಸ್ವೀಕೃತಿಗಳು | 235 | 127 | 264 | 145 | 99 |
| ಬಾಕಿ ಇರುವ ಸಾಲ ಮತ್ತು ಮುಂಗಡಗಳಿಗೆ ಬಡ್ಡಿ ಸ್ವೀಕೃತಿಯ ಶತಾಂಶ | 1.9 | 1.0 | 1.9 | 0.9 | 0.5 |
| ರಾಜ್ಯ ಸರ್ಕಾರದ ಬಾಕಿ ಇರುವ ವಿತ್ತ ಜವಾಬ್ದಾರಿಗಳಿಗೆ ಬಡ್ಡಿ ಪಾವತಿಯ ಶತಾಂಶ | 5.8 | 6.0 | 6.2 | 5.8 | 6.1 |
| ಬಡ್ಡಿ ಪಾವತಿ ಮತ್ತು ಬಡ್ಡಿ ಸ್ವೀಕೃತಿಗಳ ವ್ಯತ್ಯಾಸ ಶತಾಂಶ | (-)3.9 | (-)5.0 | (-)4.3 | (-)4.9 | (-)5.6 |

*ಆಕರ: ಹಣಕಾಸು ಲೆಕ್ಕಗಳು.*

** ಎಮ್‌ಎಸ್‌ಐಎಲ್‌ನಿಂದ ಬಾಕಿ ಇದ್ದ ₹5ಕೋಟಿ ಸಾಲವನ್ನು 2014–15ರಲ್ಲಿ ಷೇರು ಬಂಡವಾಳಕ್ಕೆ ಪರಿವರ್ತಿಸಿದ್ದರಿಂದ ವ್ಯತ್ಯಾಸವಾಗಿದೆ.*

*^ 2017–18ರಲ್ಲಿ ಸಾಲಗಳನ್ನು ಷೇರು ಬಂಡವಾಳವಾಗಿ ಪರಿವರ್ತಿಸಿದ್ದರಿಂದ ₹70 ಕೋಟಿಗಳ ವ್ಯತ್ಯಾಸವಾಗಿದೆ.*

ಮಾರ್ಚ್ 2018ರ ಅಂತ್ಯಕ್ಕೆ ಬಾಕಿ ಇರುವ ಸಾಲಗಳ ಮೊತ್ತವು ₹20,533 ಕೋಟಿಯಷ್ಟಿತ್ತು. 2013–14ರಿಂದ 2017–18ರ ಅವಧಿಯಲ್ಲಿ ಸರ್ಕಾರದ ಸಾಲಗಳ ಮೇಲಿನ ಬಡ್ಡಿಯ ಹರಹು ಋಣಾತ್ಮಕವಾಗಿದ್ದು, ಇದು ರಾಜ್ಯ ಸರ್ಕಾರ ಪಡೆದ ಸಾಲಗಳು, ಸಾಲಗಳ ನೀಡಿಕೆಗಿಂತ ದುಬಾರಿಯಾಗಿರುವುದನ್ನು ಸೂಚಿಸುತ್ತದೆ.

2017–18ರಲ್ಲಿ ನೀಡಿದ ಸಾಲಗಳ ಮೊತ್ತವು ₹5,092 ಕೋಟಿಗಳಿದ್ದು ಇದು ಸಾಲ ಮನ್ನಾ ಯೋಜನೆಯಡಿ ಕ್ರೆಡಿಟ್ ಸಹಕಾರಿಗಳಿಗೆ (6425–00–107–05) ಬಿಡುಗಡೆ ಮಾಡಿದ ₹3,401 ಕೋಟಿಗಳನ್ನು ಒಳಗೊಂಡಿದೆ. ಈ ವರ್ಷದಲ್ಲಿ ಸಾಲಗಳ ಮರುಪಾವತಿಯ ಮೊತ್ತವು ₹137 ಕೋಟಿಯಷ್ಟಿದೆ.

ಮಹಾಲೇಖಾಪಾಲರು (ಲೆ ಮತ್ತು ಹ) ಅವರ ಕಛೇರಿಯಲ್ಲಿ ನಿರ್ವಹಿಸಲಾಗಿರುವ ಸಾಲ ಮರುಪಾವತಿಗಳ ವಿವರವಾದ ಲೆಕ್ಕಗಳು, 31 ಮಾರ್ಚ್ 2018ರ ಅಂತ್ಯಕ್ಕೆ 21 ಸಂಸ್ಥೆಗಳಿಂದ ₹7,772 ಕೋಟಿ (ಅಸಲು: ₹4,402 ಕೋಟಿ ಮತ್ತು ಬಡ್ಡಿ: ₹3,370 ಕೋಟಿ) ಅವಧಿ ಮೀರಿದ ಸಾಲವಾಗಿ ಉಳಿದಿರುವುದನ್ನು ಸೂಚಿಸಿದೆ (**ಅನುಬಂಧ 1.10**).

ಸಾಲಗಳ ವಿವರವಾದ ಲೆಕ್ಕಗಳನ್ನು ನಿರ್ವಹಿಸುವ ರಾಜ್ಯದ 842 ಸಂಸ್ಥೆಗಳ ಇಲಾಖಾ ಮುಖ್ಯಸ್ಥರು/ಪ್ರಧಾನ ನಿಯಂತ್ರಣಾಧಿಕಾರಿಗಳಲ್ಲಿ ಕೇವಲ 18 ಅಧಿಕಾರಿಗಳು[12] ಮಾತ್ರ ಅಗತ್ಯವಾದ ಮಾಹಿತಿಯನ್ನು ಮಹಾಲೇಖಾಪಾಲರಿಗೆ ಒದಗಿಸಿರುವುದರಿಂದ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–7ರಲ್ಲಿ ನೀಡಿರುವ ಅವಧಿ ಮೀರಿದ ಅಸಲು ಮತ್ತು ಬಡ್ಡಿಗಳ ಮಾಹಿತಿಯು ಅಪೂರ್ಣವಾಗಿದೆ. ಭಾರತೀಯ ಲೆಕ್ಕವಿಧಾನ ಪ್ರಮಾಣಕ–3 (ಐಜಿಎಎಸ್)ರ ಅನ್ವಯ ಪ್ರತಿ ಸಾಲವನ್ನು ನಿಯಂತ್ರಿಸುವ ನಿರ್ದಿಷ್ಟ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸದೆ ಮಂಜೂರು ಮಾಡಲಾದ ಸಾಲಗಳ ವಿವರಗಳನ್ನು ಪ್ರಕಟಿಸುವುದು ಅಗತ್ಯವಾಗಿದೆ. 2017–18ರಲ್ಲಿ ರಾಜ್ಯಸರ್ಕಾರವು ಮಂಜೂರು ಮಾಡಿದ ₹5,092.22 ಕೋಟಿಗಳ ಮೊತ್ತದ 103 ಸಾಲ ಪ್ರಕರಣಗಳಲ್ಲಿ ₹3,807.87 ಕೋಟಿಗಳ 39 ಸಾಲಗಳನ್ನು ಯಾವುದೇ ನಿರ್ದಿಷ್ಟ ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಸದೆ ಮಂಜೂರು ಮಾಡಲಾಗಿದೆ. ಇದರ ವಿವರಗಳು ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ–18ಕ್ಕೆ ನೀಡಿರುವ ಹೆಚ್ಚುವರಿ ಪ್ರಕಟಗಳಲ್ಲಿ ಲಭ್ಯವಿದೆ.

ರಾಜ್ಯ ಸರ್ಕಾರವು ನವೆಂಬರ್ 2013ರ ಆದೇಶದಲ್ಲಿ ಸಾಲಗಳಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು ಮತ್ತು ಸಾಲ ಮಂಜೂರು ಮಾಡುವ ಇಲಾಖೆಗಳು ಅನುಸರಿಸಬೇಕಾದ ಕಾರ್ಯ ವಿಧಾನಗಳನ್ನು ಪರಿಷ್ಕರಿಸಿದೆ ಎಂದು ಆರ್ಥಿಕ ಇಲಾಖೆಯು ತನ್ನ ಸುತ್ತೋಲೆಯಲ್ಲಿ (ಆಗಸ್ಟ್ 2018) ತಿಳಿಸಿದೆ. ಎಲ್ಲಾ ಇಲಾಖೆಗಳೂ ನವೆಂಬರ್ 2013ರಲ್ಲಿ ಆರ್ಥಿಕ ಇಲಾಖೆಯು ಜಾರಿ ಮಾಡಲಾದ ಸಾಮಾನ್ಯ ಸಾಲಗಳ ಸರ್ಕಾರಿ ಆದೇಶದಲ್ಲಿ ನೀಡಿರುವ ಸೂಚನೆಗಳಿಗೆ ಬದ್ಧರಾಗಿರಬೇಕೆಂದು ಆದೇಶಿಸಲಾಗಿದೆ. ಈ ಆದೇಶದ ಅನುಪಾಲನೆಯು ಸಮರ್ಪಕವಾಗಿಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

[12] 2016–17ರಲ್ಲಿ 842ರಲ್ಲಿ 16 ಸಂಸ್ಥೆಗಳು ಮಾಹಿತಿಯನ್ನು ಒದಗಿಸಿದ್ದವು.

### 1.8.4 ನಗದು ಶಿಲ್ಕುಗಳು ಮತ್ತು ನಗದು ಶಿಲ್ಕುಗಳ ಹೂಡಿಕೆ

ಪ್ರಸ್ತುತ ವರ್ಷದಲ್ಲಿನ ರಾಜ್ಯಸರ್ಕಾರದ ನಗದು ಶಿಲ್ಕುಗಳು ಮತ್ತು ಅವುಗಳಿಂದ ಮಾಡಿದ ಹೂಡಿಕೆಗಳ ವಿವರಗಳನ್ನು **ಕೋಷ್ಟಕ 1.27**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.27: ನಗದು ಶಿಲ್ಕುಗಳು ಮತ್ತು ಅವುಗಳ ಹೂಡಿಕೆಗಳು**

*(ಕೋಟಿ ರೂಪಾಯಿಗಳಲ್ಲಿ)*

| | ಆರಂಭಿಕ ಶಿಲ್ಕು 01–04–2017 ರಲ್ಲಿದ್ದಂತೆ | ಅಂತಿಮ ಶಿಲ್ಕು 31–03–2018 ರಲ್ಲಿದ್ದಂತೆ | ಹೆಚ್ಚಳ(+)/ ಕಡಿಮೆ(–) |
|---|---|---|---|
| **(ಅ) ಸಾಮಾನ್ಯ ನಗದು ಶಿಲ್ಕು** | | | |
| ಖಜಾನೆಗಳಲ್ಲಿನ ನಗದು | - | - | |
| ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿನ ಠೇವಣಿ | 100.05 | 723.77 | 623.72 |
| ಇತರ ಬ್ಯಾಂಕುಗಳಲ್ಲಿನ ಠೇವಣಿ | - | - | - |
| ರವಾನೆಯಲ್ಲಿರುವ ಇರಸಾಲುಗಳು– ಸ್ಥಳೀಯ | 0.01 | 0.01 | - |
| ಒಟ್ಟು | 100.06 | 723.78 | 623.72 |
| ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿನ ಹೂಡಿಕೆಗಳು | 23,977.48 | 12,655.49 | (-)11,321.99 |
| **ಒಟ್ಟು (ಅ)** | **24,077.54** | **13,379.27** | **(-)10,698.27** |
| **(ಆ) ಇತರೆ ನಗದು ಶಿಲ್ಕುಗಳು ಮತ್ತು ಹೂಡಿಕೆಗಳು** | | | |
| ಇಲಾಖಾ ಅಧಿಕಾರಿಗಳ ಬಳಿ ಇರುವ ನಗದು (ಲೋಕೋಪಯೋಗಿ, ಅರಣ್ಯ ಇಲಾಖೆ ಅಧಿಕಾರಿಗಳು, ಜಿಲ್ಲಾಧಿಕಾರಿಗಳು) | 2.09 | 2.09 | - |
| ಸಾದಿಲ್ವಾರು ವೆಚ್ಚಗಳಿಗಾಗಿ ಇಲಾಖಾ ಅಧಿಕಾರಿಗಳ ಬಳಿ ಇರುವ ಖಾಯಂ ಮುಂಗಡಗಳು | 1.74 | 1.75 | 0.01 |
| ಮೀಸಲಿಟ್ಟ ನಿಧಿಗಳ ಹೂಡಿಕೆಗಳು | 10,272.21 | 12,800.94 | 2,528.73 |
| **ಒಟ್ಟು (ಆ)** | **10,276.04** | **12,804.78** | **2,528.74** |
| **ಒಟ್ಟು ಮೊತ್ತ (ಅ+ಆ)** | **34,353.58** | **26,184.05** | **(-)8,169.53** |

*ಆಕರ: ಹಣಕಾಸು ಲೆಕ್ಕಗಳು.*

ಸರ್ಕಾರದಿಂದ ಬರಬೇಕಾದ ಕ್ಲೈಮುಗಳನ್ನು, ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವ ಮೂಲಕ ಇತ್ಯರ್ಥಗೊಳಿಸಲಾಗುತ್ತದೆ. ಸಂಚಿತ ನಿಧಿಗೆ ಖರ್ಚು ಹಾಕಿ ಕ್ಲೇಮುದಾರರಿಗೆ ಚೆಕ್ ಮೂಲಕ ಪಾವತಿ ಮಾಡಲಾಗುತ್ತದೆ. ಪ್ರತಿ ಚೆಕ್ಕಿನ ಮೊತ್ತವನ್ನೂ ಪ್ರಧಾನ ಲೆಕ್ಕಶೀರ್ಷಿಕೆ 8670–ಚೆಕ್ಕುಗಳು ಮತ್ತು ಬಿಲ್ಲುಗಳಿಗೆ ಜಮಾ ತೋರಿಸಿ, ಆ ಚೆಕ್ಕುಗಳು ಏಜೆನ್ಸಿ ಬ್ಯಾಂಕುಗಳಲ್ಲಿ ನಗದೀಕರಣವಾದ ನಂತರ ಈ ಜಮಾವನ್ನು ಕಳೆಯಲಾಗುತ್ತದೆ. ಹೀಗಾಗಿ ಈ ಶೀರ್ಷಿಕೆಯಲ್ಲಿನ ಜಮೆಗಳಲ್ಲಿ ಶಿಲ್ಕು ಉಳಿದಿದ್ದರೆ, ಅದು ನಗದೀಕರಣವಾಗದೆ ಉಳಿದ ಚೆಕ್ಕುಗಳ ಮೊತ್ತವಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 75(1)ರ ಅನ್ವಯ ಖಜಾನಾಧಿಕಾರಿಗಳು ನಮೂದಿಸಿದ ದಿನಾಂಕದಿಂದ 12 ತಿಂಗಳು ಮೀರಿ ನಗದೀಕರಿಸದೆ ಉಳಿದ ಚೆಕ್ಕುಗಳ ಮೊತ್ತಕ್ಕೆ ಪ್ರತಿ ವರ್ಷ ಮೇ 15ರಂದು, ತಿದ್ದುಪಡಿ ದಾಖಲೆಯನ್ನು ತಯಾರಿಸಿ ಮಹಾಲೇಖಪಾಲರಿಗೆ ಕಳುಹಿಸಿಕೊಡಬೇಕು. ವರ್ಷದ ಆರಂಭದಲ್ಲಿ ನಗದೀಕರಣವಾಗದೆ ಉಳಿದ ಚೆಕ್ಕುಗಳ ಆರಂಭಿಕ ಶಿಲ್ಕು ₹14,158.60 ಕೋಟಿಗಳಷ್ಟಿತ್ತು. 2017–18ರಲ್ಲಿ ನೀಡಲಾದ ₹1,36,077.97 ಕೋಟಿಗಳ ಚೆಕ್ಕುಗಳಿಗೆದುರಾಗಿ ₹1,37,599.39 ಕೋಟಿಗಳಷ್ಟು ಮೊತ್ತದ ಚೆಕ್ಕುಗಳು ನಗದೀಕರಣಗೊಂಡಿದ್ದವು. 31 ಮಾರ್ಚ್ 2018ರಲ್ಲಿದ್ದಂತೆ, ನಗದೀಕರಣವಾಗದೇ ಉಳಿದ ಚೆಕ್ಕುಗಳ ಶಿಲ್ಕು ₹12,637.18 ಕೋಟಿಗಳಷ್ಟಿತ್ತು.

ಲೆಕ್ಕ ಪರಿಶೋಧನೆಯು 2017–18ರ ಲೆಕ್ಕಗಳಲ್ಲಿನ ನಿವ್ವಳ ಜಮಾ ₹1,256 ಕೋಟಿಗಳಷ್ಟಿರುವುದನ್ನು ಗಮನಿಸಿದೆ. ದತ್ತಾಂಶವನ್ನು ಪರಿಶೀಲಿಸಿ ಇವುಗಳನ್ನು ತೀರುವಳಿ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ವರ್ಷದ ಅಂತ್ಯಕ್ಕೆ ರಾಜ್ಯದ ನಗದು ಶಿಲ್ಕು ₹26,184 ಕೋಟಿಗಳಷ್ಟಿದ್ದು, ಕಳೆದ ವರ್ಷಕ್ಕಿಂತಲೂ ನಗದು ಶಿಲ್ಕಿನಲ್ಲಿ ಶೇಕಡ 24ರಷ್ಟು ಇಳಿಕೆಯಾಗಿದೆ. 2017–18ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ 14 ದಿನಗಳ ಮತ್ತು 91 ದಿನಗಳ ತಾತ್ಕಾಲಿಕ ಟ್ರೆಜರಿ ಬಿಲ್ಲುಗಳಲ್ಲಿನ ಹೂಡಿಕೆಯು ₹11,321.99 ಕೋಟಿಗಳಷ್ಟು ಇಳಿಕೆಯಾಗಿದ್ದರಿಂದ ನಗದು ಶಿಲ್ಕು ಕಡಿಮೆಯಾಯಿತು.

## 1.9 ಆಸ್ತಿಗಳು ಮತ್ತು ಜವಾಬ್ದಾರಿಗಳು

### 1.9.1 ಆಸ್ತಿಗಳ ಮತ್ತು ಜವಾಬ್ದಾರಿಗಳ ವೃದ್ಧಿ ಮತ್ತು ಸಂಯೋಜನೆ

ಚಾಲ್ತಿಯಲ್ಲಿರುವ ಸರ್ಕಾರದ ಲೆಕ್ಕ ವಿಧಾನದಲ್ಲಿ ಸರ್ಕಾರವು ಹೊಂದಿರುವ ಜಮೀನು ಮತ್ತು ಕಟ್ಟಡಗಳು ಮುಂತಾದ ಸ್ಥಿರ ಆಸ್ತಿಗಳ ಸಮಗ್ರ ಲೆಕ್ಕವನ್ನು ಮಾಡಿರುವುದಿಲ್ಲ. ಆದರೂ, ಸರ್ಕಾರದ ಲೆಕ್ಕಗಳಲ್ಲಿ ಸರ್ಕಾರದ ಹಣಕಾಸಿನ ಜವಾಬ್ದಾರಿಗಳು ಮತ್ತು ಮಾಡಿದ ವೆಚ್ಚದಿಂದ ನಿರ್ಮಿಸಲಾದ ಆಸ್ತಿಗಳ ಲೆಕ್ಕಗಳನ್ನು ತೋರಿಸಲಾಗಿದೆ. 31 ಮಾರ್ಚ್ 2018ರಂದು, 31 ಮಾರ್ಚ್ 2017ಕ್ಕೆ ಹೋಲಿಸಿದಂತೆ, ಅಂತಹ ಜವಾಬ್ದಾರಿಗಳ ಮತ್ತು ಆಸ್ತಿಗಳ ಘೋಷ್ವಾರೆಯನ್ನು **ಅನುಬಂಧ 1.11**ರಲ್ಲಿ ನೀಡಲಾಗಿದೆ.

ಕರ್ನಾಟಕ ವಿತ್ತ ಜವಾಬ್ದಾರಿಗಳ ಕಾಯಿದೆ, 2002ರಲ್ಲಿ ಹೇಳಿರುವಂತೆ ಒಟ್ಟು ಜವಾಬ್ದಾರಿಗಳು ಅಂದರೆ ರಾಜ್ಯದ ಸಂಚಿತ ನಿಧಿಯಲ್ಲಿನ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಜವಾಬ್ದಾರಿಗಳು ಆಗಿರುತ್ತದೆ. ಈ ಕಾಯಿದೆಯ ಅನುಚ್ಛೇದ 2(ಜಿ)ಗೆ ಫೆಬ್ರವರಿ 2014ರಲ್ಲಿ ತಂದಿರುವ ತಿದ್ದುಪಡಿಯಂತೆ ರಾಜ್ಯದ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯು ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮತ್ತು ಇತರ ಸಮಾನ ಸಾಧನಗಳ ಸಾಲಗಳನ್ನೂ ಒಳಗೊಂಡು, ಈ ಸಾಲಗಳ ಅಸಲು ಮತ್ತು/ಅಥವಾ ಬಡ್ಡಿಗಳ ತೀರುವಳಿಯು ರಾಜ್ಯಸರ್ಕಾರದ ಆಯವ್ಯಯ ಅವಕಾಶದ ಮೂಲಕ ಮಾಡಬೇಕಾಗಿದೆ.

ಆಂತರಿಕ ಋಣವು ಮಾರುಕಟ್ಟೆ ಸಾಲಗಳು, ರಿಸರ್ವ್ ಬ್ಯಾಂಕಿಗೆ ನೀಡಿದ ವಿಶೇಷ ಭದ್ರತೆಗಳು ಮತ್ತಿತರ ಸಮಾಲೋಚಿತ ಸಾಲಗಳನ್ನು ಒಳಗೊಂಡಿದೆ. ಸಾರ್ವಜನಿಕ ಲೆಕ್ಕಗಳ ಜವಾಬ್ದಾರಿಗಳು, ಸಣ್ಣ ಉಳಿತಾಯ, ಭವಿಷ್ಯನಿಧಿ ಇತ್ಯಾದಿ, ಮೀಸಲು ನಿಧಿಗಳು ಮತ್ತು ಇತರ ಠೇವಣಿಗಳನ್ನು ಒಳಗೊಂಡಿದೆ. ಆದರೆ, ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ರಾಜ್ಯದ ಜವಾಬ್ದಾರಿಗಳು ರಾಜ್ಯದ ನಿವೃತ್ತ/ ನಿವೃತ್ತಿಯಾಗಲಿರುವ ಸರ್ಕಾರಿ ನೌಕರರಿಗೆ ನೀಡಬೇಕಾದ ನಿವೃತ್ತಿವೇತನ, ಇತರ ನಿವೃತ್ತಿ ಸೌಲಭ್ಯಗಳು/ ಖಾತರಿಗಳು/ಸರ್ಕಾರ ನೀಡಿದ ಭರವಸೆ ಪತ್ರಗಳು, ಆಯವ್ಯಯ ಹೊರಗಿನ ಸಾಲಗಳು ಎಂದು ಕರೆಯಲ್ಪಡುವ ವಿಶೇಷ ಉದ್ದೇಶ ಸಾಧನಗಳ ಮೂಲಕ ಪಡೆದ ಸಾಲಗಳನ್ನು ಒಳಗೊಂಡಿಲ್ಲ.

ಆಸ್ತಿಗಳು, ಸಂಚಿತ ನಿಧಿಯಲ್ಲಿನ ಆಸ್ತಿಗಳು ಮತ್ತು ನಗದನ್ನು ಒಳಗೊಂಡಿದೆ. ಸಂಚಿತ ನಿಧಿಯಲ್ಲಿನ ಆಸ್ತಿಗಳು ಸ್ಥಿರ ಆಸ್ತಿಗಳ ಮೇಲಿನ ಬಂಡವಾಳ ವೆಚ್ಚ–ಕಂಪೆನಿಗಳು ಮತ್ತು ನಿಗಮಗಳ ಷೇರುಗಳ ಮೇಲಿನ ಹೂಡಿಕೆ ಮತ್ತು ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಿದ್ದು ಸಾಲಗಳು ಮತ್ತು ಮುಂಗಡಗಳು ವಿದ್ಯುಚ್ಛಕ್ತಿ ಯೋಜನೆಗಳಿಗೆ ನೀಡಿದ ಸಾಲಗಳು ಮತ್ತು ಇತರ ಅಭಿವೃದ್ಧಿ ಸಾಲಗಳನ್ನು ಒಳಗೊಂಡಿದೆ. ಆಸ್ತಿಗಳು ಮತ್ತು ಜವಾಬ್ದಾರಿಗಳ ಸಂಯೋಜನೆಯ ವೃದ್ಧಿಯ ದರವನ್ನು **ಕೋಷ್ಟಕ 1.28**ರಲ್ಲಿ ಸಂಕ್ಷಿಪ್ತ ರೂಪದಲ್ಲಿ ನೀಡಲಾಗಿದೆ.

**ಕೋಷ್ಟಕ 1.28: ಆಸ್ತಿಗಳು ಮತ್ತು ಜವಾಬ್ದಾರಿಗಳ ಸಂಕ್ಷಿಪ್ತ ಸ್ಥಿತಿ**

*(ಕೋಟಿ ರೂಪಾಯಿಗಳಲ್ಲಿ)*

| ಜವಾಬ್ದಾರಿಗಳು | | | | ಆಸ್ತಿಗಳು | | | |
|---|---|---|---|---|---|---|---|
| | 2016–17 | 2017–18 | ವೃದ್ಧಿಯ ದರ ಶೇಕಡ | | 2016–17 | 2017–18 | ವೃದ್ಧಿಯ ದರ ಶೇಕಡ |
| *ಸಂಚಿತ ನಿಧಿ* | **1,46,283** | **1,63,135** | **12** | *ಸಂಚಿತ ನಿಧಿ* | **2,20,528** | **2,56,146** | **16** |
| *ಅ. ಆಂತರಿಕ ಋಣ* | 1,32,489 | 1,48,581 | 12 | ಬಂಡವಾಳ ವೆಚ್ಚ | 2,04,950 | 2,35,614 | 15 |
| ಆ. ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳು | 13,794 | 14,555 | 6 | ಸಾಲಗಳು ಮತ್ತು ಮುಂಗಡಗಳು | 15,578 | 20,533 | 32 |
| ಆಯವ್ಯಯದ ಹೊರಗಿನ ಸಾಲಗಳು | **10,248** | **13,173** | **29** | ನಗದು | **34,354** | **26,184** | **(-)24** |
| *ಸಾರ್ವಜನಿಕ ಲೆಕ್ಕ ** | **64,788** | **69,923** | **8** | | | | |
| *ಅ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ* | 24,920 | 27,731 | 11 | | | | |
| ಆ.ಮೀಸಲು ನಿಧಿಗಳು | 16,384 | 16,874 | 3 | | | | |
| ಇ.ಠೇವಣಿಗಳು | 23,484 | 25,318 | 8 | | | | |

*ಆಕರ: ಹಣಕಾಸು ಲೆಕ್ಕಗಳು.*

** ಜವಾಬ್ದಾರಿಗಳು ನಿವ್ವಳ ಆಧಾರಿತವಾಗಿವೆ. ಇವು ಮೀಸಲಿಟ್ಟ ನಿಧಿಗಳಿಂದ ಮಾಡಿದ ₹10,272 ಕೋಟಿ (2016–17) ಮತ್ತು ₹12,801 (2017–18) ಹೂಡಿಕೆಗಳನ್ನು ಒಳಗೊಂಡಿಲ್ಲ.*

ಆಸ್ತಿಗಳ ವೃದ್ಧಿಯ ದರವು 2016–17ರಲ್ಲಿ ಹಾಗೂ 2017–18ರಲ್ಲಿ ಶೇಕಡ 16ರಲ್ಲಿದ್ದು, ಆಯವ್ಯಯದ ಹೊರಗಿನ ಸಾಲವನ್ನು ಸೇರಿದಂತೆ ಜವಾಬ್ದಾರಿಗಳ ವೃದ್ಧಿಯ ದರವು 2016–17ರಲ್ಲಿ ಶೇಕಡ 19ರಷ್ಟಿದ್ದು, 2017–18ರಲ್ಲಿ ಶೇಕಡ 12ಕ್ಕೆ ಇಳಿದಿದೆ.

ಹಣಕಾಸು ಲೆಕ್ಕಗಳು, ಎಲ್ಐಸಿ, ಜಿಐಸಿ, ನಬಾರ್ಡ್, ಎನ್ಸಿಡಿಸಿ ಮುಂತಾದವುಗಳ ಲೆಕ್ಕಗಳಲ್ಲಿದ್ದ ₹588.44 ಕೋಟಿಗಳ ವ್ಯತ್ಯಾಸವನ್ನು ಪರಿಗಣಿಸಿದ ನಂತರ 2017–18ರ ಅಂತ್ಯಕ್ಕೆ ಬಾಕಿಯಿದ್ದ ₹1,48,581 ಕೋಟಿಗಳನ್ನು ಆಂತರಿಕ ಋಣವೆಂದು ತೋರಿಸಿದೆ. ಮುಂದುವರೆದು, ಭಾರತೀಯ ರಿಸರ್ವ್ ಬ್ಯಾಂಕು, 31 ಮಾರ್ಚ್ 2018ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಬಾಕಿ ಶಿಲ್ಕುಗಳ ತನ್ನ ತ್ರೈಮಾಸಿಕ ವಿವರಣಾ ಪಟ್ಟಿಯಲ್ಲಿ ಬಡ್ಡಿರಹಿತ ಮಾರುಕಟ್ಟೆ ಸಾಲಗಳ ಆಖೈರು ಶಿಲ್ಕನ್ನು ₹0.15 ಕೋಟಿಗಳೆಂದು ತೋರಿಸಿದೆ. ಆದರೆ, ಹಣಕಾಸು ಲೆಕ್ಕಗಳು, ₹0.70 ಕೋಟಿಗಳ ಮೊತ್ತವನ್ನು ತೋರಿಸಿದ್ದು ಇದು ಸಾಲಶಿಲ್ಕುಗಳ (ಬಂಡವಾಳ ಲೆಕ್ಕ) ಹೊಂದಾಣಿಕೆಯ ಅಗತ್ಯವನ್ನು ಸೂಚಿಸುತ್ತದೆ. ಅಲ್ಲದೆ, ರಾಜ್ಯದ ಹಣಕಾಸು ಲೆಕ್ಕಗಳಲ್ಲಿ ಕಾಣಿಸಿರುವ ಕೆಲವು ಸಾಲ ಶಿಲ್ಕುಗಳು ರಿಜರ್ವ್ ಬ್ಯಾಂಕ್ ಪುಸ್ತಕಗಳಲ್ಲಿ ಸೂಚಿಸಿಲ್ಲ (ಎರಡು ಪ್ರಕರಣಗಳು). ಏಳು ಪ್ರಕರಣಗಳಲ್ಲಿ ಶಿಲ್ಕುಗಳಲ್ಲಿ ವ್ಯತ್ಯಾಸವಿದ್ದು ಹೊಂದಾಣಿಕೆ ಆಗಬೇಕಾಗಿದೆ. ನಾಲ್ಕು ಪ್ರಕರಣಗಳಲ್ಲಿ ಮಹಾಲೇಖಪಾಲರು (ಲೆ ಮತ್ತು ಹ) ಲೆಕ್ಕಪುಸ್ತಕಗಳಲ್ಲಿನ ಶಿಲ್ಕು ರಿಜರ್ವ್ ಬ್ಯಾಂಕಿನೊಂದಿಗೆ ತಾಳೆ ಆಗಿವೆ.

ಅಲ್ಲದೆ, ರಿಜರ್ವ್ ಬ್ಯಾಂಕ್ ಹೇಳಿರುವಂತೆ ಒಳಶೀರ್ಷಿಕೆ 106 ಅಡಿ ಲೆಕ್ಕಹಾಕಲಾದ ಪರಿಹಾರ ಬಾಂಡುಗಳಿಗೆ ಸಂಬಂಧಿಸಿದಂತೆ ₹0.40 ಕೋಟಿಗಳ ಶಿಲ್ಕು ಮೊತ್ತವು ಇನ್ನೂ ತೀರಿಕೆಯಾಗದೆ ಉಳಿದಿದೆ. ಆದರೆ ಹಣಕಾಸು ಲೆಕ್ಕಗಳಲ್ಲಿ ಬಾಕಿ ಇರುವ ಈ ಸಾಲಗಳು ಪ್ರತಿಬಿಂಬಿತವಾಗಿಲ್ಲ. 2017–18ರ ಅಂತ್ಯಕ್ಕೆ ಭಾರತ ಸರ್ಕಾರದಿಂದ ಪಡೆದ ಸಾಲಗಳ ಬಾಕಿ ಮೊತ್ತವು ₹14,555 ಕೋಟಿಗಳಷ್ಟಿದೆ.

ರಾಜ್ಯ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವ ಆಸ್ತಿಗಳು (ವಿವರಣಾ ಪಟ್ಟಿ–1 : ಮೀಸಲಿಟ್ಟ ನಿಧಿಗಳಿಂದ ಹೂಡಿಕೆ ₹12,801 ಕೋಟಿ) ₹484.36 ಕೋಟಿಗಳ ಮಟ್ಟಿಗೆ ಕಡಿಮೆಯಾಗಿ ತೋರಿಸಿದೆ. ಇದು 2012–13 ಮತ್ತು 2015–16ರ ಅವಧಿಯಲ್ಲಿ ಋಣ ಪರಿಹಾರ ನಿಧಿಯ ಹೂಡಿಕೆಯ ಮೇಲಿನ ಬಡ್ಡಿಗೆ ಸಂಬಂಧಿಸಿದ್ದು ಸರ್ಕಾರದ ಪುಸ್ತಕಗಳಲ್ಲಿ ಇದರ ಉಲ್ಲೇಖವಿಲ್ಲ.

### 1.9.2 ವಿತ್ತೀಯ ಜವಾಬ್ದಾರಿಗಳು

ರಾಜ್ಯಸರ್ಕಾರದ ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ಪ್ರವೃತ್ತಿಯನ್ನು **ಅನುಬಂಧ 1.4**ರಲ್ಲಿ ನೀಡಿದೆ. 2013–14 ರಿಂದ 2017–18ರ ವರ್ಷಗಳ ವಿತ್ತೀಯ ಜವಾಬ್ದಾರಿಗಳ ಸಂಯೋಜನೆಯನ್ನು **ನಕ್ಷೆ 1.15**ರಲ್ಲಿ ತೋರಿಸಿದೆ.

**ನಕ್ಷೆ 1.15: ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ಸಂಯೋಜನೆ ಕೋಟಿ ರೂಪಾಯಿಗಳಲ್ಲಿ**




*ಆಕರ: ಹಣಕಾಸು ಲೆಕ್ಕಗಳು.*

ರಾಜ್ಯದ ವಿತ್ತೀಯ ಜವಾಬ್ದಾರಿಗಳು, ಅವುಗಳ ವೃದ್ಧಿಯ ದರ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ರಾಒಆಂಉ) ಈ ಜವಾಬ್ದಾರಿಗಳ ಅನುಪಾತ, ರಾಜಸ್ವ ಸ್ವೀಕೃತಿಗಳು ಮತ್ತು ಸ್ವಂತ ಸಂಪನ್ಮೂಲಗಳು ಅಲ್ಲದೆ ಈ ಪ್ರಮಿತಿಗಳಿಗೆ ಸಂಬಂಧಿಸಿದಂತೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆಯನ್ನು **ಅನುಬಂಧ–1.4ರಲ್ಲಿ** ತೋರಿಸಿದೆ. ರಾಜ್ಯದ ವಿತ್ತೀಯ ಜವಾಬ್ದಾರಿಗಳು 2013–14ರಲ್ಲಿದ್ದ ₹1,38,261 ಕೋಟಿಗಳಿಂದ 2017–18ರಲ್ಲಿ ₹2,46,231 ಕೋಟಿಗಳಿಗೆ ಏರಿ ಶೇಕಡ 78ರಷ್ಟು ಏರಿಕೆಯನ್ನು ಕಂಡಿತ್ತು.

#### 1.9.2.1 ಆಂತರಿಕ ಋಣ

ಸಂಚಿತ ನಿಧಿಯ ಜವಾಬ್ದಾರಿಗಳ ಭಾಗವಾಗಿರುವ ಆಂತರಿಕ ಋಣವು 2013–14ರಲ್ಲಿ ₹76,428 ಕೋಟಿಗಳಿದ್ದು 2017–18ರಲ್ಲಿ ₹1,48,581 ಕೋಟಿಗಳಾಗಿ ಶೇಕಡ 94ರಷ್ಟು ಏರಿಕೆಯನ್ನು ಕಂಡಿದೆ.

#### 1.9.2.2 ಭಾರತ/ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು

ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು 2013–14ರಲ್ಲಿದ್ದ ₹12,094 ಕೋಟಿಗಳಿಂದ 2017–18ರಲ್ಲಿ ₹14,555 ಕೋಟಿಗಳಿಗೆ ಏರಿ ಶೇಕಡ 20ರಷ್ಟು ಏರಿಕೆಯನ್ನು ತೋರಿಸಿತು.

2016–17ರಲ್ಲಿ ಮಾಡಿದ ಹೆಚ್ಚಿನ ಸಾಲಗಳಿಂದ ಮತ್ತು 2017–18ರಲ್ಲಿನ ಕಡಿಮೆ ಸಾಲಗಳಿಂದ ವಿತ್ತೀಯ ಜವಾಬ್ದಾರಿಗಳ ವೃದ್ಧಿಯ ದರವು ಕ್ರಮವಾಗಿ ಶೇಕಡ 21 ಮತ್ತು ಶೇಕಡ 11ರಷ್ಟಿದ್ದವು. ಅಲ್ಲದೆ, ರಾಜಸ್ವ ಸ್ವೀಕೃತಿಗಳಿಗೆ ವಿತ್ತೀಯ ಜವಾಬ್ದಾರಿಗಳ ಪ್ಲವನತೆಯು 2016–17 ಮತ್ತು 2017–18ರಲ್ಲಿ ಕ್ರಮವಾಗಿ ಶೇಕಡ 1.71 ಮತ್ತು ಶೇಕಡ 1.10ರಷ್ಟಿದ್ದವು. ಸ್ವಂತ ಸಂಪನ್ಮೂಲಗಳಿಗೆ ವಿತ್ತೀಯ ಜವಾಬ್ದಾರಿಗಳ ಅನುಪಾತದ ಪ್ಲವನತೆಯು 2013–14ರಲ್ಲಿನ ಶೇಕಡ 1.03ರಿಂದ ಕ್ರಮೇಣ 2017–18ರಲ್ಲಿ ಶೇಕಡ 2.07ಕ್ಕೆ ಏರಿತು.

### 1.9.3 ಆಯವ್ಯಯದ ಹೊರಗಿನ ಸಾಲಗಳು

ಭಾರತದ ಸಂವಿಧಾನದ ಅನುಚ್ಛೇದ 293(1)ರ ಅಡಿಯಲ್ಲಿ ರಾಜ್ಯಸರ್ಕಾರಗಳು ಮಾಡುವ ಸಾಲಗಳನ್ನು ನಿಯಂತ್ರಿಸಲಾಗುತ್ತದೆ. ರಾಜ್ಯ ಸರ್ಕಾರವು ಸರ್ಕಾರಿ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಮಾಡಿರುವ

ಸಾಲಗಳಿಗೆ ಖಾತರಿ ನೀಡಿದೆ. ಈ ಕಂಪೆನಿಗಳು/ನಿಗಮಗಳು/ಸೊಸೈಟಿಗಳು/ರಾಜ್ಯ ಆಯವ್ಯಯದ ಹೊರಗೆ ಯೋಜಿಸಿದ ಅನೇಕ ರಾಜ್ಯ ಯೋಜನೆಗಳ ಅನುಷ್ಠಾನಕ್ಕೆ ಮಾರುಕಟ್ಟೆ/ಹಣಕಾಸು ಸಂಸ್ಥೆಗಳ ಮೂಲಕ ಸಾಲಗಳನ್ನು ಪಡೆದಿವೆ. ಈ ಕಾರ್ಯಕ್ರಮಗಳ ಅನುಷ್ಠಾನವನ್ನು ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಆಯವ್ಯಯ ಹೊರಗಿನ ಮೂಲಗಳಿಂದ ಸಂಗ್ರಹಿಸಿದ ಮೊತ್ತಗಳಲ್ಲಿ ಭರಿಸಬೇಕಾಗಿದ್ದರೂ, ವಾಸ್ತವದಲ್ಲಿ ಈ ಸಂಸ್ಥೆಗಳು ಮಾಡಿದ ಸಾಲಗಳು ಅಂತಿಮವಾಗಿ 'ಆಯವ್ಯಯದ ಹೊರಗಿನ ಸಾಲಗಳು' ಎಂದು ಕರೆಯಲ್ಪಡುವ ರಾಜ್ಯ ಸರ್ಕಾರದ ಜವಾಬ್ದಾರಿಗಳಾಗಿ ಉಳಿದು, ಈ ಕಂಪೆನಿಗಳು/ನಿಗಮಗಳು/ಸೊಸೈಟಿಗಳು ಮಾಡಿದ ಸಾಲಗಳನ್ನು ಬಡ್ಡಿಸಹಿತ ಬಂಡವಾಳ/ರಾಜಸ್ವ ಲೆಕ್ಕದಡಿ ರಾಜ್ಯಸರ್ಕಾರದ ಆಯವ್ಯಯದ ಮೂಲಕವೇ ಮರುಪಾವತಿ ಮಾಡಲಾಗುತ್ತಿದೆ.

2017–18ರಲ್ಲಿ ₹35,760 ಕೋಟಿಗಳ ಬಂಡವಾಳ ವೆಚ್ಚದಲ್ಲಿ ಆಯವ್ಯಯದ ಹೊರಗಿನ ಸಾಲಗಳ ಋಣಸೇವೆಯ ಅಸಲಿಗೆ ಸಂಬಂಧಿಸಿದ ₹575.92 ಕೋಟಿ ಸೇರಿವೆ. ಆದರೆ, ಸಂಸ್ಥೆಗಳ ಲೆಕ್ಕಗಳು ₹575.12 ಕೋಟಿಗಳ ವಿತರಣೆಯನ್ನು ಆಯವ್ಯಯ ಹೊರಗಿನ ಸಾಲಗಳ ಕಡೆಗೆ ಸೂಚಿಸುತ್ತದೆ. **ಕೋಷ್ಟಕ 1.29**ರಲ್ಲಿ 2013–14 ರಿಂದ 2017–18ರ ಅವಧಿಯಲ್ಲಿನ ರಾಜ್ಯ ಸರ್ಕಾರದ ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿಯನ್ನು ಸೂಚಿಸಿದ್ದು, **ಕೋಷ್ಟಕ 1.30**ರಲ್ಲಿ 2017–18ರ ಅಂತ್ಯದಲ್ಲಿದ್ದಂತೆ ಸಂಸ್ಥಾವಾರು ಸಾಲಗಳ ಸ್ಥಿತಿಯನ್ನು ಸೂಚಿಸಲಾಗಿದೆ.

**ಕೋಷ್ಟಕ 1.29: ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿ**

*(ಕೋಟಿ ರೂಪಾಯಿಗಳಲ್ಲಿ)*

| ವರ್ಷ | 2013–14 | 2014–15 | 2015–16 | 2016–17 | 2017–18 |
|---|---|---|---|---|---|
| ಸಂಸ್ಥೆಗಳು ತಿಳಿಸಿರುವಂತೆ ಮೊತ್ತಗಳು* | 1,914.50 | 3,081.50 | 2,372.00 | 3,005.16 | 3,500.23 |

*ಆಕರ: ಸಂಬಂಧಿತ ಸಂಸ್ಥೆಗಳು ವರದಿ ಮಾಡಿದಂತೆ.*

**ಅಂಕಿಗಳನ್ನು ಆಯವ್ಯಯ ಪಕ್ಷಿನೋಟದಲ್ಲಿ ಸೂಚಿಸಿದ ಅಂಕಿಗಳೊಡನೆ ಹೊಂದಾಣಿಕೆ ಮಾಡಬೇಕಿದೆ.*

**ಕೋಷ್ಟಕ 1.30: ಆಯವ್ಯಯದ ಹೊರಗಿನ ಸಾಲಗಳ ಸಂಸ್ಥಾವಾರು ವಿವರಗಳು**

*(ಕೋಟಿ ರೂಪಾಯಿಗಳಲ್ಲಿ)*

| ಕಂಪನಿ/ನಿಗಮ/ಮಂಡಳಿ | ಬಾಕಿಯಿರುವ ಆಯವ್ಯಯದ ಹೊರಗಿನ ಸಾಲಗಳು* | 2017–18ನೇ ವರ್ಷದ ಸಾಲಗಳು | ಮರುಪಾವತಿ 2017–18ನೇ ಸಾಲಿನಲ್ಲಿ | | ಅಂತಿಮ ಶಿಲ್ಕು |
|---|---|---|---|---|---|
| | | | ಅಸಲು | ಬಡ್ಡಿ | |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 5,111.58 | 1,498.23 | 0.58 | 699.97 | 6,609.23 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 2,174.12 | 765.00 | 302.50 | 208.89 | 2,636.62 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 147.17 | 2.00 | 26.01 | 18.00 | 123.16 |
| ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 1,255.76 | - | 186.98 | 90.00 | 1,068.78 |
| ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ | 1.60 | - | 1.60 | 0.08 | - |
| ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ | 23.05 | - | 14.59 | 1.66 | 8.46 |
| ಕಾವೇರಿ ನೀರಾವರಿ ನಿಗಮ ನಿಯಮಿತ | 1,235.00 | 500.00 | - | - | 1,735.00 |
| ವಿಶ್ವೇಶ್ವರಯ್ಯ ಜಲನಿಗಮ ನಿಯಮಿತ | 300.00 | 735.00 | 42.86 | 24.60 | 992.14 |
| ಒಟ್ಟು | **10,248.28** | **3,500.23** | **575.12** | **1,043.20** | **13,173.39** |

** ಈ ಸಂಸ್ಥೆಗಳ ಅಂತಿಮ ಶಿಲ್ಕುಗಳಲ್ಲಿ ವ್ಯತ್ಯಾಸಗಳಿದ್ದುದರಿಂದ (2016–17) ಅವುಗಳನ್ನು 2017–18ರ ಅಂತ್ಯಕ್ಕೆ ಸಂಸ್ಥೆಗಳು ತೋರಿಸಿದ ಅಂತಿಮ ಶಿಲ್ಕಿಗೆ ಸರಿದೂಗಿಸಲು ಅಸಲು ಮರುಪಾವತಿಗಳನ್ನು ಹೊಂದಾಣಿಕೆ ಮಾಡಲಾಗಿತ್ತು.*

ಆಯವ್ಯಯದ ಹೊರಗಿನ ಸಾಲಗಳನ್ನು ಲೆಕ್ಕಕ್ಕೆ ತೆಗೆದುಕೊಂಡಲ್ಲಿ ಮಾರ್ಚ್ 2018ರ ಅಂತ್ಯಕ್ಕೆ ತೋರಿಸಿರುವ ಒಟ್ಟು ಜವಾಬ್ದಾರಿಗಳು ₹2,46,231 ಕೋಟಿಗಳಷ್ಟಿತ್ತು.

#### 1.9.3.1 ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಮ್‌ಟಿಸಿ)

2017–18ರಲ್ಲಿ 1,500 ಹೊಸ ಬಸ್ಸುಗಳ ಖರೀದಿಗಾಗಿ ಬಿಎಮ್‌ಟಿಸಿಯು ಕರ್ನಾಟಕ ನಗರ ಮೂಲಸೌಲಭ್ಯ ಮತ್ತು ಹಣಕಾಸು ನಿಗಮದಿಂದ ₹359.31 ಕೋಟಿಗಳಷ್ಟು ಸಾಲ ಪಡೆಯಿತು. ನಿಗಮದ ಸಾಲ ಮರುಪಾವತಿಯನ್ನು (ಬಡ್ಡಿಯನ್ನು ಸೇರಿ) ಲೆಕ್ಕ ಶೀರ್ಷಿಕೆ 3055–00–190–0–03–240–ಸಾಲ ಮರುಪಾವತಿಯಡಿ ಆಯವ್ಯಯದ ಬೆಂಬಲದ ಮೂಲಕ ಸರ್ಕಾರವು ತನ್ನ ಜಬಾಬ್ದಾರಿಯಾಗಿಸಿಕೊಂಡಿದೆ. ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದ ಅನುಸಾರ ಸಾರ್ವಜನಿಕ ವಲಯ ಉದ್ಯಮಗಳು ಹಾಗೂ ವಿಶೇಷ ಸಾಧನಗಳು ಪಡೆದ ಸಾಲಗಳು ಮತ್ತು ಬಡ್ಡಿಗಳು ರಾಜ್ಯ ಆಯವ್ಯಯದ ಮೂಲಕ ಮರುಪಾವತಿ ಮಾಡಬೇಕಾದ್ದರಿಂದ 2017–18ರಲ್ಲಿ ಬಿಎಮ್‌ಟಿಸಿಯು ಪಡೆದ ಸಾಲವು ರಾಜ್ಯದ ಋಣಗಳ ಭಾಗವಾಗುತ್ತದೆ. ಈ ಸಾಲಗಳು ರಾಜ್ಯ ಸರ್ಕಾರದ ಆಯವ್ಯಯದ ಹೊರಗಿನ ಸಾಲಗಳಾಗುತ್ತವೆ.

ಆಯವ್ಯಯದ ಹೊರಗಿನ ಸಾಲಗಳನ್ನು ತೋರಿಸುವ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ನಂ. 17ರ ಅನುಬಂಧವು ಬಿಎಮ್‌ಟಿಸಿಯ ಸಾಲವನ್ನೊಳಗೊಂಡಿರದೆ, ಆಯವ್ಯಯದ ಹೊರಗಿನ ಸಾಲಗಳನ್ನು ಕಡಿಮೆ ಹೇಳಿದೆ. ಆಯವ್ಯಯದ ಹೊರಗಿನ ಸಾಲಗಳ ರೂಪದಲ್ಲಿ ವಿಸ್ತರಿತ ಸಾರ್ವಜನಿಕ ಋಣ ಜವಾಬ್ದಾರಿಗಳ ವಿವರವನ್ನು ನೀಡುವ ಆಯವ್ಯಯ ಪಕ್ಷಿನೋಟವು ಸಹ ನಿಗಮದ ಸಾಲಗಳನ್ನು ತೋರಿಸದಿದ್ದುದು ಆಯವ್ಯಯ ದಾಖಲೆಗಳ ಪಾರದರ್ಶಕತೆಯನ್ನು ಬಾಧಿಸಿತು.

### 1.9.4 ಸಾರ್ವಜನಿಕ ಲೆಕ್ಕಗಳ ವ್ಯವಹಾರಗಳು

#### 1.9.4.1 ಮೀಸಲು ನಿಧಿಗಳು

ಮೀಸಲುಗಳು ಮತ್ತು ಮೀಸಲು ನಿಧಿಗಳನ್ನು ರಾಜ್ಯಸರ್ಕಾರದ ಲೆಕ್ಕಗಳ 'ಜೆ' ವಿಭಾಗದಡಿ (ಸಾರ್ವಜನಿಕ ಲೆಕ್ಕ) ನಿರ್ದಿಷ್ಟವಾದ ಮತ್ತು ಸ್ಪಷ್ಟವಾಗಿ ವಿವರಿಸಿದ ಉದ್ದೇಶಗಳಿಗಾಗಿ ಸ್ಥಾಪಿಸಲಾಗುತ್ತದೆ. ಈ ನಿಧಿಗಳು ಕೇಂದ್ರದ ಅಥವಾ ರಾಜ್ಯದ ಸಂಚಿತ ನಿಧಿಗಳಿಂದ ಅಥವಾ ಹೊರಗಿನ ಏಜೆನ್ಸಿಗಳ ಅನುದಾನಗಳಿಂದ ಪೂರೈಸಲ್ಪಡುತ್ತವೆ. ವಂತಿಗೆಗಳನ್ನು ಸಂಚಿತನಿಧಿಯಡಿ ವೆಚ್ಚವೆಂದು ಪರಿಗಣಿಸಲಾಗುತ್ತದೆ. ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಆರಂಭದಲ್ಲಿ ಸಂಚಿತ ನಿಧಿಯಲ್ಲಿಯೇ ಲೆಕ್ಕ ಮಾಡಿದ್ದು ಇದಕ್ಕೆ ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ವರ್ಷದ ಕೊನೆಯಲ್ಲಿ ಲೆಕ್ಕಗಳನ್ನು ಮುಕ್ತಾಯಗೊಳಿಸುವಾಗ ಈ ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕದಡಿಯ ಲೆಕ್ಕಕ್ಕೆ ವರ್ಗಾಯಿಸಲಾಗುವುದು. ನಿಧಿಗಳನ್ನು "ಬಡ್ಡಿಸಹಿತ ನಿಧಿಗಳು" ಮತ್ತು "ಬಡ್ಡಿರಹಿತ ನಿಧಿಗಳು" ಎಂದು ವರ್ಗೀಕರಿಸಬಹುದು. ಸಾಧಾರಣವಾಗಿ ಮೀಸಲು ನಿಧಿಗಳನ್ನು, ಅವುಗಳನ್ನು ಭರಿಸುವ ಮೂಲಗಳನ್ನು ಆಧರಿಸಿ ಕೆಳಗಿನ ಮೂರು ವರ್ಗಗಳಡಿ ವಿಂಗಡಿಸಲಾಗಿದೆ.

- ಬೇರೊಂದು ಸರ್ಕಾರದ ಅನುದಾನಗಳಿಂದ ಶೇಖರಿಸಿದ ನಿಧಿಗಳು ಮತ್ತು ಕೆಲವು ಬಾರಿ ಸಾರ್ವಜನಿಕರಿಂದ ಪಡೆದ ಸಹಾಯ;
- ನಿರ್ದಿಷ್ಟ ಉದ್ದೇಶಗಳ ವೆಚ್ಚ ಭರಿಸಲು ಮೀಸಲುಗಳನ್ನು ಸಂದರ್ಭಾನುಸಾರ ಒದಗಿಸಲು ಕೇಂದ್ರ/ರಾಜ್ಯಗಳಿಂದ ಭಾರತದ ಸಂಚಿತ ನಿಧಿ ಅಥವಾ ರಾಜ್ಯದ ಸಂಚಿತ ನಿಧಿಯಿಂದ ಹೊರಗೆ ಇರಿಸಿರುವ ಮೊತ್ತಗಳಿಂದ ಶೇಖರಿಸಿದ ನಿಧಿ, ಉದಾಹರಣೆಗೆ: ಸವಕಳಿನಿಧಿ; ಮತ್ತು
- ರಾಜ್ಯ ಸರ್ಕಾರಕ್ಕೆ ಹೊರಗಿನ ಏಜೆನ್ಸಿಗಳು ನೀಡಿದ ವಂತಿಗೆಯಿಂದ ಶೇಖರಿಸಿದ ನಿಧಿ.

ಪ್ರಸಕ್ತ ವರ್ಷದ ಹಣಕಾಸು ಲೆಕ್ಕಗಳಲ್ಲಿನ "ಲೆಕ್ಕಗಳಿಗೆ ಟಿಪ್ಪಣಿ"ಗಳ ಪ್ರಕಾರ, 31 ಮಾರ್ಚ್ 2018 ರಲ್ಲಿದ್ದಂತೆ ವಿವಿಧ ಮೀಸಲು ನಿಧಿಗಳಡಿ ಒಟ್ಟು ಬಾಕಿಯಿದ್ದ ₹29,674.61 ಕೋಟಿಗಳ ಶಿಲ್ಕಿನಲ್ಲಿ ಕರ್ನಾಟಕ ಸರ್ಕಾರವು ₹12,800.93 ಕೋಟಿಗಳನ್ನು ಹೂಡಿಕೆ ಮಾಡಿದೆ (ಶೇಕಡ 43). ಇದು ಪ್ರಮುಖವಾಗಿ ಮೂಲಸೌಲಭ್ಯ ಯೋಜನೆಗಳ ಮೇಲೆ ಬಂಡವಾಳ ವೆಚ್ಚ (₹10,731 ಕೋಟಿ) ಮತ್ತು ಕ್ರೋಢೀಕೃತ ಋಣಪರಿಹಾರ ನಿಧಿಯಿಂದ ಹೂಡಿಕೆಯಾದ ₹2,070 ಕೋಟಿಗಳ ರೂಪದಲ್ಲಿತ್ತು. ಮಹಾಲೇಖಪಾಲರು (ಲೆ ಮತ್ತು ಹ) ಈ ಕೆಳಗಿನ ಎರಡು ನಿಧಿಗಳನ್ನು ಮುಂದುವರೆಸುವ ಅಗತ್ಯವನ್ನು ವಿಶ್ಲೇಷಿಸಲು ರಾಜ್ಯ ಸರ್ಕಾರವನ್ನು ಕೋರಿದ್ದಾರೆ (ಜೂನ್ 2011).

- ರಾಜ್ಯದ ನವೀಕರಿಸಬಹುದಾದ ನಿಧಿ–ಇದರಲ್ಲಿ 1999–2000ದಿಂದ ಯಾವುದೇ ವ್ಯವಹಾರಗಳು ಇರುವುದಿಲ್ಲ; ಮತ್ತು

- ಖಾತರಿ ಮೀಸಲು ನಿಧಿ – ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸಿನಂತೆ ಇದನ್ನು ಖಾತರಿ ವಿಮೋಚನಾ ನಿಧಿಯೆಂದು ಬದಲಿಸಬೇಕಾಗಿದೆ.

ಸರ್ಕಾರದ ಜವಾಬ್ದಾರಿಗಳ ಮೇಲೆ ಪರಿಣಾಮ ಹೊಂದಿರುವ ಪ್ರಮುಖ ಮೀಸಲು ನಿಧಿಗಳು, ಅದರ ಹಣದ ಹರಿವು ಮತ್ತು ವೆಚ್ಚವನ್ನು ಈ ಕೆಳಗೆ ನೀಡಲಾಗಿದೆ.

### (ಎ) ಕ್ರೋಢೀಕೃತ ಋಣ ಪರಿಹಾರ ನಿಧಿ

ಹನ್ನೆರಡನೆಯ ಹಣಕಾಸು ಆಯೋಗದ ಶಿಫಾರಸಿನಂತೆ ರಾಜ್ಯ ಸರ್ಕಾರವು ಸಾಲಗಳ ಮರುಪಾವತಿಗಾಗಿ ಕ್ರೋಢೀಕೃತ ಋಣ ಪರಿಹಾರ ನಿಧಿಯನ್ನು (ಸಿಎಸ್ಎಫ್) 2012–13ರಲ್ಲಿ ಸ್ಥಾಪಿಸಿತು ಮತ್ತು 2012–13ರಲ್ಲಿ ₹1,000 ಕೋಟಿಗಳನ್ನು ನಿಧಿಯ ಮೂಲಧನಕ್ಕೆ ವರ್ಗಾಯಿಸಿತು. ನಿಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕು ನಿರ್ವಹಿಸುತ್ತದೆ ಮತ್ತು ಮೂಲಧನವನ್ನು ಭಾರತ ಸರ್ಕಾರದ ಭದ್ರತಾ ಪತ್ರಗಳಲ್ಲಿ ಹೂಡಿಕೆ ಮಾಡಲಾಗಿದೆ. ಸರ್ಕಾರದ ಅಧಿಸೂಚನೆಯಂತೆ (ಫೆಬ್ರವರಿ 2013) ಹಿಂದಿನ ಆರ್ಥಿಕ ವರ್ಷದ ಅಂತ್ಯದಲ್ಲಿದ್ದ ಬಾಕಿ ಜವಾಬ್ದಾರಿಗಳ (ಆಯವ್ಯಯದ ಹೊರಗಿನ ಸಾಲಗಳನ್ನು ಹೊರತುಪಡಿಸಿ) ಶೇಕಡ 0.50ರಷ್ಟು ಕನಿಷ್ಠ ವಾರ್ಷಿಕ ವಂತಿಗೆಯನ್ನು ರಾಜ್ಯಸರ್ಕಾರವು ನಿಧಿಗೆ ಜಮೆ ಮಾಡಬೇಕು. 2017–18ರಲ್ಲಿ ಅಗತ್ಯವಿದ್ದ ₹1,055 ಕೋಟಿಗಳಿಗೆದುರಾಗಿ ರಾಜ್ಯ ಸರ್ಕಾರವು ₹350 ಕೋಟಿಗಳನ್ನು ನಿಧಿಗೆ ಪ್ರಧಾನ ಲೆಕ್ಕಶೀರ್ಷಿಕೆ 2048–ಕ್ರೋಢೀಕೃತ ಋಣ ಪರಿಹಾರ ನಿಧಿಗೆ ವಂತಿಗೆಯಡಿ ವಂತಿಗೆಯಾಗಿ ನೀಡಿತು. ಆದಾಗ್ಯೂ 31 ಮಾರ್ಚ್ 2018ರ ಅಂತ್ಯಕ್ಕೆ ರಾಜ್ಯ ಸರ್ಕಾರವು ₹26,184 ಕೋಟಿಗಳಷ್ಟು ಅಧಿಕ ನಗದು ಶಿಲ್ಕನ್ನು ಹೊಂದಿದ್ದರೂ ಹೂಡಿಕೆಯನ್ನು ಮಾಡಿರಲಿಲ್ಲ.

ಹದಿನಾಲ್ಕನೆಯ ಹಣಕಾಸು ಆಯೋಗವೂ ಸಹ ತನ್ನ ವರದಿಯಲ್ಲಿ ಕ್ರೋಢೀಕೃತ ಋಣ ಪರಿಹಾರ ನಿಧಿಯು ವಿವೇಚನಾಯುಕ್ತ ವಿತ್ತೀಯ ನಿರ್ವಹಣೆಯ ಒಂದು ಅವಿಭಾಜ್ಯ ಅಂಗವಾಗಿದೆಯೆಂದು ವಿಶ್ಲೇಷಿಸಿತು. ಕ್ರೋಢೀಕೃತ ಋಣ ಪರಿಹಾರ ನಿಧಿಯು ಆರ್ಥಿಕ/ಮಾರುಕಟ್ಟೆ ಸಂಕಷ್ಟಗಳಲ್ಲಿ ಮರುಪಾವತಿ ಜವಾಬ್ದಾರಿಗಳನ್ನು ನಿರ್ವಹಿಸಲು ಆಧಾರವನ್ನು ಸೃಷ್ಟಿಸುವುದರಿಂದ, ಹೂಡಿಕೆದಾರರ ನಂಬಿಕೆಯನ್ನು ಹೆಚ್ಚಿಸುವ ಮೂಲಕ ಸಾಮಾನ್ಯ ಸಮಯಗಳಲ್ಲೂ ಸಹ ಪ್ರಾಥಮಿಕ ಮಾರುಕಟ್ಟೆಯಲ್ಲಿ ಯುಕ್ತ ಬೆಲೆಗೆ ಸಾಲಗಳನ್ನು ಪಡೆಯಲು ಸಹಾಯ ನೀಡುತ್ತದೆ. ವರ್ಷದ ಅಂತ್ಯದಲ್ಲಿ ನಿಧಿಯಲ್ಲಿನ ಶಿಲ್ಕು ₹2,070 ಕೋಟಿಗಳಲ್ಲೇ ಉಳಿದಿತ್ತು. ಆದಾಗ್ಯೂ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮಾಡಿದ ಮರುಹೂಡಿಕೆಯಿಂದ ಬಂದ ಬಡ್ಡಿ (2014–15ರಿಂದ 2017–18) ಮೊತ್ತ ₹484.36 ಕೋಟಿಗಳು ಲೆಕ್ಕದಲ್ಲಿ ಹಾದು ಹೋಗಿರಲಿಲ್ಲ. 28.02.2013ರ ಅಧಿಸೂಚನೆಯಲ್ಲಿನ ಸೂಚನೆಯನ್ನು ಪಾಲಿಸುವಲ್ಲಿನ ವಿಫಲತೆ ಹಾಗೂ ಹೂಡಿಕೆ ಮಾಡದಿದ್ದುದು ₹1,055 ಕೋಟಿಗಳಷ್ಟು ರಾಜಸ್ವ ವೆಚ್ಚದ ಹಾಗೂ ರಾಜಸ್ವ/ವಿತ್ತೀಯ ಕೊರತೆಯ ಸಂಕುಚಿತತೆದಲ್ಲಿ ಪರಿಣಮಿಸಿತು.

ಕ್ರೋಢೀಕೃತ ಋಣ ಪರಿಹಾರ ನಿಧಿಗೆ ವರ್ಗಾವಣೆ ಮತ್ತು ಹೂಡಿಕೆಯು ರಾಜ್ಯವು ತನ್ನೆಲ್ಲ ವಿತ್ತೀಯ ಅಗತ್ಯತೆಗಳನ್ನು ಸರಿದೂಗಿಸುವ ಸಾಧ್ಯತೆಯ ಮೇಲೆ ಅವಲಂಬಿತವಾಗಿದೆಯೆಂದು ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಜುಲೈ 2017 ಮತ್ತು ಡಿಸೆಂಬರ್ 2017) ತಿಳಿಸಿತು. ಬಾಕಿ ಇರುವ ಜವಾಬ್ದಾರಿಗಳ ನಿರ್ದಿಷ್ಟ ಶತಾಂಶವನ್ನು ವಂತಿಗೆಯ ಮೂಲಕ ನೀಡುವ ಬದ್ಧತೆಯು ಲಭ್ಯವಿರುವ ರಾಜಸ್ವ/ವಿತ್ತೀಯ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿತ್ತದೆ. ಆಯವ್ಯಯದ ತಯಾರಿಯ ಸಮಯದಲ್ಲಿ ಆಗ ಲಭ್ಯವಿರುವ ವಿತ್ತೀಯ ಅವಕಾಶಗಳನ್ನು ಅವಲಂಬಿಸಿರುತ್ತದೆ ಮತ್ತು ಹೂಡಿಕೆಯು ನಗದು ಶಿಲ್ಕಿನ ಮೇಲೆ ಅವಲಂಬಿತವಾಗಿವೆ. ಸರ್ಕಾರವು ತನ್ನ ಸಾಲಗಳಿಂದ ನಿಧಿಗೆ ವಂತಿಗೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದೆ.

ಹೂಡಿಕೆ ಮೇಲಿನ ಬದ್ಧತೆಯು ವರ್ಷದ ಆರಂಭದಲ್ಲೇ ಆಯವ್ಯಯ ಕಸರತ್ತುಗಳ ಭಾಗವಾಗಬೇಕಾದ್ದರಿಂದ ಆರ್ಥಿಕ ಇಲಾಖೆಯ ಉತ್ತರವು ತೃಪ್ತಿಕರವಾಗಿಲ್ಲ. ಅಲ್ಲದೆ ಮೂರರಿಂದ ಐದು ವರ್ಷದ ಅವಧಿಯಲ್ಲಿ ನಿಧಿಯು ಬಾಕಿಯಿರುವ ಜವಾಬ್ದಾರಿಗಳ ಕನಿಷ್ಠ ಶೇಕಡ ಮೂರರಿಂದ ಶೇಕಡ ಐದರಷ್ಟಾಗುವಂತೆ ವರ್ಷಾನುವರ್ಷ ವಂತಿಗೆಯ ಮೂಲಕ ನಿಧಿಯನ್ನು ಬೆಳೆಸುವುದು ಭಾರತೀಯ ರಿಸರ್ವ್ ಬ್ಯಾಂಕಿನ ಶಿಫಾರಸ್ಸಾಗಿದೆ ಹಾಗೂ ವಿವೇಚನಾಯುಕ್ತ ವಿತ್ತೀಯ ನಿರ್ವಹಣೆಯಾಗಿದೆ.

**(ಬಿ) ಹಸಿರು ತೆರಿಗೆ**

ಕರ್ನಾಟಕ ಸರ್ಕಾರವು ಮೋಟಾರು ವಾಹನ ತೆರಿಗೆ (ತಿದ್ದುಪಡಿ) ಅಧಿನಿಯಮ, 2002ರ ಮೂಲಕ ವಾಯುಮಾಲಿನ್ಯವನ್ನು ನಿಯಂತ್ರಿಸುವ 'ಹಸಿರು ತೆರಿಗೆ' ಎಂಬ ಉಪಕರದ ಸಂಗ್ರಹಣೆಯನ್ನು ಪ್ರಾರಂಭಿಸಿತು.

ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ 2016ರ **ಕಂಡಿಕೆ 1.3.1.1**ರಲ್ಲಿ ಹಸಿರು ತೆರಿಗೆ ಉಪಕರ ಸಂಗ್ರಹದ ತಪ್ಪಾದ ಲೆಕ್ಕ ಹಾಕುವಿಕೆ ಮತ್ತು ಬಳಸದಿರುವುದು' ಎಂಬ ಬಗ್ಗೆ ಸಂಗ್ರಹಿಸಿದ ಹಸಿರು ತೆರಿಗೆ ಉಪಕರವನ್ನು ರಾಜಸ್ವ ಸ್ವೀಕೃತಿಗಳ ಲೆಕ್ಕ ಶೀರ್ಷಿಕೆ '0041–00–102–0–11–ಹಸಿರು ತೆರಿಗೆ' ಯಡಿ ಲೆಕ್ಕ ಹಾಕಬೇಕಿದೆ ಎಂದು ಹೇಳಲಾಗಿತ್ತು. ಸಂಗ್ರಹಿಸಿದ ಹಸಿರು ತೆರಿಗೆ[13] ಉಪಕರವನ್ನು ವರ್ಗಾಯಿಸಲು ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳು–8229–00–200–0–63–ಹಸಿರು ತೆರಿಗೆ' ಯಡಿ ಮೀಸಲು ನಿಧಿಯೊಂದನ್ನು ತೆರೆಯಲಾಗಿದೆ.

2006–07ರಿಂದ 2016–17ರವರೆಗೆ ಸಂಗ್ರಹಿಸಿದ ಉಪಕರ ₹57.89 ಕೋಟಿಗಳಲ್ಲದೇ 2017–18ರ ಸಾಲಿನಲ್ಲಿ ₹4.36 ಕೋಟಿಗಳನ್ನು ರಾಜಸ್ವ ಸ್ವೀಕೃತಿಯ ಲೆಕ್ಕಗಳಡಿ ಸಂಗ್ರಹಿಸಲಾಗಿದೆ. ಆದ್ದರಿಂದ 2017–18ರವರೆಗೆ ಸಂಗ್ರಹಿಸಿದ ಒಟ್ಟು ಹಸಿರು ತೆರಿಗೆ ಉಪಕರದ ₹62.25 ಕೋಟಿಗಳನ್ನು ಮತ್ತು ಸಂಬಂಧಿತ ವೆಚ್ಚಗಳನ್ನು ಸಾರ್ವಜನಿಕ ಲೆಕ್ಕಗಳಲ್ಲಿನ ನಿಧಿಯ ಲೆಕ್ಕಕ್ಕೆ ವರ್ಗಾಯಿಸಬೇಕಿದೆ. ಆದಾಗ್ಯೂ, ಹಸಿರು ತೆರಿಗೆ ಉಪಕರದ ರಾಜಸ್ವ ಸ್ವೀಕೃತಿಯ ಸಂಗ್ರಹಗಳನ್ನಾಗಲೀ ಅಥವಾ ಅದರ ಸಂಬಂಧಿತ ವೆಚ್ಚಗಳನ್ನಾಗಲಿ ಸಾರ್ವಜನಿಕ ಲೆಕ್ಕಗಳಿಗೆ ವರ್ಗಾಯಿಸಿಲ್ಲ. ಇದು ರಾಜಸ್ವ ಸ್ವೀಕೃತಿ/ವೆಚ್ಚವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿದೆ.

**(ಸಿ) ಮೂಲಸೌಕರ್ಯ ಪ್ರಾರಂಭ ನಿಧಿ (ಐಐಎಫ್), ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಮ್‌ಆರ್‌ಸಿಎಲ್) ನಿಧಿ ಮತ್ತು ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ (ಸಿಎಮ್‌ಆರ್‌ಆರ್‌ಡಿ) ನಿಧಿ**

1998ರ ಕರ್ನಾಟಕ ಅಧಿನಿಯಮವು ಮಾರಾಟ ತೆರಿಗೆ, ಅಬಕಾರಿ ಸನ್ನದು ಶುಲ್ಕ, ಮೋಟಾರು ವಾಹನ ತೆರಿಗೆ ಮತ್ತು ನ್ಯಾಯಿಕೇತರ ಮುದ್ರಾಂಕ ಶುಲ್ಕಗಳ ಮೇಲೆ ಮೂಲಸೌಕರ್ಯ ಉಪಕರವನ್ನು ವಿಧಿಸಲು ಅನುವು ಮಾಡಿತು. ಸಂಗ್ರಹಿಸಲಾದ ಒಟ್ಟು ಉಪಕರವನ್ನು ಐಐಎಫ್ ಮತ್ತು ಬಿಎಮ್‌ಆರ್‌ಸಿಎಲ್ ನಿಧಿಗಳಿಗೆ ಅನುಪಾತ 2:1ರಲ್ಲಿ ಹಂಚಿಕೆ ಮಾಡಬೇಕಿದ್ದು ಅದನ್ನು 2004ರಲ್ಲಿ ಪರಿಷ್ಕರಿಸಲಾಯಿತು. ಸಂಗ್ರಹಿಸಲಾದ ಒಟ್ಟು ಮೂಲಸೌಕರ್ಯ ಉಪಕರವನ್ನು ಐಐಎಫ್, ಬಿಎಮ್‌ಆರ್‌ಸಿಎಲ್ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗಳ ನಡುವೆ ಕ್ರಮವಾಗಿ ಶೇಕಡ 57, 28 ಮತ್ತು 15ರ ಅನುಪಾತದಲ್ಲಿ ಹಂಚಿಕೆ ಮಾಡಬೇಕಿತ್ತು. 2005ರಲ್ಲಿ ಏಕರೂಪ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪ್ರಾರಂಭವಾದ ನಂತರ ಮೂಲಸೌಕರ್ಯ ಉಪಕರದ ವಿಧಿಸುವಿಕೆಯನ್ನು ನಿಲ್ಲಿಸಲಾಯಿತು ಮತ್ತು ಸರ್ಕಾರವು ನಿಧಿಗೆ ರಾಜ್ಯದ ಸಾಮಾನ್ಯ ಆದಾಯಗಳಿಂದ ವಂತಿಗೆ ಮಾಡಲು ನಿರ್ಧರಿಸಿತು.

ಮೋಟಾರು ವಾಹನ ತೆರಿಗೆ, ಮುದ್ರಾಂಕ ಮತ್ತು ನೋಂದಣಿ ಶುಲ್ಕ ಮತ್ತು ರಾಜ್ಯ ಅಬಕಾರಿಯಿಂದ 2017–18ರಲ್ಲಿ ಸಂಗ್ರಹಿಸಿದ ಮೂಲಸೌಕರ್ಯ ಉಪಕರವನ್ನು (₹1,100.49 ಕೋಟಿ) ಐಐಎಫ್, ಬಿಎಮ್‌ಆರ್‌ಸಿಎಲ್ ನಿಧಿ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗೆ ಹಂಚಿಕೆ ಮಾಡಲಾಗಿತ್ತು. ಹಂಚಿಕೆಯಾದ ಹಣವು ಕ್ರಮವಾಗಿ ₹627.28 ಕೋಟಿ, ₹308.14 ಕೋಟಿ ಮತ್ತು ₹165.07 ಕೋಟಿಗಳಾಗಿದ್ದವು. ಹಿಂದಿನ ವರ್ಷಕ್ಕೆ ಸೇರಿದ ₹240.72 ಕೋಟಿಗಳು ಸೇರಿದಂತೆ ₹2,693.80 ಕೋಟಿಗಳ ಸಂಬಂಧಿತ ವೆಚ್ಚವನ್ನು ನಿಧಿಗೆ ಲೆಕ್ಕ ಹಾಕಲಾಗಿತ್ತು. ಈ ವರ್ಗಾವಣೆ ವ್ಯವಹಾರಗಳನ್ನು ಒಮ್ಮೆ ವಿತ್ತೀಯ ಕೊರತೆಯನ್ನು ಅಧಿಕವಾಗಿ ತೋರಿಸಲು ಹಾಗೂ ಮತ್ತೊಮ್ಮೆ ಹಣಕಾಸು ಕೊರತೆಯನ್ನು ತುಂಬಲು ಎರಡು ಬಾರಿ ಬಳಸಿಕೊಳ್ಳಲಾಗಿತ್ತು.

[13] ಹದಿನೈದು ವರ್ಷಗಳನ್ನು ಪೂರೈಸಿರುವ ದ್ವಿಚಕ್ರ ವಾಹನಗಳು ಮತ್ತು ಸಾರಿಗೆಯೇತರ ವಾಹನಗಳು ಮತ್ತು ಏಳು ವರ್ಷ ಪೂರೈಸಿದ ಸಾರಿಗೆ ವಾಹನಗಳ ಮೇಲೆ ನೋಂದಣಿ ಪ್ರಮಾಣಪತ್ರದ ನವೀಕರಣದ ಸಮಯದಲ್ಲಿ ಅಧಿನಿಯಮದಡಿ ವಿಧಿಸಲಾಗುವ ತೆರಿಗೆಯೊಂದಿಗೆ ವಾಯು ಮಾಲಿನ್ಯದ ನಿಯಂತ್ರಣಕ್ಕೆ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ನಿರ್ದಿಷ್ಟಪಡಿಸಿದ ದರದಲ್ಲಿ ಹಳೆಯ ವಾಹನಗಳ ಮೇಲೆ ಹಸಿರು ತೆರಿಗೆ ಉಪಕರವನ್ನು ವಿಧಿಸಲಾಗುತ್ತಿದೆ.

ಅದಲ್ಲದೇ ಸಾಮಾನ್ಯ ರಾಜಸ್ವಗಳಡಿ ಲಭ್ಯವಿದ್ದ ₹2,768 ಕೋಟಿಗಳನ್ನು ಕ್ರಮವಾಗಿ ಮೂಲಸೌಕರ್ಯ ಪ್ರಾರಂಭ ನಿಧಿಗೆ ₹1,578 ಕೋಟಿ, ಬಿಎಮ್‌ಆರ್‌ಸಿಎಲ್ ನಿಧಿಗೆ ₹775 ಕೋಟಿ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗೆ ₹415 ಕೋಟಿಗಳನ್ನು ವರ್ಗಾಯಿಸಲಾಯಿತು. ಸಾಮಾನ್ಯ ಆದಾಯದಿಂದ ಹಣದ ವರ್ಗಾವಣೆಯು ರಾಜಸ್ವ ವೆಚ್ಚ ಮತ್ತು ವಿತ್ತೀಯ ಕೊರತೆಯನ್ನು ಕೃತಕವಾಗಿ ಹಿಗ್ಗಿಸುವ ಪರಿಣಾಮವನ್ನು ಹೊಂದಿತ್ತು. ಮುಂದುವರೆದು, ಅದು ಸಾರ್ವಜನಿಕ ಲೆಕ್ಕಗಳಲ್ಲಿನ ಜವಾಬ್ದಾರಿಗಳನ್ನು ಹೆಚ್ಚಿಸುವಲ್ಲಿ ಪರಿಣಮಿಸಿತಲ್ಲದೇ ಅದೇ ಮೊತ್ತವನ್ನು ಸಾರ್ವಜನಿಕ ಲೆಕ್ಕದಲ್ಲಿನ ಹೆಚ್ಚಳದಿಂದ ವಿತ್ತೀಯ ಕೊರತೆಯನ್ನು ಪೂರೈಸಲು ಬಳಸಲಾಯಿತು.

### (ಡಿ) ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್)

ರಾಜ್ಯ ವಿಪತ್ತು ಪರಿಹಾರ ನಿಧಿಯು (ಎಸ್‌ಡಿಆರ್‌ಎಫ್) ವಿಪತ್ತು ನಿರ್ವಹಣಾ ಕಾಯಿದೆ, 2005ರಡಿ ರಚಿಸಲಾಗಿದ್ದು, ಇದು 2010–11ರಿಂದ ಬಡ್ಡಿಸಹಿತ ಮೀಸಲು ನಿಧಿಯಡಿ ಕಾರ್ಯಕಾರಿಯಾಗಿದೆ. ಮಾರ್ಗಸೂಚಿಗಳ ಅನುಸಾರ ಎಸ್‌ಡಿಆರ್‌ಎಫ್‌ನ ಹೂಡಿಕೆಗಳ ಮೇಲೆ ಗಳಿಸಿದ ಆದಾಯಗಳೊಂದಿಗೆ ಎಸ್‌ಡಿರ್‌ಎಫ್‌ನ ಸಂಚಯ ಮೊತ್ತಗಳನ್ನು ಒಂದು ಅಥವಾ ಹೆಚ್ಚಿನ ಸಾಧನಗಳಲ್ಲಿ ಅಂದರೆ ಕೇಂದ್ರ ಸರ್ಕಾರದ ದಿನಾಂಕಿತ ಭದ್ರತೆಗಳು, ಹರಾಜು ಹಾಕಿದ ಖಜಾನೆ ಬಿಲ್ಲುಗಳು ಮತ್ತು ಬಡ್ಡಿ ಗಳಿಸುವ ಠೇವಣಿಗಳು ಮತ್ತು ಅನುಸೂಚಿತ ವಾಣಿಜ್ಯ ಬ್ಯಾಂಕುಗಳಲ್ಲಿ ಠೇವಣಿಗಳ ಪ್ರಮಾಣಪತ್ರಗಳಲ್ಲಿ ಹೂಡಬೇಕಿದೆ. ಬರ, ಪ್ರವಾಹ, ಸೈಕ್ಲೋನ್, ಭೂಕಂಪ, ಅಗ್ನಿದುರಂತ ಇತ್ಯಾದಿ ಪ್ರಕೃತಿ ವಿಕೋಪಗಳು ಈ ಯೋಜನೆಯಡಿ ಪರಿಹಾರಕ್ಕೆ ಅರ್ಹವಾಗಿವೆ.

ಭಾರತ ಸರ್ಕಾರದ ವಂತಿಗೆಯು ಶೇಕಡ 75ರಷ್ಟಿದ್ದು, ಉಳಿಕೆ ಶೇಕಡ 25 ರಾಜ್ಯ ಸರ್ಕಾರದಿಂದ ಬರಬೇಕಿತ್ತು. ಆದರೆ, ಹದಿನಾಲ್ಕನೆಯ ಹಣಕಾಸು ಆಯೋಗವು ನಿಧಿಗೆ ಭಾರತ ಸರ್ಕಾರದಿಂದ 90 ಹಾಗೂ ರಾಜ್ಯ ಸರ್ಕಾರದಿಂದ 10 ಅಂದರೆ 90:10 ಅನುಪಾತವನ್ನು ಶಿಫಾರಸು ಮಾಡಿತ್ತು. ಭಾರತ ಸರ್ಕಾರವು ರಾಜ್ಯಗಳ ಶೇಕಡಾಪಾಲು ಮುಂಚಿನಂತೆಯೇ (75:25) ಮುಂದುವರೆಯುವುದು ಮತ್ತು ಹರಿವು ಸಹ ಹಾಲಿ ವ್ಯವಸ್ಥೆಯಲ್ಲಿರುವಂತೆಯೇ ಇರುವುದು ಮತ್ತು ಜಿಎಸ್‌ಟಿಯು ಜಾರಿಯಾದ ನಂತರ ವಿಪತ್ತು ಪರಿಹಾರದ ಬಗೆಗಿನ ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದೆಂಬ ಬದಲಾವಣೆಯೊಂದಿಗೆ ಒಪ್ಪಿಕೊಂಡಿತು. ಜುಲೈ 2017ರಿಂದ ಜಿಎಸ್‌ಟಿಯ ಅನುಷ್ಠಾನವಾಗಿದ್ದರೂ, 2017–18ರಲ್ಲಿ ನಿಧಿಗೆ ವಂತಿಗೆಯು 75:25ರ ಅನುಪಾತದಲ್ಲಿಯೇ ಮುಂದುವರೆದಿದೆ.

2017–18ರಲ್ಲಿ ಒಟ್ಟು ₹1,218.04 ಕೋಟಿಗಳನ್ನು ನಿಧಿಗೆ ವರ್ಗಾಯಿಸಲಾಯಿತು (ಕೇಂದ್ರ ಸರ್ಕಾರದ ವಂತಿಗೆ ₹228.75 ಕೋಟಿ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿಗೆ ರಾಜ್ಯದ ವಂತಿಗೆ ₹76.25 ಕೋಟಿ) ಮತ್ತು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಕೇಂದ್ರ ಸರ್ಕಾರದ ವಂತಿಗೆ ₹913.24 ಕೋಟಿ). ನಿಧಿಯ ಒಟ್ಟು ₹2,453.56 ಕೋಟಿಗಳ ಶಿಲ್ಕಿನಲ್ಲಿ ₹2,411.58 ಕೋಟಿ ಮೊತ್ತವನ್ನು 2245–ಪ್ರಕೃತಿ ವಿಕೋಪ ಪರಿಹಾರದಡಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಯಿತು ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ವೆಚ್ಚ ಮಾಡಿದಂತೆ ತೋರಿಸಲಾಗಿತ್ತು. ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಮೊತ್ತವನ್ನು ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಇಡಲಾಗಿತ್ತು. ಜಿಲ್ಲಾಧಿಕಾರಿಗಳ ಎಸ್‌ಡಿಆರ್‌ಎಫ್‌ನ ವೈಯಕ್ತಿಕ ಖಾತೆಗಳಲ್ಲಿ ಬಳಸದೇ ಉಳಿದಿದ್ದ ಶಿಲ್ಕುಗಳನ್ನು ಲೆಕ್ಕಗಳಲ್ಲಿ ತೋರಿಸದೇ ಸಾಮಾನ್ಯ ಶಿಲ್ಕುಗಳೊಂದಿಗೆ ಬೆರೆಸಲಾಗಿತ್ತು. ಆದ್ದರಿಂದ ಈ ಬಳಕೆಯಾಗದ ಶಿಲ್ಕುಗಳು ಸಾರ್ವಜನಿಕ ಲೆಕ್ಕಗಳಲ್ಲಿ ನಿಧಿಯ ಲೆಕ್ಕವು ಅಷ್ಟರಮಟ್ಟಿಗೆ ಕಡಿಮೆ ಹೇಳುವಲ್ಲಿ ಪರಿಣಮಿಸಿತು. ಇದು ಸಂಚಿತ ನಿಧಿಯಲ್ಲಿ ವಿಪತ್ತು ಪರಿಹಾರದೆಡೆಗಿನ ವೆಚ್ಚವನ್ನು ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು. ಮಾರ್ಚ್ 31, 2018ರಲ್ಲಿದ್ದಂತೆ ನಿಧಿಯಲ್ಲಿನ ಶಿಲ್ಕು ₹41.98 ಕೋಟಿಗಳಷ್ಟಿತ್ತು.

ಅದಲ್ಲದೆ, ರಾಜ್ಯ ಸರ್ಕಾರವು ರಾಜ್ಯ ವಿಪತ್ತು ಪರಿಹಾರ ನಿಧಿಗೆ ಓವರ್‌ಡ್ರಾಫ್ಟ್‌ಗಳಿಗೆ ಅನ್ವಯಿಸುವ ದರದಲ್ಲಿ ಬಡ್ಡಿಯನ್ನು ಪಾವತಿಸಬೇಕಿತ್ತು ಮತ್ತು ಪ್ರಧಾನಶೀರ್ಷಿಕೆ '2049–ಬಡ್ಡಿ ಪಾವತಿಗಳು' ಅಡಿ ಭರಿಸಿ ಅರ್ಧವಾರ್ಷಿಕ ಆಧಾರದ ಮೇಲೆ ಜಮೆ ಮಾಡಬೇಕಿತ್ತು. ಆದಾಗ್ಯೂ, 2017–18ರಲ್ಲಿ ನಿಧಿ ಶಿಲ್ಕುಗಳ ಮೇಲೆ ಬಡ್ಡಿಯನ್ನು ಪಾವತಿಸಿರಲಿಲ್ಲ.

### (ಇ) ರಾಜ್ಯ ನಗರ ಸಾರಿಗೆ ನಿಧಿ (ಎಸ್‌ಯುಟಿಎಫ್)

ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯದ ಶಿಫಾರಸಿನ ಆಧಾರದ ಮೇಲೆ ಕರ್ನಾಟಕ ಸರ್ಕಾರವು ರಾಜ್ಯ ಹಣಕಾಸು ಆಯೋಗದ ಅನುದಾನಗಳಿಂದ ₹10 ಕೋಟಿ ಮೂಲಧನದೊಂದಿಗೆ ನವೆಂಬರ್ 2010ರಲ್ಲಿ ಎಸ್‌ಯುಟಿಎಫ್‌ಅನ್ನು ರಚಿಸಿತು. ಆರಂಭದಲ್ಲಿ ನಿಧಿಯನ್ನು ನಗರ ಸಾರಿಗೆ ಪ್ರಕ್ರಿಯೆಗಳಿಗೆ ಸಹಾಯ ನೀಡಲು ಬಡ್ಡಿಯಿರುವ ಠೇವಣಿಗಳಡಿ ರಚಿಸಲಾಯಿತು. ಮಾರ್ಚ್ 2012ರಲ್ಲಿ ಬಡ್ಡಿರಹಿತ ಮೀಸಲು ನಿಧಿಯಡಿ ಪ್ರಧಾನ ಶೀರ್ಷಿಕೆ '8229–ಅಭಿವೃದ್ಧಿ ಮತ್ತು ಕಲ್ಯಾಣ ನಿಧಿ'ಅಡಿ ಆಯವ್ಯಯ ಅನುದಾನ, ಮೋಟಾರು ವಾಹನ ನೋಂದಣಿ ಮೇಲಿನ ಉಪಕರ (ಶೇಕಡ ಒಂದು) ಮತ್ತು ಆಸ್ತಿ ತೆರಿಗೆ ಮೇಲಿನ ಉಪಕರಗಳಿಂದ ಬರುವ ಪ್ರಾಪ್ತಿಗಳಿಂದ ಮತ್ತೊಂದು ನಿಧಿಯನ್ನು ರಚಿಸಲಾಯಿತು.

2017–18ರಲ್ಲಿ ₹101.38 ಕೋಟಿಗಳಷ್ಟು ಪ್ರಾರಂಭಿಕ ಜಮಾಶಿಲ್ಕನ್ನು ಹೊಂದಿದ ನಿಧಿಗೆ ಮೋಟಾರು ವಾಹನ ತೆರಿಗೆಯ ಮೇಲಿನ ಉಪಕರದಿಂದ ₹45.27 ಕೋಟಿ, ಆಸ್ತಿ ತೆರಿಗೆಯ ಮೇಲಿನ ಉಪಕರದಿಂದ ₹5.95 ಕೋಟಿ ಮತ್ತು ಸಾಮಾನ್ಯ ರಾಜಸ್ವಗಳಿಂದ ₹20.00 ಕೋಟಿಗಳನ್ನು ಜಮೆ ಮಾಡಲಾಯಿತು. ಹೀಗೆ, ₹71.22 ಕೋಟಿಗಳನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಯಿತು. ಆದಾಗ್ಯೂ, ಬಂಡವಾಳ ಶೀರ್ಷಿಕೆಯಡಿ ಭರಿಸಿದ ವೆಚ್ಚವನ್ನು ನಿಧಿಯ ಲೆಕ್ಕಕ್ಕೆ ವರ್ಗಾಯಿಸದಿದ್ದರಿಂದ 31 ಮಾರ್ಚ್ 2018ರಂದು ₹172.60 ಕೋಟಿಗಳಷ್ಟು ಶಿಲ್ಕು ಉಳಿಯಿತು. ಇದು ಬಂಡವಾಳ ವೆಚ್ಚ ಮತ್ತು ವಿತ್ತೀಯ ಕೊರತೆಯನ್ನು ಅಷ್ಟರಮಟ್ಟಿಗೆ ಅಧಿಕವಾಗಿ ಹೇಳುವಲ್ಲಿ ಪರಿಣಮಿಸಿತು.

### (ಎಫ್) ಅರಣ್ಯ ಅಭಿವೃದ್ಧಿ ನಿಧಿ

ಅರಣ್ಯ ಅಭಿವೃದ್ಧಿ ತೆರಿಗೆಯ ಮೂಲಕ ಸಂಗ್ರಹಿಸಿದ ಹಣವು ಸರ್ಕಾರದ ಆದಾಯವಾಗಿ ಜಮೆಯಾಗುತ್ತದೆ ಮತ್ತು ಇದಕ್ಕೆ ಸಮನಾದ ಮೊತ್ತವನ್ನು ಸಾರ್ವಜನಿಕ ಲೆಕ್ಕದಡಿ ಅರಣ್ಯ ಅಭಿವೃದ್ಧಿ ನಿಧಿಗೆ ವರ್ಗಾಯಿಸಲಾಗುತ್ತದೆ. ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿಯ ಕಾಮಗಾರಿಗಳಿಗೆ ಮಾಡಿದ ವಾಸ್ತವ ವೆಚ್ಚವನ್ನು ಲೆಕ್ಕ ಹೊಂದಾಣಿಕೆಯ ಮೂಲಕ ಲೆಕ್ಕ ಶೀರ್ಷಿಕೆ 8229–00–200–0–04 ರಡಿ ನಿಧಿಯ ಲೆಕ್ಕಕ್ಕೆ ವರ್ಗಾಯಿಸಲಾಗುತ್ತದೆ.

1 ಏಪ್ರಿಲ್ 2017ರಂದು ಈ ನಿಧಿಯಲ್ಲಿ ₹2,565.94 ಕೋಟಿ ಶಿಲ್ಕು ಇದ್ದಿತು. 2017–18ರಲ್ಲಿ ₹381.15 ಕೋಟಿಗಳನ್ನು ನಿಧಿಗೆ ಜಮೆ ಮಾಡಲಾಗಿದೆ. ಆದರೆ, ಪ್ರಸಕ್ತ ಸಾಲಿನಲ್ಲಿನ ₹299.09 ಕೋಟಿಗಳ ವೆಚ್ಚವನ್ನು ನಿಧಿಗೆ ವರ್ಗಾಯಿಸಿರಲಿಲ್ಲ. 31 ಮಾರ್ಚ್ 2018ರಲ್ಲಿದ್ದಂತೆ ನಿಧಿಯಲ್ಲಿನ ಶಿಲ್ಕು ₹2,947.09 ಕೋಟಿಗಳಷ್ಟಿತ್ತು. ರಾಜಸ್ವ ಸ್ವೀಕೃತಿಗಳನ್ನು ಮಾತ್ರ ನಿಧಿಗೆ ವರ್ಗಾಯಿಸಿ ತತ್ಸಂಬಂಧಿತ ವೆಚ್ಚವನ್ನು ವರ್ಗಾಯಿಸದಿರುವುದು ರಾಜಸ್ವ ವೆಚ್ಚ ಮತ್ತು ವಿತ್ತೀಯ ಕೊರತೆಯನ್ನು ಅಷ್ಟರಮಟ್ಟಿಗೆ ಅಧಿಕವಾಗಿ ತೋರಿಸಲಾಗಿದೆ. ಇದು ಸಾರ್ವಜನಿಕ ಲೆಕ್ಕದಲ್ಲಿನ ಜವಾಬ್ದಾರಿಗಳನ್ನು ಅಧಿಕಗೊಳಿಸಿದೆ.

### ನಿಷ್ಕ್ರಿಯ ಮೀಸಲು ನಿಧಿಗಳು

ಮಾರ್ಚ್ 31, 2018ರಲ್ಲಿದ್ದಂತೆ, 127 ಮೀಸಲು ನಿಧಿಗಳಲ್ಲಿ 108 ನಿಧಿಗಳು ನಿಷ್ಕ್ರಿಯವಾಗಿ ಉಳಿದಿದ್ದವು. ಆ 108 ನಿಷ್ಕ್ರಿಯ ಮೀಸಲು ನಿಧಿಗಳಲ್ಲಿ, 83 ಮೀಸಲು ನಿಧಿಗಳಲ್ಲಿ ಶೂನ್ಯ ಶಿಲ್ಕಿದ್ದು, 14 ಮೀಸಲು ನಿಧಿಗಳು ₹5,282.77 ಕೋಟಿಗಳ ಜಮಾ ಶಿಲ್ಕನ್ನು ಹೊಂದಿದ್ದು 11 ಮೀಸಲು ನಿಧಿಗಳು ₹4,539.89 ಕೋಟಿಗಳ ಖರ್ಚಿನ ಶಿಲ್ಕನ್ನು ಹೊಂದಿದ್ದವು. ಮೀಸಲು ನಿಧಿಗಳಡಿಯ ನಿವ್ವಳ ಸರ್ಕಾರದ ಜವಾಬ್ದಾರಿಯು ₹742.88 ಕೋಟಿಗಳಷ್ಟು ಹೆಚ್ಚಾಗಿದ್ದು ಲೆಕ್ಕಗಳ ಮೇಲೆ ಪರಿಣಾಮವಾಗಿತ್ತು.

## 1.9.5. ಸಾಂದರ್ಭಿಕ ಜವಾಬ್ದಾರಿಗಳು

### 1.9.5.1. ಖಾತರಿಗಳ ಸ್ಥಿತಿ

ಖಾತರಿ ನೀಡಿದ ಸಾಲಗಾರರು ಸಾಲ ತೀರಿಸದಿದ್ದಲ್ಲಿ ಖಾತರಿಗಳು ರಾಜ್ಯದ ಸರ್ಕಾರದ ಸಾಂದರ್ಭಿಕ ಜವಾಬ್ದಾರಿಗಳಾಗುತ್ತವೆ. ಹಿಂದಿನ ಐದು ವರ್ಷಗಳ ವಿವರಗಳನ್ನು **ಅನುಬಂಧ 1.4ರಲ್ಲಿ** ನೀಡಲಾಗಿದೆ.

ಕರ್ನಾಟಕ ಖಾತರಿಗಳ ಮೇಲಿನ ಮಿತಿ ಕಾಯಿದೆ, 1999 ಯು ಯಾವುದೇ ವರ್ಷದ ಕೊನೆಗೆ ಸರ್ಕಾರವು ನೀಡಿದ ಖಾತರಿ ಬಾಕಿಯು ಹಿಂದಿನ ಎರಡನೇ ವರ್ಷದಲ್ಲಿನ ರಾಜ್ಯ ರಾಜಸ್ವ ಸ್ವೀಕೃತಿಗಳ ಶೇಕಡ 80ರಷ್ಟನ್ನು ಮೀರಬಾರದೆಂಬ ಮಿತಿಯನ್ನು ವಿಧಿಸುತ್ತದೆ, ಪ್ರತಿ ವರ್ಷದ ಏಪ್ರಿಲ್ 1ರಂದು ಬಾಕಿ ಇರುವ

ಖಾತರಿಗಳು ನಿಗದಿಪಡಿಸಿದ ಈ ಮಿತಿಯ ಒಳಗಿದೆ. 2017–18ರ ಅಂತ್ಯಕ್ಕೆ ಬಾಕಿ ಇದ್ದ ₹18,416 ಕೋಟಿಗಳು (ಅಸಲು+ಬಡ್ಡಿ) ನೀರಾವರಿ (₹11,496 ಕೋಟಿ), ಸಹಕಾರ (₹1,796 ಕೋಟಿ), ಹಣಕಾಸು (₹1,395 ಕೋಟಿ), ಇಂಧನ (₹605 ಕೋಟಿ), ವಸತಿ (₹2,316 ಕೋಟಿ), ಸಾರಿಗೆ (₹200 ಕೋಟಿ) ಮತ್ತಿತರ ವಲಯಗಳ (₹608 ಕೋಟಿ) ಕೆಳಗೆ ಬರುವ 161 ಸಂಸ್ಥೆಗಳು/ಕಂಪನಿಗಳಿಗೆ ನೀಡಿದ ಖಾತರಿಯನ್ನು ಒಳಗೊಂಡಿದೆ.

ಸರ್ಕಾರವು ವರದಿ ಮಾಡಿದಂತೆ ಅಂದಾಜಿಸಿದ ಒಟ್ಟು ಖಾತರಿ ಶುಲ್ಕ ₹355.83 ಕೋಟಿಗಳ ಬದಲಾಗಿ ಕೇವಲ ₹148.04 ಕೋಟಿ ಮಾತ್ರ 2017–18ನೇ ವರ್ಷದಲ್ಲಿ ಸ್ವೀಕೃತಿಯಾಗಿತ್ತು. ಈ ರೀತಿ ಸ್ವೀಕರಿಸಿದ ಖಾತರಿ ಶುಲ್ಕವು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ (₹0.01 ಕೋಟಿ), ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹11.63 ಕೋಟಿ), ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (₹0.52 ಕೋಟಿ) ಮತ್ತು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (₹1.64 ಕೋಟಿ) ಸಹಾಯಧನ/ಸಹಾಯಾನುದಾನ/ಹಣಕಾಸು ಸಹಾಯ ರೀತಿಯಲ್ಲಿ ಪುಸ್ತಕ ಹೊಂದಾಣಿಕೆ ಮಾಡಿದ ರಾಜ್ಯ ಸರ್ಕಾರಕ್ಕೆ ಪಾವತಿಮಾಡಬೇಕಿದ್ದ ಖಾತರಿ ಶುಲ್ಕವನ್ನು ಸಹ ಒಳಗೊಂಡಿತ್ತು. ತತ್ಪರಿಣಾಮವಾಗಿ ಸ್ವೀಕರಿಸಿದ ಖಾತರಿ ಶುಲ್ಕದ ನಿವ್ವಳ ಕೊರತೆಯು ₹221.59 ಕೋಟಿಗಳಷ್ಟಿತ್ತು (ಪುಸ್ತಕ ಹೊಂದಾಣಿಕೆಯ ₹13.80 ಕೋಟಿಗಳನ್ನು ಬಿಟ್ಟು ₹355.83 ಕೋಟಿಗಳಿಂದ ₹134.24 ಕೋಟಿಗಳನ್ನು ಕಳೆದಿರುವುದು).

ಶಾಸಕಾಂಗಗಳ ಮುಂದೆ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ (2016–20) ಖಾತರಿಗಳು ಸಾಂದರ್ಭಿಕ ಜವಾಬ್ದಾರಿಗಳನ್ನು ಹೆಚ್ಚಿಸುವುದರಿಂದ ಅವುಗಳನ್ನು, ಸಾಲಗಾರನ ಸಾಲ ತೀರಿಸುವ ಸಾಮರ್ಥ್ಯ, ಖಾತರಿಯ ಮೂಲಕ ಒಳಗೊಳ್ಳುವ ಮೊತ್ತ ಮತ್ತು ಅಪಾಯಗಳು, ಸಾಲದ ಷರತ್ತುಗಳು, ಸಾರ್ವಜನಿಕ ಕಾರಣ ಮತ್ತು ಸಮರ್ಥನೆ, ವಿವಿಧ ಬದ್ಧತೆಗಳು, ಬಾಕಿಯಾಗುವ ಸಾಧ್ಯತೆಗಳು ಮತ್ತು ಅಂತಹ ಜವಾಬ್ದಾರಿಗಳ ಬೆಲೆಯಂಥವುಗಳನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ಸಾಲದ ಪ್ರಸ್ತಾವನೆಯನ್ನು ಪರೀಕ್ಷಿಸುವ ರೀತಿಯಲ್ಲಿಯೇ ಪರಿಶೀಲಿಸಬೇಕು ಮತ್ತು ಕಾರ್ಯಶೀಲ ಖಾತರಿ ಮೀಸಲು ನಿಧಿ ಮತ್ತು ಖಾತರಿ ಕಾರ್ಯನೀತಿಯ ಉಪಯುಕ್ತತೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಸರ್ಕಾರವು ಹೇಳಿದೆ.

ಸಾರ್ವಜನಿಕ ಲೆಕ್ಕ ಸಮಿತಿಯೂ (ಜುಲೈ 2015) ಸಹ ಖಾತರಿ ಮೀಸಲು ನಿಧಿಯನ್ನು ಕಾರ್ಯಶೀಲಗೊಳಿಸಿ ಮುಂದುವರಿಸಲು ಕ್ರಮ ವಹಿಸಬೇಕೆಂದು ಶಿಫಾರಸು ಮಾಡಿದೆ.

## 1.10 ಋಣ ನಿರ್ವಹಣೆ

### 1.10.1 ಋಣ ಚಿತ್ರಣ

ಸರ್ಕಾರದ ಆದಾಯವು ಎರಡು ರೀತಿಯಲ್ಲಿರುತ್ತದೆ. ರಾಜಸ್ವ ಸ್ವೀಕೃತಿಗಳು ಎಂದು ಕರೆಯಲ್ಪಡುವ ಪ್ರಸಕ್ತ ಆದಾಯಗಳು ತೆರಿಗೆಗಳ ನಿರ್ವಹಣೆ, ಬಳಕೆದಾರರ ಶುಲ್ಕ ಮತ್ತು ಕೇಂದ್ರ ಸರ್ಕಾರದಿಂದ ಬರುವ ಅನುದಾನಗಳ ಮೂಲಕ ಸಂಗ್ರಹವಾಗುತ್ತದೆ. ಬಂಡವಾಳ ಸ್ವೀಕೃತಿಗಳು, ಸಾಲಗಳು, ಋಣೇತರ ಸ್ವೀಕೃತಿಗಳು ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಅಧಿಕ್ಯವನ್ನು ಒಳಗೊಂಡಿವೆ. ಋಣಗಳನ್ನು ಲೆಕ್ಕ ಹಾಕಲು ಕೆಲವು ಪುಸ್ತಕ ಹೊಂದಾಣಿಕೆಗಳನ್ನು ನಗದು ರೂಪದ ವ್ಯವಹಾರಗಳ ಹಾಗೆಯೇ ಎಂಬಂತೆ ಪರಿಗಣಿಸಲಾಗುತ್ತದೆ. ಇಂತಹ ವ್ಯವಹಾರಗಳು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ಬಾಕಿ, ವಿದ್ಯಾರ್ಥಿಗಳಿಗೆ/ಹಿರಿಯರಿಗೆ ರಿಯಾಯಿತಿ ಪಾಸುಗಳ ನೀಡಿಕೆ ಮುಂತಾದ ಸಹಾಯಧನದ ರೂಪದಲ್ಲಿದ್ದು, ಇವುಗಳನ್ನು ಒಂದು ಕಡೆ ವೆಚ್ಚವೆಂದು, ಮತ್ತೊಂದು ಕಡೆ ಆದಾಯವೆಂದು ಆಯಾ ಸ್ವೀಕೃತಿ ಶೀರ್ಷಿಕೆಗಳಡಿ (ತೆರಿಗೆ/ತೆರಿಗೆಯೇತರ) ತೋರಿಸಲಾಗುತ್ತದೆ. 2017–18ನೇ ವರ್ಷದಲ್ಲಿ ಈ ರೀತಿಯ ವ್ಯವಹಾರದ ಮೊತ್ತವು ₹1,416 ಕೋಟಿಗಳಷ್ಟಿದೆ. ಈ ವ್ಯವಹಾರಗಳು ವಾಸ್ತವವಾಗಿ ಸ್ವೀಕೃತಿಯಿಲ್ಲದೆ ತೆರಿಗೆ/ತೆರಿಗೆಯೇತರ ಆದಾಯವನ್ನು ತೋರಿಸಿರುವ ಪರಿಣಾಮವನ್ನು ಉಂಟು ಮಾಡಿದೆ. ಪುಸ್ತಕ ಹೊಂದಾಣಿಕೆಯ ಮೂಲಕ ಲೆಕ್ಕಮಾಡಲಾದ ಮೊತ್ತವು ₹1,362 ಕೋಟಿ (ತೆರಿಗೆ ಆದಾಯ) ಮತ್ತು ₹54 ಕೋಟಿ (ತೆರಿಗೆಯೇತರ ಆದಾಯ) ವಾಗಿದ್ದು ಒಟ್ಟು ರಾಜಸ್ವ ಸ್ವೀಕೃತಿಗಳ ಶೇಕಡ ಒಂದರಷ್ಟಿತ್ತು.

**ಕೋಷ್ಟಕ 1.31**ರಲ್ಲಿ ಸರ್ಕಾರದ ಸಂಚಿತ ನಿಧಿಯಲ್ಲಿ ಮತ್ತು ಸಾರ್ವಜನಿಕ ಲೆಕ್ಕದಲ್ಲಿನ ಬಾಕಿ ಇರುವ ವಿತ್ತೀಯ ಜವಾಬ್ದಾರಿಗಳ ವಿವರಗಳನ್ನು ತಲಾ ಜವಾಬ್ದಾರಿಗೆ ಹೋಲಿಸಿದಂತೆ ನೀಡಲಾಗಿದೆ.

**ಕೋಷ್ಟಕ 1.31: ರಾಜ್ಯದ ಋಣ ಚಿತ್ರಣ**

*(ಕೋಟಿ ರೂಪಾಯಿಗಳಲ್ಲಿ)*

| ಸಾಲದ ಮೂಲ | 2013–14 | 2014–15 | 2015–16 | 2016–17 | 2017–18 |
|---|---|---|---|---|---|
| ಮುಕ್ತ ಮಾರುಕಟ್ಟೆ ಸಾಲಗಳು | 53,326 | 69,419 | 84,334 | 1,08,359 | 1,25,708 |
| ಸಮಾಲೋಚಿತ ಸಾಲಗಳು | 3,372 | 3,318 | 3,482 | 3,973 | 4,289 |
| ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿ ಸಾಲಗಳು | 19,730 | 20,167 | 21,729 | 20,157 | 18,584 |
| ಭಾರತ ಸರ್ಕಾರದಿಂದ ಪಡೆದ ಸಾಲಗಳು | 12,094 | 12,681 | 13,002 | 13,794 | 14,555 |
| ಸಾರ್ವಜನಿಕ ಲೆಕ್ಕ ಸಾಲಗಳು | 46,796 | 52,968 | 53,076 | 64,788 | 69,922 |
| ಆಯವ್ಯಯದ ಹೊರಗಿನ ಸಾಲಗಳು | 2,943 | 5,726 | 7,699 | 10,248 | 13,173 |
| ಒಟ್ಟು ವಿತ್ತೀಯ ಜವಾಬ್ದಾರಿಗಳು | 1,38,261 | 1,64,279 | 1,83,322 | 2,21,319 | 2,46,231 |
| ಜನಸಂಖ್ಯೆ (ಕೋಟಿಗಳಲ್ಲಿ) | 6.28 | 6.35 | 6.42 | 6.49 | 6.56 |
| ತಲಾ ಸಾಲದ ಅನುಪಾತ (ರೂಪಾಯಿಗಳಲ್ಲಿ) | 22,016 | 25,871 | 28,555 | 34,102 | 37,535 |

*ಆಕರ: ಹಣಕಾಸು ಲೆಕ್ಕಗಳು ಮತ್ತು 2017–18ರ ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ*

2013–14ರಿಂದ 2017–18ರ ಅವಧಿಯಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಶೇಕಡ 136ರಷ್ಟು ಮತ್ತು ಭಾರತ ಸರ್ಕಾರದ ಸಾಲಗಳು ಶೇಕಡ 20ರಷ್ಟು ಹೆಚ್ಚಾಗಿದ್ದವು. 2013–14ರಲ್ಲಿ ₹46,796 ಕೋಟಿಗಳಿದ್ದ ಸಾರ್ವಜನಿಕ ಲೆಕ್ಕದ ಸಾಲಗಳು 2017–18ರಲ್ಲಿ ₹69,922 ಕೋಟಿಗಳಾಗಿ ಶೇಕಡ 49ರಷ್ಟು ಹೆಚ್ಚಾಗಿತ್ತು. ಆಯವ್ಯಯದ ಹೊರಗಿನ ಸಾಲಗಳು 2013–14ರಲ್ಲಿ ₹2,943 ಕೋಟಿಗಳಿದ್ದು 2017–18ರಲ್ಲಿ ₹13,173 ಕೋಟಿಗಳಾಗಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 29ರಷ್ಟು ಹೆಚ್ಚಾಗಿದ್ದಿತು. 2013–14ರಲ್ಲಿ ₹22,016ರಷ್ಟಿದ್ದ ತಲಾ ಸಾಲವು 2017–18ರಲ್ಲಿ ₹37,535 ಗಣನೀಯವಾಗಿ ಏರಿದ್ದು ಶೇಕಡ 70ರಷ್ಟು ಹೆಚ್ಚಾಗಿದೆ.

### 1.10.2 ಋಣ ಸಹಿಷ್ಣುತೆ

ರಾಜ್ಯ ಸರ್ಕಾರದ ಋಣ ಮೊತ್ತಗಳ ಪ್ರಮಾಣಗಳಲ್ಲದೆ ರಾಜ್ಯದ ಋಣ ಸಹಿಷ್ಣುತೆಯನ್ನು ನಿರ್ಧರಿಸುವ ವಿವಿಧ ಸೂಚಕಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಋಣ ಸಹಿಷ್ಣುತೆಯು ಕಾಲಕಾಲಕ್ಕೆ ಋಣ– ರಾಒಆಂಉದ ಸ್ಥಿರ ಅನುಪಾತವನ್ನು ಕಾಯ್ದುಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ ಮತ್ತು ಅದರ ಋಣ ಸೇವೆಯ ಕಾಳಜಿಯನ್ನು ಮೂರ್ತಗೊಳಿಸುತ್ತದೆ. ಈ ವಿಭಾಗವು ರಾಒಆಂಉದ ಶತಾಂಶವಾಗಿ ಋಣ, ಬಾಕಿ ಇರುವ ಋಣದ ವೃದ್ಧಿಯ ದರ, ಬಡ್ಡಿ ಪಾವತಿಗಳು/ರಾಜಸ್ವ ಸ್ವೀಕೃತಿಗಳ ಅನುಪಾತ, ಮತ್ತು ನಿವ್ವಳ ಋಣಗಳ ಲಭ್ಯತೆಯ ಮೂಲಕ ರಾಜ್ಯದ ಋಣಸಹಿಷ್ಣುತೆಯನ್ನು ನಿರ್ಣಯಿಸುತ್ತದೆ. **ಕೋಷ್ಟಕ 1.32**ರಲ್ಲಿ 2013–14 ರಿಂದ 2017–18ರ ಅವಧಿಯಲ್ಲಿನ ರಾಜ್ಯದ ಋಣ ಸಹಿಷ್ಣುತೆಯನ್ನು ಈ ಸೂಚಕಗಳನ್ವಯ ವಿಶ್ಲೇಷಿಸಲಾಗಿದೆ.

**ಕೋಷ್ಟಕ 1.32: ಋಣಸಹಿಷ್ಣುತೆ–ಸೂಚಕಗಳು ಮತ್ತು ಪ್ರವೃತ್ತಿಗಳು**

*(ಶೇಕಡಾವಾರಿನಲ್ಲಿ)*

| ಋಣ ಸಹಿಷ್ಣುತೆಯ ಸೂಚಕಗಳು | 2013-14 | 2014-15 | 2015-16 | 2016-17 | 2017-18 |
|---|---|---|---|---|---|
| ಋಣ*/ರಾಒಆಂಉ | 10.84 | 11.57 | 12.10 | 12.92 | 12.44 |
| ಬಾಕಿ ಇರುವ ಋಣದ ವೃದ್ಧಿಯ ದರ | 17.95 | 19.28 | 16.06 | 19.37 | 11.52 |
| ರಾಒಆಂಉವೃದ್ಧಿಯ ದರ | 18.06 | 11.75 | 10.97 | 11.81 | 15.76 |
| ಋಣದ ಸರಾಸರಿ ಬಡ್ಡಿ ದರ [ಬಡ್ಡಿಯ ಪಾವತಿಗಳು/(ಸಾರ್ವಜನಿಕ ಋಣದ ಆರಂಭಿಕ ಶಿಲ್ಕು + | 9.81 | 10.10 | 9.94 | 9.56 | 9.68 |

| ಋಣ ಸಹಿಷ್ಣುತೆಯ ಸೂಚಕಗಳು | 2013-14 | 2014-15 | 2015-16 | 2016-17 | 2017-18 |
|---|---|---|---|---|---|
| ಸಾರ್ವಜನಿಕ ಋಣದ ಅಂತಿಮ ಶಿಲ್ಕು/2)] | | | | | |
| ಬಡ್ಡಿ / ರಾಜಸ್ವ ಸ್ವೀಕೃತಿಗಳು | 8.96 | 9.41 | 9.55 | 9.65 | 10.18 |
| ರಾಜ್ಯದ ನಿವ್ವಳ ಋಣ ಲಭ್ಯತೆ (ಕೋಟಿ ರೂಪಾಯಿಗಳಲ್ಲಿ) | 7,117 | 9,324 | 8,060 | 13,609 | 5,005 |
| ಋಣ ಮರುಪಾವತಿ/ಋಣ ಸ್ವೀಕೃತಿಗಳು | 58.83 | 57.37 | 61.75 | 56.32 | 80.08 |

*ಆಕರ: ಹಣಕಾಸು ಲೆಕ್ಕಗಳು.*

** ಸಾರ್ವಜನಿಕ ಲೆಕ್ಕಗಳಡಿಯ ಜವಾಬ್ದಾರಿಗಳು ಮತ್ತು ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಿಲ್ಲ.*
*** ಬಡ್ಡಿ ಪಾವತಿಯ ಸೇರ್ಪಡೆಯಿಂದ ಅಂಕಿಗಳು ಹಿಂದಿನ ವರ್ಷಗಳ ವರದಿಗಿಂತ ಭಿನ್ನವಾಗಿದೆ.*

- 2017–18ರಲ್ಲಿ ಬಾಕಿ ಇರುವ ಋಣದ ವೃದ್ಧಿಯ ದರವು ಶೇಕಡ 11.52ರಷ್ಟಿದ್ದು, ಇದು 2013–14 (ಶೇಕಡ 17.95) ಕ್ಕಿಂತಲೂ ಶೇಕಡ 6ರಷ್ಟು ಕಡಿಮೆಯಾಗಿದೆ;
- ಋಣ ಮರುಪಾವತಿ/ಋಣ ಸ್ವೀಕೃತಿಗಳ ಅನುಪಾತದಲ್ಲಿ ಹೆಚ್ಚಳವಾಗಿದ್ದರೂ ಒಟ್ಟು ಋಣ ಸ್ವೀಕೃತಿಗಳಲ್ಲಿ ₹6,034 ಕೋಟಿಗಳಷ್ಟು ಇಳಿಕೆಯಾಗಿದ್ದು, 2017–18ರಲ್ಲಿ ಮಾರುಕಟ್ಟೆ ಸಾಲಗಳಲ್ಲಿ ಈ ವರ್ಷದ ಋಣ ಮರುಪಾವತಿಯು ₹849 ಕೋಟಿಗಳಷ್ಟು ಹೆಚ್ಚಾದ್ದರಿಂದ ಉಂಟಾಗಿದೆ;
- ರಾಜ್ಯಕ್ಕೆ ನಿವ್ವಳ ಋಣ ಲಭ್ಯತೆಯಲ್ಲಿನ ಇಳಿಕೆಗೆ, 2016–17ರಲ್ಲಿ ₹29,238 ಕೋಟಿಯಷ್ಟಿದ್ದ ಆಂತರಿಕ ಋಣ ಸ್ವೀಕೃತಿಯು 2017–18ರಲ್ಲಿ ₹23,179 ಕೋಟಿಗೆ ಇಳಿದಿದ್ದು **(ಅನುಬಂಧ 1.4)** ಮತ್ತು ಭಾರತ ಸರ್ಕಾರದ ಸಾಲ ಮತ್ತು ಮುಂಗಡಗಳು ₹25 ಕೋಟಿಯಷ್ಟು ಏರಿಕೆಯಾಗಿದ್ದು ಮುಖ್ಯ ಕಾರಣವಾಗಿದೆ.

### 1.10.2.1 ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ

ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ ಅನುಪಾತವು (ಐಪಿ/ಆರ್‌ಆರ್) ರಾಜ್ಯದ ಋಣ ಸಹಿಷ್ಣುತೆಯನ್ನು ಸೂಚಿಸುತ್ತದೆ. 2017–18ರಲ್ಲಿ ಐಪಿ/ಆರ್‌ಆರ್ ಅನುಪಾತವು ಶೇಕಡ 10.18ರಷ್ಟಿದ್ದು ಹನ್ನೆರಡನೆಯ ಹಣಕಾಸು ಆಯೋಗದ ಮಿತಿಯಾದ ಶೇಕಡ 15ರೊಳಗಿತ್ತು. 2013–14ರಿಂದ 2017–18ರಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿನ ಪ್ಲವನತೆಯ ಕಾರಣ, ಅನುಪಾತವು ಶೇಕಡ 8.96 ಮತ್ತು ಶೇಕಡ 10.18ರ ಮಧ್ಯೆ ಇದ್ದಿತು. ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮಕ್ಕೆ ಫೆಬ್ರವರಿ 2014ರಲ್ಲಿ ಮಾಡಿದ ತಿದ್ದುಪಡಿಯನುಸಾರ, ಸಾರ್ವಜನಿಕ ವಿಭಾಗದ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶಿತ ಸಾಧನಗಳು ಮತ್ತು ಇತರ ಸಮಾನ ಸಾಧನಗಳು ಮಾಡುವ ಸಾಲಗಳ ಅಸಲು ಮತ್ತು ಬಡ್ಡಿಗಳ ಒಟ್ಟು ಜವಾಬ್ದಾರಿಗಳ ವ್ಯಾಪ್ತಿಯನ್ನು ರಾಜ್ಯದ ಆಯವ್ಯದ ಮೂಲಕವೇ ಭರಿಸುವಂತೆ ಹಿಗ್ಗಿಸಲಾಯಿತು. ಆದ್ದರಿಂದ ರಾಜ್ಯದ ಒಟ್ಟು ಜವಾಬ್ದಾರಿಗಳನ್ನು ಲೆಕ್ಕ ಹಾಕಲು ಆಯವ್ಯಯದ ಹೊರಗಿನ ಸಾಲಗಳು ರಾಜ್ಯದ ಸ್ವಂತ ಜವಾಬ್ದಾರಿಗಳ ಭಾಗವಾಗಿರುತ್ತದೆ.

ರಾಜ್ಯ ಸರ್ಕಾರವು ತನ್ನ ಮಧ್ಯಮಾವಧಿ ವಿತ್ತೀಯ ಯೋಜನೆ 2018–22ರಲ್ಲಿ ಐಪಿ/ಆರ್‌ಆರ್ ಅನುಪಾತಕ್ಕೆ ಲೆಕ್ಕಶೀರ್ಷಿಕೆ 2049ರಡಿ ಪಾವತಿಸಲಾದ ಬಡ್ಡಿಯನ್ನು ಮಾತ್ರ ಪರಿಗಣಿಸಿತ್ತು. ಆದರೆ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯು ಇತರ ಲೆಕ್ಕ ಶೀರ್ಷಿಕೆಗಳ ಮೂಲಕ ಆಗಿದ್ದು, ಅದು ಐಪಿ/ಆರ್‌ಆರ್ ಅನುಪಾತದ ಭಾಗವಾಗಿರಲಿಲ್ಲ. ಆಯವ್ಯದ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಸೇರಿಸದ ಕಾರಣ 2013–14ರಿಂದ 2017–18ರ ಅವಧಿಯಲ್ಲಿ ಐಪಿ/ಆರ್‌ಆರ್ ಅನುಪಾತವು 8.75 ಮತ್ತು 9.48 ನಡುವೆ ಇದ್ದಿತು. ಐಪಿ/ಆರ್‌ಆರ್ ಅನುಪಾತವು ನಿಗದಿಪಡಿಸಿರುವ ಮಿತಿಯೊಳಗಿದ್ದರೂ ರಾಜ್ಯ ಸರ್ಕಾರವು ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಈ ಅನುಪಾತವನ್ನು ಲೆಕ್ಕ ಮಾಡುವಾಗ ಆಯವ್ಯಯದ ಹೊರಗಿನ ಮೇಲಿನ ಬಡ್ಡಿಯನ್ನು ಸೇರಿಸದಿರುವುದನ್ನು ಪರಿಗಣಿಸಬೇಕು.

### 1.10.2.2 ಋಣ ಸ್ಥಿರತೆ

ಸರ್ಕಾರವು ಭವಿಷ್ಯದಲ್ಲಿ ಎದುರಾಗುವಂತಹ ಜವಾಬ್ದಾರಿಗಳಿಗೆ ನೆರವು ನೀಡಲು ಸಾಧ್ಯವಾದರೆ ಮತ್ತು ಋಣ–ರಾಒಆಂಉದ ಅನುಪಾತವು ನಿರ್ವಹಿಸಲಾಗದ ಪ್ರಮಾಣಕ್ಕೆ ವೃದ್ಧಿಸದಿದ್ದರೆ ವಿತ್ತೀಯ ಜವಾಬ್ದಾರಿಗಳು ಸಹಿಷ್ಣುವೆಂದು ಪರಿಗಣಿಸಬಹುದಾಗಿದೆ. ಸ್ಥಿರತೆಗೆ ಒಂದು ಅವಶ್ಯಕವಾದ

ನಿಬಂಧನೆಯೆಂದರೆ ಅರ್ಥವ್ಯವಸ್ಥೆಯ ವೃದ್ಧಿದರವು ಸಾಲಗಳ ಹೊಣೆಯನ್ನು ಮೀರಿದ್ದರೆ, ಪ್ರಾಥಮಿಕ ಶಿಲ್ಕುಗಳು ಧನಾತ್ಮಕ/ಸೊನ್ನೆ/ಅತಿಯಾಗದ ಋಣಾತ್ಮಕವಾಗಿದ್ದ ಪಕ್ಷದಲ್ಲಿ ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಸ್ಥಿರವಾಗಿರುತ್ತದೆ. ಪ್ರಾಥಮಿಕ ರಾಜಸ್ವ ಶಿಲ್ಕು ರಾಜಸ್ವ ಸ್ವೀಕೃತಿಗಳು ಮತ್ತು ಪ್ರಾಥಮಿಕ ರಾಜಸ್ವ ವೆಚ್ಚ ಇವುಗಳ ವ್ಯತ್ಯಾಸವಾಗಿದ್ದು ಪ್ರಸಕ್ತ ರಾಜಸ್ವ ವೆಚ್ಚವನ್ನು ಭರಿಸಿದ ನಂತರ ಉಳಿದಿರುವ ರಾಜಸ್ವ ಸ್ವೀಕೃತಿಯ ಶಿಲ್ಕು, ಬಡ್ಡಿ ವೆಚ್ಚವನ್ನು ಭರಿಸಲು ಸಾಕಷ್ಟಿದೆಯೆ ಎಂಬುದನ್ನು ಸೂಚಿಸುತ್ತವೆ. 2013–14ರಿಂದ 2017–18ರ ಅವಧಿಯಲ್ಲಿ ಪ್ರಾಥಮಿಕ ರಾಜಸ್ವ ಶಿಲ್ಕು ಧನಾತ್ಮಕವಾಗಿದ್ದು, ವೃದ್ಧಿತ ಬಡ್ಡಿ ವೆಚ್ಚವನ್ನು ಭರಿಸಲು ಸಾಕಷ್ಟಿತ್ತು.

### 1.10.2.3 ವೃದ್ಧಿತ ಋಣೇತರ ಸ್ವೀಕೃತಿಗಳ ಪರ್ಯಾಪ್ತತೆ

ಋಣ ಸಹಿಷ್ಣುತೆಯ ಮತ್ತೊಂದು ಸೂಚಕವು ಬಡ್ಡಿ ಜವಾಬ್ದಾರಿಯ ಹೆಚ್ಚಳ ಮತ್ತು ಪ್ರಾಥಮಿಕ ವೆಚ್ಚದ ಹೆಚ್ಚಳಗಳನ್ನು ಭರಿಸಲು ರಾಜ್ಯದ ಋಣೇತರ ಸ್ವೀಕೃತಿಗಳ ಹೆಚ್ಚಳವು ಸಾಕಷ್ಟಿರುವುದು. ಬಡ್ಡಿಯ ಹೊರೆಯ ಹೆಚ್ಚಳ ಮತ್ತು ಪ್ರಾಥಮಿಕ ವೆಚ್ಚದ ಹೆಚ್ಚಳವನ್ನು ಋಣೇತರ ಸ್ವೀಕೃತಿಗಳ ಹೆಚ್ಚಳವು ಭರಿಸುವಂತಾದರೆ ಋಣ ಸಹಿಷ್ಣುತೆಗೆ ಅನುಕೂಲವಾಗುತ್ತದೆ. ಋಣಾತ್ಮಕ ಸಂಪನ್ಮೂಲ ಅಂತರವು ಋಣದ ಅಸಹಿಷ್ಣುತೆಯನ್ನು ಸೂಚಿಸಿದರೆ ಧನಾತ್ಮಕ ಸಂಪನ್ಮೂಲಾಂತರವು ಋಣ ಸಹಿಷ್ಣುತೆಯನ್ನು ಸೂಚಿಸುತ್ತದೆ. **ಕೋಷ್ಟಕ 1.33**ರಲ್ಲಿ ಕಳೆದ ಐದು ವರ್ಷಗಳ ವಿವರಗಳನ್ನು ಸೂಚಿಸಿದೆ.

**ಕೋಷ್ಟಕ 1.33: ಋಣೇತರ ಸ್ವೀಕೃತಿಗಳ ಹೆಚ್ಚಳದ ಪರ್ಯಾಪ್ತತೆ**

*(ಕೋಟಿ ರೂಪಾಯಿಗಳಲ್ಲಿ)*

| ಕ್ರಮ ಸಂಖ್ಯೆ | | 2013–14 | 2014–15 | 2015–16 | 2016–17 | 2017–18 |
|---|---|---|---|---|---|---|
| 1 | ಸಾಲವಲ್ಲದ ಸ್ವೀಕೃತಿಗಳ ವೆಚ್ಚ | 11,372 | 14,497 | 14,993 | 14,112 | 13,800 |
| 2 | ಬಡ್ಡಿಪಾವತಿಗಳ ಹೆಚ್ಚಳ | 573 | 1,777 | 1,539 | 1,507 | 2,123 |
| 3 | ಪ್ರಾಥಮಿಕ ವೆಚ್ಚದ ಹೆಚ್ಚಳ | 13,384 | 15,204 | 13,047 | 22,101 | 14,114 |
| 4 | ಸಂಪನ್ಮೂಲ ಅಂತರ | (-) 2,585 | (-) 2,484 | 407 | (-) 9,496 | (-) 2,437 |

2013–14ರಿಂದ 2014–15ರವರೆಗೆ ಋಣಾತ್ಮಕವಾಗಿದ್ದ ಸಂಪನ್ಮೂಲಾಂತರವು 2015–16ರಲ್ಲಿ ಮತ್ತೆ ಧನಾತ್ಮಕವಾಗಿ ಮತ್ತೆ 2016–17ರಿಂದ 2017–18ರವರೆಗೆ ಋಣಾತ್ಮಕವಾಯಿತು. ಇದಕ್ಕೆ ರಾಜಸ್ವ ಸ್ವೀಕೃತಿಗಳ ವೃದ್ಧಿಯು, ಒಟ್ಟು ವೆಚ್ಚಗಳ ವೃದ್ಧಿಯಷ್ಟೇ ಇದ್ದುದು ಮುಖ್ಯ ಕಾರಣವಾಗಿತ್ತು. ಅಂದರೆ, ರಾಜ್ಯವು ತನ್ನ ಸ್ವಂತ ಸಂಪನ್ಮೂಲಗಳಿಂದ ಪ್ರಸಕ್ತ ಸಾಲಿನ ರಾಜಸ್ವ ಮತ್ತು ಬಂಡವಾಳ ವೆಚ್ಚವನ್ನು ಭರಿಸಲು ಸಾಲಗಳ ಮೂಲಕ ಪಡೆದ ಮೊತ್ತಗಳ ಮೇಲೆ ಅವಲಂಬಿತವಾಗಿತ್ತು.

### 1.10.2.4 ಸಾಲಗಳ ಮೂಲಕ ಪಡೆದ ಮೊತ್ತಗಳ ನಿವ್ವಳ ಲಭ್ಯತೆ

ಋಣ ಸಹಿಷ್ಣುತೆಯು, ಋಣ ವಿಮೋಚನೆ (ಅಸಲು ಮತ್ತು ಬಡ್ಡಿ ಪಾವತಿಗಳು) ಮತ್ತು ಒಟ್ಟು ಋಣ ಸ್ವೀಕೃತಿಗಳ ಅನುಪಾತವನ್ನು ಮತ್ತು ಸಾಲವಾಗಿ ಪಡೆದ ಲಭ್ಯ ಮೊತ್ತಗಳ ಅನ್ವಯವನ್ನು ಅವಲಂಬಿಸಿರುತ್ತವೆ. ಋಣ ವಿಮೋಚನೆ ಮತ್ತು ಋಣ ಸ್ವೀಕೃತಿಗಳ ಅನುಪಾತವು ಋಣ ಸ್ವೀಕೃತಿಗಳು ಎಷ್ಟರ ಮಟ್ಟಿಗೆ ಋಣ ವಿಮೋಚನೆಗೆ ಬಳಸಲ್ಪಟ್ಟಿದೆ ಮತ್ತು ಬಂಡವಾಳ ವೆಚ್ಚಕ್ಕೆ ಸಾಲವಾಗಿ ಪಡೆದ ಮೊತ್ತಗಳ ನಿವ್ವಳ ಲಭ್ಯತೆ ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ. ಋಣ ಸ್ವೀಕೃತಿಗಳಿಗೆ ಋಣ ವಿಮೋಚನೆಯ ಅನುಪಾತವು 2013–14ರಿಂದ 2017–18ರ ಅವಧಿಯಲ್ಲಿ ಶೇಕಡ 56.32 ಮತ್ತು ಶೇಕಡ 80.08 ನಡುವೆ ಇತ್ತು. 2016–17ನೇ ಸಾಲಿನಲ್ಲಿ ಋಣ ವಿಮೋಚನಾ ಅನುಪಾತವು ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಶೇಕಡ 23.76ರಷ್ಟು ಏರಿಕೆಯಾಗಿತ್ತು.

## 1.11 ವಿತ್ತೀಯ ಮಾನದಂಡಗಳು/ಪ್ರಮಿತಿಗಳು

ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳಾದ ಮೂರು ಪ್ರಮುಖ ವಿತ್ತೀಯ ಪ್ರಮಿತಿಗಳು ನಿರ್ದಿಷ್ಟ ಅವಧಿಯೊಂದರಲ್ಲಿ ರಾಜ್ಯಸರ್ಕಾರದ ಒಟ್ಟು ವಿತ್ತೀಯ ಅಸಮತೆಗಳ ವ್ಯಾಪ್ತಿಯನ್ನು ಸೂಚಿಸುತ್ತದೆ. ಸರ್ಕಾರಿ ಲೆಕ್ಕದಲ್ಲಿ ಕೊರತೆಯು ಅದರ ಸ್ವೀಕೃತಿ ಮತ್ತು ವೆಚ್ಚಗಳಲ್ಲಿನ ಅಂತರವನ್ನು ಬಿಂಬಿಸುತ್ತದೆ.

ಕೊರತೆಯ ಸ್ವರೂಪವು ಸರ್ಕಾರದ ವಿತ್ತೀಯ ನಿರ್ವಹಣೆಯ ವಿವೇಚನೆಯ ಸೂಚಕವಾಗಿದೆ. ಅದಲ್ಲದೆ, ಕೊರತೆಯನ್ನು ತುಂಬುವ ಮತ್ತು ಸಂಗ್ರಹಿಸಿದ ಸಂಪನ್ಮೂಲಗಳನ್ನು ಬಳಸುವ ರೀತಿಗಳು ರಾಜ್ಯದ ವಿತ್ತೀಯ ಸ್ವಾಸ್ಥ್ಯದ ಪ್ರಮುಖ ಸೂಚಕಗಳಾಗಿದೆ. ಈ ವಿಭಾಗವು ಕೊರತೆಗಳ ಪ್ರವೃತ್ತಿ, ಸ್ವಭಾವ ಮತ್ತು ಗಾತ್ರಗಳನ್ನು ಹಾಗೂ ಅವುಗಳ ಪೂರೈಕೆಯ ವಿಧಾನವನ್ನು ತೋರಿಸುತ್ತದೆ ಹಾಗೂ 2017–18ರಲ್ಲಿ ರಾಜಸ್ವ ಮತ್ತು ವಿತ್ತೀಯ ಕೊರತೆಗಳು ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮದ ಗುರಿಗಳು ಹಾಗೂ ಅವುಗಳ ನೈಜ ಸ್ತರಗಳ ತುಲನೆಯನ್ನು ಸಹ ನೀಡುತ್ತದೆ.

### 1.11.1 ಕೊರತೆಗಳ ಪ್ರವೃತ್ತಿಗಳು

#### (ಅ) ರಾಜಸ್ವ ಹೆಚ್ಚಳ

ರಾಜಸ್ವ ಹೆಚ್ಚಳವು, ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಪ್ರತಿನಿಧಿಸುತ್ತದೆ. ರಾಜಸ್ವ ಹೆಚ್ಚಳವು ಸಾಲಗಳನ್ನು ಕಡಿಮೆಗೊಳಿಸಲು ಸಹಾಯ ಮಾಡುತ್ತದೆ. ರಾಜಸ್ವ ಹೆಚ್ಚಳವು 2013–14ರಲ್ಲಿದ್ದ ₹353 ಕೋಟಿಯಿಂದ 2015–16ರಲ್ಲಿ ₹1,789 ಕೋಟಿಗಳಿಗೆ ಏರಿದ್ದು 2016–17ರಲ್ಲಿ ₹496 ಕೋಟಿಗೆ ಇಳಿದು ಪುನ: 2017–18ರಲ್ಲಿ ₹4,518ಕ್ಕೆ ಏರಿತ್ತು. ಇದು ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯ ಪಾಲಿನಲ್ಲಿನ ಹೆಚ್ಚಳ ಮತ್ತು ಕೇಂದ್ರ ಸರ್ಕಾರದ ಸಹಾಯಾನುದಾನದಿಂದ ಸಾಧ್ಯವಾಗಿದ್ದು ಸರ್ಕಾರಕ್ಕೆ ಹೆಚ್ಚಳವನ್ನು ಕಾಯ್ದುಕೊಳ್ಳಲು ನೆರವಾಯಿತು.

2017–18ರಲ್ಲಿ ರಾಜಸ್ವ ಸ್ವೀಕೃತಿಗಳ ಮತ್ತು ರಾಜಸ್ವ ವೆಚ್ಚದ ವೃದ್ಧಿಯು ಕ್ರಮವಾಗಿ ಶೇಕಡ 10 ಮತ್ತು 8ರಷ್ಟಿತ್ತು. ಆದ್ದರಿಂದ ರಾಜಸ್ವ ಹೆಚ್ಚಳವು ಗಮನೀಯವಾಗಿ ಹೆಚ್ಚಳವಾಗಿ ರಾಜಸ್ವ ಲೆಕ್ಕದಲ್ಲಿನ ಹೆಚ್ಚಳಕ್ಕೆ ಹೊಣೆಯಾದ ಅಂಶಗಳ ಬಗ್ಗೆ **ಕಂಡಿಕೆ 1.1.2**ರಲ್ಲಿ ಚರ್ಚಿಸಲಾಗಿದೆ.

ರಾಜ್ಯ ಸರ್ಕಾರವು ಮಧ್ಯಮಾವಧಿ ವಿತ್ತೀಯ ಯೋಜನೆ (2016–20)ರಲ್ಲಿ, ರಾಜ್ಯದ ಆಯವ್ಯಯ ಗಾತ್ರವು ವರ್ಷಾವರ್ಷ ಹೆಚ್ಚಾಗಿದ್ದರೂ ಅದರ ಗಣನಾರ್ಹ ಭಾಗವು ಬದ್ಧ ವೆಚ್ಚಗಳಿಂದ ಕೂಡಿದೆ ಎಂದು ಹೇಳಿದೆ. ಇದು ರಾಜ್ಯಕ್ಕೆ ವೆಚ್ಚದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿನ ಹಾದಿಯನ್ನು ಕಡಿಮೆಗೊಳಿಸುತ್ತದೆ ಮತ್ತು ಬದ್ಧವೆಚ್ಚಗಳ ಅಗತ್ಯವನ್ನು ಭರಿಸಿದ ನಂತರ ಸೀಮಿತ ಮೊತ್ತಗಳ ಅವಕಾಶವಿರುತ್ತದೆ. ಆದ್ದರಿಂದ ರಾಜ್ಯ ಸರ್ಕಾರವು ವೆಚ್ಚದ ಭಾಗದಲ್ಲಿ ಅಂತಹ ಬದ್ಧ ವೆಚ್ಚಗಳನ್ನು ಮಿತಗೊಳಿಸಲು, ಮಧ್ಯಮಾವಧಿ ತಿದ್ದುಪಡಿಗಳನ್ನು ಮಾಡುವ ಅವಶ್ಯಕತೆಯಿದೆ.

#### (ಆ) ವಿತ್ತೀಯ ಕೊರತೆ

ವಿತ್ತೀಯ ಕೊರತೆ ಸರ್ಕಾರದ ನಿವ್ವಳ ಜವಾಬ್ದಾರಿಗಳ ಹೆಚ್ಚಳ ಅಥವಾ ಅದರ ಹೆಚ್ಚುವರಿ ಸಾಲಗಳನ್ನು ಸೂಚಿಸುತ್ತದೆ. ಈ ಕೊರತೆಯನ್ನು ಹೆಚ್ಚುವರಿ ಸಾರ್ವಜನಿಕ ಋಣ (ಆಂತರಿಕ ಅಥವಾ ಹೊರಗಿನ) ಅಥವಾ ಸಾರ್ವಜನಿಕ ಲೆಕ್ಕದಿಂದ ಹೆಚ್ಚುವರಿ ನಿಧಿಗಳನ್ನು ಬಳಸುವುದರ ಮೂಲಕ ಪೂರೈಸಬಹುದು. ಪ್ರಮುಖ ಅಂಶಗಳಿಗೆ ಸಂಬಂಧಿಸಿದ ಕೊರತೆಯ ಪ್ರವೃತ್ತಿಗಳೊಂದಿಗೆ ವಿತ್ತೀಯ ಕೊರತೆಯ ಪ್ರವೃತ್ತಿಗಳನ್ನು **ಕೋಷ್ಟಕ 1.34**ರಲ್ಲಿ ಸೂಚಿಸಿದೆ.

**ಕೋಷ್ಟಕ 1.34: ವಿತ್ತೀಯ ಕೊರತೆ ಮತ್ತು ಅದರ ಪ್ರಮಿತಿಗಳು**

*(ಕೋಟಿ ರೂಪಾಯಿಗಳಲ್ಲಿ)*

| ಅವಧಿ | ಋಣೇತರ ಸ್ವೀಕೃತಿಗಳು | ಒಟ್ಟು ವೆಚ್ಚ | ವಿತ್ತೀಯ ಕೊರತೆ | ವಿತ್ತೀಯ ಕೊರತೆಯ ಶತಾಂಶವಾಗಿ | | |
|---|---|---|---|---|---|---|
| | | | | ರಾಜಆಂಉ | ಋಣೇತರ ಸ್ವೀಕೃತಿ | ಒಟ್ಟು ವೆಚ್ಚ |
| 2013–14 | 89,739 | 1,06,831 | 17,092 | 2.09 | 19.50 | 16.00 |
| 2014–15 | 1,04,236 | 1,23,812 | 19,576 | 2.14 | 18.78 | 15.81 |
| 2015–16 | 1,19,229 | 1,38,398 | 19,169 | 1.89 | 16.08 | 13.85 |
| 2016–17 | 1,33,341 | 1,62,005 | 28,664 | 2.53 | 21.50 | 17.69 |
| 2017–18 | 1,47,141 | 1,78,241 | 31,101 | 2.37 | 21.14 | 17.45 |

*ಆಕರ: ಹಣಕಾಸು ಲೆಕ್ಕಗಳು.*

2013–14 ರಿಂದ 2017–18ರ ಅವಧಿಯಲ್ಲಿ ವಿತ್ತೀಯ ಕೊರತೆಯು ರಾಒಆಉದ ಶತಾಂಶವಾಗಿ ಶೇಕಡ 2.09ರಿಂದ ಶೇಕಡ 2.37ಕ್ಕೆ ಮಧ್ಯೆ ಅಲ್ಪ ವ್ಯತ್ಯಯಗಳಿಂದ ಏರಿಕೆಯಾಗಿದೆ. ವಿತ್ತೀಯ ಕೊರತೆಯು ರಾಒಆಉದ, ಋಣೇತರ ಸ್ವೀಕೃತಿಗಳ ಮತ್ತು ಒಟ್ಟು ವೆಚ್ಚದ ಶತಾಂಶವಾಗಿ 2017–18ರಲ್ಲಿ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದ್ದು, ಇದು ರಾಜಸ್ವ ಹೆಚ್ಚಳದಿಂದ/ಇಳಿಕೆಯಾದ ಸಾಲಗಳಿಂದ ಉಂಟಾಗಿದೆ.

### (ಇ) ಪ್ರಾಥಮಿಕ ಕೊರತೆ

ವಿತ್ತೀಯ ಕೊರತೆಯು, ಸಾಮಾನ್ಯವಾಗಿ ಹೆಚ್ಚುವರಿ ಸಂಪನ್ಮೂಲಗಳ ಅವಶ್ಯಕತೆಯನ್ನು ಪ್ರತಿನಿಧಿಸಿದರೆ, ಅಂತಹ ಸಂಪನ್ಮೂಲಗಳ ಒಂದು ಭಾಗವು ರಾಜಸ್ವ ಲೆಕ್ಕಗಳಲ್ಲಿ ಕೊರತೆಯಿರುವ ರಾಜ್ಯಗಳಿಗೆ ಬಡ್ಡಿ ಪಾವತಿಗೆ ಅನುವು ಮಾಡಿಕೊಡುತ್ತವೆ. ಬಡ್ಡಿ ಪಾವತಿಗಳು ಹಿಂದಿನ ವರ್ಷಗಳ ಹೊಣೆಗಾರಿಕೆಗೆ ಸಂಬಂಧಿಸಿದ ವೆಚ್ಚವಾಗಿದ್ದು, ಪ್ರಸಕ್ತ ವೆಚ್ಚಗಳಿಗೆ ಹೊರತಾಗಿರುತ್ತದೆ. ಹಾಲಿ ಇರುವ ಅಸಮತೆಗಳ ಸ್ವರೂಪವನ್ನು ಕಾಣಬೇಕಾದಲ್ಲಿ, ಈ ಪಾವತಿಗಳನ್ನು ಪ್ರತ್ಯೇಕಿಸುವ ಅಗತ್ಯವಿದ್ದು ಒಟ್ಟು ಅಸಮತೆಗಳಿಂದ ಕಳೆಯಬೇಕಾಗುತ್ತದೆ. ಕಳೆದ ಐದು ವರ್ಷಗಳ ಪ್ರಾಥಮಿಕ ಕೊರತೆ ಮತ್ತು ಅವುಗಳ ಪ್ರಮಿತಿಗಳ ವಿವರಗಳನ್ನು **ಕೋಷ್ಟಕ 1.35**ರಲ್ಲಿ ನೀಡಿದೆ.

**ಕೋಷ್ಟಕ 1.35: ಪ್ರಾಥಮಿಕ ಕೊರತೆ ಮತ್ತು ಅದರ ಪ್ರಮಿತಿಗಳು**

*(ಕೋಟಿ ರೂಪಾಯಿಗಳಲ್ಲಿ)*

| ಅವಧಿ | ವಿತ್ತೀಯ ಕೊರತೆ | ಬಡ್ಡಿ ಪಾವತಿಗಳು | ಪ್ರಾಥಮಿಕ ಕೊರತೆ |
|---|---|---|---|
| 2013–14 | 17,092 | 8,027* | 9,065 |
| 2014–15 | 19,576 | 9,804* | 9,772 |
| 2015–16 | 19,169 | 11,343* | 7,826 |
| 2016–17 | 28,664 | 12,850* | 15,814 |
| 2017–18 | 31,101 | 14,973* | 16,128 |

*ಆಕರ: ಹಣಕಾಸು ಲೆಕ್ಕಗಳು.*

** ಕ್ರಮವಾಗಿ 2013–14, 2014–15, 2015–16, 2016–17 ಮತ್ತು 2017–18ನೇ ಸಾಲಿನ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ₹190 ಕೋಟಿ, ₹400 ಕೋಟಿ, ₹597 ಕೋಟಿ, ₹817 ಕೋಟಿ ಮತ್ತು ₹1,043 ಕೋಟಿಗಳನ್ನು ಒಳಗೊಂಡಿದೆ.*

2013–14 ರಿಂದ 2017–18ರ ಅವಧಿಯಲ್ಲಿ ವಿತ್ತೀಯ ಕೊರತೆಯು ಬಹುತೇಕ ಬಡ್ಡಿ ಪಾವತಿಯ ಎರಡರಷ್ಟಿತ್ತು. ರಾಜಸ್ವ ವೆಚ್ಚದ ಅಧಿಕ ಭಾಗವಾದ ಬದ್ಧ ವೆಚ್ಚಗಳನ್ನು ಕಡಿಮೆ ಮಾಡಿದರೆ ರಾಜ್ಯ ಸರ್ಕಾರವು ರಾಜಸ್ವ ಲೆಕ್ಕದಲ್ಲಿ ಗಣನಾರ್ಹ ಅಧಿಕ್ಯವನ್ನು ಸಾಧಿಸಲು ಸಾಧ್ಯವಾಗುತ್ತದೆ. ಸಂಬಳ, ವಿಶ್ರಾಂತಿ ವೇತನ ಹಾಗೂ ಬಡ್ಡಿ ಪಾವತಿಗಳು ಹೊಂದಿಸಲಾಗದ ವೆಚ್ಚಗಳಾಗಿದ್ದು, ಸ್ಥಿರವಾಗಿ ಹೆಚ್ಚುತ್ತಿರುವ ಸಹಾಯಧನ ಮತ್ತು ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಇತರರಿಗೆ ನೀಡುತ್ತಿರುವ ಸಹಾಯಾನುದಾನಗಳ ಕಡೆಗೆ ರಾಜ್ಯ ಸರ್ಕಾರವು ಹೆಚ್ಚು ಗಮನ ಹರಿಸುವುದು ಅವಶ್ಯವಾಗಿದೆ. **ನಕ್ಷೆ 1.16** 2013–14ರಿಂದ 2017–18ರ ಅವಧಿಯಲ್ಲಿ ಕೊರತೆ ಸೂಚಕಗಳಲ್ಲಿನ ಪ್ರವೃತ್ತಿಗಳನ್ನು ಸೂಚಿಸುತ್ತದೆ.

**ನಕ್ಷೆ 1.16: ವಿತ್ತೀಯ ಸೂಚಕಗಳ ಪ್ರವೃತ್ತಿಗಳು**



### 1.11.2 ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ

ವಿತ್ತೀಯ ಕೊರತೆಯನ್ನು ತುಂಬುವ ಹಣಕಾಸಿನ ವಿಧಾನವು **ಅನುಬಂಧ–1.12**ರಲ್ಲಿ ತೋರಿಸಿರುವಂತೆ ಸಂಯೋಜಿತ ಪಲ್ಲಟಗಳಿಗೆ ಈಡಾಗಿದೆ. ವಿತ್ತೀಯ ಕೊರತೆಯ ವಿಭಜನೆಯು, ರಾಜಸ್ವ ಮತ್ತು ಋಣೇತರ ಸ್ವೀಕೃತಿಗಳನ್ನು ಮೀರಿದ ಅಗತ್ಯಗಳನ್ನು ಪೂರೈಸಲು ರಾಜ್ಯ ಸರ್ಕಾರವು ಎಷ್ಟರಮಟ್ಟಿಗೆ ವಿವಿಧ ಸಾಲಗಳನ್ನು ಅವಲಂಬಿಸಿತ್ತು ಎಂಬುದನ್ನು ತೋರಿಸುತ್ತದೆ.

ವಿತ್ತೀಯ ಕೊರತೆಯ ಭಾಗಗಳು, ರಾಜಸ್ವ ಹೆಚ್ಚಳದ ಕಳೆಯುವಿಕೆ, ನಿವ್ವಳ ಬಂಡವಾಳ ವೆಚ್ಚ ಮತ್ತು ನಿವ್ವಳ ಸಾಲ ಮತ್ತು ಮುಂಗಡಗಳಾಗಿವೆ. ರಾಜ್ಯವು ರಾಜಸ್ವ ಹೆಚ್ಚಳವನ್ನು 2004–05ರಲ್ಲಿಯೇ ಸಾಧಿಸಿದ್ದ ಕಾರಣ, ರಾಜಸ್ವ ಲೆಕ್ಕದಲ್ಲಿನ ಹೆಚ್ಚಳವನ್ನು ಮಾರುಕಟ್ಟೆ ಸಾಲಗಳು, ಭಾರತ ಸರ್ಕಾರದಿಂದ ಬಂದ ಸಾಲಗಳೂ ಸೇರಿದಂತೆ ಬಂಡವಾಳ ವೆಚ್ಚಕ್ಕೆ ಬಳಸಲಾಗಿತ್ತು. 2013–14, 2014–15 ಮತ್ತು 2015–16ರಲ್ಲಿ ರಾಜಸ್ವ ಹೆಚ್ಚಳದಿಂದ ಕ್ರಮವಾಗಿ ಬಂಡವಾಳ ವೆಚ್ಚದ ಶೇಕಡ ಎರಡು, ಮೂರು ಮತ್ತು ಒಂಭತ್ತರಷ್ಟು ಭಾಗವನ್ನು ಭರಿಸಲಾಗಿತ್ತು. 2016–17 ಮತ್ತು 2017–18ರಲ್ಲಿ ರಾಜಸ್ವ ಹೆಚ್ಚಳವು ಶೇಕಡ ಐದು ಮತ್ತು ಶೇಕಡ 15ರಷ್ಟು ಬಂಡವಾಳ ವೆಚ್ಚವನ್ನು ಭರಿಸಿತ್ತು.

2017–18ರಲ್ಲಿ ಮಾರುಕಟ್ಟೆ ಸಾಲಗಳಲ್ಲಿ ಸಾಕಷ್ಟು ಇಳಿಕೆಯಾಗಿದ್ದು, ವಿತ್ತೀಯ ಕೊರತೆಯನ್ನು ತುಂಬುವ ಅದರ ಪಾಲು ಶೇಕಡ 56ಕ್ಕೆ ಏರಿತು. ಆದ್ದರಿಂದ ಹಿಂದಿನ ವರ್ಷಕ್ಕೆ ಹೋಲಿಸಿದರೆ ಠೇವಣಿ ಮತ್ತು ಮುಂಗಡಗಳಲ್ಲಿ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲ ಮತ್ತು ಅಮಾನತ್ತು ಮತ್ತು ಇತರ ಶಿಲ್ಕುಗಳಲ್ಲಿ ಇಳಿಕೆಯಾಗಿದ್ದು, ಇದು ಪ್ರಮುಖವಾಗಿ ಚೆಕ್ಕುಗಳು ಮತ್ತು ಬಿಲ್ಲುಗಳಿಗೆ ಸಂಬಂಧಿಸಿದ್ದು, ಇವುಗಳ ವ್ಯವಹಾರಗಳ ನಿವ್ವಳವನ್ನು ವಿತ್ತೀಯ ಕೊರತೆಯನ್ನು ಭರಿಸಲು ಕೂಡಿಸಲಾಗಿದೆ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಯು ಕಳೆದ ವರ್ಷಕ್ಕಿಂತ ಸ್ವಲ್ಪಮಟ್ಟಿಗೆ ಅಧಿಕವಾಗಿತ್ತು. ಹದಿನಾಲ್ಕನೆಯ ಹಣಕಾಸು ಆಯೋಗದನುಸಾರ 1 ಏಪ್ರಿಲ್ 2015ರಿಂದ ಎನ್‌ಎಸ್‌ಎಸ್‌ಎಫ್ ಕಾರ್ಯಾಚರಣೆಯಿಂದ ರಾಜ್ಯ ಸರ್ಕಾರಗಳನ್ನು ಹೊರಗಿಡಲಾಗಿದ್ದು 2016–17ನೆಯ ಆರ್ಥಿಕ ವರ್ಷದಿಂದ ಭಾರತ ಸರ್ಕಾರದಿಂದ ಎನ್‌ಎಸ್‌ಎಸ್‌ಎಫ್ ಅಡಿ ಯಾವುದೇ ಸ್ವೀಕೃತಿಗಳಿರಲಿಲ್ಲ.

### 1.11.3 ಹೆಚ್ಚಳ/ಕೊರತೆಗಳ ಗುಣಮಟ್ಟ

**ಕೋಷ್ಟಕ 1.36**ರಲ್ಲಿ ಪ್ರಾಥಮಿಕ ಕೊರತೆಯ ಸ್ಥಿತಿಯನ್ನು ಅದರ ಅಂಶಗಳ ವಿಭಜನೆಯೊಂದಿಗೆ ನೀಡಲಾಗಿದೆ.

**ಕೋಷ್ಟಕ 1.36: ಪ್ರಾಥಮಿಕ ಕೊರತೆ/ಹೆಚ್ಚಳ–ಅಂಶಗಳ ವಿಭಜನೆ**

*(ಕೋಟಿ ರೂಪಾಯಿಗಳಲ್ಲಿ)*

| ವರ್ಷ | ಋಣೇತರ ಸ್ವೀಕೃತಿಗಳು | ಪ್ರಾಥಮಿಕ ರಾಜಸ್ವ ವೆಚ್ಚ | ಬಂಡವಾಳ ವೆಚ್ಚ | ಸಾಲಗಳು ಮತ್ತು ಮುಂಗಡಗಳು | ಪ್ರಾಥಮಿಕ ವೆಚ್ಚ | ಪ್ರಾಥಮಿಕ ರಾಜಸ್ವ ಕೊರತೆ (–) ಹೆಚ್ಚಳ (+) | ಪ್ರಾಥಮಿಕ ಕೊರತೆ (–) ಹೆಚ್ಚಳ (+) |
|---|---|---|---|---|---|---|---|
| 1 | 2 | 3 | 4 | 5 | 3+4+5=6 | 2–3=7 | 2–6=8 |
| 2013–14 | 89,739 | 81,162 | 16,947 | 695 | 98,804 | 8,577 | (-) 9,065 |
| 2014–15 | 1,04,236 | 93,810 | 19,622 | 576 | 1,14,008 | 10,426 | (-) 9,772 |
| 2015–16 | 1,19,229 | 1,05,686 | 20,713 | 657 | 1,27,054 | 13,544 | (-) 7,826 |
| 2016–17 | 1,33,341 | 1,19,071 | 28,150 | 1,934 | 1,49,155 | 14,270 | (-) 15,814 |
| 2017–18 | 1,47,141 | 1,27,509 | 30,667 | 5,093 | 1,63,269 | 19,632 | (-) 16,128 |

*ಆಕರ: ಹಣಕಾಸು ಲೆಕ್ಕಗಳು.*

2013–14ರಲ್ಲಿ ₹9,065 ಕೋಟಿಗಳಷ್ಟಿದ್ದ ಪ್ರಾಥಮಿಕ ಕೊರತೆಯು 2017–18ರಲ್ಲಿ ₹16,128 ಕೋಟಿಗಳಷ್ಟಾಗಿದೆ. 2017–18ಲ್ಲಿ ವಿತ್ತೀಯ ಕೊರತೆಗೆ ಬಡ್ಡಿ ಪಾವತಿಯ ಶತಾಂಶವು 48ರಷ್ಟಿತ್ತು. ಸಂಕುಚನಗೊಳ್ಳುತ್ತಿರುವ ಪ್ರಾಥಮಿಕ ಕೊರತೆಯು ವಿತ್ತೀಯ ಸ್ವಾಸ್ಥ್ಯದೆಡೆಗೆ ಪ್ರಗತಿಯನ್ನು ಸೂಚಿಸುತ್ತದೆ. ಅದು ಸರ್ಕಾರವು ಪಡೆದ ಸಾಲಗಳಲ್ಲಿ ಎಷ್ಟು ಭಾಗವು ಬಡ್ಡಿ ಪಾವತಿಗಲ್ಲದೆ ಇತರ ವೆಚ್ಚಗಳಿಗೆ

ಬಳಸಲಾಗುತ್ತದೆ ಎಂಬುದನ್ನೂ ಸಹ ಸೂಚಿಸುತ್ತದೆ. ಪ್ರಸಕ್ತ ವರ್ಷದಲ್ಲಿ ಬಡ್ಡಿ ಪಾವತಿಯು ₹14,973 ಕೋಟಿಗಳಿದ್ದು ಹಿಂದಿನ ವರ್ಷಕ್ಕಿಂತ (₹12,850 ಕೋಟಿ) ಶೇಕಡ 17ರಷ್ಟು ಹೆಚ್ಚಿತ್ತು.

## 1.12 ಅನುಸರಣೆ

2009–10ನೇ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಮೇ 2011ರಿಂದ ಆಗಸ್ಟ್ 2011ರ ನಡುವಿನ ಅವಧಿಯಲ್ಲಿ ಚರ್ಚಿಸಿತು. ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಡಿಸೆಂಬರ್ 2011ರಲ್ಲಿ ಶಾಸನಸಭೆಯ ಮುಂದೆ ಮಂಡಿಸಲಾಯಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಂಡ ವರದಿಯನ್ನು ಸೆಪ್ಟೆಂಬರ್ 2014ರಲ್ಲಿ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಮುಂದೆ ಪರಿಗಣನೆಗೆ ಮಂಡಿಸಲಾಯಿತು. ಸಾರ್ವಜನಿಕ ಲೆಕ್ಕ ಸಮಿತಿಯು ಸರ್ಕಾರವು ಮಂಡಿಸಿದ ಕ್ರಮ ತೆಗೆದುಕೊಂಡ ವರದಿಯನ್ನು ಚರ್ಚಿಸಿ, ಮುಂದಿನ ಶಿಫಾರಸುಗಳನ್ನು ಮಾಡಿದ್ದು ಅದನ್ನು ಶಾಸಕಾಂಗದ ಮುಂದೆ 20 ಜುಲೈ 2015ರಂದು ಮಂಡಿಸಿದೆ.

ಸಾರ್ವಜನಿಕ ಲೆಕ್ಕ ಸಮಿತಿಯ ಗಮನಕ್ಕೆ ತರಲು ಅರ್ಹವಾದ ರಾಜ್ಯ ಹಣಕಾಸಿನ ಮುಖ್ಯ ಅಂಶಗಳನ್ನು ಘನಸಮಿತಿಯ ಪರಿಗಣನೆಗಾಗಿ ಮಂಡಿಸಲಾಗಿದೆ.

## 1.13 ಸಮಾಪನ ಅಭಿಪ್ರಾಯಗಳು ಮತ್ತು ಶಿಫಾರಸುಗಳು

### ವಿತ್ತೀಯ ಸ್ಥಿತಿ

2013–14ರಿಂದ 2017–18ರ ಅವಧಿಯಲ್ಲಿ ರಾಜ್ಯವು ರಾಜಸ್ವ ಹೆಚ್ಚಳವನ್ನು ಕಾಯ್ದುಕೊಂಡಿದ್ದು, ರಾಒಆಂಉದ ಸಾಪೇಕ್ಷವಾಗಿ ವಿತ್ತೀಯ ಕೊರತೆಯನ್ನು ಕರ್ನಾಟಕ ಹಣಕಾಸು ಜವಾಬ್ದಾರಿ ಕಾಯಿದೆಯಡಿಯಲ್ಲಿ ಸೂಚಿಸಿದ್ದ ಮಿತಿಯ ಒಳಗೆ ನಿರ್ವಹಿಸಿದೆ.

2017–18ರಲ್ಲಿ ರಾಜಸ್ವ ಹೆಚ್ಚಳವು ₹4,518 ಕೋಟಿಗಳಷ್ಟಿದ್ದು ಇದು ಭಾಗಶ: ಸಾಲಮನ್ನಾದ ₹3,401 ಕೋಟಿಗಳನ್ನು ರಾಜಸ್ವ ಲೆಕ್ಕದಡಿಯ ಬದಲು ಬಂಡವಾಳ ಲೆಕ್ಕದಡಿ ಲೆಕ್ಕ ಹಾಕಿದ್ದರಿಂದಾಗಿತ್ತು. ಕ್ರೋಢೀಕೃತ ಋಣ ಪರಿಹಾರ ನಿಧಿಗೆ ಹೊಂದಾಣಿಕೆ ಮಾಡುವಲ್ಲಿನ ವಿಫಲತೆಯು (₹1,055 ಕೋಟಿಗಳನ್ನು) ರಾಜಸ್ವ ಹೆಚ್ಚಳವನ್ನು ಕಾಯ್ದುಕೊಳ್ಳುವಲ್ಲಿ ನೆರವಾಯಿತು. 2017–18ರಲ್ಲಿ ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (₹13,10,879 ಕೋಟಿ) ಶೇಕಡ 2.37 ರಷ್ಟಿದ್ದು ಇದು ವಿತ್ತೀಯ ಜವಾಬ್ದಾರಿ ಕಾಯಿದೆ ನಿಗದಿಪಡಿಸಿದ ಮಿತಿಯೊಳಗೆ ಇದ್ದಿತು.

*ಶಿಫಾರಸುಗಳು: ವಿತ್ತೀಯ ಮಾನದಂಡಗಳ ನೈಜ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ನೀಡಲು ಸಕಾಲಿಕ ಮತ್ತು ಸರಿಯಾದ ಲೆಕ್ಕ ಹೊಂದಾಣಿಕೆಗಳನ್ನು ಮಾಡಬೇಕಾಗಿದೆ.*

*ಲೆಕ್ಕಹೊಂದಾಣಿಕೆಗಳು ಹೊಂದಾಣಿಕೆಗಳ ತತ್ವಗಳನುಸಾರವಾಗಿದ್ದು, ಭಾಗಶ: ಲೆಕ್ಕ ಹೊಂದಾಣಿಕೆಗಳನ್ನು ತಪ್ಪಿಸಬೇಕು.*

### ರಾಜ್ಯದ ಸ್ವಂತ ಸಂಪನ್ಮೂಲಗಳು

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು 2013–14 ರಲ್ಲಿದ್ದ ಶೇಕಡ 7.67ರಿಂದ 2017–18ರ ಶೇಕಡ 6.65ರಷ್ಟಾಗಿ ಇಳಿಕೆಯ ಪ್ರವೃತ್ತಿಯನ್ನು ತೋರಿಸಿತು. ಆದರೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ತೆರಿಗೆಯೇತರ ಆದಾಯದ ಅನುಪಾತದಲ್ಲಿ ಯಾವುದೇ ಸುಧಾರಣೆ ಕಂಡುಬಾರದೆ ಅದು 2013–14 ರಿಂದ 2017–18ರ ಅವಧಿಯಲ್ಲಿಯೂ ಶೇಕಡ ಒಂದಕ್ಕಿಂತ ಕಡಿಮೆಯಿದೆ.

*ಶಿಫಾರಸುಗಳು: ವೆಚ್ಚ ಸುಧಾರಣಾ ಆಯೋಗದ ಹಾಗೂ ವಿತ್ತೀಯ ನಿರ್ವಹಣಾ ಸಮೀಕ್ಷಾ ಸಮಿತಿಯ (ಎಮ್‌ಟಿಎಫ್‌ಪಿ 2018–22) ಶಿಫಾರಸಿನಂತೆ ತೆರಿಗೆಯೇತರದ ಆಕರಗಳಾದ ಬಳಕೆದಾರರ ಶುಲ್ಕಗಳ ದರವನ್ನು ಕಾಲಕಾಲಕ್ಕೆ ಪರಿಷ್ಕರಿಸುವುದರ ಅಗತ್ಯವಿದೆ.*

### ರಾಜಸ್ವ ವೆಚ್ಚ

2017–18ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಾಮಾಜಿಕ ವಲಯದಡಿಯ ವೃದ್ಧಿಯು ಶೇಕಡ 8ರಷ್ಟಿದ್ದು ಒಟ್ಟು ವೆಚ್ಚದಲ್ಲಿ ಸಾಮಾಜಿಕ ಸೇವೆಗಳ ವೆಚ್ಚದ ಪಾಲು 2016–17 ಮತ್ತು 2017–18ರಲ್ಲಿ ಶೇಕಡ 41ಲ್ಲೇ ಉಳಿದಿದೆ. ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ವೃದ್ಧಿಯು 2016–17ರಲ್ಲಿ ಶೇಕಡ 19ರಷ್ಟಿದ್ದು 2017–18ರಲ್ಲಿ ಶೇಕಡ ಆರರಷ್ಟಿತ್ತು.

ರಾಜಸ್ವ ವೆಚ್ಚದ ಶೇಕಡ 78ರಷ್ಟು ಭಾಗವು, ಸಂಬಳ, ವಿಶ್ರಾಂತಿ ವೇತನ, ಬಡ್ಡಿ ಪಾವತಿಗಳು, ಸಹಾಯಧನಗಳು, ಸಹಾಯಾನುದಾನಗಳು ಮತ್ತು ಆರ್ಥಿಕ ನೆರವು, ಆಡಳಿತಾತ್ಮಕ ವೆಚ್ಚಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮುಂತಾದ ಬದ್ಧ ವೆಚ್ಚಗಳನ್ನೊಳಗೊಂಡಿತ್ತು. ಸಹಾಯಧನದ ಮೇಲಿನ ₹17,466 ಕೋಟಿಗಳ ವೆಚ್ಚವು ₹3,318 ಕೋಟಿಗಳ ಪರೋಕ್ಷ ಸಹಾಯಧನವನ್ನು ಒಳಗೊಂಡಿದ್ದು ಸಾಮಾಜಿಕ ಆರ್ಥಿಕ ಸೇವೆಗಳಡಿಯ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವಿನ ರೂಪದಲ್ಲಿದ್ದವು.

***ಶಿಫಾರಸುಗಳು: 2017–18ರಲ್ಲಿ ಆರೋಗ್ಯ ಮತ್ತು ಶಿಕ್ಷಣ ವಿಭಾಗಗಳಲ್ಲಿನ ಅನುಪಾತಗಳು ಸಾಮಾನ್ಯವರ್ಗ ರಾಜ್ಯಗಳ ಸರಾಸರಿಗಿಂತ ಕಡಿಮೆಯಿರುವುದರಿಂದ ಈ ಎರಡೂ ವಿಭಾಗಗಳಿಗೆ ಸಾಕಷ್ಟು ಆದ್ಯತೆಯನ್ನು ನೀಡಬೇಕಾಗಿದೆ.***

***ಸಂಬಳ, ಪಿಂಚಣಿ ಮತ್ತು ಬಡ್ಡಿಪಾವತಿಗಳ ಮೇಲಿನ ವೆಚ್ಚವು ಅನಮ್ಯವಾಗಿರುವುದರಿಂದ, ಸತತವಾಗಿ ಏರುತ್ತಿರುವ ಸಹಾಯಧನಗಳ ಮೇಲಿನ ವೆಚ್ಚ, ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಇತರರಿಗೆ ನೀಡುತ್ತಿರುವ ಅನುದಾನಗಳ ಕಡೆಗೆ ರಾಜ್ಯ ಸರ್ಕಾರವು ಹೆಚ್ಚಿನ ಗಮನಕೊಡುವ ಅಗತ್ಯವಿದೆ.***

***ಬದ್ಧ ವೆಚ್ಚಗಳಲ್ಲಿ ಸಹಾಯಧನವನ್ನು ಮಿತಿಗೊಳಿಸುವುದರಿಂದ ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳದಲ್ಲಿ ಗಮನಾರ್ಹ ಮಟ್ಟವನ್ನು ಸಾಧಿಸಲು ನೆರವಾಗುತ್ತದೆ.***

### ವೆಚ್ಚದ ಗುಣಮಟ್ಟ

2017–18ರಲ್ಲಿ ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಪಾಲು (ಶೇಕಡ 20) ಹಿಂದಿನ ವರ್ಷಕ್ಕಿಂತ ಶೇಕಡ ಒಂದರಷ್ಟು ಏರಿಕೆಯಾಯಿತು. ಒಟ್ಟು ವೆಚ್ಚಕ್ಕೆ ಅಭಿವೃದ್ಧಿ ವೆಚ್ಚದ ಶೇಕಡಾವಾರು 2016–17ರಲ್ಲಿದ್ದ ಶೇಕಡ 77ರಿಂದ 2017–18ರಲ್ಲಿ ಶೇಕಡ 76ಕ್ಕೆ ಇಳಿಕೆಯಾಯಿತು. 2017–18ರ ಅಂತ್ಯಕ್ಕೆ ₹967 ಕೋಟಿಗಳಷ್ಟು ಮೊತ್ತವು ಅಪೂರ್ಣ ಕಾಮಗಾರಿಗಳಲ್ಲಿ ತೊಡಗಿಸಿದ್ದು ಫಲಪ್ರದವಿಲ್ಲದೆ ನಿರ್ಬಂಧಿತವಾಗಿತ್ತು.

31 ಮಾರ್ಚ್ 2018ರ ಅಂತ್ಯಕ್ಕೆ ಕಂಪೆನಿಗಳು/ನಿಗಮಗಳಲ್ಲಿ ತೊಡಗಿಸಿದ್ದ ₹65,146 ಕೋಟಿ ಹೂಡಿಕೆಗಳ ಮೇಲಿನ ಪ್ರತಿಫಲವು ಅತ್ಯಲ್ಪವಾಗಿತ್ತು (₹78.83 ಕೋಟಿ) ಹೂಡಿಕೆಯು ಸತತವಾಗಿ ನಷ್ಟದಲ್ಲಿರುವ ಕಂಪೆನಿ/ನಿಗಮಗಳಲ್ಲಿ ಹೂಡಿರುವ ₹38,912 ಕೋಟಿಗಳನ್ನು (ಶೇಕಡ 60) ಒಳಗೊಂಡಿತ್ತು.

***ಶಿಫಾರಸುಗಳು: ರಾಜ್ಯಸರ್ಕಾರವು ಅಪೂರ್ಣ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಸಮಯ ಮತ್ತು ವೆಚ್ಚ ಹೆಚ್ಚಳಗಳಿಗೆ ಕಾರಣಗಳನ್ನು ಕಟ್ಟುನಿಟ್ಟಾಗಿ ಪರಿಶೀಲಿಸಬೇಕು.***

***ರಾಜ್ಯ ಸರ್ಕಾರವು ಅಧಿಕ ನಷ್ಟಗಳನ್ನು ಅನುಭವಿಸುತ್ತಿರುವ ರಾಜ್ಯದ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಯವೈಖರಿಯನ್ನು ಸಮೀಕ್ಷಿಸಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.***

### ನಿಧಿಗಳು ಮತ್ತಿತರ ಜವಾಬ್ದಾರಿಗಳು

ಖಾತರಿ ವಿಮೋಚನಾ ನಿಧಿಯ ಮೂಲ ನಿಧಿಗಳಂತಹ ರಾಜ್ಯದ ಮೀಸಲು ನಿಧಿಗಳು ರಚಿತವಾಗಿರಲಿಲ್ಲ. 2017–18ನೇ ಸಾಲಿನಲ್ಲಿ ಕ್ರೋಢೀಕೃತ ಋಣ ಪರಿಹಾರ ನಿಧಿಯಲ್ಲಿ ಯಾವುದೇ ಹೂಡಿಕೆ ಇರಲಿಲ್ಲ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮಾಡಿದ ಮರುಹೂಡಿಕೆಯ ಮೇಲಿನ ₹484.36 ಕೋಟಿಗಳ ಬಡ್ಡಿಯು ಲೆಕ್ಕಗಳ ಮೂಲಕ ಹಾದು ಹೋಗಿರಲಿಲ್ಲ. ಈ ವರ್ಷದ ಹಸಿರು ತೆರಿಗೆ ಸಂಗ್ರಹಣೆ ₹62.25 ಕೋಟಿಗಳನ್ನು ನಿಧಿಯ ಲೆಕ್ಕಕ್ಕೆ ವರ್ಗಾಯಿಸಿರಲಿಲ್ಲ.

***ಶಿಫಾರಸುಗಳು: ವಿವಿಧ ಮೀಸಲು ನಿಧಿಗಳ ಆಡಳಿತ ಮತ್ತು ಹೂಡಿಕೆ ರೀತಿಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವ ಅಗತ್ಯವಿದೆ.***

**ಋಣ ಸಹಿಷ್ಣುತೆ**

ರಾಜ್ಯದ ಒಟ್ಟು ವಿತ್ತೀಯ ಜವಾಬ್ದಾರಿಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಪ್ರಮುಖ ಪಾಲನ್ನು ಹೊಂದಿದ್ದವು (ಶೇಕಡ 51). 2013–14 ರಿಂದ 2017–18ರ ಅವಧಿಯಲ್ಲಿ ಬಡ್ಡಿ ಪಾವತಿಗೆ ರಾಜಸ್ವ ಸ್ವೀಕೃತಿಗಳ (ಐಪಿ/ಆರ್‌ಆರ್) ಅನುಪಾತದಿಂದ ಅಳೆಯಲ್ಪಡುವ ಬಡ್ಡಿ ಪಾವತಿಯ ಹೊರೆಯು ಶೇಕಡ 8.96 ಮತ್ತು ಶೇಕಡ 10.19ರ ನಡುವೆ ಇದ್ದಿತು. ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ 2017–18ನೇ ಸಾಲಿನಲ್ಲಿ ರಾಜ್ಯಕ್ಕೆ ಲಭ್ಯವಿದ್ದ ನಿವ್ವಳ ಋಣವು (₹5,005 ಕೋಟಿ) ಶೇಕಡ 63ರಷ್ಟು ಇಳಿಕೆಯಾಯಿತು. ಬದ್ಧ ವೆಚ್ಚಗಳ ಅಗತ್ಯತೆಗಳನ್ನು ಲೆಕ್ಕ ಹಾಕಿದ ಬಳಿಕ ರಾಜ್ಯಕ್ಕೆ ಸೀಮಿತ ಮೊತ್ತಗಳ ಲಭ್ಯವಿದ್ದಿತು.

***ಶಿಫಾರಸುಗಳು: ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯು ಐಪಿ/ಆರ್‌ಆರ್ ಅನುಪಾತದ ಲೆಕ್ಕಾಚಾರದ ಭಾಗವಾಗಬೇಕು.***

***ರಾಜ್ಯ ಸರ್ಕಾರವು ಬದ್ಧ ವೆಚ್ಚಗಳನ್ನು ಕಡಿಮೆ ಮಾಡಲು ವೆಚ್ಚದ ಭಾಗದಲ್ಲಿ ಮಧ್ಯಮಾವಧಿ ತಿದ್ದುಪಡಿಗಳನ್ನು ಮಾಡುವ ಅವಶ್ಯಕತೆಯಿದೆ.***

# ಅಧ್ಯಾಯ - II

# ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

# ಅಧ್ಯಾಯ 2

# 2 ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ನಿಯಂತ್ರಣ

## 2.1 ಪೀಠಿಕೆ

ಧನವಿನಿಯೋಗ ಲೆಕ್ಕಗಳು ಸರ್ಕಾರದ ಪ್ರತಿ ಆರ್ಥಿಕ ವರ್ಷದ ಧನವಿನಿಯೋಗ ಅಧಿನಿಯಮಗಳಿಗೆ ಸಹಬಂಧಗೊಳಿಸಿದ ಅನುಸೂಚಿಗಳಲ್ಲಿ ನಿಗದಿಪಡಿಸಲಾದ ವಿವಿಧ ಉದ್ದೇಶಗಳ ಪುರಸ್ಕೃತ ಅನುದಾನ ಮತ್ತು ಪ್ರಭೃತ ವಿನಿಯೋಗಗಳಿಗೆ ಹೋಲಿಸಿದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ಲೆಕ್ಕಗಳಾಗಿವೆ. ಈ ಲೆಕ್ಕಗಳು ಮೂಲ ಆಯವ್ಯಯ ಅಂದಾಜುಗಳು, ಪೂರಕ ಅನುದಾನಗಳು, ಅಧ್ಯರ್ಪಣೆಗಳು ಮತ್ತು ಪುನರ್ವಿನಿಯೋಗಗಳನ್ನು ಸ್ಪಷ್ಟವಾಗಿ ಪಟ್ಟಿಮಾಡಿ, ಧನವಿನಿಯೋಗ ಕಾಯಿದೆಯಲ್ಲಿ ಅಧಿಕೃತಗೊಳಿಸಿದ ಪುರಸ್ಕೃತ ಮತ್ತು ಪ್ರಭೃತ ಆಯವ್ಯಯ ಬಾಬ್ತುಗಳಿಗೆ ಪ್ರತಿಯಾಗಿ ವಿವಿಧ ನಿರ್ದಿಷ್ಟ ಸೇವೆಗಳ ಮೇಲಿನ ವಾಸ್ತವ ಬಂಡವಾಳ ಮತ್ತು ರಾಜಸ್ವ ವೆಚ್ಚಗಳನ್ನು ಸೂಚಿಸುತ್ತವೆ. ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯ ಅಂದಾಜುಗಳನ್ನು ತಯಾರಿಸಲು ಅನುಸರಿಸಬೇಕಾದ ವಿಧಾನಗಳು, ಅನುದಾನಗಳ ಸಂವಹನದ ಕ್ರಮ ಹಾಗೂ ಅನುದಾನದ ವಿತರಣೆ, ವಾಸ್ತವಿಕ ವೆಚ್ಚದ ಪ್ರಗತಿಯ ಗಮನಿಸುವಿಕೆ ಮತ್ತು ಅದರ ಮೇಲಿನ ನಿಯಂತ್ರಣಕ್ಕೆ ಸಂಬಂಧಿಸಿದ ಕ್ರಮಗಳನ್ನು ಒಳಗೊಂಡಿದೆ.

## 2.2 ಧನವಿನಿಯೋಗ ಲೆಕ್ಕಗಳ ಸಾರಾಂಶ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಲ್ಪಡುವ ಧನವಿನಿಯೋಗದ ಲೆಕ್ಕ ಪರಿಶೋಧನೆಯು ವಿವಿಧ ಅನುದಾನಗಳಡಿ ಮಾಡಿದ ವಾಸ್ತವ ವೆಚ್ಚವು ಧನವಿನಿಯೋಗ ಅಧಿನಿಯಮದಡಿ ನೀಡಿದ ಅಧಿಕಾರದ ಪರಿಮಿತಿಯೊಳಗೆ ಇದೆಯೇ ಮತ್ತು ಸಂವಿಧಾನದ ಉಪಬಂಧಗಳ ಮತ್ತು ವಿಧಾನಸಭೆಯ ವಿವಿಧ ಶಾಸನಗಳ ಅಡಿಯಲ್ಲಿ ಪ್ರಭೃತಗೊಳಿಸಬೇಕಾದ ವೆಚ್ಚವನ್ನು ಹಾಗೆ ಪ್ರಭೃತಗೊಳಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಬಯಸುತ್ತದೆ. ಅಲ್ಲದೆ, ಹಾಗೆ ಮಾಡಿದ ವೆಚ್ಚವು ಸಂಬಂಧಿಸಿದ ಕಾನೂನು, ನಿಯಮಗಳು, ನಿಬಂಧನೆಗಳು ಮತ್ತು ನಿರ್ದೇಶನಗಳಿಗೆ ಅನುಗುಣವಾಗಿದೆಯೇ ಎಂಬುದನ್ನು ಸಹ ಖಚಿತಪಡಿಸಿಕೊಳ್ಳುತ್ತದೆ. 2017–18ನೇ ವರ್ಷದಲ್ಲಿ 29 ಅನುದಾನ/ವಿನಿಯೋಗಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚದ ಸಂಕ್ಷಿಪ್ತ ಸ್ಥಿತಿಯನ್ನು **ಕೋಷ್ಟಕ 2.1**ರಲ್ಲಿ ನೀಡಿದೆ.

**ಕೋಷ್ಟಕ 2.1: ಮೂಲ/ಪೂರಕ ಅವಕಾಶಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚದ ಸಂಕ್ಷಿಪ್ತ ಸ್ಥಿತಿ**

*(₹ ಕೋಟಿಗಳಲ್ಲಿ)*

| ವೆಚ್ಚದ ಸ್ವರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವ ವೆಚ್ಚ | ಬಳಕೆಯಾಗದ ಅವಕಾಶ(–)/ ಅವಕಾಶಕ್ಕಿಂತ ಅಧಿಕ ವೆಚ್ಚ(+) | ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚಿ 31ರಂದು ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚಿ 31ರಂದು *ಶೇಕಡ ವಾರು ಉಳಿಕೆಯ ಅಧ್ಯರ್ಪಣೆ* |
|---|---|---|---|---|---|---|---|---|---|
| ಪುರಸ್ಕೃತ | I ರಾಜಸ್ವ | 1,34,250.46 | 7,615.98 | 1,41,866.44 | 1,29,684.31 | (–)12,182.13 | 4,486.69 | 4,486.69 | 100 |
| | II ರಾಜಸ್ವ ಸಾರ್ವಜನಿಕ ಋಣ | 0.00 | 3.05 | 3.05 | 0.00 | (–)3.05 | 0.00 | 0.00 | 0 |
| | III ಬಂಡವಾಳ | 32,879.62 | 3,215.31 | 36,094.93 | 31,745.11 | (–)4,349.82 | 715.38 | 715.38 | 100 |
| | IV ಸಾಲಗಳು ಮತ್ತು ಮುಂಗಡಗಳು | 2,921.12 | 3,507.48 | 6,428.60 | 6,415.94 | (–)12.66 | 0.00 | 0.00 | 0 |
| ಒಟ್ಟು ಪುರಸ್ಕೃತ | | **1,70,051.20** | **14,341.82** | **1,84,393.02** | **1,67,845.36** | **(–)16,547.66** | **5,202.07** | **5,202.07** | **100** |
| ಪ್ರಭೃತ | *V ರಾಜಸ್ವ* | *16,107.76* | *220.31* | *16,328.07* | *15,631.68* | *(–)696.39* | *25.20* | *25.20* | *100* |
| | *VI ಸಾರ್ವಜನಿಕ ಋಣ ಪಾವತಿ* | *8,175.65* | *0.00* | *8,175.65* | *8,269.16* | *(+)93.51* | *0.00* | *0.00* | *0* |
| | *VII ಬಂಡವಾಳ* | *582.58* | *0.18* | *582.76* | *574.04* | *(-)8.72* | *0.75* | *0.75* | *100* |
| *ಒಟ್ಟು ಪ್ರಭೃತ* | | ***24,865.99*** | ***220.49*** | ***25,086.48*** | ***24,474.88*** | ***(-)611.60*** | ***25.95*** | ***25.95*** | ***100*** |
| ಒಟ್ಟು ಮೊತ್ತ | | **1,94,917.19** | **14,562.31** | **2,09,479.50** | **1,92,320.24** | **(-)17,159.26** | **5,228.02** | **5,228.02** | **100** |

*ಆಕರ: ಧನವಿನಿಯೋಗ ಲೆಕ್ಕಗಳು*

2017–18ರಲ್ಲಿ ಬಳಕೆಯಾಗದೆ ಉಳಿದ ₹16,959.82 ಕೋಟಿಗಳ ಮೊತ್ತದ ಅವಕಾಶವು 29 ಅನುದಾನಗಳು/ವಿನಿಯೋಗಗಳಡಿಯಲ್ಲಿನ ಒಟ್ಟಾರೆ ₹17,159.26 ಕೋಟಿಗಳ ಬಳಕೆಯಾಗದೆ ಉಳಿದ ಅವಕಾಶದಲ್ಲಿ ಅನುದಾನ ಸಂಖ್ಯೆ 03, 08, 24 ಮತ್ತು 29ರಡಿಯಲ್ಲಿನ ಪುರಸ್ಕೃತ/ಪ್ರಭೃತಗಳಡಿಯ ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಿನ ₹199.44 ಕೋಟಿಗಳ ಅಧಿಕ ವೆಚ್ಚವು ಉತ್ತಾರಗೊಂಡುದರ ಫಲವಾಗಿ ಉಂಟಾಗಿದೆ.

## 2.3 ವೆಚ್ಚದ ಮೇಲಿನ ಟಿಪ್ಪಣಿಗಳು

ಶಾಸನಸಭೆಯಲ್ಲಿ ಮಂಡಿಸುವ ಅನುದಾನಗಳ ಬೇಡಿಕೆಗಳ ಸಾರಾಂಶವು, ಬೇಡಿಕೆಗೆ ಲಗತ್ತಿಸಿರುವ ಅನುಸೂಚಿಗಳಲ್ಲಿ ತಿಳಿಸಿರುವಂತೆ ವರ್ಷದ ಅವಧಿಯಲ್ಲಿ ಹಲವಾರು ನಿರ್ದಿಷ್ಟ ಸೇವೆಗಳ ಮೇಲಿನ ವೆಚ್ಚವನ್ನು ಭರಿಸಲು ಅನುಮೋದನೆಯನ್ನು ಕೋರುತ್ತದೆ. ಹಾಗೆ ತೋರಿಸಿದ ವೆಚ್ಚವು, ಸೆಳೆದ ಮೊತ್ತಗಳು ಆಯಾ ಉದ್ದೇಶಕ್ಕೆ ಖರ್ಚು ಮಾಡಲಾಗಿದೆ ಎಂಬುದನ್ನು ಸೂಚಿಸುತ್ತದೆ.

ಕೆಳಗೆ ಕಾಣಿಸಿದ ಪ್ರಕರಣಗಳಲ್ಲಿ ಮೇಲಿನ ಭಾವನೆಯು ನಿರರ್ಥಕವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ (ಇವು ಕೇವಲ ನಿದರ್ಶನಗಳು ಮಾತ್ರ).

### 2.3.1 ವೆಚ್ಚವನ್ನು ಅಧಿಕವಾಗಿ/ಕಡಿಮೆಯಾಗಿ ಹೇಳುವಿಕೆ

**ಕೋಷ್ಟಕ 2.2**ರಲ್ಲಿ ತೋರಿಸಿರುವಂತೆ ವೆಚ್ಚವನ್ನು ಅಧಿಕವಾಗಿ/ಕಡಿಮೆಯಾಗಿ ಹೇಳಲಾಗಿತ್ತು.

**ಕೋಷ್ಟಕ 2.2 ವೆಚ್ಚದ ಅಧಿಕ/ಕಡಿಮೆ ಹೇಳುವಿಕೆ**

*(₹ ಕೋಟಿಗಳಲ್ಲಿ)*

| ಕ್ರಮ ಸಂಖ್ಯೆ | ವೆಚ್ಚವನ್ನು ಅಧಿಕವಾಗಿ ಹೇಳಿರುವುದು | ಮೊತ್ತ | ವೆಚ್ಚವನ್ನು ಕಡಿಮೆ ಹೇಳಿರುವುದು | ಮೊತ್ತ |
|---|---|---|---|---|
| 1 | 2017–18ರ ಅವಧಿಯಲ್ಲಿ ಡಿಡಿಓಗಳು ಸೆಳೆದ ಎಸಿ ಬಿಲ್ಲುಗಳಿಗೆ ಎನ್‌ಡಿಸಿ ಬಿಲ್ಲುಗಳನ್ನು ಸಲ್ಲಿಸದಿರುವುದು (ವಿವರಗಳು **ಕಂಡಿಕೆ 3.6**ರಲ್ಲಿ) | 27.79 | ಸಂಗ್ರಹಿಸಿದ ಹಸಿರು ತೆರಿಗೆಯನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾವಣೆ ಮಾಡದಿರುವುದು (ವಿವರಗಳು **ಕಂಡಿಕೆ 1.9.4**ರಲ್ಲಿವೆ) | 4.36 |
| 2 | ಸಾರ್ವಜನಿಕ ಲೆಕ್ಕದಲ್ಲಿ ಜಿಲ್ಲಾ ಪಂಚಾಯತ್ ನಿಧಿಯಡಿಯಲ್ಲಿ ಅದಕ್ಕೆ ಬಿಡುಗಡೆ ಮಾಡಿದ ಮೊತ್ತದಲ್ಲಿ ಬಳಕೆಯಾಗದೇ ಉಳಿದಿರುವುದು (₹6,752 ಕೋಟಿ) | 511.17 | ಹೂಡಿಕೆ ಮಾಡದಿರುವುದು ಹಾಗೂ ಮೊತ್ತವನ್ನು ಸಂಚಿತ ಋಣಪರಿಹಾರ ನಿಧಿಗೆ ಹೊಂದಾಣಿಕೆ ಮಾಡದಿರುವುದು (ವಿವರಗಳು **ಕಂಡಿಕೆ 1.9.4**ರಲ್ಲಿವೆ) | 1,055.00 |
| 3 | ಸಾರ್ವಜನಿಕ ಲೆಕ್ಕದಲ್ಲಿ ತಾಲ್ಲೂಕು ಪಂಚಾಯತ್ ನಿಧಿಯಡಿಯಲ್ಲಿ ಅದಕ್ಕೆ ಬಿಡುಗಡೆ ಮಾಡಿದ ಮೊತ್ತದಲ್ಲಿ ಬಳಕೆಯಾಗದೇ ಉಳಿದಿರುವುದು (₹11,877 ಕೋಟಿ) | 1,014.03 | | |
| 4 | ಕೆಳಗಿನ ಪ್ರಕರಣಗಳಲ್ಲಿ ಭರಿಸಿದ ವೆಚ್ಚವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸದಿರುವುದು:<br>(1) ರಾಜ್ಯ ನಗರ ಸಾರಿಗೆ ನಿಧಿ (ಎಸ್‌ಯುಟಿಎಫ್)<br>(2) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ (ವಿವರಗಳು **ಕಂಡಿಕೆ 1.9.4** ರಲ್ಲಿವೆ) | 71.22<br>299.09 | | |
| 5 | ಯುಐಡಿಎಸ್‌ಎಸ್‌ಎಮ್‌ಟಿ ಯೋಜನೆಯಡಿಯಲ್ಲಿ ನೀರು ಸರಬರಾಜು ಯೋಜನೆಗಳಿಗಾಗಿ ಬಿಡುಗಡೆಯಾದ ಹಣವನ್ನು ನಿರ್ದೇಶಕರು, ಪೌರಾಡಳಿತ ಇಲಾಖೆ ಬಳಕೆ ಮಾಡದಿರುವುದು (ವಿವರಗಳು **ಕಂಡಿಕೆ 2.7.2.3** ರಲ್ಲಿವೆ) | 39.80 | | |
| ಒಟ್ಟು | | **1,963.10** | ಒಟ್ಟು | **1,059.36** |

ಮೇಲಿನ ಕೋಷ್ಟಕದಿಂದ ವೆಚ್ಚವನ್ನು ₹903.74 ಕೋಟಿಗಳ ಮಟ್ಟಿಗೆ ಅಧಿಕವಾಗಿ ತೋರಿಸಿರುವುದನ್ನು ಗಮನಿಸಬಹುದು.

ಲೆಕ್ಕವಿಧಾನ/ಹಣಕಾಸು ವರದಿಯ ತತ್ವಗಳಿಗೆ ನಿಷ್ಠವಾಗಿರುವುದರಲ್ಲಿನ ವೈಫಲ್ಯವು ಲೆಕ್ಕವಿಧಾನ ತತ್ವಗಳಿಗೆ ಅನುಗುಣವಾಗಿ ವ್ಯವಹಾರಗಳನ್ನು ತೋರಿಸದೇ ಇರುವುದರಲ್ಲಿ ಫಲಿತವಾಗಿದ್ದು ಇದನ್ನು ತಪ್ಪಿಸಬೇಕಾಗಿದೆ.

### 2.3.2 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತ

ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಮಂಜೂರು ಮಾಡುವುದನ್ನು ತತ್ಕಾಲದ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸಬೇಕು ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಐದನೇ ವರದಿಯಲ್ಲಿ (ಹದಿನಾಲ್ಕನೇ ವಿಧಾನಸಭೆ) ಶಿಫಾರಸು ಮಾಡಿತ್ತು (ಜುಲೈ 2015) (ದಿನಾಂಕ 6 ಆಗಸ್ಟ್ 2015ರ ಸರ್ಕಾರದ ಆದೇಶದ ಕಂಡಿಕೆ 5). 2017–18ರಲ್ಲಿ 20 ಅನುದಾನಗಳ ರಾಜಸ್ವ/ಬಂಡವಾಳ ವರ್ಗಗಳಡಿಯಲ್ಲಿ ₹3,747.77 ಕೋಟಿಗಳನ್ನು (ಇವು ಕೇವಲ ಉದಾಹರಣೆಯಾಗಿ ಮಾತ್ರ) 128 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಿ ನಂತರ ಪೂರಕ ಅಂದಾಜುಗಳ ಮೂಲಕ ಸಕ್ರಮಗೊಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ 2.1**). ಈ ಹೆಚ್ಚುವರಿಗಳ ಮೂಲಕ ಭರಿಸಿದ ವೆಚ್ಚವನ್ನು ವೇತನಗಳು, ಇತರೆ ವೆಚ್ಚಗಳು ಮುಂತಾದ ನಿತ್ಯದ ಬಾಬ್ತುಗಳ ಮೇಲೆ ಮಾಡಿರುವುದನ್ನು ಗಮನಿಸಲಾಯಿತು ಮತ್ತು ಅವುಗಳು ತುರ್ತಿನ ವೆಚ್ಚಗಳಾಗಿರಲಿಲ್ಲ. 2016–17ಕ್ಕೆ ಹೋಲಿಸಿದರೆ (293 ಕಾರ್ಯನಿರ್ವಾಹಕ ಆದೇಶಗಳು–₹6,057 ಕೋಟಿ) 2017–18ರಲ್ಲಿ ಹೆಚ್ಚುವರಿ ಆದೇಶಗಳ ಸಂಖ್ಯೆಯು ಶೇಕಡಾ 56ರಷ್ಟು ಕಡಿಮೆಯಾಗಿದೆಯೆಂದು ಆರ್ಥಿಕ ಇಲಾಖೆಯು ಉತ್ತರಿಸಿದೆ(ಮಾರ್ಚ್ 2019).

ಸಂವಿಧಾನದ 266(3)ನೇ ಪರಿಚ್ಛೇದವು ಶಾಸಕಾಂಗದ ಅನುಮೋದನೆಯಿಲ್ಲದೆ ಆದಾಯಗಳ ಹಂಚಿಕೆಯನ್ನು ನಿರ್ಬಂಧಿಸುತ್ತದೆ ಮತ್ತು ಅಂತಹ ವೆಚ್ಚವನ್ನು ಭರಿಸುವ ಮೊದಲು ಪೂರಕ ಬೇಡಿಕೆಗಳನ್ನು ಮಂಡಿಸುವ ಮೂಲಕ ಅನುಸರಿಸಬೇಕಾಗಿದೆ.

### 2.3.3 ಅಧಿಕ ವೆಚ್ಚಗಳು

ನಾಲ್ಕು ಅನುದಾನಗಳಡಿಯ ನಾಲ್ಕು ಪ್ರಧಾನ ಶೀರ್ಷಿಕೆಗಳ ಐದು ಪ್ರಕರಣಗಳಲ್ಲಿ ₹25 ಕೋಟಿಗೆ ಮೀರಿದ ಒಟ್ಟು ₹355.79 ಕೋಟಿಗಳ ಅಧಿಕ ವೆಚ್ಚವನ್ನು ಮಾಡಲಾಗಿದೆ (**ಅನುಬಂಧ 2.2**).

### 2.3.4 2017–18ರಲ್ಲಿ ಅವಕಾಶವನ್ನು ಮೀರಿದ ಅಧಿಕ ವೆಚ್ಚ

2017–18ರಲ್ಲಿ ಅನುದಾನ ಸಂಖ್ಯೆ.03–ಹಣಕಾಸು, 08–ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ, 24–ಇಂಧನ ಮತ್ತು 29–ಋಣ ಸೇವೆಗಳು ಇವುಗಳಡಿ ₹199.44 ಕೋಟಿಗಳಷ್ಟು ಅಧಿಕ ವೆಚ್ಚವಾಗಿದ್ದು ಸಕ್ರಮಗೊಳಿಸಬೇಕಾಗಿದೆ. ವಿವರಗಳನ್ನು **ಕೋಷ್ಟಕ 2.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.3: 2017–18ರಲ್ಲಿ ಅಧಿಕ ವೆಚ್ಚಗಳು**

*(₹ ಗಳಲ್ಲಿ)*

| ಕ್ರಮ ಸಂಖ್ಯೆ | ಅನುದಾನ/ವಿನಿಯೋಗ | ಅವಕಾಶ | ವೆಚ್ಚ | ಅಧಿಕ |
|---|---|---|---|---|
| 1 | *03 – ಹಣಕಾಸು*<br>*ರಾಜಸ್ವ – ಪ್ರಭೃತ* | *1,87,21,000* | *13,86,58,383* | *11,99,37,383* |
| 2 | *08 – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ*<br>*ರಾಜಸ್ವ – ಪ್ರಭೃತ* | *3,00,20,00,000* | *3,81,18,05,156* | *80,98,05,156* |
| 3 | 24 – ಇಂಧನ<br>ಬಂಡವಾಳ–ಪುರಸ್ಕೃತ | 8,27,00,00,000 | 8,39,94,95,000 | 12,94,95,000 |
| 4 | *29 – ಋಣ ಸೇವೆಗಳು*<br>*ಬಂಡವಾಳ–ಪ್ರಭೃತ* | *81,75,65,00,000* | *82,69,16,25,086* | *93,51,25,086* |
| | **ಒಟ್ಟು** | **93,04,72,21,000** | **95,04,15,83,625** | **1,99,43,62,625** |

*ಆಕರ: ಧನವಿನಿಯೋಗ ಲೆಕ್ಕಗಳು*

ಮೇಲಿನ ಅನುದಾನಗಳ ಅಡಿಯಲ್ಲಿ ಅವಕಾಶಗಳಿಗಿಂತ ಅಧಿಕ ವೆಚ್ಚಗಳಿಗೆ ಕಾರಣಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

- ಅನುದಾನ ಸಂಖ್ಯೆ.3–ಆರ್ಥಿಕ ಅಡಿಯಲ್ಲಿನ ಅಧಿಕ ವೆಚ್ಚವು ಭಾರತ ಸರ್ಕಾರದ ಹಣಕಾಸು ಮಂತ್ರಾಲಯದ ಸಿಪಿಎಓರವರಿಂದ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಪಾವತಿ ಮಾಡಿದ ಪಿಂಚಣಿಯ ಮರುಪಾವತಿಗೆ ಸಂಬಂಧಿಸಿದ ಕ್ಲೈಮ್‌ಗಳ ತೀರುವಳಿಯ ಕಾರಣದಿಂದ ಉಂಟಾಗಿದೆ;

- ಅನುದಾನ ಸಂಖ್ಯೆ.8–ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಅಡಿಯಲ್ಲಿ ಅಧಿಕ ವೆಚ್ಚವು ಆಯವ್ಯಯದಲ್ಲಿನ ದೋಷದಿಂದಾಗಿತ್ತು, ಲೆಕ್ಕಶೀರ್ಷಿಕೆ 2406–ಅರಣ್ಯ ಮತ್ತು ವನ್ಯಜೀವನ–ಅರಣ್ಯ–ಮೀಸಲು ನಿಧಿಗಳು/ಠೇವಣಿ ಖಾತೆಗಳಿಗೆ ವರ್ಗಾವಣೆ–ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ಅರಣ್ಯ ಅಭಿವೃದ್ಧಿ ಶುಲ್ಕದ ವರ್ಗಾವಣೆ ಅಡಿಯಲ್ಲಿ ₹85 ಕೋಟಿಯ ಅವಕಾಶವನ್ನು ಪ್ರಭೃತ ವರ್ಗದಡಿ ಮಾಡದೆ ತಪ್ಪಾಗಿ ಪುರಸ್ಕೃತ ವರ್ಗದಡಿ ಮಾಡಿದ್ದರಿಂದ ಆಗಿತ್ತು. ಆದರೆ, ವೆಚ್ಚವನ್ನು ಸರಿಯಾಗಿ ಪ್ರಭೃತ ವರ್ಗದಡಿ ಲೆಕ್ಕ ಮಾಡಲಾಗಿತ್ತು;

- ಅನುದಾನ ಸಂಖ್ಯೆ.24–ಇಂಧನ ಅಡಿಯಲ್ಲಿನ ಅಧಿಕ ವೆಚ್ಚವು 2017–18ರ ಆಯವ್ಯಯದಲ್ಲಿ ಯಾವುದೇ ಅವಕಾಶವನ್ನು ಒದಗಿಸಿರದಿದ್ದರೂ ಸಹ ದಿನಾಂಕ 31.03.2018ರ ಸರ್ಕಾರಿ ಆದೇಶದ ವರ್ಗೀಕರಣದಲ್ಲಿ ಒದಗಿಸಿದ್ದಂತೆ ₹12.95 ಕೋಟಿಯ ಇಎಪಿ ಸಾಲದ ಹೊಂದಾಣಿಕೆ ಯಿಂದಾಗಿದ್ದಿತು; ಮತ್ತು

- ಅನುದಾನ ಸಂಖ್ಯೆ.29–ಋಣ ಸೇವೆಗಳು ಅಡಿಯ ಹೆಚ್ಚಳವು ಬ್ಯಾಕ್–ಟು–ಬ್ಯಾಕ್ ಆಧಾರದ ಮೇಲೆ ಬಿಡುಗಡೆಯಾದ ಇಎಪಿ ಸಾಲಗಳ ಅಸಲು ಮತ್ತು ಬಡ್ಡಿಯ ಮರುಪಾವತಿಗೆ ಆಯವ್ಯದಲ್ಲಿ ಅವಕಾಶ ಒದಗಿಸಿರಲಿಲ್ಲವಾದ್ದರಿಂದ ಉಂಟಾಗಿದೆ. ಈ ಮರುಪಾವತಿಯು ಮೊದಲಿಗೆ ನವದೆಹಲಿಯ ವಿತ್ತ ಮಂತ್ರಾಲಯದ ಕಂಟ್ರೋಲರ್ ಆಫ್ ಎಯ್ಡ್ ಅಕೌಂಟ್ಸ್ ಮತ್ತು ಆಡಿಟ್ ಅವರಿಂದ ಮಾಡಲ್ಪಟ್ಟಿದ್ದು ಅಂತಿಮವಾಗಿ ಭಾರತೀಯ ರಿಜರ್ವ್ ಬ್ಯಾಂಕಿನ ಕ್ಲಿಯರೆನ್ಸ್ ಮೆಮೋಗಳ ಮೂಲಕ ರಾಜ್ಯ ಸರ್ಕಾರಕ್ಕೆ ವರ್ಗಾವಣೆಯಾಗಿ, ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅವರಿಂದ ಲೆಕ್ಕ ಮಾಡಲಾಗುತ್ತದೆ.

ಅವಕಾಶವನ್ನು ಮೀರಿ ಅಧಿಕ ವೆಚ್ಚ ಮಾಡುವುದು ಶಾಸಕಾಂಗದ ಮಂಜೂರಾತಿಯ ಅಗತ್ಯವಿರುವ ನಿಬಂಧನೆಗಳಿಗೆ ವಿರುದ್ಧವಾಗಿದ್ದು ಅದು ದೋಷಪೂರಿತ ಯೋಜನೆಯ ಸೂಚಕವಾಗಿತ್ತು. ಆಯಾ ಉದ್ದೇಶಕ್ಕಾಗಿ ಆಯವ್ಯಯದಲ್ಲಿ ಒದಗಿಸಿದ ಅವಕಾಶದೊಂದಿಗೆ ವೆಚ್ಚದ ಪ್ರಗತಿಯ ಮೇಲೆ ಗಮನವಿಡುವುದರಿಂದ ಇದನ್ನು ತಪ್ಪಿಸಬಹುದಿತ್ತು.

### 2.3.5 ಹಿಂದಿನ ವರ್ಷಗಳಲ್ಲಿ ಸಕ್ರಮೀಕರಣದ ಅಗತ್ಯವಿರುವ ಅಧಿಕ ವೆಚ್ಚಗಳು

ಭಾರತ ಸಂವಿಧಾನದ ಅನುಚ್ಛೇದ 205ರ ಅನ್ವಯ ಅನುದಾನ/ವಿನಿಯೋಗದ ಮೇಲಿನ ಅಧಿಕವನ್ನು ರಾಜ್ಯ ಶಾಸಕಾಂಗದಿಂದ ಸಕ್ರಮಗೊಳಿಸುವುದು ಕಡ್ಡಾಯವಾಗಿದೆ. ಪರಿಚ್ಛೇದದ ಅಡಿಯಲ್ಲಿ ವೆಚ್ಚದ ಸಕ್ರಮೀಕರಣಕ್ಕೆ ಯಾವುದೇ ಸಮಯದ ಚೌಕಟ್ಟನ್ನು ನಿಗದಿಪಡಿಸಿರದಿದ್ದರೂ ಸಹ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಧನವಿನಿಯೋಗ ಲೆಕ್ಕಗಳ ಚರ್ಚೆಯು ಪೂರ್ಣಗೊಂಡ ನಂತರ ಅಧಿಕ ವೆಚ್ಚದ ಸಕ್ರಮೀಕರಣವನ್ನು ಮಾಡಲಾಗುತ್ತದೆ. 2012–13ರಿಂದ 2016–17ರ ಅವಧಿಯ ₹2,210.09 ಕೋಟಿಗಳಷ್ಟು ಒಟ್ಟು ಅಧಿಕ ವೆಚ್ಚವನ್ನು, **ಅನುಬಂಧ 2.3ರಲ್ಲಿ** ತೋರಿಸಿರುವಂತೆ, ಇನ್ನೂ ಸಕ್ರಮೀಕರಣಗೊಳಿಸಬೇಕಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯೊಂದಿಗೆ ಸಮಾಲೋಚಿಸಿ ಅಧಿಕ ವೆಚ್ಚವನ್ನು ಸಕ್ರಮಗೊಳಿಸುವ ಬಗ್ಗೆ ಶೀಘ್ರ ಕ್ರಮವನ್ನು ಕೈಗೊಳ್ಳಬೇಕಿದೆ.

### 2.3.6 ಹೊಸ ಸೇವೆ/ಹೊಸ ಸೇವೆಗಳ ಸಾಧನ

ಸಂವಿಧಾನದ 205ನೇ ಅನುಚ್ಛೇದದ ಅನ್ವಯ ವಾರ್ಷಿಕ ಮುಂಗಡ ಪತ್ರದಲ್ಲಿ ನಿರೀಕ್ಷಿಸಿರದ 'ಹೊಸ ಸೇವೆ'ಯ ಮೇಲಿನ ವೆಚ್ಚವನ್ನು, ಅದಕ್ಕೆ ಶಾಸನಸಭೆಯಿಂದ ನಿರ್ದಿಷ್ಟ ಅನುಮೋದನೆ ದೊರೆತ ಮೇಲಷ್ಟೇ ವಹಿಸಬಹುದಾಗಿದೆ. ಸರ್ಕಾರವು ಸಾರ್ವಜನಿಕ ಲೆಕ್ಕ ಸಮಿತಿಯ ನಾಲ್ಕನೆಯ ವರದಿಯ (ಹದಿನಾಲ್ಕನೆ

ವಿಧಾನಸಭೆ) ಶಿಫಾರಸಿನ ಮೇಲೆ 'ಹೊಸ ಸೇವೆ'ಯ ಮಾನದಂಡಗಳು ಅನ್ವಯಿಸದ ಕೆಲವು ವೆಚ್ಚದ ಬಾಬ್ತುಗಳನ್ನು ವಿನಾಯಿತಿಗೊಳಿಸಿ ಹಾಗೂ 'ಹೊಸ ಸೇವೆ'ಯನ್ನು ನಿರ್ಧರಿಸಲು ಇರುವ ಮಾನದಂಡಗಳನ್ನು ನಿಗದಿಗೊಳಿಸಿ, ಆಗಸ್ಟ್ 2015ರಲ್ಲಿ ಆದೇಶವನ್ನು ಹೊರಡಿಸಿದೆ. 'ಹೊಸ ಸೇವೆ'ಯ ಈ ಪರಿಷ್ಕೃತ ಮಾನದಂಡಗಳು 2015–16ನೇ ವರ್ಷದಿಂದ ಜಾರಿಗೆ ಬಂದಿವೆ. ಮೇಲಿನ ಆದೇಶದ ಪ್ರಕಾರ, ಈಗಾಗಲೇ ಅವಕಾಶ ಕಲ್ಪಿಸಿರುವ ಮತ್ತು ಶಾಸನ ಸಭೆಯ ಒಪ್ಪಿಗೆ ಪಡೆದಿರುವ ಪ್ರಕರಣಗಳು ಒಂದುವೇಳೆ ಮುಂದೆ ವೆಚ್ಚಗಳು ಮೂಲತಃ ಆಯವ್ಯಯದಲ್ಲಿ ಒದಗಿಸಿರುವ ಅವಕಾಶವನ್ನು ಮೀರಬಹುದಾಗಿದ್ದಲ್ಲಿ, ವಾಸ್ತವ ವೆಚ್ಚದ ಮೊತ್ತವು ಮೂಲ ಅವಕಾಶದ ಎರಡರಷ್ಟು ಅಥವಾ ₹5 ಕೋಟಿ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಮೀರದಿದ್ದಲ್ಲಿ ಆ ಬಾಬ್ತುಗಳನ್ನು 'ಹೊಸ ಸೇವೆ' ಎಂದು ಪರಿಗಣಿಸಲಾಗುವುದಿಲ್ಲ.

2017–18ನೇ ವರ್ಷದಲ್ಲಿ ಆರು ಅನುದಾನಗಳಿಗೆ ಸಂಬಂಧಿಸಿದ ಆರು ಪ್ರಕರಣಗಳಲ್ಲಿ, 'ಹೊಸ ಸೇವೆ/ಹೊಸ ಸೇವೆಗಳ ಸಾಧನ' ಎಂದು ಪರಿಗಣಿಸಬೇಕಿದ್ದ ₹436.56 ಕೋಟಿಗಳಷ್ಟು **(ಅನುಬಂಧ 2.4)** ಮೊತ್ತದ ಅಧಿಕ ವೆಚ್ಚವನ್ನು ಶಾಸನ ಸಭೆಯ ಒಪ್ಪಿಗೆ ಪಡೆಯದೆ ಭರಿಸಲಾಗಿದೆ.

ಆಯವ್ಯಯಕ್ಕೆ ಪ್ರತಿಯಾಗಿ ವೆಚ್ಚವನ್ನು ನಿಯಮಿತವಾಗಿ ಗಮನಿಸುವುದರ ಮೂಲಕ 'ಹೊಸ ಸೇವೆ/ಹೊಸ ಸೇವೆಗಳ ಸಾಧನ'ದ ಮಾನದಂಡಗಳು ಅನ್ವಯಿಸುವ ಮೊತ್ತಗಳ ಸೆಳೆಯುವಿಕೆಯನ್ನು ತಪ್ಪಿಸಬಹುದು.

## 2.4 ಆಯವ್ಯಯದಲ್ಲಿ ದೋಷಗಳು

ರಾಜಸ್ವ/ಬಂಡವಾಳ, ಪುರಸ್ಕೃತ/ಪ್ರಭೃತಗಳ ಮೇಲೆ ವಹಿವಾಟುಗಳನ್ನು ತಪ್ಪಾಗಿ ವರ್ಗೀಕರಿಸುವುದನ್ನು ಸಂಬಂಧಪಟ್ಟ ಶೀರ್ಷಿಕೆಗಳಡಿಯಲ್ಲಿ ವಹಿವಾಟುಗಳ ವರ್ಗೀಕರಣದ ನಿಯಮಗಳ ಪಾಲನೆಯ ಕೊರತೆಗೆ ಅನ್ವಯಿಸಬಹುದು. ಈ ವಹಿವಾಟುಗಳು ರಾಜಸ್ವ ಲೆಕ್ಕದ ಮೇಲೆ ಮತ್ತು ರಾಜಸ್ವ ಅಧಿಕದಂತಹ ಆರ್ಥಿಕ ಸೂಚಕಗಳ ಮೇಲೆ ಪರಿಣಾಮ ಬೀರುತ್ತವೆ ಮತ್ತು ಅವುಗಳನ್ನು ವರ್ಷದ ಪ್ರಾರಂಭದಲ್ಲಿ ಆಯವ್ಯಯ ದಸ್ತಾವೇಜುಗಳಲ್ಲಿ ಹೊರತರಲಾಗುತ್ತದೆ. ಲೆಕ್ಕಗಳಲ್ಲಿ ದಾಖಲಿಸಿದ ವೆಚ್ಚವೊಂದಕ್ಕೆ ಅವಕಾಶ ಒದಗಿಸದಿರುವುದು ಸಹ ದೋಷಪೂರಿತ ಆಯವ್ಯಯವಾಗುತ್ತದೆ. ಆ ವರ್ಷದಲ್ಲಾದ ವೆಚ್ಚವನ್ನು ತಿಳಿಯಲು ಮತ್ತು ಭವಿಷ್ಯದ ಆಯವ್ಯಯಕ್ಕಾಗಿ ವಹಿವಾಟುಗಳನ್ನು ಸರಿಯಾದ ಉದ್ದೇಶ ಶೀರ್ಷಿಕೆಗೆ ವರ್ಗೀಕರಿಸುವುದು ಅವಶ್ಯಕವಾಗಿದೆ.

### 2.4.1 'ಬಂಡವಾಳ' ಮತ್ತು 'ರಾಜಸ್ವ' ನಡುವಿನ ವರ್ಗೀಕರಣ ದೋಷಗಳು

2017–18ರ ಅವಧಿಯಲ್ಲಿ ₹3,476.63 ಕೋಟಿಗಳ ಮೊತ್ತವನ್ನು 'ಬಂಡವಾಳ' ಮತ್ತು 'ರಾಜಸ್ವ' ಗಳ ನಡುವೆ, **ಅನುಬಂಧ 2.5**ರಲ್ಲಿ ತೋರಿಸಿರುವಂತೆ ತಪ್ಪಾಗಿ ವರ್ಗೀಕರಣ ಮಾಡಿರುವುದು ರಾಜಸ್ವ/ಬಂಡವಾಳ ವೆಚ್ಚವನ್ನು ಉಬ್ಬಿಸುವಲ್ಲಿ ಪರಿಣಮಿಸಿತ್ತಲ್ಲದೆ ರಾಜಸ್ವ ಹೆಚ್ಚಳದಂತಹ ಆರ್ಥಿಕ ಸೂಚಕವನ್ನು ತಪ್ಪಾಗಿ ನಿರೂಪಿಸಿತ್ತು.

### 2.4.2 ಆಯವ್ಯಯದಲ್ಲಿ 'ಪುರಸ್ಕೃತ' ಮತ್ತು 'ಪ್ರಭೃತ' ವಿಭಾಗಗಳಲ್ಲಿ ದೋಷಪೂರಿತ ವರ್ಗೀಕರಣ

ಆಯವ್ಯಯ ತಯಾರು ಮಾಡುವಾಗ 'ಪುರಸ್ಕೃತ' ಮತ್ತು 'ಪ್ರಭೃತ' ವಿಭಾಗಗಳ ನಡುವೆ ದೋಷಪೂರಿತ ವರ್ಗೀಕರಣ ಮಾಡಿರುವುದನ್ನು 2016–17ರ ಲೆಕ್ಕಪರಿಶೋಧನಾ ವರದಿಯಲ್ಲಿ **(ಕಂಡಿಕೆ 2.4.1.2)** ವ್ಯಾಖ್ಯಾನ ಮಾಡಲಾಗಿತ್ತು. 2017–18ರ ವರ್ಷದಲ್ಲಿಯೂ, **ಅನುಬಂಧ 2.6**ರಲ್ಲಿ ತಿಳಿಸಿರುವಂತೆ, ₹101.23 ಕೋಟಿಗಳ ಅವಕಾಶವನ್ನು 'ಪ್ರಭೃತ' ವಿಭಾಗದಡಿ ಮಾಡುವ ಬದಲು 'ಪುರಸ್ಕೃತ' ವಿಭಾಗದಡಿ ಮಾಡಿರುವ ಪ್ರಕರಣಗಳನ್ನು ಗಮನಿಸಲಾಯಿತು.

### 2.4.3 ಸಾಲಗಳನ್ನು ಈಕ್ವಿಟಿಯಾಗಿ ಪರಿವರ್ತಿಸುವ ಸಂಬಂಧವಾಗಿ ಅವಕಾಶಗಳನ್ನು ಸೂಕ್ತವಾಗಿ ಅನ್ವಯ ಮಾಡದಿದ್ದುದರಿಂದ ಆಯವ್ಯಯದಲ್ಲಿ ದೋಷಗಳು – ಮೆ.ಕೆಎಸ್ಐಸಿ

2017–18ರ ಮೂರನೇ ಮತ್ತು ಅಂತಿಮ ಪೂರಕ ಬೇಡಿಕೆಯಲ್ಲಿ (ಅನುದಾನ ಸಂಖ್ಯೆ.01–ಕೃಷಿ ಮತ್ತು ತೋಟಗಾರಿಕೆ) ಬಂಡವಾಳ ಶೀರ್ಷಿಕೆ 4860–01–190–0–02–211–ಕೆಎಸ್ಐಸಿಯಲ್ಲಿ ಹೂಡಿಕೆ ಅಡಿಯಲ್ಲಿ ನಗದು ಹರಿವಿಲ್ಲದೆ ಪುಸ್ತಕಗಳ ಹೊಂದಾಣಿಕೆಯಿಂದ ಸಾಲಗಳನ್ನು ಈಕ್ವಿಟಿಯಾಗಿ ಪರಿವರ್ತಿಸಲು ₹48.95 ಕೋಟಿಗಳ ಅವಕಾಶವನ್ನು ಮಾಡಲಾಗಿತ್ತು.

ರಾಜ್ಯ ಸರ್ಕಾರವು ಸಾಮಾನ್ಯವಾಗಿ ಅನುಸರಿಸುವ ಸಾಮಾನ್ಯ ಹಣಕಾಸಿನ ನಿಯಮಗಳಲ್ಲಿರುವ ನಿಬಂಧನೆಗಳ ಅನ್ವಯ ತನ್ನ ಪುಸ್ತಕಗಳಲ್ಲಿ ಸಾಲಗಳನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲು ನಿರ್ದಿಷ್ಟ ಅವಕಾಶಗಳ ಅನುಪಸ್ಥಿತಿಯಲ್ಲಿ ಅಂತಹ ಪರಿವರ್ತನೆಗೆ ಸಾಂಕೇತಿಕ ಅವಕಾಶ ಒದಗಿಸಿದರೆ ಸಾಕಾಗುತ್ತದೆ. ಅಂತಹ ಪ್ರಕರಣಗಳಲ್ಲಿ ಪ್ರಸಕ್ತ ವರ್ಷದ ಪುಸ್ತಕಗಳಲ್ಲಿ ವಹಿವಾಟುಗಳನ್ನು ದಾಖಲಿಸದೆ ಸಾಲಗಳಲ್ಲಿ/ ಈಕ್ವಿಟಿ ನಮೂನೆಗಳ ಅಡಿಯಲ್ಲಿ ಶಿಲ್ಕುಗಳನ್ನು ಸರಿಪಡಿಸುವ ಮೂಲಕ ಲೆಕ್ಕಗಳ ಹೊಂದಾಣಿಕೆಯನ್ನು ಮಾಡಲಾಗುತ್ತದೆ. ಹೀಗೆ, ಸಾಂಕೇತಿಕ ಅವಕಾಶ ಒದಗಿಸದೆ ₹48.95 ಕೋಟಿಗಳ ಒಟ್ಟು ಅವಕಾಶವನ್ನು ಮಾಡಿದ್ದು ಆಯವ್ಯಯದ ತತ್ವಗಳಿಗೆ ವಿರುದ್ಧವಾಗಿತ್ತು.

ಮುಂದುವರೆದು, ಮೇಲಿನ ಪ್ರಕರಣದಲ್ಲಿ ಈ ಹಿಂದಿನ ಅವಧಿಯಲ್ಲಿ ಕೆಎಸ್ಐಸಿಗೆ ಬಿಡುಗಡೆ ಮಾಡಿದ್ದ ಹಣ ಮತ್ತು ಸಾಲಗಳಿಗೆ ಸಂಬಂಧಿಸಿದ ಸರ್ಕಾರದ ಮಂಜೂರಾತಿ ಆದೇಶಗಳ ಪರಿಶೀಲನೆಯು ₹48.95 ಕೋಟಿಗಳ ಪೈಕಿ ₹22 ಕೋಟಿಗಳು, 2003–04ರಿಂದ 2006–07ರ ಅವಧಿಯಲ್ಲಿ ಸ್ವಯಂ ನಿವೃತ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿದ್ದ ಸಾಲದ ಭಾಗವಾಗಿದ್ದು ಅದನ್ನು ಪರಿವರ್ತನೆಗಾಗಿ ಪ್ರಸ್ತಾವಿಸಲಾಗಿತ್ತು. ₹22.91 ಕೋಟಿಯು ರಾಜಸ್ವ ಶೀರ್ಷಿಕೆ 2851 ಅಡಿಯಲ್ಲಿ 1992–93ರಿಂದ 2002–03ರ ಅವಧಿಯ ಸಾಲಗಳಿಗೆ ಸಂಬಂಧಿಸಿದ್ದು ಅದನ್ನು ಆಯಾ ವರ್ಷಗಳಲ್ಲಿ ಸಾರ್ವಜನಿಕ ಲೆಕ್ಕದ ನಿಧಿ ಲೆಕ್ಕಕ್ಕೆ (ಕರ್ನಾಟಕ ರಾಜ್ಯ ರೇಷ್ಮೆ ಹುಳು ಮತ್ತು ರೇಷ್ಮೆ ಅಭಿವೃದ್ಧಿ ಮತ್ತು ಬೆಲೆ ಸ್ಥಿರೀಕರಣ ನಿಧಿ) ಖರ್ಚು ಹಾಕಲಾಗಿತ್ತು ಮತ್ತು ₹4.04 ಕೋಟಿಗಳು ಕೆಎಸ್ಐಸಿಯಿಂದ ಸ್ವಾಧೀನಪಡಿಸಿಕೊಂಡ ಇಲಾಖಾ ವಾಣಿಜ್ಯ ಉದ್ಯಮಗಳ ಖರೀದಿ ಪರಿಗಣನೆಗೆ ಸಂಬಂಧಿಸಿದ್ದು, ಅದನ್ನು ಕೆಎಸ್ಐಸಿಯಲ್ಲಿ ಸರ್ಕಾರದ ಹೂಡಿಕೆಗಳು ಎಂದು ಪರಿಗಣಿಸಬೇಕಿತ್ತು. 2017–18ರ ಅವಧಿಯಲ್ಲಿ ಸಾಲದ ಭಾಗಗಳಿಗೆ ಸಂಬಂಧಿಸಿದ ಸ್ವಯಂ ನಿವೃತ್ತಿ ಯೋಜನೆಗೆ ಬಿಡುಗಡೆ ಮಾಡಲಾದ ₹22 ಕೋಟಿಯಷ್ಟನ್ನು ಮಾತ್ರ ಪುಸ್ತಕ ಹೊಂದಾಣಿಕೆಯ ಮೂಲಕ ಹೊಂದಾಣಿಕೆ ಮಾಡಲಾಗಿತ್ತು. ಹಿಂದಿನ ವರ್ಷಗಳ ರಾಜಸ್ವ ಸ್ವರೂಪದ ವೆಚ್ಚವನ್ನು ಅವಕಾಶದ ಅನುಪಸ್ಥಿತಿಯಲ್ಲಿ ಬಂಡವಾಳ ಲೆಕ್ಕಕ್ಕೆ ತರುವುದು ಸರಿಯಲ್ಲವಾದ್ದರಿಂದ 1992–03ರಿಂದ 2002–03ರ ಅವಧಿಯ ಸಾಲಗಳಿಗೆ ಸಂಬಂಧಿಸಿದ ₹22.91 ಕೋಟಿ ಮೊತ್ತವನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲಿಲ್ಲ ಮತ್ತು ಕೆಎಸ್ಐಸಿಯು ತೆಗೆದುಕೊಂಡ ಖರೀದಿ ಪರಿಗಣನೆಗೆ ಸಂಬಂಧಿಸಿದ ₹4.04 ಕೋಟಿಯನ್ನು ಸರ್ಕಾರಿ ಲೆಕ್ಕಗಳ ಮೂಲಕ ಪಾವತಿಸಿರಲಿಲ್ಲ.

ಹೀಗೆ, ಸಾಲವನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲು ಮಾಡಿದ ₹48.95 ಕೋಟಿಯ ಅವಕಾಶವು ಪ್ರಸ್ತುತ ವರ್ಷದಲ್ಲಿ ಬಂಡವಾಳ ವೆಚ್ಚವನ್ನು ಉಬ್ಬಿಸುವಲ್ಲಿ ಪರಿಣಮಿಸಿದೆ.

### 2.4.4 ಪ್ರಧಾನ ಲೆಕ್ಕಶೀರ್ಷಿಕೆಗಳಡಿಯಲ್ಲಿ ಮಾಡಿದ ತಪ್ಪು ಅವಕಾಶಗಳು

2017–18ರ ಅವಧಿಯಲ್ಲಿ ಹಲವಾರು ಪ್ರಧಾನ ಲೆಕ್ಕಶೀರ್ಷಿಕೆಗಳಡಿಯಲ್ಲಿ ತಪ್ಪು ವರ್ಗೀಕರಣಗಳನ್ನು ಗಮನಿಸಲಾಯಿತು, ವಿವರಗಳನ್ನು **ಅನುಬಂಧ–2.7ರಲ್ಲಿ** ನೀಡಲಾಗಿದೆ.

### 2.4.5 ಉದ್ದೇಶ ಲೆಕ್ಕಶೀರ್ಷಿಕೆಗಳಡಿಯಲ್ಲಿ ವರ್ಗೀಕರಣ ದೋಷಗಳು

ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳ ಬಿಡುಗಡೆ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಉದ್ದೇಶ ಶೀರ್ಷಿಕೆ ಹಂತದ ವರ್ಗೀಕರಣದಲ್ಲಿ ತಪ್ಪಾದ ಆಯವ್ಯಯ ಕ್ರಮವನ್ನು ಅನುಸರಿಸಿರುವುದರಿಂದ ಆಯವ್ಯಯ/ವೆಚ್ಚಗಳಿಗೆ ಧಕ್ಕೆಯಾಗಿದೆ. ಅಂತಹ ತಪ್ಪಾದ ವರ್ಗೀಕರಣವು ಪಿಂಚಣಿ ಮತ್ತು ಇತರೆ ನಿವೃತ್ತಿ ವೇತನಗಳ ಅಡಿಯಲ್ಲಿ ₹48.62 ಕೋಟಿಯಷ್ಟು, ಸಂಚಿತ ವೇತನಗಳ ಅಡಿಯಲ್ಲಿ ₹524.21 ಕೋಟಿಯಷ್ಟು, ನಿರ್ವಹಣಾ ವೆಚ್ಚದಡಿ ₹478.04 ಕೋಟಿಯಷ್ಟು ಮತ್ತು ಸಹಾಯಧನಗಳ ಅಡಿ ₹1,017.93 ಕೋಟಿಯಷ್ಟು ಇದ್ದಿತು. ನಿರ್ದಿಷ್ಟ ಸಂಕೇತದೊಂದಿಗೆ ಪ್ರತ್ಯೇಕ ಉದ್ದೇಶಶೀರ್ಷಿಕೆಯ ಅನುಪಸ್ಥಿತಿಯು ರಾಜ್ಯದಲ್ಲಿ ಭರಿಸಿದ ವೆಚ್ಚದೊಂದಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಭರಿಸಿದ ವೆಚ್ಚದ ಬೇರ್ಪಡಿಸುವಿಕೆಯನ್ನು ತಡೆಹಿಡಿಯುತ್ತದೆ.

ಇದನ್ನು ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ತೋರಿಸಿದ್ದರೂ ಸಹ ಸರಿಪಡಿಸುವ ಕ್ರಮಗಳನ್ನು ಕೈಗೊಂಡಿರಲಿಲ್ಲ.

2012–13ರ ರಾಜ್ಯ ಹಣಕಾಸು ವ್ಯವಹಾರಗಳ ವರದಿಗೆ ಉತ್ತರವಾಗಿ ಆರ್ಥಿಕ ಇಲಾಖೆಯು, ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಉದ್ದೇಶ ಶೀರ್ಷಿಕೆಗಳು ಒಂದೇ ಆಗಿದ್ದರೂ ನಗರ ಸ್ಥಳೀಯ ಸಂಸ್ಥೆಗಳ ಸಂಪರ್ಕ ದಾಖಲೆಗಳಲ್ಲಿನ ಈ ಶೀರ್ಷಿಕೆಗಳು ರಾಜ್ಯ ವಿಭಾಗದ ಲೆಕ್ಕಗಳಲ್ಲಿ ಬಿಂಬಿತವಾಗುವುದಿಲ್ಲ

ಎಂದು ಹೇಳಿದೆ. ನಗರ ಸ್ಥಳೀಯ ಸಂಸ್ಥೆಗಳ ಬಟವಾಡೆ ಅಧಿಕಾರಿಗಳು ಬಿಲ್ಲುಗಳ ಸಲ್ಲಿಕೆಯ ಮೂಲಕ ಖಜಾನೆಯಿಂದ ಹಣ ಸೆಳೆಯುವುದರಿಂದ ಮತ್ತು ಅದೇ ಮೊತ್ತಗಳನ್ನು ಕ್ರಿಯಾ ಉದ್ದೇಶ ಶೀರ್ಷಿಕೆಗಳಡಿ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ 4–ಬಿ– ವೆಚ್ಚ ಉದ್ದೇಶ ಶೀರ್ಷಿಕೆಯಡಿ ಲೆಕ್ಕ ಮಾಡಿರುವುದರಿಂದ ಆರ್ಥಿಕ ಇಲಾಖೆಯ ಉತ್ತರವು ಸಮರ್ಥನೀಯವಲ್ಲ.

### 2.4.6 ನಿಧಿ ಲೆಕ್ಕಗಳಡಿಯ ಆಯವ್ಯಯದ ದೋಷಗಳು

ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ಮೇಲಿನ ವರದಿಯ **ಕಂಡಿಕೆ 2.5**ರಲ್ಲಿ ಉಪಕರ ನಿರೀಕ್ಷಿತ ಸಂಗ್ರಹಣೆ ಮತ್ತು ಸಾರ್ವಜನಿಕೆ ಲೆಕ್ಕಕ್ಕೆ ಅದರ ವೆಚ್ಚದ ವರ್ಗಾವಣೆಗೆ ಮಾಡಿದ ಅವಕಾಶದ ನಡುವಿನ ವಿಷಮತೆಯ ಬಗ್ಗೆ ವ್ಯಾಖ್ಯಾನಿಸಲಾಗಿತ್ತು. ಆದಾಗ್ಯೂ, 2017–18ರಲ್ಲಿ ಸಹ ನಿರೀಕ್ಷಿತ ಉಪಕರದ ಸಂಗ್ರಹಣೆ ಮತ್ತು ನಿಧಿ ಲೆಕ್ಕದಲ್ಲಿ ಅದರ ವೆಚ್ಚಕ್ಕಾಗಿ ಮಾಡಿದ ಅವಕಾಶದ ನಡುವೆ ವ್ಯತ್ಯಾಸವನ್ನು ಗಮನಿಸಲಾಯಿತು. 2017–18ರಲ್ಲಿ ₹1,165.95 ಕೋಟಿಗಳ ಮೊತ್ತದ ಉಪಕರ ಸಂಗ್ರಹಣೆಯನ್ನು ನಿರೀಕ್ಷಿಸಲಾಗಿತ್ತು. ಆ ಮೊತ್ತವನ್ನು ಐಐಎಫ್, ಬಿಎಮ್‌ಆರ್‌ಸಿಎಲ್ ಮತ್ತು ಸಿಎಮ್‌ಆರ್‌ಆರ್‌ಡಿ ನಿಧಿಗಳ ನಡುವೆ ಅನುಕ್ರಮವಾಗಿ 57:28:15ರ ಅನುಪಾತದಲ್ಲಿ ಹಂಚಿಕೆ ಮಾಡಬೇಕಿತ್ತು. ಆದರೆ, ಪ್ರಧಾನಶೀರ್ಷಿಕೆ 5465 (ಐಐಎಫ್) ಅಡಿಯಲ್ಲಿ ₹659.01 ಕೋಟಿ, ಪ್ರಧಾನ ಶೀರ್ಷಿಕೆ 6217 (ಬಿಎಮ್‌ಆರ್‌ಸಿಎಲ್) ಅಡಿಯಲ್ಲಿ ₹1,323.72 ಕೋಟಿ ಹಾಗೂ ಪ್ರಧಾನ ಶೀರ್ಷಿಕೆ 3054 (ಸಿಎಮ್‌ಆರ್‌ಆರ್‌ಡಿ) ಅಡಿಯಲ್ಲಿ ₹323.42 ಕೋಟಿಯ ಒಟ್ಟು ₹2,306.15 ಕೋಟಿಯ ಅವಕಾಶವನ್ನು ಆಯವ್ಯಯದಲ್ಲಿ ಮಾಡಲಾಗಿದ್ದು ಇದು ಹಂಚಿಕೆಯ ಶೇಕಡಾವಾರು ಪ್ರಮಾಣಕ್ಕೆ ಅನುಗುಣವಾಗಿ ಇರುವುದಿಲ್ಲ.

ಹೀಗೆ, ನಿರೀಕ್ಷಿತ ಸಂಗ್ರಹಣೆ ಮತ್ತು ಅದಕ್ಕೆ ಸಂಬಂಧಿಸಿದ ವೆಚ್ಚವನ್ನು ವರ್ಗಾವಣೆಯ ಮೂಲಕ ಮಾಡಲು ಒದಗಿಸಿದ ಅವಕಾಶಗಳ ನಡುವೆ ಹೊಂದಾಣಿಕೆಯಿರಲಿಲ್ಲ ಹಾಗೂ ಅದು ₹1,1,40.20 ಕೋಟಿಗಳ ಅಧಿಕ ಅವಕಾಶ ಒದಗಿಸುವುದರಲ್ಲಿ ಪರಿಣಮಿಸಿತು.

ಆರ್ಥಿಕ ಇಲಾಖೆಯು ಆಕ್ಷೇಪಣೆಯನ್ನು ಒಪ್ಪಿಕೊಂಡಿದ್ದು (ಮಾರ್ಚ್ 2019) ಮತ್ತು 2019–20ರ ಆಯವ್ಯಯದಲ್ಲಿ ನಿಧಿ ವಹಿವಾಟುಗಳಿಗೆ ಸರಿಯಾದ ಹಂಚಿಕೆಯನ್ನು ಮಾಡಿದೆ.

### 2.4.7 ಬಹು ಉದ್ದೇಶ ಶೀರ್ಷಿಕೆ 059– ಇತರೆ ವೆಚ್ಚಗಳ ಅಡಿ ಅವಕಾಶ ಕಲ್ಪಿಸುವಲ್ಲಿ– ಆಯವ್ಯಯ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು

ಸರ್ಕಾರದ ಆಯವ್ಯಯ/ವೆಚ್ಚಗಳನ್ನು ವಿಭಾಗ/ಉಪವಿಭಾಗ/ಕಾರ್ಯ/ಉಪಕಾರ್ಯ/ಕಾರ್ಯಕ್ರಮ ಉಪ/ಸವಿವರ/ಉದ್ದೇಶ ಶೀರ್ಷಿಕೆಗಳಿಗೆ ಅನುಗುಣವಾಗಿ 15 ಅಂಕಿಗಳಲ್ಲಿ ವರ್ಗೀಕರಿಸಲಾಗಿದೆ. ವರ್ಗೀಕರಣದ ಕೊನೆಯ ಹಂತವಾದ ಉದ್ದೇಶ ಶೀರ್ಷಿಕೆಯಡಿ ತೋರಿಸಲಾಗುವ ವೆಚ್ಚವು ವೆಚ್ಚದ ಉದ್ದೇಶ/ಸ್ವರೂಪವನ್ನು ತೋರಿಸುವುದರಿಂದ, ಇದನ್ನು ಅತಿ ಹೆಚ್ಚಿನ ನಿಖರತೆ/ಸೂಕ್ಷ್ಮದೃಷ್ಟಿ/ ಸಕ್ಷಮತೆಗಳನ್ನು ಉಪಯೋಗಿಸಿ ತಯಾರಿಸಬೇಕಾಗಿರುತ್ತದೆ. ವೆಚ್ಚದ ವರ್ಗೀಕರಣವನ್ನು ಸರಳೀಕರಿಸುವ ದೃಷ್ಟಿಯಿಂದ 2003–04ರಲ್ಲಿ ಕೆಲವು ಉದ್ದೇಶ ಶೀರ್ಷಿಕೆಗಳನ್ನು ಒಟ್ಟುಗೂಡಿಸಿ ಹೊಸ ಉದ್ದೇಶ ಶೀರ್ಷಿಕೆಗಳನ್ನು ರೂಪಿಸಲಾಯಿತು. ಉದ್ದೇಶ ಶೀರ್ಷಿಕೆ '059–ಇತರೆ ವೆಚ್ಚಗಳು' ಬಹು ಉದ್ದೇಶಿತ ಶೀರ್ಷಿಕೆಯಾಗಿದ್ದು ಅವಕಾಶವನ್ನು/ವೆಚ್ಚವನ್ನು ಇತರ ಯಾವುದೇ ಉದ್ದೇಶ ಶೀರ್ಷಿಕೆಯಡಿ ವರ್ಗೀಕರಿಸಲು ಸಾಧ್ಯವಾಗದಿದ್ದಲ್ಲಿ ಈ ಶೀರ್ಷಿಕೆಯಡಿ ದಾಖಲಿಸಲು ರೂಪಿಸಲಾಗಿದೆ. ಆಯವ್ಯಯ ಸುತ್ತೋಲೆಯ ಪ್ರಕಾರ ಈ ಶೀರ್ಷಿಕೆಯಡಿಯ ಅವಕಾಶವು ಅಗತ್ಯಕ್ಕೆ ಮಾತ್ರದಷ್ಟಿರಬೇಕು.

2017–18ರಲ್ಲಿ ಏಳು ಇಲಾಖೆಗಳಿಗೆ ಸಂಬಂಧಿಸಿದ ವೋಚರ್‌ಗಳನ್ನು ಪರಿಶೀಲಿಸಿದಾಗ ₹1,597.83 ಕೋಟಿಗಳಷ್ಟು ವೆಚ್ಚದ ಬಾಬ್ತುಗಳನ್ನು ಸರಿಯಾದ ಲೆಕ್ಕಶೀರ್ಷಿಕೆಯಾದ ಅಂದರೆ, 106–ಸಹಾಯಧನ, 100–ಹಣಕಾಸಿನ ನೆರವು, 051–ಸಾಮಾನ್ಯ ವೆಚ್ಚಗಳು, 211–ಹೂಡಿಕೆ, 015–ಪೂರಕ ವೆಚ್ಚಗಳು, 386–ನಿರ್ಮಾಣ, ಇತ್ಯಾದಿಗಳಿಗೆ ಬದಲಾಗಿ '059–ಇತರೆ ಖರ್ಚುಗಳು' ಅಡಿಯಲ್ಲಿ ತಪ್ಪಾಗಿ ವರ್ಗೀಕರಿಸಲ್ಪಟ್ಟಿರುವುದು ಗಮನಕ್ಕೆ ಬಂದಿದ್ದು, ಅಂತಹ ತಪ್ಪು ವರ್ಗೀಕರಣದ ವಿವರಗಳನ್ನು **ಅನುಬಂಧ 2.8**ರಲ್ಲಿ ನೀಡಲಾಗಿದೆ.

ಸುತ್ತೋಲೆಗಳಲ್ಲಿ ಪಟ್ಟಿ ಮಾಡಿರುವ ಹಾಗೆ ನಿರ್ದಿಷ್ಟ ಉದ್ದೇಶ ಶೀರ್ಷಿಕೆಗಳ ಅಡಿಯಲ್ಲಿ ಅವಕಾಶಗಳನ್ನು ಕಲ್ಪಿಸುವಂತೆ ಇಲಾಖೆಗಳಿಗೆ ಆಯವ್ಯಯ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಮಾರ್ಚ್ 2019).

ಆಯವ್ಯಯದಲ್ಲಿನ ದೋಷಗಳು ವಿತ್ತೀಯ ಯುಕ್ತತೆಯ ಸೂತ್ರಗಳ ಅರ್ಥೈಸುವಿಕೆಯಲ್ಲಿನ ನ್ಯೂನತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಅದನ್ನು ತಪ್ಪಿಸಬೇಕಾಗಿದೆ.

## 2.5 ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ

ಹಣಕಾಸಿನ ಹೊಣೆಗಾರಿಕೆಯು ಆಯವ್ಯಯದ ತಯಾರಿಕೆಯನ್ನು ಅವಲಂಬಿಸಿದೆ ಮತ್ತು ಆ ಉದ್ದೇಶಕ್ಕೆ ಅಗತ್ಯವಿರುವ ಎಲ್ಲ ದತ್ತಾಂಶವನ್ನು ಪರಿಗಣಿಸಿ ಮತ್ತು ಮಾಡಿದ ಅವಕಾಶಗಳಿಗೆ ಪ್ರತಿಯಾಗಿ ವೆಚ್ಚದ ಪ್ರಗತಿಯನ್ನು ಗಮನಿಸುವುದಾಗಿದೆ. ಈ ಕ್ರಿಯೆಯು ಒಂದು ನಿರಂತರ ಕಾರ್ಯಗತಿಯಾಗಿರಬೇಕು. ನಿರಂತರವಾಗಿ ಹಣವನ್ನು ಬಳಕೆ ಮಾಡದಿರುವುದು ಮತ್ತು ನಿಯತವಾಗಿ ಪೂರಕ ಬೇಡಿಕೆಗಳನ್ನು ಸಲ್ಲಿಸುವುದು ಹಣಕಾಸು ಹೊಣೆಗಾರಿಕೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಪೂರಕ ಬೇಡಿಕೆಗಳನ್ನು ಸಲ್ಲಿಸುವ ಬದಲು ಅಗತ್ಯವಿರುವ ಶೀರ್ಷಿಕೆಗಳಿಗೆ ಪುನರ್ವಿನಿಯೋಗ ಮಾಡುವುದಕ್ಕೆ ಇರುವ ಅವಕಾಶವನ್ನು ಉಪಯೋಗಿಸಿಕೊಳ್ಳದಿರುವುದರ ಮೇಲೆ ನಿಕಟ ಗಮನ ಹರಿಸಬೇಕಿದೆ.

### 2.5.1 ಧನವಿನಿಯೋಗಕ್ಕೆ ಪ್ರತಿಯಾಗಿ ಹಂಚಿಕೆಯ ಆದ್ಯತೆಗಳು

2017–18ರಲ್ಲಿ 19 ಅನುದಾನ/ವಿನಿಯೋಗಗಳಲ್ಲಿ ಬಳಕೆಯಾಗದೆ ಉಳಿದ ಒಟ್ಟು ₹16,385.90 ಕೋಟಿಗಳ 19 ಪ್ರಕರಣಗಳಲ್ಲಿ ಉಳಿಕೆಯು ₹100 ಕೋಟಿಗಿಂತಲೂ ಅಧಿಕವಾಗಿದೆ. ಹೆಚ್ಚಿನ ಪ್ರಮಾಣದ, ಬಳಕೆಯಾಗದೆ ಉಳಿದ ಅವಕಾಶಗಳು ಆರ್ಥಿಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆಹಾರ ಮತ್ತು ನಾಗರೀಕ ಸರಬರಾಜು, ಶಿಕ್ಷಣ, ನಗರಾಭಿವೃದ್ಧಿ ಮತ್ತು ಜಲಸಂಪನ್ಮೂಲ ಇಲಾಖೆಗಳಲ್ಲಿ ಕಂಡುಬಂದಿದ್ದು ಅವುಗಳನ್ನು **ಅನುಬಂಧ 2.9**ರಲ್ಲಿ ನೀಡಲಾಗಿದೆ. ಅಲ್ಲದೆ, ಪುನರ್ವಿನಿಯೋಗದ ಮೊತ್ತವು ₹25 ಕೋಟಿಗೂ ಅಧಿಕವಾಗಿದ್ದ ಅವಕಾಶಗಳನ್ನು ಒಳಗೊಂಡ ಪ್ರಧಾನ ಲೆಕ್ಕ ಶೀರ್ಷಿಕೆಗಳನ್ನು **ಅನುಬಂಧ 2.10**ರಲ್ಲಿ ನೀಡಲಾಗಿದೆ.

ಕೆಲವು ಪ್ರಧಾನ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಬಳಕೆಯಾಗದೆ ಉಳಿದ ಮಾಡದ ಅವಕಾಶಗಳಿಗೆ ಕೆಲವು ಇಲಾಖೆಗಳು ನೀಡಿದ ಕಾರಣಗಳನ್ನು, ಧನವಿನಿಯೋಗ ಲೆಕ್ಕಗಳಲ್ಲಿ ವರದಿ ಮಾಡಿರುವಂತೆ, ಕೆಳಗೆ ನೀಡಲಾಗಿದೆ:

**ಆರ್ಥಿಕ**

ಶೀರ್ಷಿಕೆ 2040–ಮಾರಾಟದ ಮೇಲಿನ ತೆರಿಗೆ, ವ್ಯಾಪಾರ ಇತ್ಯಾದಿ–ನಿರ್ದೇಶನ ಮತ್ತು ಆಡಳಿತ–ವಾಣಿಜ್ಯ ತೆರಿಗೆಗಳ ಆಯುಕ್ತರು–ಇದರಡಿಯಲ್ಲಿ ಬಳಕೆಯಾಗದೆ ಉಳಿದ ₹82.61 ಕೋಟಿಗಳ ಅವಕಾಶವು ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಹೊಸ ಪ್ರಧಾನ ಶೀರ್ಷಿಕೆ 2043–ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿಯಲ್ಲಿ –ನಿರ್ದೇಶನ ಮತ್ತು ಆಡಳಿತ–ಇದನ್ನು ಪ್ರಾರಂಭಿಸಿದ್ದರಿಂದ ಆಗಿದೆ ಮತ್ತು 2040ರ ಅಡಿಯಲ್ಲಿನ ಉಳಿದ ಆಯವ್ಯಯ ಅವಕಾಶವನ್ನು ಅಧ್ಯರ್ಪಣೆ ಮಾಡಲಾಗಿದೆ.

ಶೀರ್ಷಿಕೆ 2040–ಮಾರಾಟದ ಮೇಲಿನ ತೆರಿಗೆ, ವ್ಯಾಪಾರ ಇತ್ಯಾದಿ–ನಿರ್ದೇಶನ ಮತ್ತು ಆಡಳಿತ–ವಾಣಿಜ್ಯ ತೆರಿಗೆಗಳ ಆಯುಕ್ತರು–ಇದರಡಿಯಲ್ಲಿ ಬಳಕೆಯಾಗದೆ ಉಳಿದ ₹40.60 ಕೋಟಿಗಳ ಅವಕಾಶವು ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಹೊಸ ಪ್ರಧಾನ ಶೀರ್ಷಿಕೆ 2043–ರಾಜ್ಯ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿಯಲ್ಲಿ ಸಂಗ್ರಹಣಾ ಶುಲ್ಕಗಳು–ಇದನ್ನು ಪ್ರಾರಂಭಿಸಿದ್ದರಿಂದ ಆಗಿದೆ ಮತ್ತು 2040ರ ಅಡಿಯಲ್ಲಿನ ಉಳಿದ ಆಯವ್ಯಯ ಅವಕಾಶವನ್ನು ಅಧ್ಯರ್ಪಣೆ ಮಾಡಲಾಗಿದೆ.

2018–19ರ ಆಯವ್ಯಯ ರಚನೆಯ ಸಮಯದಲ್ಲಿ ಜಿಎಸ್‌ಟಿಯನ್ನು ಇನ್ನೂ ಅನುಷ್ಠಾನ ಮಾಡಿರಲಿಲ್ಲ. ಹಾಗಾಗಿ 2040–00–001–ನಿರ್ದೇಶನ ಮತ್ತು ಆಡಳಿತ ಅಡಿಯಲ್ಲಿ (₹181.89 ಕೋಟಿ) ಹಾಗೂ 2040–00–101–ಸಂಗ್ರಹಣಾ ಶುಲ್ಕಗಳು (₹126.05 ಕೋಟಿ) ಅಡಿಯಲ್ಲಿ ಪೂರ್ಣ ಅವಕಾಶವನ್ನು ಮಾಡಲಾಯಿತು. ಸರಕು ಮತ್ತು ಸೇವಾ ತೆರಿಗೆಯನ್ನು 1 ಜುಲೈ 2017ರಿಂದ ಅನುಷ್ಠಾನ ಮಾಡಿದ್ದರಿಂದ ಹೊಸ ಶೀರ್ಷಿಕೆಯಡಿ 2043–ಎಸ್‌ಜಿಎಸ್‌ಟಿ ಅಡಿಯಲ್ಲಿ ಸಂಗ್ರಹಣಾ ಶುಲ್ಕಗಳು–ಶೀರ್ಷಿಕೆಯಡಿಯಲ್ಲಿ

ವೆಚ್ಚವನ್ನು ದಾಖಲಿಸಲು ಆಚರಣೆಗೆ ತರುವ ಅಗತ್ಯವಿದ್ದಿತು. ಆದರೆ, ಕರ್ನಾಟಕ ಸರ್ಕಾರವು ಹೊಸ ಪ್ರಧಾನ ಶೀರ್ಷಿಕೆಯನ್ನು 1 ಡಿಸೆಂಬರ್ 2017ರಿಂದ ಜಾರಿಗೊಳಿಸಿತು. ಪೂರಕ ಅಂದಾಜುಗಳಲ್ಲಿ ₹124.80 ಕೋಟಿಗಳ ಅವಕಾಶವನ್ನು ಮಾಡಲಾಯಿತು, ಆದರೆ ಅಧ್ಯರ್ಪಣೆ ಮಾಡಿದ ಹಿಂದಿನ ಪ್ರಧಾನ ಶೀರ್ಷಿಕೆಯಲ್ಲಿ (2040) ಬಳಕೆ ಮಾಡದ ಅವಕಾಶವು ಲಭ್ಯವಿದ್ದುದರಿಂದ ಅದು ಅನವಶ್ಯಕವಾಗಿತ್ತು. ಹೊಸ ಶೀರ್ಷಿಕೆ/ಉದ್ದೇಶ ಶೀರ್ಷಿಕೆಗಳ ಅಡಿಯಲ್ಲಿ ಸಾಂಕೇತಿಕ ಅವಕಾಶವನ್ನು ಮಾಡಬಹುದಿತ್ತು ಹಾಗೂ ಪ್ರಧಾನ ಶೀರ್ಷಿಕೆ 2040ರಿಂದ ಮೊತ್ತಗಳನ್ನು ಪುನರ್ವಿನಿಯೋಗ ಮಾಡಬಹುದಿತ್ತು.

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್

2515–ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ–ಗ್ರಾಮಪಂಚಾಯತಿಗಳಿಗೆ ನೆರವು–ಗ್ರಾಮ ಪಂಚಾಯತಿಗಳು–ಸಿಎಸ್‌ಎಸ್/ಸಿಪಿಎಸ್–14ನೇ ಹಣಕಾಸು ಆಯೋಗದ ಮೂಲ ಅನುದಾನಗಳು–ಒಟ್ಟು ಮೊತ್ತ–ಜಿಲ್ಲಾ ಪಂಚಾಯತಿ ಅಡಿಯ ಬಳಕೆ ಮಾಡದ ಅವಕಾಶವಾದ ₹24.57 ಕೋಟಿಯು ಪೌರಾಡಳಿತ ಸಂಸ್ಥೆಗಳಾಗಿ ಉನ್ನತೀಕರಣಗೊಂಡ 57 ಗ್ರಾಮ ಪಂಚಾಯತಿಗಳಿಗೆ 14ನೇ ಹಣಕಾಸು ಆಯೋಗದ ಮೂಲ ಅನುದಾನಗಳನ್ನು ಬಿಡುಗಡೆ ಮಾಡಲು ನಗರಾಭಿವೃದ್ಧಿ ಇಲಾಖೆಗೆ ಅನುದಾನಗಳನ್ನು ಒದಗಿಸಲು ಉನ್ನತಾಧಿಕಾರ ಸಮಿತಿಯ ನಿರ್ಣಯ ಕಾರಣದಿಂದಾಗಿತ್ತು.

₹24.57 ಕೋಟಿಯ ಬಳಕೆಯಾಗದ ಅವಕಾಶದ ಸಂಬಂಧವಾಗಿ 57 ಗ್ರಾಮ ಪಂಚಾಯತಿಗಳನ್ನು 2015–16ರಲ್ಲಿಯೇ ಪೌರಾಡಳಿತ ಸಂಸ್ಥೆಗಳಾಗಿ ಉನ್ನತೀಕರಿಸಲಾಗಿರುವುದನ್ನು ಗಮನಿಸಲಾಯಿತು. ಭಾರತ ಸರ್ಕಾರದಿಂದ ಪಡೆದ ₹1,580.18 ಕೋಟಿಗಳ ಅನುದಾನಕ್ಕೆ ಪ್ರತಿಯಾಗಿ ವಾಸ್ತವಿಕ ಬಿಡುಗಡೆಯು ₹1,555.60 ಕೋಟಿಗಳಾಗಿದ್ದು ಅದು ಮೇಲೆ ತಿಳಿಸಿದ ಮೊತ್ತದ ಉಳಿತಾಯದಲ್ಲಿ ಪರಿಣಮಿಸಿದ್ದು ಅದಕ್ಕೆ ಆಯವ್ಯಯ ಅವಕಾಶದ ಅಗತ್ಯವಿರಲಿಲ್ಲ.

### ಶಿಕ್ಷಣ

ಪ್ರಧಾನ ಶೀರ್ಷಿಕೆ 2203–ತಾಂತ್ರಿಕ ಶಿಕ್ಷಣ–ವಿದ್ಯಾರ್ಥಿವೇತನಗಳು–ಇಂಜಿನೀಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಿಗೆ ವಿದ್ಯಾರ್ಥಿವೇತನಗಳು ಮತ್ತು ಸೆಮಿನಾರ್‌ಗಳು–ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿಯಲ್ಲಿ ₹25.86 ಕೋಟಿ ಬಳಕೆಯಾಗದ ಅವಕಾಶವು, 2016–17ರ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಲ್ಲಿ ಬಳಕೆಯಾಗದೆ ಉಳಿದ ಅನುದಾನದಿಂದ ವೆಚ್ಚವನ್ನು ಭರಿಸಿದ್ದರಿಂದಾಗಿದ್ದಿತು.

ಉಳಿಕೆಗೆ ಸಂಬಂಧಿಸಿದಂತೆ ಇಲಾಖೆಯು ನೀಡಿದ ಕಾರಣವನ್ನು ಒಪ್ಪಲಾಗುವುದಿಲ್ಲ ಏಕೆಂದರೆ ಪ್ರಸ್ತುತ ಪ್ರಕರಣದಲ್ಲಿ ಹಿಂದಿನ ವರ್ಷ ಬಳಕೆ ಮಾಡದೆ ಉಳಿದ ಅನುದಾನವನ್ನು ಶಾಸಕಾಂಗದ ಮಂಜೂರಾತಿಯಿಲ್ಲದೇ ಪ್ರಸಕ್ತ ವರ್ಷದ ವೆಚ್ಚವನ್ನು ಭರಿಸಲು ವಿನಿಯೋಗಿಸಲಾಗಿತ್ತು. ಅಲ್ಲದೆ, ಕರ್ನಾಟಕ ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಹಣಕಾಸಿನ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರ ಕಂಡಿಕೆ 13ರ ಅನ್ವಯ ನಿರ್ದಿಷ್ಟ ವರ್ಷವೊಂದರ ಹಂಚಿಕೆಯಲ್ಲಿನ ಬಳಕೆ ಮಾಡದ ಮೊತ್ತದ ಸಂದರ್ಭದಲ್ಲಿ, ಅದನ್ನು ಮುಂದಿನ ವರ್ಷದ ಹಂಚಿಕೆಗೆ ಸೇರಿಸಬಹುದು. ಆದರೆ ಆ ವರ್ಷದಿಂದ ಮುಂದಕ್ಕೆ ಅದನ್ನು ತೆಗೆದುಕೊಂಡು ಹೋಗುವಂತಿಲ್ಲ. ಹೀಗೆ, ಹಿಂದಿನ ವರ್ಷದ ಬಳಕೆ ಮಾಡದ ಅನುದಾನವನ್ನು ಇಲಾಖೆಯು ಜಮೆ ಮಾಡಬೇಕಿತ್ತು ಮತ್ತು ನಂತರ ಪ್ರಸ್ತುತ ವರ್ಷದ ಹಂಚಿಕೆಗೆ ಸೇರಿಸಿ ವೃದ್ಧಿಗೊಳಿಸಿದ ಹಂಚಿಕೆಗಾಗಿ ಶಾಸಕಾಂಗದ ಮಂಜೂರಾತಿಯನ್ನು ಪಡೆಯಬಹುದಿತ್ತು.

ಒಟ್ಟಾರೆ ₹16,385.90 ಕೋಟಿಗಳ ಉಳಿತಾಯಕ್ಕೆ ಇಲಾಖೆಗಳು ನೀಡಿದ ಕಾರಣಗಳು ಒಂದು ಸಣ್ಣ ಭಾಗಕ್ಕೆ ಮಾತ್ರವಾಗಿದ್ದು ಉಳಿತಾಯದ ಹೆಚ್ಚಿನ ಭಾಗಕ್ಕೆ ಯಾವುದೇ ನಿರ್ದಿಷ್ಟ ಕಾರಣಗಳನ್ನು ನೀಡಲಾಗಿಲ್ಲ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ವಿಧಾನಮಂಡಲಕ್ಕೆ ಸಲ್ಲಿಸಿದ ತನ್ನ 13ನೇ ವರದಿಯಲ್ಲಿ ಗಮನಿಸಿದಂತೆ ಅವಕಾಶ/ವೆಚ್ಚದ ಮೇಲೆ ನಿಯಂತ್ರಣವನ್ನು ಸಾಧಿಸಲು, ಬಳಕೆಯಾಗದ ಅವಕಾಶಗಳನ್ನು, ಅನುದಾನ ನಿಯಂತ್ರಣ ಅಧಿಕಾರಿಗಳ ಗಮನಕ್ಕೆ ಬಂದ ತಕ್ಷಣ, ಅಧ್ಯರ್ಪಣೆ ಮಾಡಬೇಕು ಮತ್ತು ಈ ವಿಷಯದಲ್ಲಿ ನಿರ್ದಿಷ್ಟ ಸೂಚನೆಗಳನ್ನು ನೀಡುವುದು ಅಗತ್ಯವಾಗಿದೆ. ವರ್ಷದ ಕೊನೆಯವರೆಗೂ ಕಾಯದೇ ಯಾವಾಗ ಬಳಕೆ ಮಾಡದ ಅವಕಾಶಗಳನ್ನು ನಿರೀಕ್ಷಿಸಲಾಗುವುದೋ ಆಗಲೇ ಬಳಕೆಯಾಗದ ಅವಕಾಶಗಳನ್ನು ಪೂರ್ಣವಾಗಿ ಹಣಕಾಸು ಇಲಾಖೆಗೆ ಅಧ್ಯರ್ಪಣೆ ಮಾಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಎಲ್ಲ ಆಡಳಿತ ಇಲಾಖೆಗಳಿಗೆ ಮತ್ತು ಇಲಾಖೆಗಳ ಮುಖ್ಯಸ್ಥರುಗಳಿಗೆ ಹಣಕಾಸು ಇಲಾಖೆಯು 19

ಡಿಸೆಂಬರ್ 2013ರ ತನ್ನ ಸುತ್ತೋಲೆಯಲ್ಲಿ ನಿರ್ದೇಶಿಸಿತ್ತು. ಆದರೆ, ಬೃಹತ್ ಪ್ರಮಾಣದ ಮೊತ್ತಗಳು ಬಳಕೆಯಾಗದೇ/ ಅಧ್ಯರ್ಪಣೆಯಾಗದೇ ಉಳಿದಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು ಮತ್ತು ಇದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ಹೊರತಾಗಿಯೂ ವೆಚ್ಚದ ಮೇಲಿನ ಅಪರ್ಯಾಪ್ತ ನಿಯಂತ್ರಣವನ್ನು ಸೂಚಿಸುತ್ತಿತ್ತು.

### 2.5.2 ಸತತವಾಗಿ ಬಳಕೆಯಾಗದೆ ಉಳಿದ ಅವಕಾಶಗಳು

ಒಂದು ಅನುದಾನದಲ್ಲಿ ಕಳೆದ ಐದು ವರ್ಷಗಳಲ್ಲಿ ₹100 ಕೋಟಿಗಳಿಗಿಂತಲೂ ಅಧಿಕವಾದ ಅವಕಾಶವು ಬಳಕೆಯಾಗದೆ ಉಳಿದಿದ್ದು, ವಿವರಗಳನ್ನು **ಕೋಷ್ಟಕ 2.4**ರಲ್ಲಿ ನೀಡಿದೆ.

**ಕೋಷ್ಟಕ 2.4: ಸತತವಾಗಿ ಬಳಕೆಯಾಗದ ಅವಕಾಶಗಳು**

*(ಕೋಟಿ ರೂಪಾಯಿಗಳಲ್ಲಿ)*

| ಕ್ರಮ ಸಂಖ್ಯೆ | ಅನುದಾನ/ಶೀರ್ಷಿಕೆ ಪ್ರಧಾನ ಶೀರ್ಷಿಕೆ | ವರ್ಷ | | | | |
|---|---|---|---|---|---|---|
| | | 2013-14 | 2014-15 | 2015-16 | 2016-17 | 2017-18 |
| 1 | 03– ಆರ್ಥಿಕ (ರಾಜಸ್ವ–ಪುರಸ್ಕೃತ) | 116.64 | 489.34 | 1,215.44 | 3,028.48 | 3,303.03 |
| | 2070–00–800–0–11 ಖಾಲಿಹುದ್ದೆಗಳ ಭರ್ತಿ | 500.00 | 1,181.28 | 1,250.03 | 1,575.00 | 1,362.00 |

*ಆಕರ: ಧನವಿನಿಯೋಗ ಲೆಕ್ಕಗಳು*

ಮೇಲಿನ ಬೇಡಿಕೆಯಲ್ಲಿ ಅವಕಾಶವು ಸತತವಾಗಿ ಬಳಕೆಯಾಗದೆ ಉಳಿತಾಯವಾಗಲು ಕಾರಣಗಳು ಹೀಗಿವೆ:

ಲೆಕ್ಕ ಶೀರ್ಷಿಕೆ 2070–00–800–0–11–ಖಾಲಿ ಹುದ್ದೆಗಳ ಭರ್ತಿ–ಅಡಿಯಲ್ಲಿ ಅವಕಾಶವು ಬಳಕೆಯಾಗದೆ ಉಳಿದಿದೆ. 31 ಮಾರ್ಚ್ 2017ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸಿನ ಮೇಲಿನ ವರದಿಯ **ಕಂಡಿಕೆ 2.7.2**ರಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಒದಗಿಸಿದ ಅವಕಾಶವು ಸತತವಾಗಿ ಬಳಕೆಯಾಗದೇ ಉಳಿದಿರುವ ಬಗ್ಗೆ ಉಲ್ಲೇಖ ಮಾಡಲಾಗಿತ್ತು. ವರ್ಷದ ಅವಧಿಯಲ್ಲಿ ಭರ್ತಿ ಮಾಡಬಹುದಾದ ಖಾಲಿ ಹುದ್ದೆಗಳನ್ನು ನಿರ್ವಹಿಸುವುದಕ್ಕಾಗಿ ಅವಕಾಶ ಮಾಡಲಾಗಿತ್ತು ಎಂದು ಆರ್ಥಿಕ ಇಲಾಖೆಯು ತಿಳಿಸಿತ್ತು (ಡಿಸೆಂಬರ್ 2017). ಮುಂದುವರೆದು, 2017–18ರಿಂದ ಪ್ರತ್ಯೇಕ ಅನುದಾನಗಳ ಅಡಿಯಲ್ಲಿ ಕೆಲವು ಮೊತ್ತಗಳನ್ನು ಹಂಚಿಕೆ ಮಾಡಲಾಗುವುದು ಎಂದೂ ತಿಳಿಸಿತ್ತು. ಆದರೆ, ಅನುದಾನ ಸಂಖ್ಯೆ.3–ಆರ್ಥಿಕ ಅಡಿಯಲ್ಲಿ ಮಾಡಿದ ₹1,362 ಕೋಟಿಗಳ ಅವಕಾಶದ ಜೊತೆಗೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಎಲ್ಲಾ ಅನುದಾನಗಳಲ್ಲಿಯೂ ₹213 ಕೋಟಿಗಳ ಮೊತ್ತದ ಅವಕಾಶವನ್ನು ಮಾಡಲಾಯಿತು. ಹೀಗೆ, ಆಯವ್ಯಯದ ಗಾತ್ರವನ್ನು ಹಿಗ್ಗಿಸಿ ರಾಜಸ್ವ ಲೆಕ್ಕದ ಮೇಲಿನ ಆಯವ್ಯಯ ಅವಕಾಶವನ್ನು ಉಬ್ಬಿಸಿದಂತಾಯಿತು.

ಮೇಲಿನ ಬೇಡಿಕೆಯಡಿಯಲ್ಲಿ ಮಾಡಿದ ಅವಕಾಶವು ಅನಗತ್ಯವಾಗಿ ಆಯವ್ಯಯದ ಗಾತ್ರವನ್ನು ಉಬ್ಬಿಸುವುದರಿಂದ ಹಾಗೂ ಬೇರೆ ಬೇಡಿಕೆಗಳಿಗೆ ಪುನರ್ವಿನಿಯೋಗ ಮಾಡಲಾಗುವುದಿಲ್ಲವಾದ್ದರಿಂದ, ಇಂತಹ ಅನವಶ್ಯಕ ಅವಕಾಶಗಳನ್ನು ಒದಗಿಸುವುದನ್ನು ತಪ್ಪಿಸಬೇಕು.

### 2.5.3 ಪೂರಕ ಅವಕಾಶಗಳು

ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯ್ದೆಯ (ಕೆಎಫ್ಆರ್ಎ) ಅಗತ್ಯದಂತೆ ಪೂರಕ ಅಂದಾಜುಗಳು 'ವಿತ್ತೀಯ ತಟಸ್ಥ'ವಲ್ಲದ ಮತ್ತು ಗಣನೀಯ ಪ್ರಮಾಣದ ಮೊತ್ತಗಳ ಬದ್ಧತೆಗಳು, ಪೂರಕ ಅಂದಾಜುಗಳ ಭಾಗವಾಗಿ ಸೇರಲ್ಪಟ್ಟು, ಇದು ಆಯವ್ಯಯ ಕಾರ್ಯನಿರ್ವಹಣೆ ಪ್ರಕ್ರಿಯೆಯ ಮೇಲೆ ಪರಿಣಾಮವನ್ನು ಬೀರುತ್ತದೆ. ಹೆಚ್ಚಿನ ಪೂರಕ ಅಂದಾಜುಗಳು ವಿತ್ತೀಯ ಶಿಸ್ತಿನ ಮೇಲೆ ಪರಿಣಾಮ ಬೀರಬಹುದಾಗಿದ್ದು, ಮೂಲ ಆಯವ್ಯಯಕ್ಕಿಂತಲೂ ಪೂರಕ ಅಂದಾಜುಗಳ ಮೇಲೆ ಹೆಚ್ಚಿನ ಅವಲಂಬನೆ ಉಂಟಾಗುತ್ತದೆ. ಸರ್ಕಾರವು ವರ್ಷದಲ್ಲಿನ ಪೂರಕ ಅಂದಾಜುಗಳ ಸಂಖ್ಯೆಯನ್ನು ಕಡಿಮೆಗೊಳಿಸುವ ಗುರಿಯನ್ನು ಇಟ್ಟುಕೊಂಡು ವಿತ್ತೀಯ ನಿರ್ವಹಣಾ ಸಮೀಕ್ಷಾ ಸಮಿತಿಯು ಶಿಫಾರಸು ಮಾಡಿರುವಂತೆ ವರ್ಷದಲ್ಲಿ ಒಂದು ಪೂರಕ ಅಂದಾಜಿಗೆ ಸೀಮಿತಗೊಳಿಸಬೇಕು ಹಾಗೂ ಎರಡನೇ ಪೂರಕ ಅಂದಾಜಿಗೆ ಅನುಮೋದನೆಯು ಕನಿಷ್ಠವಾಗಿರಬೇಕು.

2017–18ನೇ ವರ್ಷದಲ್ಲಿ ಪೂರಕ ಅಂದಾಜುಗಳ ಮೂಲಕ ಒದಗಿಸಿದ ಮೊತ್ತವು (₹14,562.31 ಕೋಟಿ) ಮೂಲ ಅಂದಾಜುಗಳ (₹1,94,917.19 ಕೋಟಿ) ಶೇಕಡ ಏಳರಷ್ಟಿದೆ.

ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರ ವಿಭಾಗ (6)–ಉಪವಿಭಾಗ (5)ರ ಅನ್ವಯ ಒಂದು ಅಥವಾ ಹೆಚ್ಚಿನ ಪೂರಕ ಅಂದಾಜುಗಳನ್ನು ಶಾಸಕಾಂಗದ ಅನುಮೋದನೆಗೆ ಮಂಡಿಸುವಾಗಲೆಲ್ಲಾ, ರಾಜ್ಯ ಸರ್ಕಾರವು ಪ್ರಸಕ್ತ ವರ್ಷದ ಆಯವ್ಯಯ ಗುರಿಗಳು ಹಾಗೂ ಮಧ್ಯಮಾವಧಿ ವಿತ್ತೀಯ ಯೋಜನೆಯ ಉದ್ದೇಶ ಮತ್ತು ಮುಂದಿನ ವರ್ಷದ ಗುರಿಗಳಿಗೆ ಸಂಬಂಧಿಸಿದಂತೆ ಪೂರಕ ಅಂದಾಜುಗಳ ವಿತ್ತೀಯ ಪರಿಣಾಮವನ್ನು ಪೂರ್ಣವಾಗಿ ಸರಿದೂಗಿಸಲು ಸಂವಾದಿಯಾಗಿ ವೆಚ್ಚಕಡಿತ ಮತ್ತು/ಅಥವಾ ಆದಾಯ ವರ್ಧನೆಯನ್ನು ಸೂಚಿಸುವ ಒಂದು ವಿವರಣಾ ಪಟ್ಟಿಯನ್ನು ಸಲ್ಲಿಸಬೇಕಾಗಿದೆ.

2017–18ರಲ್ಲಿ ಪೂರಕ ಅಂದಾಜುಗಳ ಮೂರು ಕಂತುಗಳನ್ನು ಶಾಸಕಾಂಗದ ಮುಂದೆ ಮಂಡಿಸಲಾಗಿತ್ತು. ಪೂರಕ ಅಂದಾಜುಗಳು, ಸಂವಾದಿಯಾಗಿ ವೆಚ್ಚ ಕಡಿತ ಮತ್ತು ಆದಾಯ ವರ್ಧನೆಯ ವಿವರಣಾ ಪಟ್ಟಿಯನ್ನು **ಕೋಷ್ಟಕ 2.5**ಲ್ಲಿ ತೋರಿಸಲಾಗಿದೆ.

**ಕೋಷ್ಟಕ 2.5: ವೆಚ್ಚ ಕಡಿತ, ಆದಾಯ ವರ್ಧನೆ, ಪೂರಕ ಅಂದಾಜುಗಳಲ್ಲಿ ಪುಸ್ತಕ ಹೊಂದಾಣಿಕೆಗೆ ಮಾಡಿದ ಅವಕಾಶಗಳ ವಿವರಗಳು**

*(ಕೋಟಿ ರೂಪಾಯಿಗಳಲ್ಲಿ)*

| | ಮೊದಲನೇ ಪೂರಕ ಅಂದಾಜು ₹1,733.96 | ಎರಡನೇ ಪೂರಕ ಅಂದಾಜು ₹7,476.86 | ಮೂರನೇ ಪೂರಕ ಅಂದಾಜು ₹5,351.49 |
|---|---|---|---|
| ಮೀಸಲು ನಿಧಿಯಿಂದ ಭರಿಸಿದ ಮೊತ್ತ | 1,131.88 | 805.99 | 296.00 |
| ಕೇಂದ್ರ ಸಹಾಯದ ಮೊತ್ತ | 150.50 | 1,008.63 | 510.33 |
| ಹೊಂದಾಣಿಕೆಗಳಿಂದ ಭರಿಸಿದ ಮೊತ್ತ | 0.00 | 0.00 | 50.60 |
| ನಿವ್ವಳ ನಗದು ಹೊರಹರಿವು | **451.58** | **5,662.24** | **4,494.56** |

*ಆಕರ: ಪೂರಕ ಅಂದಾಜುಗಳು*

ಆಯವ್ಯಯದಲ್ಲಿನ ಗುರಿಗಳಿಗೆ ಸರಿದೂಗಿಸಲು ಪೂರಕ ಅವಕಾಶಗಳನ್ನು ವೆಚ್ಚ ತಟಸ್ಥವನ್ನಾಗಿ ಮಾಡಿರಲಿಲ್ಲವೆಂಬುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು.

ಕರ್ನಾಟಕ ವಿತ್ತೀಯ ಜವಬ್ದಾರಿ ಕಾಯಿದೆಯಲ್ಲಿ ತಿಳಿಸಿರುವಂತೆ ಪೂರಕ ಅವಕಾಶಗಳನ್ನು ಆಯವ್ಯಯದಲ್ಲಿ ಉಳಿತಾಯದ ವಿವರಣಾ ಪಟ್ಟಿಯನ್ನು ತರುವ ಮೂಲಕ/ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ/ಲೆಕ್ಕಗಳ ಹೊಂದಾಣಿಕೆ ಮೂಲಕ ವೆಚ್ಚ ತಟಸ್ಥವನ್ನಾಗಿ ಮಾಡಬೇಕು.

### 2.5.3.1 ಅನಗತ್ಯ ಪೂರಕ ಅವಕಾಶ

12 ಅನುದಾನಗಳ ಅಡಿಯಲ್ಲಿ 13 ಉದ್ದೇಶ ಶೀರ್ಷಿಕೆಗಳಲ್ಲಿ ಒದಗಿಸಿದ ಒಟ್ಟು ₹171.53 ಕೋಟಿಗಳಷ್ಟು ಪೂರಕ ಅವಕಾಶವು ಅನಗತ್ಯವೆಂದು ಸಾಧಿತವಾಗಿದೆ. (**ಅನುಬಂಧ 2.11**).

### 2.5.3.2 ಅಧಿಕ[14] ಪೂರಕ ಅವಕಾಶ

ಹನ್ನೆರಡು ಅನುದಾನಗಳಿಗೆ ಸಂಬಂಧಿಸಿದ 13 ಉದ್ದೇಶ ಶೀರ್ಷಿಕೆಗಳಲ್ಲಿ ಪಡೆದ ₹250.23 ಕೋಟಿಗಳ ಮೊತ್ತದ ಪೂರಕ ಅನುದಾನವು ಅಗತ್ಯಕ್ಕಿಂತ ಅಧಿಕವಾಗಿದೆ ಎಂದು ಸಾಬೀತಾಗಿದೆ. ಈ ಪ್ರಕರಣಗಳಲ್ಲಿ ಅಂತಿಮವಾಗಿ ₹107.72 ಕೋಟಿಗಳಷ್ಟು ಅವಕಾಶವು ಬಳಕೆಯಾಗದೆ ಉಳಿದಿತ್ತು (**ಅನುಬಂಧ 2.12**).

[14] ಬಳಕೆ ಮಾಡದ ಅವಕಾಶವು ಆ ಉದ್ದೇಶಕ್ಕಾಗಿ ಪಡೆದ ಪೂರಕ ಅವಕಾಶಕ್ಕಿಂತ ಕಡಿಮೆಯಾದಾಗ.

#### 2.5.3.3 ಅಪರ್ಯಾಪ್ತ ಪೂರಕ ಅವಕಾಶಗಳು

ಹನ್ನೊಂದು ಅನುದಾನಗಳಿಗೆ ಸಂಬಂಧಿಸಿದ 13 ಉದ್ದೇಶ ಶೀರ್ಷಿಕೆಗಳಡಿ ಪಡೆದ ₹1,677.70 ಕೋಟಿಗಳ ಪೂರಕ ಅವಕಾಶವು ಪರ್ಯಾಪ್ತವಾಗಿಲ್ಲವೆಂದು ಸಾಧಿತವಾಗಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವಕಾಶ ಸಾಲದೆ ಅನಾವೃತವಾಗಿ ಉಳಿದ ವೆಚ್ಚವು ₹1,367.43 ಕೋಟಿಗಳಾಗಿದ್ದಿತು (**ಅನುಬಂಧ 2.13**).

ಬಳಕೆಯಾಗದಿರುವುದು/ಅಧಿಕ ಅವಕಾಶ ಒದಗಿಸುವುದು/ಅಸಮರ್ಪಕ ಅವಕಾಶ ಮಾಡುವುದು ಮುಂತಾದವುಗಳು ದೋಷಪೂರಿತ ಆಯವ್ಯಯವನ್ನು ಪ್ರತಿಬಿಂಬಿಸುತ್ತವಾದ್ದರಿಂದ ಅಂತಹ ಪ್ರಸಂಗಗಳನ್ನು ತಪ್ಪಿಸಲು ದೃಢವಾದ ತಪಾಸನೆಗಳ ಅಗತ್ಯವಿದೆ.

### 2.5.4 ಮೊತ್ತಗಳ ಪುನರ್ವಿನಿಯೋಗಗಳು

ವಿತರಣೆಗೆ ಬೇಕಾದ ಅನುದಾನ ಅಥವಾ ವಿನಿಯೋಗಗಳು ಆಯಾ ಲೆಕ್ಕಗಳಡಿಯಲ್ಲಿನ ಕ್ರಿಯಾಶೀರ್ಷಿಕೆ/ಉಪಶೀರ್ಷಿಕೆ/ಸವಿವರಶೀರ್ಷಿಕೆ/ಉದ್ದೇಶಸೂಚಕ ಶೀರ್ಷಿಕೆಗಳ ಪ್ರಕಾರ ಹಂಚಿಕೆಯಾಗಿರುತ್ತದೆ. ಸಕ್ಷಮ ಕಾರ್ಯಪಾಲಕ ಅಧಿಕಾರಿಗಳು ಸಂಬಂಧಿಸಿದ ಆರ್ಥಿಕ ವರ್ಷದ ಅಂತ್ಯದೊಳಗೆ, ಆಯಾ ಅನುದಾನ ಅಥವಾ ವಿನಿಯೋಗಗಳ ಒಳಗೆ ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ಮೊತ್ತಗಳ ಪುನರ್ವಿನಿಯೋಗಕ್ಕೆ ಅನುಮೋದನೆ ನೀಡಬಹುದಾಗಿದೆ. ಸಕ್ಷಮ ಅಧಿಕಾರಿಯು ಒಂದು ಅನುದಾನ/ವಿನಿಯೋಗದಲ್ಲಿಯ ಒಂದು ಘಟಕದಲ್ಲಿನ ಉಳಿಕೆಯನ್ನು ಅದೇ ಪುರಸ್ಕೃತ ಅನುದಾನ ಅಥವಾ ಪ್ರಭೃತ ವಿನಿಯೋಗದಲ್ಲಿನ ಮತ್ತೊಂದು ಘಟಕದಲ್ಲಿನ ಹೆಚ್ಚಳವನ್ನು ಭರಿಸಲು ವರ್ಗಾವಣೆ ಮಾಡುವುದು ಪುನರ್ವಿನಿಯೋಗವೆನಿಸುತ್ತದೆ. ಅನುದಾನದ ಯಾವ ಘಟಕದಿಂದ ಮೊತ್ತಗಳನ್ನು ವರ್ಗಾವಣೆ ಮಾಡಲಾಗುವುದೋ ಆ ಘಟಕದಲ್ಲಿನ ಮೊತ್ತಗಳು ಪೂರ್ಣವಾಗಿ ಬಳಕೆಯಾಗುವುದಿಲ್ಲ ಅಥವಾ ಅದು ಉಳಿತಾಯದಲ್ಲಿ ಪರಿಣಮಿಸುತ್ತದೆ ಎಂದು ನಿರೀಕ್ಷಿಸಿದ್ದರೆ ಅಥವಾ ತಿಳಿದಿದ್ದರೆ ಮಾತ್ರ ಮೊತ್ತಗಳ ಪುನರ್ವಿನಿಯೋಗವನ್ನು ಮಾಡಬಹುದಾಗಿದೆ.

#### 2.5.4.1 ಅನವಶ್ಯಕ/ಅಧಿಕ/ಅಪರ್ಯಾಪ್ತ ಮೊತ್ತದ ಪುನರ್ವಿನಿಯೋಗಗಳು

2016–17ನೇ ಅವಧಿಯಲ್ಲಿನ 62 ಪ್ರಕರಣಗಳಿಗೆ ಹೋಲಿಸಿದರೆ, 2017–18ರಲ್ಲಿ 44 ಪ್ರಕರಣಗಳಲ್ಲಿ ಪುನರ್ವಿನಿಯೋಗಗಳನ್ನು ಅನುಚಿತವಾಗಿ ಮಾಡಲಾಗಿದ್ದು, ಇವು ಆಯವ್ಯಯದ ಅವಕಾಶಗಳು ಪೂರ್ಣವಾಗಿ ಬಳಕೆಯಾಗದಿರುವಲ್ಲಿ ಅಥವಾ ಪ್ರತಿ ಪ್ರಕರಣದಲ್ಲೂ ಅವಕಾಶವನ್ನು ಮೀರಿ ಬಳಕೆ ಆಗಿರುವುದರಲ್ಲಿ ಪರಿಣಮಿಸಿದ್ದು (**ಅನುಬಂಧ 2.14**) ಸಾರಾಂಶವನ್ನು ಕೆಳಗೆ ನೀಡಲಾಗಿದೆ.

24 ಪ್ರಕರಣಗಳಲ್ಲಿ ಬಳಕೆಯಾಗದೆ ಉಳಿಯುವ ಅವಕಾಶವನ್ನು ಸರಿಯಾಗಿ ಲೆಕ್ಕ ಹಾಕಿರಲಿಲ್ಲವಾದ್ದರಿಂದ ಪುನರ್ವಿನಿಯೋಗದ ಮೂಲಕ ₹1,078.68 ಕೋಟಿಗಳನ್ನು ಹಿಂಪಡೆದ ನಂತರವೂ ₹2,963.46 ಕೋಟಿಗಳು ಬಳಕೆಯಾಗದೆ ಉಳಿದಿತ್ತು.

15 ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ಒದಗಿಸಿದ್ದ ₹511.03 ಕೋಟಿ ಹೆಚ್ಚುವರಿ ಮೊತ್ತವು ₹1,091.13 ಕೋಟಿಯ ಒಟ್ಟಾರೆ ಬಳಕೆಯಾಗದ ಅವಕಾಶದಲ್ಲಿ ಪರಿಣಮಿಸಿತು.

ಎರಡು ಪ್ರಕರಣಗಳಲ್ಲಿ ₹13 ಕೋಟಿ ಹಣವನ್ನು ಹಿಂಪಡೆದಿದ್ದು ಅಂತಿಮವಾಗಿ ₹5.18 ಕೋಟಿ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

ಮೂರು ಪ್ರಕರಣಗಳಲ್ಲಿ ಪುನರ್ವಿನಿಯೋಗದ ಮೂಲಕ ₹106.75 ಕೋಟಿಗಳ ಹೆಚ್ಚುವರಿ ಹಣವನ್ನು ಒದಗಿಸಲಾಗಿದ್ದು, ಅದು ಅಪರ್ಯಾಪ್ತವೆಂದು ಸಾಬೀತಾಗಿದ್ದು ಅಂತಿಮ ವೆಚ್ಚವು ಅವಕಾಶಕ್ಕಿಂತ ₹267.94 ಕೋಟಿಗಳಷ್ಟು ಅಧಿಕವಾಗಿದ್ದಿತು.

#### 2.5.4.2 ದೋಷಪೂರ್ಣ ಪುನರ್ವಿನಿಯೋಗಗಳು

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 309, 312 ಹಾಗೂ 315(ಎ)ರ ಉಪಬಂಧಗಳಲ್ಲಿ ಪುನರ್ವಿನಿಯೋಗವು ಸ್ವಯಂ ಸಮತೋಲನ ಹೊಂದಿಲ್ಲದಿದ್ದರೆ ಹಾಗೂ ನಿಗದಿತ ನಮೂನೆಯಲ್ಲಿ (ನಮೂನೆ ಸಂ.22ಎ – ಕ.ಆ.ಸಂ.) ಇರದಿದ್ದಲ್ಲಿ, ಶಾಸನಸಭೆ ಅನುಮೋದಿಸಿರುವ ಒಂದು ಪುರಸ್ಕೃತ ಅನುದಾನದಿಂದ ಮತ್ತೊಂದು ಅಂತಹ ಅನುದಾನಕ್ಕೆ, ಪುರಸ್ಕೃತ ವೆಚ್ಚ ಬಾಬ್ತುಗಳಿಂದ ಪ್ರಭೃತ ವೆಚ್ಚ ಬಾಬ್ತುಗಳಿಗೆ, ಬಂಡವಾಳದಿಂದ ರಾಜಸ್ವಕ್ಕೆ, ರಾಜಸ್ವದಿಂದ ಬಂಡವಾಳಕ್ಕೆ, ಹಾಗೂ ಪುನರ್ವಿನಿಯೋಗ

ವಿವರಣಾ ಪಟ್ಟಿಯು ಸಮತೋಲನವಾಗದಿದ್ದರೆ, ಪುನರ್ವಿನಿಯೋಗ ಮಾಡದಂತೆ ನಿಯಮಗಳನ್ನು ವಿಧಿಸಿರುತ್ತದೆ. 2017–18ರಲ್ಲಿ, ₹4,749.37 ಕೋಟಿ ಮೊತ್ತದ 351 ಪುನರ್ವಿನಿಯೋಗ ಆದೇಶಗಳನ್ನು ಜಾರಿ ಮಾಡಲಾಗಿದ್ದು ಅವುಗಳಲ್ಲಿ ₹392.64 ಕೋಟಿ ಮೊತ್ತದ 60 ಪುನರ್ವಿನಿಯೋಗ ಆದೇಶಗಳನ್ನು ಅವು ಮೇಲಿನ ನಿಯಮಗಳಿಗೆ ಅನುಸಾರವಾಗಿಲ್ಲವಾದ್ದರಿಂದ ಲೆಕ್ಕದಲ್ಲಿ ಪರಿಗಣಿಸಲಾಗಿಲ್ಲ (**ಅನುಬಂಧ 2.15**).

ದೋಷಪೂರ್ಣ ಪುನರ್ವಿನಿಯೋಗ ಆದೇಶಗಳ ಪರಿಶೀಲನೆಯಿಂದ ₹114.92 ಕೋಟಿ ಮೊತ್ತವನ್ನೊಳಗೊಂಡ 46 ಪ್ರಕರಣಗಳಲ್ಲಿ, ಪುನರ್ವಿನಿಯೋಗ ವಿವರಣಾ ಪಟ್ಟಿಗಳಲ್ಲಿದ್ದ ಲೆಕ್ಕಗಳ ತಪ್ಪಿನಿಂದಾಗಿ ಅವು ತಿರಸ್ಕೃತವಾಗಿರುವುದು ತಿಳಿದು ಬಂದಿರುತ್ತದೆ. ಅಲ್ಲದೆ, ₹1.49 ಕೋಟಿಯನ್ನು ಒಳಗೊಂಡ ಒಂದು ಪ್ರಕರಣದಲ್ಲಿ ಪುನರ್ವಿನಿಯೋಗವು ಪುರಸ್ಕೃತ ಮತ್ತು ಪ್ರಭೃತ ಪುನರ್ವಿನಿಯೋಗಗಳ ನಡುವೆ ಇದ್ದುದರಿಂದ ಅದನ್ನು ತಿರಸ್ಕರಿಸಲಾಗಿತ್ತು. ₹205.38 ಕೋಟಿಗಳ ಎರಡು ಪ್ರಕರಣಗಳಲ್ಲಿ ಹೊಸ ಸೇವೆಗಳು/ಹೊಸ ಸೇವಾ ಸಾಧನದ ಮಾನದಂಡವು ಅನ್ವಯವಾಗುತ್ತಿದ್ದ ಕಾರಣದಿಂದ ಪುನರ್ವಿನಿಯೋಗ ಆದೇಶಗಳನ್ನು ತಿರಸ್ಕರಿಸಲಾಗಿತ್ತು. ₹45.82 ಕೋಟಿಯ ನಾಲ್ಕು ಪ್ರಕರಣಗಳಲ್ಲಿ ಪುನರ್ವಿನಿಯೋಗ ಆದೇಶಗಳನ್ನು ಅಪರ್ಯಾಪ್ತ ಶಿಲ್ಕಿನ ಕಾರಣದಿಂದ ತಿರಸ್ಕರಿಸಲಾಗಿತ್ತು.

ಆಡಳಿತಾತ್ಮಕ ಇಲಾಖೆಗಳು ಮಹಾಲೇಖಾಪಾಲರಿಗೆ (ಲೆಕ್ಕ ಮತ್ತು ಹಕ್ಕುದಾರ) ಒಪ್ಪಿಗೆಗೆ ಪುನರ್ವಿನಿಯೋಗ ಆದೇಶಗಳನ್ನು ಸಲ್ಲಿಸುವ ಮೊದಲು ಸೂಕ್ತವಾದ ಪರಿಶೀಲನೆಗಳನ್ನು ನಡೆಸುವ ಅಗತ್ಯವಿದೆ.

ಮೊತ್ತಗಳ ಪುನರ್ವಿನಿಯೋಗವು ಅನುದಾನ ನಿಯಂತ್ರಣ ಅಧಿಕಾರಿಗಳು ಆಯವ್ಯಯ/ವೆಚ್ಚಗಳನ್ನು ಆಧರಿಸಿ ನಿರ್ವಹಿಸಬೇಕಾದ ಕ್ರಮವಾಗಿದ್ದು, ಪುನರ್ವಿನಿಯೋಗ ಆದೇಶಗಳನ್ನು ಅತ್ಯಂತ ನಿಷ್ಕೃಷ್ಟತೆಯಿಂದ ಪರಿಶೀಲಿಸಬೇಕಾದ ಅಗತ್ಯವಿದೆ.

### 2.5.5 ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ

ವೆಚ್ಚ ಮಾಡಲು ಅಧಿಕಾರವಿರುವ ಇಲಾಖೆಗಳು ಆಯವ್ಯಯ ಅವಕಾಶದಲ್ಲಿ ಉಳಿಕೆಯಾಗುವುದನ್ನು ನಿರೀಕ್ಷಿಸಿದಂತೆಲ್ಲಾ ಅನುದಾನ/ವಿನಿಯೋಗಗಳನ್ನು ಅಥವಾ ಅದರಲ್ಲಿನ ಉಳಿಕೆಯ ಭಾಗವನ್ನು ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕಾಗಿರುತ್ತದೆ.

#### 2.5.5.1 ಬಳಕೆಯಾಗದ ಅವಕಾಶಗಳನ್ನು ಅಧ್ಯರ್ಪಣೆ ಮಾಡದಿರುವುದು

14 ಅನುದಾನಗಳು/ವಿನಿಯೋಗಗಳಲ್ಲಿ ಬಳಕೆಯಾಗದೆ ಉಳಿದ ₹1,541.87 ಕೋಟಿಗಳ ಒಟ್ಟು ಅವಕಾಶವನ್ನು ಅಧ್ಯರ್ಪಣೆ ಮಾಡಿರಲಿಲ್ಲ (**ಅನುಬಂಧ 2.16**).

ಮುಂದುವರೆದು, 24 ಅನುದಾನಗಳು/ವಿನಿಯೋಗಗಳಲ್ಲಿ ಒಟ್ಟು ಬಳಕೆಯಾಗದೆ ಉಳಿದ ಮೊತ್ತದಲ್ಲಿ (₹15,816.80 ಕೋಟಿ) ಕೇವಲ ಭಾಗಶ: ಅಧ್ಯರ್ಪಣೆಯಾಗಿದ್ದು ಸುಮಾರು ಶೇಕಡ 69ರಷ್ಟು (₹10,971.42 ಕೋಟಿ) ಅಧ್ಯರ್ಪಣೆಯಾಗದೆ ಉಳಿದಿತ್ತು (**ಅನುಬಂಧ 2.17**). ಅಲ್ಲದೆ, ₹5 ಕೋಟಿಗಿಂತಲೂ ಹೆಚ್ಚಾಗಿ ಅಧ್ಯರ್ಪಣೆ ಮಾಡಿದ್ದ 17 ಅನುದಾನಗಳಲ್ಲಿ ₹2,246.23 ಕೋಟಿಗಳ ಮೊತ್ತವನ್ನು ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಂದು ಅಧ್ಯರ್ಪಣೆ ಮಾಡಲಾಗಿದ್ದು, ಇದು ಹಣಕಾಸು ನಿಯಂತ್ರಣದ ಅಪರ್ಯಾಪ್ತತೆಯನ್ನು ಸೂಚಿಸುತ್ತದೆ (**ಅನುಬಂಧ 2.18**).

#### 2.5.5.2 ಗಣನೀಯ ಅಧ್ಯರ್ಪಣೆಗಳು

₹1,398.77 ಕೋಟಿಗಳ ಒಟ್ಟು ಅವಕಾಶದ 37 ಪ್ರಕರಣಗಳಲ್ಲಿ ₹1,216.12 ಕೋಟಿಗಳು (ಶೇಕಡ 87) ಅಧ್ಯರ್ಪಣೆಯಾಗಿದ್ದು, ಇದರಲ್ಲಿ 19 ಪ್ರಕರಣಗಳಲ್ಲಿ ಅಧ್ಯರ್ಪಣೆಯು (₹554.62 ಕೋಟಿಗಳು) ಶೇಕಡ ನೂರರಷ್ಟಿತ್ತು (**ಅನುಬಂಧ 2.19**). ಈ ಅಧ್ಯರ್ಪಣೆಗಳು ಫಲಾನುಭವಿಗಳ ಅಲಭ್ಯತೆ, ನಿಗದಿತ ಅವಧಿಯಲ್ಲಿ ಯೋಜನೆಯನ್ನು ಪ್ರಾರಂಭಿಸದಿರುವುದು, ಆರ್ಥಿಕ ವರ್ಷದ ಕೊನೆಯಲ್ಲಿ ಅನುದಾನಗಳನ್ನು ಬಿಡುಗಡೆ ಮಾಡಿರುವುದು, ಕಾಮಗಾರಿಯನ್ನು ಅನುಮೋದಿಸದಿರುವುದು/ಆಡಳಿತಾತ್ಮಕ ಅನುಮೋದನೆ ನೀಡದಿರುವುದು, ಸಮಯಕ್ಕೆ ಸರಿಯಾಗಿ ಬಿಲ್ಲುಗಳನ್ನು ಸ್ವೀಕರಿಸಿರದಿರುವುದು, ಖರೀದಿ ಪ್ರಕ್ರಿಯೆಗಳನ್ನು

ಪೂರೈಸದಿರುವುದು ಮತ್ತು ಅರೆಕಾಲಿಕ ನೌಕರರ ನೇಮಕಾತಿ ಮಾಡದಿರುವುದು ಇತ್ಯಾದಿಗಳಿಂದ ಉಂಟಾಗಿದೆ ಎಂದು ಹೇಳಲಾಗಿದೆ.

## 2.6 ಸಾದಿಲ್ವಾರು ನಿಧಿ

ಭಾರತದ ಸಂವಿಧಾನದ ಅನುಚ್ಛೇದ 267(2) ಮತ್ತು 283(2) ನಿಬಂಧನೆಗಳಡಿಯಲ್ಲಿ, ರಾಜ್ಯ ಸರ್ಕಾರದ ಸಾದಿಲ್ವಾರು ನಿಧಿ ಅಧಿನಿಯಮ, 1957ರಡಿ ರಾಜ್ಯ ಸಾದಿಲ್ವಾರು ನಿಧಿಯನ್ನು ಸ್ಥಾಪಿಸಲಾಗಿತ್ತು. ಶಾಸನ ಸಭೆಯ ಅನುಮೋದನೆಯನ್ನು ಪಡೆಯುವವರೆಗೂ ಮುಂದೂಡಿಕೆಯ ಅನಪೇಕ್ಷಣೀಯವಾದ, ಅನಿರೀಕ್ಷಿತ-ತುರ್ತುಸ್ವರೂಪದ ವೆಚ್ಚಗಳನ್ನು ಭರಿಸಲು ಮಾತ್ರ ಈ ನಿಧಿಯಿಂದ ಮುಂಗಡಗಳನ್ನು ಪಡೆಯಬಹುದಾಗಿದೆ. ಈ ನಿಧಿಯು ಮುಂಗಡ ಹಣದ ಸ್ವರೂಪದಲ್ಲಿದ್ದು, ಇದರ ಮೂಲಧನವು ₹80 ಕೋಟಿಗಳಷ್ಟಿದೆ. ಸಾದಿಲ್ವಾರು ನಿಧಿಯಿಂದ ಸೆಳೆದ ಹಣವನ್ನು ಮುಂದೆ ಪೂರಕ ಅವಕಾಶಗಳ ಮೂಲಕ ನಿಧಿಗೆ ಪುನರ್ ಭರ್ತಿಮಾಡಲಾಗುವುದು. 2017–18ರಲ್ಲಿ ಸಾದಿಲ್ವಾರು ನಿಧಿಯಿಂದ ಯಾವುದೇ ಹಣವನ್ನು ಸೆಳೆದಿರಲಿಲ್ಲ.

## 2.7 ಆಯ್ದ ಅನುದಾನಗಳ ಸಮೀಕ್ಷೆಯ ಫಲಿತಾಂಶಗಳು

ಆಯ್ದ ಎರಡು ಅನುದಾನಗಳಿಗೆ ಸಂಬಂಧಿಸಿದಂತೆ 2015–16ರಿಂದ 2017–18ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ ಆಯವ್ಯಯ ವಿಧಾನ ಹಾಗೂ ವೆಚ್ಚ ನಿಯಂತ್ರಣದ ಸಮೀಕ್ಷೆಯಲ್ಲಿ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

### 2.7.1 ಅನುದಾನ ಸಂಖ್ಯೆ.8–ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಗೆ ಮುಖ್ಯವಾಗಿ ಈ ಕೆಳಗಿನ ಹೊಣೆಗಾರಿಕೆಗಳನ್ನು ವಹಿಸಲಾಗಿದೆ:

- ಕಳ್ಳಸಾಗಣೆ, ಬೇಟೆಯಾಡುವುದು, ಬೆಂಕಿ ಅಪಘಾತಗಳಿಂದ ಅಸ್ತಿತ್ವದಲ್ಲಿರುವ ಅರಣ್ಯಗಳನ್ನು ರಕ್ಷಿಸುವುದು (ಸಸ್ಯವರ್ಗ ಮತ್ತು ಪ್ರಾಣಿವರ್ಗ);
- ಕೆಳದರ್ಜೆಯ ಅರಣ್ಯಗಳ ಉತ್ಪಾದಕತೆಯನ್ನು ವೃದ್ಧಿಸುವುದು ಮತ್ತು ಕಾಡುಪ್ರಾಣಿಗಳನ್ನು ರಕ್ಷಿಸುವುದು ಮತ್ತು ಅವುಗಳ ನಿರ್ವಹಣೆ; ಮತ್ತು
- ಗ್ರಾಮೀಣ ಅರಣ್ಯ ಸಮುದಾಯಗಳ ಮೂಲಕ ಸ್ಥಳೀಯ ಸಮುದಾಯಗಳನ್ನು ತೊಡಗಿಸಿಕೊಂಡು ಜಂಟಿ ಅರಣ್ಯ ಯೋಜನೆಯ ಮೂಲಕ ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಅದರ ನಿರ್ವಹಣೆಯನ್ನು, ವಿಶೇಷವಾಗಿ ಕೆಳದರ್ಜೆ ಅರಣ್ಯ ಪ್ರದೇಶಗಳಲ್ಲಿ ಅರಣ್ಯಗಳನ್ನು ರಕ್ಷಿಸುವುದು ಮತ್ತು ನಿರ್ವಹಿಸುವುದು ಹಾಗೂ ಸಸ್ಯಗಳನ್ನು ನೆಡುವುದು.

#### 2.7.1.1 ಆಯವ್ಯಯ ಮತ್ತು ವೆಚ್ಚ

ಅನುದಾನಗಳ ಕಾರ್ಯಪ್ರಧಾನ ಶೀರ್ಷಿಕೆಗಳಡಿಯಲ್ಲಿ ಕಳೆದ ಮೂರು ವರ್ಷಗಳ ಆಯವ್ಯಯ ಅವಕಾಶಗಳು, ವಾಸ್ತವಿಕ ವಿತರಣೆ ಮತ್ತು ಉಳಿತಾಯಗಳ ಸಮಗ್ರ ಸ್ಥಿತಿಯನ್ನು **ಕೋಷ್ಟಕ 2.6**ರಲ್ಲಿ ಕೊಡಲಾಗಿದೆ.

**ಕೋಷ್ಟಕ 2.6: ಆಯವ್ಯಯ ಮತ್ತು ವೆಚ್ಚಗಳು**

*(₹ ಕೋಟಿಗಳಲ್ಲಿ)*

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಉಳಿತಾಯ (–) ಅಧಿಕ (+) ಮತ್ತು ಅದರ ಶೇಕಡಾವಾರು |
|---|---|---|---|---|---|
| 2015–16 | ರಾಜಸ್ವ–ಮೂಲ (ಪುರಸ್ಕೃತ) | 1,144.50 | 1,344.62 | 1,275.94 | (–)68.68(5) |
| | ಪೂರಕ | 200.12 | | | |
| | ರಾಜಸ್ವ–ಮೂಲ (ಪ್ರಭೃತ) | *600.18* | *600.18* | *400.76* | *(–)199.42(33)* |
| | ಬಂಡವಾಳ–ಮೂಲ (ಪುರಸ್ಕೃತ) | *12.00* | *12.00* | *11.99* | *0.01(0)* |
| 2016–17 | ರಾಜಸ್ವ–ಮೂಲ (ಪುರಸ್ಕೃತ) | 1,282.08 | 1,420.30 | 1,388.21 | (–)32.09 (2) |
| | ಪೂರಕ | 138.22 | | | |
| | ರಾಜಸ್ವ–ಮೂಲ (ಪ್ರಭೃತ) | *300.19* | *300.51* | *154.17* | *(–)146.34(49)* |
| | ಪೂರಕ | *0.32* | | | |
| | ಬಂಡವಾಳ–ಮೂಲ (ಪುರಸ್ಕೃತ) | *27.37* | *52.60* | *52.03* | *(–)0.57 (1)* |
| | ಪೂರಕ | 25.23 | | | |
| 2017–18 | ರಾಜಸ್ವ–ಮೂಲ (ಪುರಸ್ಕೃತ) | 1,411.60 | 1580.16 | 1496.36 | (–)83.80(5) |
| | ಪೂರಕ | 160.56 | | | |
| | ರಾಜಸ್ವ–ಮೂಲ (ಪ್ರಭೃತ) | *300.20* | *300.20* | *381.18* | *(+)80.98(27)* |
| | ಬಂಡವಾಳ–ಮೂಲ (ಪುರಸ್ಕೃತ) | 20.00 | 20.00 | 9.99 | (–)10.01(50) |

*ಆಕರ: ಅನುದಾನ ವಹಿಗಳು*

2015–16ರಿಂದ 2017–18ರ ಅವಧಿಯಲ್ಲಿ ರಾಜಸ್ವ ಪುರಸ್ಕೃತ ವಿಭಾಗದಡಿಯಲ್ಲಿ ಬಳಕೆ ಮಾಡದ ಅವಕಾಶಗಳ ಪಥಾಂತರವು ಶೇಕಡ 2ರಿಂದ 5ರ ವ್ಯಾಪ್ತಿಯಲ್ಲಿದ್ದರೆ, ಬಂಡವಾಳ ಪುರಸ್ಕೃತ ವಿಭಾಗದಡಿಯಲ್ಲಿ ಪಥಾಂತರವು ಶೇಕಡಾವಾರು 50ರ ವರೆಗಿದ್ದಿತು. 2015–16 ಮತ್ತು 2016–17ರ ಅವಧಿಯಲ್ಲಿ ರಾಜಸ್ವ ಪ್ರಭೃತ ವಿಭಾಗದಡಿ ಪಥಾಂತರವು ಅನುಕ್ರಮವಾಗಿ ಶೇಕಡ 33 ಮತ್ತು 49ರ ನಡುವೆ ಇದ್ದಿತು. 2017–18ರಲ್ಲಿ ರಾಜಸ್ವ ಪ್ರಭೃತ ವಿಭಾಗದಡಿಯಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ಅರಣ್ಯ ಅಭಿವೃದ್ಧಿ ಶುಲ್ಕದ ವರ್ಗಾವಣೆಗೆ ಪ್ರಭೃತ ವಿಭಾಗದಡಿಯಲ್ಲಿ ಅವಕಾಶ ಮಾಡುವ ಬದಲು ತಪ್ಪಾಗಿ ಪುರಸ್ಕೃತ ವಿಭಾಗದಡಿ ಅವಕಾಶ ಮಾಡಿದ್ದು, ವೆಚ್ಚವನ್ನು ಪ್ರಭೃತ ವರ್ಗದಡಿ ಸರಿಯಾಗಿ ಲೆಕ್ಕ ಹಾಕಲಾಗಿದ್ದರಿಂದ ರಾಜಸ್ವ ಪ್ರಭೃತದ ಅಡಿಯಲ್ಲಿ ಅಧಿಕ ವೆಚ್ಚವಾಗಿದ್ದಿತು.

### 2.7.1.2 ಆಯವ್ಯಯ– ರಾಜಸ್ವ ಮತ್ತು ವೆಚ್ಚ

ಶಾಸಕಾಂಗದ ಮುಂದೆ ಮಂಡಿಸಲಾದ ಆಯವ್ಯಯವು ಅನುದಾನಗಳ ಸವಿವರ ಬೇಡಿಕೆಗಳಲ್ಲಿ ರಾಜಸ್ವ ಮತ್ತು ಬಂಡವಾಳ, ಯೋಜನೆ ಮತ್ತು ಯೋಜನೇತರ ಎಂದು ವಿಂಗಡಿಸಲ್ಪಟ್ಟಿದ್ದಿತು. 2017–18ರಿಂದ ಯೋಜನೆ ಮತ್ತು ಯೋಜನೇತರಗಳ ನಡುವೆ ಯಾವುದೇ ವಿಭಜನೆಯಿರುವುದಿಲ್ಲ.

ರಾಜಸ್ವ ಪುರಸ್ಕೃತ (ಯೋಜನೆ) ಅಡಿಯಲ್ಲಿ 2015–16 ಮತ್ತು 2016–17ರ ಅವಧಿಯಲ್ಲಿ ಅನುಕ್ರಮವಾಗಿ ಶೇಕಡ ಎಂಟು ಮತ್ತು ನಾಲ್ಕರಷ್ಟು ಉಳಿತಾಯವಿದ್ದಿತು. 2017–18ರಲ್ಲಿ ಪ್ರಭೃತ ವಿಭಾಗದಡಿಯಲ್ಲಿ ಶೇಕಡ 27ರಷ್ಟು ಅಧಿಕ ವೆಚ್ಚವಿದ್ದಿತು. ಬಂಡವಾಳ ವಿಭಾಗದಡಿಯಲ್ಲಿ 2015–16 ಮತ್ತು 2016–17ರ ಅವಧಿಯಲ್ಲಿ ಪಥಾಂತರದ ಶೇಕಡಾವಾರು ನಗಣ್ಯವಾಗಿತ್ತು. 2017–18ರಲ್ಲಿ ಪಥಾಂತರದ ಶೇಕಡಾವಾರು 50ರಷ್ಟಿತ್ತು. ಅಂತಹ ಪಥಾಂತರಕ್ಕೆ ಕಾರಣವಾಗಿ ಸರ್ಕಾರವು ಗುರಿಯನ್ನು ಪರಿಷ್ಕರಿಸಿದ್ದರಿಂದ ವೆಚ್ಚವನ್ನು ವಾಸ್ತವಿಕವಾಗಿ ಪಾವತಿ ಮಾಡಿದ ಬಿಲ್ಲುಗಳಿಗೆ ಸೀಮಿತಗೊಳಿಸಲಾಯಿತು.

### 2.7.1.3 'ಬಂಡವಾಳ' ಮತ್ತು 'ರಾಜಸ್ವ' ಗಳ ನಡುವೆ ವರ್ಗೀಕರಣ ದೋಷಗಳು

ಆರ್ಥಿಕ ಇಲಾಖೆಯು ದಿನಾಂಕ 15.01.2013ರಂದು ಹೊರಡಿಸಿದ ಸುತ್ತೋಲೆಯ ಅನ್ವಯ ಭೂಮಿಯು ಸ್ಥಿರಾಸ್ತಿಯಾಗಿರುವುದರಿಂದ ಅದರ ಸ್ವಾಧೀನವು ಬಂಡವಾಳ ಸ್ವರೂಪದ್ದಾಗಿರುತ್ತದೆ, ಹಾಗಾಗಿ ಬಂಡವಾಳ ಲೆಕ್ಕದಡಿ ಭೂಸ್ವಾಧೀನಕ್ಕೆ ಸಂಬಂಧಿಸಿದ ವೆಚ್ಚದ ಸಂಬಂಧವಾಗಿ ಮಾರ್ಚ್ 2017ರ ಅಂತ್ಯದ ರಾಜ್ಯ ಹಣಕಾಸಿನ ಮೇಲಿನ ವರದಿಯ **ಕಂಡಿಕೆ 2.4.1.1**ರಲ್ಲಿ ಉಲ್ಲೇಖ ಮಾಡಲಾಗಿತ್ತು. ಆದರೆ, 2017–18ರ

ಅವಧಿಯಲ್ಲಿಯೂ ಸಹ ಭೂಮಿಯ ಸ್ವಾಧೀನ ಮತ್ತು ಪುನರ್ವಸತಿಗಾಗಿ ಮಾಡಿದ ₹8 ಕೋಟಿಯ ವೆಚ್ಚವನ್ನು ರಾಜಸ್ವ ವಿಭಾಗದಡಿ (2406–02–110–0–55–059–ಇತರೆ ವೆಚ್ಚಗಳು) ವರ್ಗೀಕರಿಸಿರುವುದ್ನು ಗಮನಿಸಲಾಯಿತು. ರಾಜಸ್ವದಡಿ ಅದರ ವರ್ಗೀಕರಣವು ತಪ್ಪಾಗಿದ್ದು ಅದು ರಾಜಸ್ವ ಅಧಿಕದಂತಹ ಆರ್ಥಿಕ ಸೂಚಕಗಳನ್ನು ವಿಕೃತಗೊಳಿಸುವ ಸಾಧ್ಯತೆಯಿದೆ.

### 2.7.1.4 ಪುರಸ್ಕೃತ ಮತ್ತು ಪ್ರಭೃತ ಗಳ ನಡುವೆ ವರ್ಗೀಕರಣ ದೋಷಗಳು

ಆರ್ಥಿಕ ಇಲಾಖೆಯು ಹೊರಡಿಸಿದ ಸುತ್ತೋಲೆಯ ಅನ್ವಯ ಆಯವ್ಯಯ ಪ್ರಸ್ತಾವನೆಗಳನ್ನು ಅತ್ಯಂತ ಹೆಚ್ಚಿನ ಕಾಳಜಿ ಮತ್ತು ನಿಖರತೆಯೊಂದಿಗೆ ತಯಾರಿಸಬೇಕು ಮತ್ತು ಮಂಜೂರಾತಿ ಹಾಗೂ ವಾಸ್ತವಿಕ ಅಗತ್ಯತೆಗಳಿಗೆ ಸಂಬಂಧಿಸಿದಂತೆ ನಿರೂಪಿಸಬೇಕು. ಆದುದರಿಂದ ಪ್ರಸ್ತಾವನೆಗಳನ್ನು ಹಣದ ಸಂಭವನೀಯ ಮತ್ತು ನೈಜವಾದ ಅಗತ್ಯತೆಗಳ ಆಧಾರದ ಮೇಲೆ ಲೆಕ್ಕ ಹಾಕಬೇಕು.

2017–18ರ ಆಯವ್ಯಯ ಅಂದಾಜುಗಳಲ್ಲಿ ಲೆಕ್ಕಶೀರ್ಷಿಕೆ 2406–01–797–0–01–261–ಅಂತರ್‌ಲೆಕ್ಕ ವರ್ಗಾವಣೆ ಅಡಿಯಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ಅರಣ್ಯ ಅಭಿವೃದ್ಧಿ ಶುಲ್ಕವನ್ನು ವರ್ಗಾಯಿಸಲು ಪ್ರಭೃತ ವಿಭಾಗದಲ್ಲಿ ₹300 ಕೋಟಿಯ ಅವಕಾಶವನ್ನು ಕಲ್ಪಿಸಲಾಗಿತ್ತು. ಆದರೆ, ಪೂರಕ ಅಂದಾಜು–3ನೇ ಕಂತಿನಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ ಆದಾಯಗಳ ವರ್ಗಾವಣೆಗೆ ಒದಗಿಸಿದ ₹85 ಕೋಟಿಯ ಹೆಚ್ಚುವರಿ ಅವಕಾಶವನ್ನು ತಪ್ಪಾಗಿ ಪುರಸ್ಕೃತ ವರ್ಗದಲ್ಲಿ ಮಾಡಲಾಗಿತ್ತು. ಆದರೆ ವೆಚ್ಚವನ್ನು ಪ್ರಭೃತ ವರ್ಗದಡಿಯಲ್ಲಿ ಸರಿಯಾಗಿ ಲೆಕ್ಕವಿಡಲಾಗಿದ್ದು ಅದು ಆಯವ್ಯಯ ಅವಕಾಶವಿಲ್ಲದೇ ಮಾಡಿದ ವೆಚ್ಚವಾಗಿ ಪರಿಣಮಿಸಿತ್ತು.

### 2.7.1.5 ವೆಚ್ಚದ ಒತ್ತಡ

ಮೊತ್ತಗಳ ಬಿಡುಗಡೆ, ಸೆಳೆತ ಮತ್ತು ಲೆಕ್ಕ ವಿಧಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯು ಜಾರಿ ಮಾಡಿದ 9 ಸೆಪ್ಟಂಬರ್ 2004ರ ಆದೇಶದ ಕಂಡಿಕೆ 6ರಂತೆ, ಆಡಳಿತ ಇಲಾಖೆ ಮತ್ತು ಇಲಾಖಾ ಮುಖ್ಯಸ್ಥರುಗಳು ಆರ್ಥಿಕ ವರ್ಷದ ಉಳಿದ ಭಾಗಕ್ಕೆ ಬೇಕಾದ ವೆಚ್ಚವನ್ನು ಎಚ್ಚರಿಕೆಯಿಂದ ಉಳಿದಿರುವ ಅನುದಾನಗಳ ಒಳಗಡಿಯೇ ಯೋಜಿಸಬೇಕಾಗಿದೆ. ಬಿಲ್ಲುಗಳ ಒಗ್ಗೂಡಿಸುವಿಕೆ ಹಾಗೂ ಮಾರ್ಚ್ ತಿಂಗಳಲ್ಲಿನ ವೆಚ್ಚದ ಒತ್ತಡವನ್ನು ತಪ್ಪಿಸಬೇಕಿದೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಅಗತ್ಯವಿರುವ ನಿರೀಕ್ಷಿತ ವೆಚ್ಚಗಳಿಗೆ ಸೂಕ್ತ ಮಟ್ಟದ ಪ್ರಾಧಿಕಾರದಿಂದ ಅನುಮೋದನೆ ಪಡೆದು ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿಯೇ ಹೊರಡಿಸಬೇಕಾಗಿದೆ.

2017–18ರ ಕೊನೆಯ ತ್ರೈಮಾಸಿಕ ಮತ್ತು ಮಾರ್ಚ್ ತಿಂಗಳಿನಲ್ಲಿ ಮಾಡಿದ ಶೇಕಡ 35ರಿಂದ 61ರ ವ್ಯಾಪ್ತಿಯಲ್ಲಿದ್ದ ಉದ್ದೇಶ ಲೆಕ್ಕಶೀರ್ಷಿಕೆವಾರು ವೆಚ್ಚದ ವಿವರಗಳನ್ನು **ಅನುಬಂಧ–2.20**ರಲ್ಲಿ ನೀಡಲಾಗಿದೆ.

## 2.7.2 ಅನುದಾನ ಸಂಖ್ಯೆ.19 – ನಗರಾಭಿವೃದ್ಧಿ

**2.7.2.1** ನಗರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಹೊಣೆಗಾರಿಕೆಯನ್ನು ನಗರಾಭಿವೃದ್ಧಿ ಇಲಾಖೆಗೆ ವಹಿಸಲಾಗಿದೆ. ಇಲಾಖೆಯ ಮುಖ್ಯ ಉದ್ದೇಶಗಳೆಂದರೆ:

- ಮೂಲಸೌಕರ್ಯ ಸೌಲಭ್ಯಗಳನ್ನು ಮತ್ತು ಒಳ್ಳೆಯ ಆಡಳಿತವನ್ನು ಒದಗಿಸುವುದು.
- ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು.
- ನಗರ ಮತ್ತು ಪಟ್ಟಣಗಳ ಉತ್ತಮ ನಿರ್ವಹಣೆಗಾಗಿ ನಗರಾಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಮತ್ತು ದುರ್ಬಲ ವರ್ಗಗಳಿಗೆ ನಿವೇಶನ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದು.

### ಆಯವ್ಯಯ ಮತ್ತು ವೆಚ್ಚ

ಅನುದಾನಗಳ ಕಾರ್ಯಪ್ರಧಾನ ಶೀರ್ಷಿಕೆಗಳಡಿಯಲ್ಲಿ ಕಳೆದ ಮೂರು ವರ್ಷಗಳ ಆಯವ್ಯಯ ಅವಕಾಶಗಳು, ವಾಸ್ತವಿಕ ವಿತರಣೆ ಮತ್ತು ಉಳಿತಾಯಗಳ ಸಮಗ್ರ ಸ್ಥಿತಿಯನ್ನು **ಕೋಷ್ಟಕ 2.7**ರಲ್ಲಿ ಕೊಡಲಾಗಿದೆ.

**ಕೋಷ್ಟಕ 2.7: ಆಯವ್ಯಯ ಮತ್ತು ವೆಚ್ಚಗಳು**

*(₹ ಕೋಟಿಗಳಲ್ಲಿ)*

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆ ಮಾಡದ ಅವಕಾಶ ಮತ್ತು ಅದರ ಶೇಕಡಾವಾರು |
|---|---|---|---|---|---|
| 2015–16 | ರಾಜಸ್ವ–ಮೂಲ (ಪುರಸ್ಕೃತ) | 7,428.48 | 7,739.49 | 7,076.30 | 663.19 (9) |
| | ಪೂರಕ | 311.01 | | | |
| | ರಾಜಸ್ವ–ಮೂಲ (ಪ್ರಭೃತ) | *1.25* | *1.25* | *1.25* | *0* |
| | ಬಂಡವಾಳ–ಮೂಲ (ಪುರಸ್ಕೃತ) | 2,093.50 | 2,099.50 | 2,013.67 | 85.83 (4) |
| | ಪೂರಕ | 6.00 | | | |
| | ಬಂಡವಾಳ–ಮೂಲ (ಪ್ರಭೃತ) | *0* | *0* | *8.05* | *(+)8.05 (100)* |
| 2016–17 | ರಾಜಸ್ವ–ಮೂಲ (ಪುರಸ್ಕೃತ) | 8,744.08 | 9,231.14 | 8,558.00 | 673.14 (7) |
| | ಪೂರಕ | 487.06 | | | |
| | ರಾಜಸ್ವ–ಮೂಲ (ಪ್ರಭೃತ) | *0.50* | *0.50* | *0.38* | *0.12 (24)* |
| | ಬಂಡವಾಳ–ಮೂಲ (ಪುರಸ್ಕೃತ) | 4,348.58 | 4,786.78 | 3,448.10 | 1,338.68 (28) |
| | ಪೂರಕ | 438.20 | | | |
| | ಬಂಡವಾಳ–ಮೂಲ (ಪ್ರಭೃತ) | *0* | *4.50* | *4.11* | *0.39 (9)* |
| | ಪೂರಕ | *4.50* | | | |
| 2017–18 | ರಾಜಸ್ವ– ಮೂಲ (ಪುರಸ್ಕೃತ) | 10,089.87 | 10,369.86 | 9,602.12 | 767.74 (7) |
| | ಪೂರಕ | 279.99 | | | |
| | ರಾಜಸ್ವ–ಮೂಲ (ಪ್ರಭೃತ) | *0.08* | *0.08* | *0.08* | *0* |
| | ಬಂಡವಾಳ–ಮೂಲ (ಪುರಸ್ಕೃತ) | 5,599.48 | 5,599.48 | 5,330.75 | 268.73 (5) |
| | ಬಂಡವಾಳ–ಮೂಲ (ಪ್ರಭೃತ) | *1.41* | *1.59* | *1.59* | *0* |
| | ಪೂರಕ | *0.18* | | | |

*ಆಕರ: ಅನುದಾನ ವಹಿ*

ಮೇಲಿನ ಕೋಷ್ಟಕದಿಂದ ಗಮನಿಸಿದಂತೆ, 2015–16ರಿಂದ 2017–18ರ ಅವಧಿಯಲ್ಲಿ ಬಳಕೆ ಮಾಡದ ಅವಕಾಶಗಳ ಪಥಾಂತರವು ರಾಜಸ್ವ ಪುರಸ್ಕೃತ ವಿಭಾಗದಲ್ಲಿ ಶೇಕಡ ಏಳು ಮತ್ತು ಒಂಬತ್ತರ ನಡುವಿನ ವ್ಯಾಪ್ತಿಯಲ್ಲಿದ್ದಿತು ಮತ್ತು ಬಂಡವಾಳ ಪುರಸ್ಕೃತ ವಿಭಾಗದಲ್ಲಿ ಅದು ಶೇಕಡ 4 ಮತ್ತು 28ರ ನಡುವಿನ ವ್ಯಾಪ್ತಿಯಲ್ಲಿದ್ದಿತು. ರಾಜಸ್ವ ಪ್ರಭೃತ ವಿಭಾಗ ಮತ್ತು ಬಂಡವಾಳ ಪ್ರಭೃತ ವಿಭಾಗಗಳಡಿಯಲ್ಲಿ ಅನುಕ್ರಮವಾಗಿ ಶೇಕಡ 24 ಮತ್ತು ಶೇಕಡ 9ರಷ್ಟು ಉಳಿತಾಯಗಳಿದ್ದವು. ಮುಂದುವರೆದು, 2015–16ರ ಅವಧಿಯಲ್ಲಿ ಬಂಡವಾಳ ಪ್ರಭೃತ ವಿಭಾಗದಡಿಯಲ್ಲಿ ₹8.05 ಕೋಟಿ ಅಧಿಕ ವೆಚ್ಚವನ್ನು ಆಯವ್ಯಯ ಅವಕಾಶವಿಲ್ಲದೆ ಮಾಡಲಾಗಿತ್ತು.

ಅನುಷ್ಠಾನ ಮಟ್ಟದಲ್ಲಿನ ನಿರ್ಬಂಧಗಳ ಕಾರಣದಿಂದ ಉಳಿತಾಯಗಳಿದ್ದವೆಂದು ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ಫೆಬ್ರವರಿ 2019). ಪರಿಶೋಧನಾ ವರದಿಯ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ ಮತ್ತು ವೆಚ್ಚಕ್ಕೆ ಸಂಬಂಧಿಸಿದ ಎಲ್ಲ ಅನುಷ್ಠಾನಾಧಿಕಾರಿಗಳಿಗೆ ಆಯವ್ಯಯ ನಿಬಂಧನೆಗಳಿಗೆ ಬದ್ಧರಾಗಿರಲು ಸಲಹೆ ನೀಡಲಾಗಿದೆ ಎಂದೂ ಸಹ ತಿಳಿಸಿದೆ.

### 2.7.2.2 ಆಯವ್ಯಯ – ರಾಜಸ್ವ ಮತ್ತು ಬಂಡವಾಳ

ಶಾಸಕಾಂಗದ ಮುಂದೆ ಮಂಡಿಸಲಾದ ಆಯವ್ಯಯವು ಅನುದಾನಗಳ ಸವಿವರ ಬೇಡಿಕೆಗಳಲ್ಲಿ ರಾಜಸ್ವ ಮತ್ತು ಬಂಡವಾಳ, ಯೋಜನೆ ಮತ್ತು ಯೋಜನೇತರ ಎಂದು ವಿಂಗಡಿಸಲ್ಪಟ್ಟಿದೆ. 2017–18ರಿಂದ ಯೋಜನೆ ಮತ್ತು ಯೋಜನೇತರ ಗಳ ನಡುವೆ ಯಾವುದೇ ವಿಭಜನೆಯಿಲ್ಲ.

ರಾಜಸ್ವ ಪುರಸ್ಕೃತ (ಯೋಜನೇತರ) ವಿಭಾಗದಡಿಯಲ್ಲಿ 2015–16ರಿಂದ 2016–17ರ ಅವಧಿಯಲ್ಲಿ ಶೇಕಡ ಏಳರಷ್ಟು ಉಳಿತಾಯವಿರುವುದನ್ನು ಹಾಗೂ ಪ್ರಭೃತ ಯೋಜನೇತರ ವಿಭಾಗದಲ್ಲಿ 2016–17ರ ಅವಧಿಯಲ್ಲಿ ವ್ಯತ್ಯಾಸವು ಶೇಕಡ 24ರಷ್ಟಿರುವುದನ್ನು ಗಮನಿಸಲಾಯಿತು. ಪುರಸ್ಕೃತ ಯೋಜನೆ ವಿಭಾಗದಡಿಯಲ್ಲಿ 2015–16 ಮತ್ತು 2016–17ರ ಅವಧಿಯಲ್ಲಿ ವ್ಯತ್ಯಾಸವು ಶೇಕಡ 8 ಮತ್ತು 10ರ ನಡುವಿನ ವ್ಯಾಪ್ತಿಯಲ್ಲಿದ್ದಿತು. ಬಂಡವಾಳ ವಿಭಾಗದಡಿಯಲ್ಲಿನ ಪುರಸ್ಕೃತ ಯೋಜನೇತರ ವಿಭಾಗದಲ್ಲಿ 2015–16ರ ಅವಧಿಯಲ್ಲಿ ಶೇಕಡ 100ರಷ್ಟು ಉಳಿತಾಯವಿದ್ದಿತು ಮತ್ತು ಪ್ರಭೃತ ಯೋಜನೇತರ ವಿಭಾಗದಡಿಯಲ್ಲಿ ₹8.05 ಕೋಟಿಗಳ ಅಧಿಕ ವೆಚ್ಚವಿದ್ದಿತು.

ಪರಿಷ್ಕೃತ ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2014 ವಿಭಾಗ 2 ನಿಬಂಧನೆಗಳ ಅನ್ವಯ ಪ್ರಭೃತ ವಿಭಾಗದಡಿ ಅವಕಾಶ ಮಾಡುವುದರ ಬದಲಿಗೆ ಪುರಸ್ಕೃತ ವಿಭಾಗದಡಿ (4219–ನಗರಾಭಿವೃದ್ಧಿಯ ಮೇಲೆ ಬಂಡವಾಳ ವೆಚ್ಚ–ಹುಡ್ಕೋ ಸಾಲಗಳ ಋಣಸೇವೆಗಳು) ₹8.50 ಕೋಟಿಯ ತಪ್ಪಾದ ಅವಕಾಶವನ್ನು ಮಾಡಿದ್ದರಿಂದ ಹೀಗಾಗಿದ್ದಿತು. ಆದರೆ, ವೆಚ್ಚವನ್ನು ಸರಿಯಾಗಿ ಪ್ರಭೃತ ವಿಭಾಗದಡಿ ಲೆಕ್ಕ ಮಾಡಲಾಗಿದ್ದು ಅದು ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

ಅದೇ ರೀತಿ 2016–17ರ ಅವಧಿಯಲ್ಲಿ ಪ್ರಭೃತ ಯೋಜನೇತರ ಅಡಿಯಲ್ಲಿ ಅವಕಾಶ ಒದಗಿಸದೆ ₹4.50 ಕೋಟಿಯನ್ನು (4217–60–800–3–01–240–ಋಣ ಸೇವೆಗಳು) ಪುರಸ್ಕೃತ ಯೋಜನೇತರ ಅಡಿಯಲ್ಲಿ ತಪ್ಪಾಗಿ ಅವಕಾಶ ಮಾಡಿದ್ದು ಶೇಕಡ 100ರಷ್ಟು ಉಳಿತಾಯವಾಗಿತ್ತು. ಆದರೆ, ವೆಚ್ಚವನ್ನು ಪ್ರಭೃತ ಅಡಿಯಲ್ಲಿ ಸರಿಯಾಗಿ ಲೆಕ್ಕ ಮಾಡಿದ್ದು ಅಧಿಕ ವೆಚ್ಚದಲ್ಲಿ ಪರಿಣಮಿಸಿತ್ತು. 2015–16ರಿಂದ 2017–18ರ ಅವಧಿಯಲ್ಲಿ ಪುರಸ್ಕೃತ ಅಡಿಯಲ್ಲಿ ವ್ಯತ್ಯಾಸವು ಶೇಕಡ 4 ಮತ್ತು 28ರ ನಡುವಿನ ವ್ಯಾಪ್ತಿಯಲ್ಲಿದ್ದಿತು.

### 2.7.2.3 ಸಂಚಿತ ನಿಧಿಯ ವೆಚ್ಚದಲ್ಲಿ ಕೃತಕ ವೃದ್ಧಿ–ಹಣವನ್ನು ಮುಂಗಡವಾಗಿ ಸೆಳೆದು ಬ್ಯಾಂಕ್‌ಗಳಲ್ಲಿ ಇಟ್ಟಿರುವುದು

ಶಾಸಕಾಂಗದ ಮುಂದೆ ಮಂಡಿಸಲಾದ ಆಯವ್ಯಯವು ಎರಡು ಭಾಗಗಳನ್ನು ಹೊಂದಿರುತ್ತದೆ. ರಾಜಸ್ವದ ಮೇಲಿನ ವೆಚ್ಚ ಮತ್ತು ಬಂಡವಾಳ ಮೇಲಿನ ವೆಚ್ಚ. ವೆಚ್ಚವನ್ನು 15 ಅಂಕಿಗಳ ವರ್ಗೀಕರಣವನ್ನು ಬಳಸಿ ವರ್ಗೀಕರಿಸಲಾಗುವುದು ಹಾಗೂ ವರ್ಗೀಕರಣದ ಆರನೇ ಸ್ತರದ ಕೊನೆಯ ಮೂರು ಅಂಕಿಗಳು ವೆಚ್ಚದ ಉದ್ದೇಶವನ್ನು ಸೂಚಿಸುತ್ತವೆ. ಶಾಸಕಾಂಗದಿಂದ ಆಯವ್ಯಯವು ಅನುಮೋದನೆಯಾದ ನಂತರ ಖಜಾನೆಗಳಲ್ಲಿ ಕಾರ್ಯನಿರ್ವಹಿಸುವ ಡಿಡಿಓಗಳು ಬಿಲ್/ಕ್ಲೈಮ್‌ಗಳ ಮಂಡನೆಯ ಮೂಲಕ ಹಣವನ್ನು ಸೆಳೆಯಲು ಅಧಿಕಾರ ಪಡೆಯುತ್ತಾರೆ. ಕ್ಲೈಮನ್ನು ಸಲ್ಲಿಸಿ ಬಿಲ್ ಅನುಮೋದನೆಯಾದ ನಂತರ ಸಂಚಿತ ನಿಧಿಗೆ ಖರ್ಚು ಹಾಕಲಾಗುತ್ತದೆ. ಇದು ವೆಚ್ಚವನ್ನು, ಅದನ್ನು ಮೀಸಲಿಟ್ಟ ಉದ್ದೇಶಕ್ಕಾಗಿ ವೆಚ್ಚ ಮಾಡಲಾಗಿದೆ ಎಂಬ ಅಭಿಪ್ರಾಯವನ್ನು ನೀಡುತ್ತದೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ, ಪೌರಾಡಳಿತ ನಿರ್ದೇಶಕರು, ಕೆಳಗಿನ ಯೋಜನೆಗಳಲ್ಲಿ, ತಕ್ಷಣದ ಉದ್ದೇಶಕ್ಕೆ ಅಗತ್ಯವಿರದ ಹೆಚ್ಚಿನ ಮೊತ್ತದ ಹಣವನ್ನು ಸೆಳೆದು ಬ್ಯಾಂಕ್ ಖಾತೆಗಳಲ್ಲಿ ಠೇವಣಿ ಇಟ್ಟಿರುವುದನ್ನು ಗಮನಿಸಲಾಯಿತು.

#### (1) ಯುಐಡಿಎಸ್‌ಎಸ್‌ಎಂಟಿ/ಜೆಎನ್‌ನರ್ಮ್

ನಗರಾಭಿವೃದ್ಧಿ ಮಂತ್ರಾಲಯವು 2005–06ರಲ್ಲಿ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನವನ್ನು (ಜೆಎನ್‌ನರ್ಮ್) ಪ್ರಾರಂಭಿಸಿತು, ಅದರಲ್ಲಿ ಸಣ್ಣ ಮತ್ತು ಮಧ್ಯಮ ನಗರಗಳಿಗೆ ನಗರ ಮೂಲಸೌಕರ್ಯಗಳ ಅಭಿವೃದ್ಧಿ ಯೋಜನೆ (ಯುಐಡಿಎಸ್‌ಎಸ್‌ಎಮ್‌ಟಿ) ಒಂದು ಘಟಕವಾಗಿತ್ತು. ಈ ಯೋಜನೆಗೆ ಹಣವನ್ನು ಸರ್ಕಾರದಿಂದ ಕರ್ನಾಟಕ ಸರ್ಕಾರದ ಪೌರಾಡಳಿತ ನಿರ್ದೇಶಕರಿಗೆ (ಡಿಎಮ್‌ಎ) ಬಿಡುಗಡೆ ಮಾಡಲಾಗುತ್ತಿತ್ತು. ಡಿಎಮ್‌ಎರವರು ಯೋಜನೆಯನ್ನು ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದರು. ಯುಐಡಿಎಸ್‌ಎಸ್‌ಎಮ್‌ಟಿ ಅಡಿಯಲ್ಲಿ ಜನವರಿ 2018ರಲ್ಲಿ ತುಮಕೂರಿನಲ್ಲಿ ನೀರು ಸರಬರಾಜು ಯೋಜನೆಗಳ ಅನುಷ್ಠಾನಕ್ಕಾಗಿ ಸೆಳೆದ ₹39.80 ಕೋಟಿಯನ್ನು ಬಡ್ಡಿ ಗಳಿಸುವ ನಿಶ್ಚಿತ ಬ್ಯಾಂಕ್ ಠೇವಣಿಗಳಲ್ಲಿ ಮಾಡಿರುವುದನ್ನು ಗಮನಿಸಲಾಯಿತು(09/2018). ಯೋಜನಾ ಮಾರ್ಗದರ್ಶಿ ಸೂತ್ರಗಳು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ನಿರ್ವಹಿಸಲು ಅನುಮತಿ ನೀಡಿವೆ ಎಂದು ಡಿಎಮ್‌ಎ ತಿಳಿಸಿದರು. ಅಲ್ಲದೆ, ಯೋಜನೆಯ ಮೇಲಿನ ವೆಚ್ಚವನ್ನು ಭರಿಸಲು ಅನುಷ್ಠಾನ ಏಜೆನ್ಸಿಯ ಬಳಿ ಸಾಕಷ್ಟು ಹಣವಿದ್ದುದರಿಂದ ಯಾವಾಗ ವೆಚ್ಚವು, ಬಿಡುಗಡೆ ಮಾಡಿದ ಮೊತ್ತದ ಶೇಕಡಾ 75ರಷ್ಟನ್ನು ಮೀರುವುದೋ ಆಗ ಖಜಾನೆಯಿಂದ ಸೆಳೆದ ಹಣವನ್ನು ಅನುಷ್ಠಾನ ಏಜೆನ್ಸಿಗಳಿಗೆ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು. ಪ್ರಸ್ತುತ ಪ್ರಕರಣದಲ್ಲಿ ಮೊತ್ತವನ್ನು ಜನವರಿ 2018ರಲ್ಲಿ ಸೆಳೆಯಲಾಗಿದ್ದು ಡಿಎಮ್‌ಎ ರವರ ನಿಶ್ಚಿತ ಠೇವಣಿ ಖಾತೆಯಲ್ಲಿ ಬಳಕೆಯಾಗದೇ ಉಳಿದಿದ್ದು, ರಾಜಸ್ವ ವೆಚ್ಚವನ್ನು ಕೃತಕವಾಗಿ ವೃದ್ಧಿಸಲಾಗಿತ್ತು.

ಮುಂದುವರೆದು, ಡಿಎಮ್‌ಎ ರವರ ಬಳಿಯಿದ್ದ ಹಣವು ಯೋಜನೆಯಡಿಯಲ್ಲಿನ ಬಹಳ ವರ್ಷಗಳ ಬಡ್ಡಿ ಮತ್ತು ಉಳಿತಾಯದ ಮೊತ್ತವಾದ ₹57.50 ಕೋಟಿಯನ್ನು (ಬಡ್ಡಿ ₹55.10 ಕೋಟಿ ಮತ್ತು ₹2.40 ಕೋಟಿ) ಒಳಗೊಂಡಿತ್ತು. ಮೊತ್ತವನ್ನು ಸಂಚಿತ ನಿಧಿಗೆ ಜಮೆ ಮಾಡುವ ಬದಲು ಯುಐಡಿಎಸ್‌ಎಸ್‌ಎಮ್‌ಟಿ ಪರಿವರ್ತನಾ ಘಟ್ಟದಡಿಯಲ್ಲಿ ಮಂಜೂರಾದ ಯೋಜನೆಗಳಿಗೆ ರಾಜ್ಯದ ಪಾಲಾಗಿ ಬಡ್ಡಿ ಮತ್ತು ಉಳಿತಾಯದ ಮೊತ್ತವನ್ನು ಬಳಸಲು ಡಿಎಮ್‌ಎ ಆರ್ಥಿಕ ಇಲಾಖೆಯ

ಅನುಮೋದನೆಯನ್ನು ಕೋರಿದರು. ತದನಂತರ ಹಣವನ್ನು ಶಾಸಕಾಂಗದಿಂದ ಅನುಮೋದನೆ ಪಡೆಯದೇ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ (ನವೆಂಬರ್ 2017) ವಿನಿಯೋಗ ಮಾಡಿಕೊಂಡಿದ್ದು ಅಕ್ರಮವಾಗಿತ್ತು.

**(2) ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ**

ಅನಾರೋಗ್ಯಕರ ಪರಿಸರದಲ್ಲಿ ಕೆಲಸ ಮಾಡುವ ಶಾಶ್ವತ ಗೃಹರಹಿತ ಪೌರಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಒದಗಿಸುವ ಸಲುವಾಗಿ 2014–15ರಲ್ಲಿ ಜಾರಿಗೆ ತಂದ ಪೌರಕಾರ್ಮಿಕ ಗೃಹಭಾಗ್ಯ ಯೋಜನೆಯು ಕರ್ನಾಟಕ ಸರ್ಕಾರದ ಆದ್ಯತೆಯ ವಸತಿ ಯೋಜನೆಯಾಗಿತ್ತು. 2014–15ರಿಂದ 2017–18ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ₹98 ಕೋಟಿಯನ್ನು ಪೂರ್ಣವಾಗಿ ಬಳಸಿಕೊಂಡಿಲ್ಲ. ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ ನಗರ ಸ್ಥಳಿಯ ಸಂಸ್ಥೆಗಳ ಬಳಿ ₹50.47 ಕೋಟಿ (₹47.68 ಕೋಟಿ ಬ್ಯಾಂಕ್‌ಗಳಲ್ಲಿ ಮತ್ತು ₹2.79 ಕೋಟಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿ) ಉಳಿದಿರುವುದನ್ನು ಗಮನಿಸಲಾಗಿದ್ದು ಇದು ಯೋಜನೆಯ ಮಂದಗತಿಯ ಅನುಷ್ಠಾನವನ್ನು ಸೂಚಿಸುತ್ತಿತ್ತು. ಅಗತ್ಯಕ್ಕಿಂತ ಮುಂಚಿತವಾಗಿ ಹಣವನ್ನು ಸೆಳೆದದ್ದು ಸಂಚಿತ ನಿಧಿಯಲ್ಲಿ ವೆಚ್ಚದ ಕೃತಕ ವೃದ್ಧಿಯಲ್ಲಿ ಪರಿಣಮಿಸಿತು. ಹಲವಾರು ಸ್ಥಳಗಳಲ್ಲಿ ಮನೆಗಳ ನಿರ್ಮಾಣಕ್ಕೆ ಸ್ಥಳಾವಕಾಶದ ಕೊರತೆಯಿದ್ದು ಲಭ್ಯವಿದ್ದ ಸ್ಥಳವನ್ನು ಬಹುಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಬಳಸಿಕೊಳ್ಳುತ್ತಿರುವುದಾಗಿ ಇಲಾಖೆಯು ಉತ್ತರಿಸಿತು (ಸೆಪ್ಟಂಬರ್ 2018). ಹೆಚ್ಚಿನ ಯೋಜನೆಗಳು ಟೆಂಡರ್ ಹಂತದಲ್ಲಿರುವುದಾಗಿಯೂ ಸಹ ಹೇಳಲಾಗಿದೆ. ನಿರ್ಮಾಣವು ಪ್ರಾರಂಭವಾದರೆ ಬಿಡುಗಡೆ ಮಾಡಿದ ಹಣದಿಂದ ವೆಚ್ಚವನ್ನು ಭರಿಸಲಾಗುವುದು ಹಾಗೂ ಆರ್ಥಿಕ ಪ್ರಗತಿಯೂ ಸಹ ವೃದ್ಧಿಯಾಗುವುದು ಎಂದೂ ಹೇಳಲಾಗಿದೆ. ಅಗತ್ಯತೆಗಿಂತ ಮೊದಲು ಹಣವನ್ನು ಸೆಳೆಯುವುದು ಸಂಚಿತ ನಿಧಿಯ ವೆಚ್ಚದ ವೃದ್ಧಿಯಲ್ಲಿ ಪರಿಣಮಿಸುವುದರಿಂದ ಇಲಾಖೆಯ ಉತ್ತರವನ್ನು ಒಪ್ಪಲಾಗುವುದಿಲ್ಲ.

### 2.7.2.4 ಸತತ ಉಳಿತಾಯಗಳು

2015–16ರಿಂದ 2017–18ರ ಅವಧಿಯಲ್ಲಿ ಪ್ರತಿ ವರ್ಷವೂ ಕೆಲವು ನಿರ್ದಿಷ್ಟ ಶೀರ್ಷಿಕೆಗಳಡಿಯಲ್ಲಿ ಆಯವ್ಯಯ ಹಂಚಿಕೆಯ ಗಣನೀಯ ಪ್ರಮಾಣದ ಮೊತ್ತವು ಬಳಕೆಯಾಗದೆ ಉಳಿದಿರುವುದನ್ನು ಅನುದಾನ ವಹಿಯಿಂದ ಗಮನಿಸಲಾಗಿತ್ತು. ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 110ರ ಅಗತ್ಯತೆಯಂತೆ, ಹಿಂದಿನ ವರ್ಷಗಳ ವೆಚ್ಚಗಳನ್ನು ಪರಿಗಣಿಸಿ ಆಯವ್ಯಯದಲ್ಲಿ ಹಂಚಿಕೆಗಳನ್ನು ಮಾಡದೇ ಇರುವುದರಿಂದ ಲೆಕ್ಕಶೀರ್ಷಿಕೆಗಳಲ್ಲಿ ಸತತ ಉಳಿಕೆಯಾಗಿರುವುದನ್ನು ಇದು ಸೂಚಿಸುತ್ತದೆ ಮತ್ತು ಇದು **ಕೋಷ್ಟಕ 2.8**ರಲ್ಲಿ ತೋರಿಸಿದಂತೆ ಕೆಲವು ಲೆಕ್ಕಶೀರ್ಷಿಕೆಗಳಲ್ಲಿ ಸತತ ಉಳಿತಾಯವಾಗುವುದರಲ್ಲಿ ಪರಿಣಮಿಸಿದೆ.

**ಕೋಷ್ಟಕ 2.8 : ಸತತ ಉಳಿತಾಯಗಳು**

*(ಕೋಟಿ ರೂಪಾಯಿಗಳಲ್ಲಿ)*

| ಕ್ರಮ ಸಂಖ್ಯೆ. | ಲೆಕ್ಕ ಶೀರ್ಷಿಕೆ | 2015–16 | 2016–17 | 2017–18 |
|---|---|---|---|---|
| 1 | 3604–00–191–2 ಇತರ ಪಾಲು | 72.63 | 125.62 | 101.90 |
| 2 | 3604–00–192–2 ಇತರ ಪಾಲು | 121.12 | 97.72 | 86.80 |
| 3 | 3604–00–192–3 ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ | 55.24 | 9.76 | 16.34 |
| 4 | 3604–00–193–2 ಇತರ ಪಾಲು | 19.62 | 26.00 | 24.52 |
| 5 | 4215–02–190–0–03 ಕೆಯುಡಬ್ಲ್ಯುಎಸ್ ಆಧುನೀಕರಣ ಯೋಜನೆ ಇಎಪಿ | 28.50 | 50.00 | 88.50 |

*ಆಕರ: ಅನುದಾನ ವಹಿ*

ಆಯವ್ಯಯವನ್ನು ತಯಾರಿಸುವಾಗ ಹಿಂದಿನ ತ್ರೈಮಾಸಿಕ ವೆಚ್ಚವನ್ನು ಪರಿಗಣಿಸಲಾಗುವುದು, ಹಾಗಾಗಿ ನಿರೀಕ್ಷಿತ ವೆಚ್ಚ ಮತ್ತು ವಾಸ್ತವ ವೆಚ್ಚಗಳಲ್ಲಿ ವ್ಯತ್ಯಾಸವಿರುತ್ತದೆ ಎಂದು ಇಲಾಖೆಯು ಲೆಕ್ಕಪರಿಶೋಧನಾ ಆಕ್ಷೇಪಣೆಗೆ ಉತ್ತರವಾಗಿ ತಿಳಿಸಿತು (ಫೆಬ್ರವರಿ 2019). ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಮುಂದಿನ ಮಾರ್ಗದರ್ಶನಕ್ಕಾಗಿ ಗಮನದಲ್ಲಿ ಇಟ್ಟುಕೊಳ್ಳಲಾಗುವುದು ಎಂದೂ ಸಹ ತಿಳಿಸಿದೆ.

#### 2.7.2.5 ವೆಚ್ಚದ ಒತ್ತಡ

ಮೊತ್ತಗಳ ಬಿಡುಗಡೆ, ಸೆಳೆತ ಮತ್ತು ಲೆಕ್ಕ ವಿಧಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯು ಜಾರಿ ಮಾಡಿದ 9 ಸೆಪ್ಟಂಬರ್ 2004ರ ಆದೇಶದ ಕಂಡಿಕೆ 6ರಂತೆ, ಆಡಳಿತ ಇಲಾಖೆ ಮತ್ತು ಇಲಾಖಾ ಮುಖ್ಯಸ್ಥರುಗಳು ಆರ್ಥಿಕ ವರ್ಷದ ಉಳಿದ ಭಾಗಕ್ಕೆ ಬೇಕಾದ ವೆಚ್ಚವನ್ನು ಎಚ್ಚರಿಕೆಯಿಂದ ಮತ್ತು ಉಳಿದಿರುವ ಅನುದಾನಗಳ ಒಳಗೆ ಯೋಜಿಸಬೇಕಾಗಿದೆ. ಬಿಲ್ಲುಗಳ ಒಗ್ಗೂಡಿಸುವಿಕೆ ಹಾಗೂ ಮಾರ್ಚ್ ತಿಂಗಳಲ್ಲಿ ವೆಚ್ಚದ ಒತ್ತಡವನ್ನು ತಪ್ಪಿಸಬೇಕಿದೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳ ನಿರೀಕ್ಷಿತ ವೆಚ್ಚಗಳಿಗೆ ಅಗತ್ಯವಿರುವ ಸೂಕ್ತ ಮಟ್ಟದ ಪ್ರಾಧಿಕಾರದಿಂದ ಅನುಮೋದನೆ ಪಡೆದು ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿಯೇ ಹೊರಡಿಸಬೇಕು. ಹಾಗಿದ್ದರೂ 2017-18ರಲ್ಲಿ ಒಟ್ಟು ವೆಚ್ಚಕ್ಕೆ ಮಾರ್ಚ್ ತಿಂಗಳಿನ ಶೇಕಡಾವಾರು ವೆಚ್ಚವು 50ರಿಂದ 54ರ ವ್ಯಾಪ್ತಿಯಲ್ಲಿದ್ದುದನ್ನು ಗಮನಿಸಲಾಯಿತು. ಲೆಕ್ಕಶೀರ್ಷಿಕೆವಾರು ವೆಚ್ಚಗಳ ವಿವರಗಳನ್ನು **ಕೋಷ್ಟಕ 2.9**ರಲ್ಲಿ ನೀಡಲಾಗಿದೆ.

**ಕೋಷ್ಟಕ 2.9: ವೆಚ್ಚದ ಒತ್ತಡ**

*(₹ ಕೋಟಿಗಳಲ್ಲಿ)*

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಒಟ್ಟು ವೆಚ್ಚ | ಕೊನೆಯ ತ್ರೈಮಾಸಿಕದ ವೆಚ್ಚ ಮತ್ತು ಶೇಕಡವಾರು | ಕೊನೆಯ ತ್ರೈಮಾಸಿಕದ ವೆಚ್ಚ ಮತ್ತು ಶೇಕಡವಾರು | ಮಾರ್ಚ್ ತಿಂಗಳಿನಲ್ಲಿನ ವೆಚ್ಚ | |
|---|---|---|---|---|---|---|
| | | | | | ಮೊತ್ತ | ಶತಾಂಶ |
| 1 | 2217-80-001-0-08 ಕೆರೆ ಅಭಿವೃದ್ಧಿ | 50.00 | 37.50 | 75 | 25.00 | 50 |
| 2 | 4217-01-800-0-02 ಬೆಂಗಳೂರಿನಲ್ಲಿ ವಿಶೇಷ ಮೂಲಸೌಕರ್ಯಕ್ಕೆ ಬೆಂಬಲ | 2,031.00 | 1,523.25 | 75 | 1,015.50 | 50 |
| 3 | 4217-60-800-5-02 ಬಿಎಮ್‌ಆರ್‌ಸಿಎಲ್‌ಗೆ ತೆರಿಗೆಗಳು ಮತ್ತು ಸುಂಕಗಳ ಮರುಪಾವತಿ | 77.20 | 41.57 | 54 | 41.57 | 54 |

*ಆಕರ: ಅನುದಾನ ವಹಿ*

ಆಡಳಿತಾತ್ಮಕ ಮಂಜೂರಾತಿ, ತಾಂತ್ರಿಕ ಮಂಜೂರಾತಿ ಹಾಗೂ ವಿಳಂಬಗೊಂಡ ಟೆಂಡರ್ ಮತ್ತು ಮರುಟೆಂಡರ್ ಪ್ರಕ್ರಿಯೆಗಳ ಕಾರಣದಿಂದಾದ ಅನಿವಾರ್ಯ ಪರಿಸ್ಥಿತಿಗಳಿಂದ ವರ್ಷದ ಕೊನೆಯಲ್ಲಿ ವೆಚ್ಚವನ್ನು ಭರಿಸುವುದರಲ್ಲಿ ಪರಿಣಮಿಸಿದೆ ಎಂದು ಇಲಾಖೆಯು ಉತ್ತರಿಸಿತು (ಫೆಬ್ರವರಿ 2019). ಮುಂದೆ ವೆಚ್ಚವನ್ನು ಹಣಕಾಸಿನ ವರ್ಷವಿಡೀ ಅನ್ವಯಿಸುವಂತೆ ಮಾಡುವ ಹಾಗೆ ಯೋಜಿಸುವ ಪ್ರಯತ್ನಗಳನ್ನು ಮಾಡಲಾಗುವುದು ಎಂದೂ ಸಹ ತಿಳಿಸಿದೆ.

## 2.8 ಕುಟುಂಬ ಪಿಂಚಣಿಯ ಹೆಚ್ಚುವರಿ ಪಾವತಿ

ಕರ್ನಾಟಕ ಸರ್ಕಾರ ನೌಕರರ (ಕುಟುಂಬ ಪಿಂಚಣಿ) ನಿಯಮಗಳು 2002ರನ್ವಯ ಸರ್ಕಾರಿ ನೌಕರನು/ಳು ಸೇವೆಯಲ್ಲಿರುವಾಗ ಮರಣ ಹೊಂದಿದರೆ ಆತನ/ಆಕೆಯ ಕುಟುಂಬವು ಸಾಮಾನ್ಯವಾಗಿ ಪಡೆಯುವ ಕುಟುಂಬ ಪಿಂಚಣಿಯ ಎರಡರಷ್ಟು ಅಥವಾ ನೌಕರನು/ಳು ಕೊನೆಯ ಬಾರಿ ಪಡೆದ

ವೇತನದ ಶೇಕಡ 50ರಷ್ಟು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಆ ನೌಕರನ/ಳ ಮರಣ ದಿನಾಂಕದ ಮರುದಿನಾಂಕದಿಂದ ಏಳು ವರ್ಷಗಳವರೆಗೆ ಅಥವಾ ಆ ಸರ್ಕಾರಿ ನೌಕರನು/ಳು ಜೀವಂತವಾಗಿದ್ದಿದ್ದರೆ ಅವನು/ಳು 65 ವರ್ಷಗಳನ್ನು ಮುಟ್ಟುವವರೆಗೂ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಕುಟುಂಬ ಪಿಂಚಣಿಯಾಗಿ ಪಡೆಯಲು ಅರ್ಹನಾಗಿರುತ್ತಾನೆ/ಳೆ. ಬಹುತೇಕ ಪಿಂಚಣಿ ಪಾವತಿಯು ಬ್ಯಾಂಕುಗಳ ಮುಖಾಂತರ ಆಗುತ್ತಿದೆ. ಬ್ಯಾಂಕುಗಳು ಪಿಂಚಣಿಯ ಮೊತ್ತವನ್ನು ಸಂಬಂಧಿಸಿದ ಉಳಿತಾಯ ಖಾತೆಗಳಿಗೆ ಜಮೆ ಮಾಡಿ ನಂತರ ಕ್ಲೈಮುಗಳನ್ನು ಸಂಪರ್ಕ ಶಾಖೆಯ ಮೂಲಕ ಕಳುಹಿಸುತ್ತವೆ. ಈ ಕ್ಲೈಮುಗಳನ್ನು ಖಜಾನೆಗಳು ಇತ್ಯರ್ಥ ಮಾಡುತ್ತವೆ.

2017–18ರಲ್ಲಿ 30 ಜಿಲ್ಲಾ ಖಜಾನೆಗಳಲ್ಲಿನ 93 ಪ್ರಕರಣಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಕುಟುಂಬ ಪಿಂಚಣಿಯನ್ನು ಪಿಂಚಣಿ ಪಾವತಿ ಆದೇಶದಲ್ಲಿ ಸೂಚಿಸಿರುವ ದಿನಾಂಕದ ನಂತರವೂ ಅಧಿಕ ದರದಲ್ಲಿ ಪಾವತಿ ಮಾಡಿದ್ದು, ಇದರಿಂದಾಗಿ ₹1.11 ಕೋಟಿಗಳ ಹೆಚ್ಚುವರಿ ಪಾವತಿಯಾಗಿದೆ (**ಅನುಬಂಧ 2.21**). ಮುಂದುವರೆದು, 21 ಜಿಲ್ಲಾ ಖಜಾನೆಗಳ 2017–18ರ ತಪಾಸಣೆಯಲ್ಲಿ 66 ಪ್ರಕರಣಗಳಲ್ಲಿ, ಈ ಪ್ರಕರಣಗಳಲ್ಲಿನ ಹೆಚ್ಚುವರಿ ಪಾವತಿಯನ್ನು ಹಿಂದಿನ ವರ್ಷಗಳಲ್ಲಿ ತೋರಿಸಿದ್ದರೂ ಸಹ, ₹0.47 ಕೋಟಿಗಳ ಹೆಚ್ಚುವರಿ ಪಾವತಿಯನ್ನು ಮಾಡಿದ್ದು, ಇದು ಒಟ್ಟಾರೆ ₹1.15 ಕೋಟಿಗಳ ಮುಂದುವರೆಸಿದ ಹೆಚ್ಚಿನ ಪಾವತಿಯಲ್ಲಿ ಪರಿಣಮಿಸಿದೆ (**ಅನುಬಂಧ 2.22**).

ಬ್ಯಾಂಕುಗಳಿಂದ ಈ ಪ್ರಕರಣಗಳ ಪರಿಶೀಲನೆಯಲ್ಲಿನ ವಿಫಲತೆ ಮತ್ತು ಅಧಿಕ ದರದಲ್ಲಿ ಕುಟುಂಬ ಪಿಂಚಣಿಯನ್ನು ಪಾವತಿಸಲು ಇರುವ ಸ್ಥಗಿತ ದಿನಾಂಕವನ್ನು ಗಮನಿಸದಿರುವುದರಿಂದ ಈ ರೀತಿಯ ಹೆಚ್ಚುವರಿ ಪಾವತಿಯಾಗಿದೆ.

ಜಿಲ್ಲಾ ಖಜಾನೆಗಳು ಮತ್ತು ಖಜಾನೆಗಳ ನಿರ್ದೇಶನಾಲಯವು ಸಾರ್ವಜನಿಕ ವಲಯ ಬ್ಯಾಂಕ್‌ಗಳಿಂದ ಹೆಚ್ಚುವರಿ ಪಾವತಿಯ ಮೊತ್ತವನ್ನು ವಸೂಲು ಮಾಡಲು ಕ್ರಮ ಕೈಗೊಂಡಿದ್ದು, 31.01.2019ರವರೆಗೆ ₹0.846 ಕೋಟಿಯನ್ನು ವಸೂಲು ಮಾಡಲಾಗಿದೆ ಎಂದು ಖಜಾನೆಗಳ ನಿರ್ದೇಶನಾಲಯದ ನಿರ್ದೇಶಕರು ಉತ್ತರಿಸಿದ್ದಾರೆ (ಏಪ್ರಿಲ್ 2019). ಬ್ಯಾಂಕ್‌ಗಳಿಗೆ ಪಿಂಚಣಿ ಪಾವತಿಯನ್ನು ಕ್ರಮಬದ್ಧಗೊಳಿಸಲು ಒಂದು ತಿಂಗಳ ಮುಚೆಯೇ ಎಚ್ಚರಿಕಾ ಪತ್ರಗಳನ್ನು ಬರೆಯುವಂತೆ ಎಲ್ಲಾ ಜಿಲ್ಲಾ ಖಜಾನೆ ಅಧಿಕಾರಿಗಳಿಗೂ ಸೂಚನೆಗಳನ್ನು ಕಳಿಸಲಾಗಿದೆ ಎಂದೂ ಉತ್ತರಿಸಲಾಗಿದೆ.

ಮುಂದುವರೆದು, ಹೆಚ್ಚುವರಿ ಮೊತ್ತವಾಗಿ ₹1.11 ಕೋಟಿ ಮೊತ್ತವು ಬ್ಯಾಂಕ್‌ಗಳಿಗೆ ಪುನರ್ಪಾವತಿ ಆಗಿರುವುದರಿಂದ ಸರ್ಕಾರವು ಅದೇ ಮೊತ್ತವನ್ನು 14 ದಿನದ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡಿದ್ದರೆ ಬರಬಹುದಾಗಿದ್ದ ₹0.05 ಕೋಟಿ ಮೊತ್ತದ ತಡೆಯಬಹುದಾಗಿದ್ದ ಬಡ್ಡಿಯ ನಷ್ಟವಾಗಿದೆ (**ಅನುಬಂಧ 2.23**) (2017–18ರಲ್ಲಿ ಮಾತ್ರ ಕಂಡುಹಿಡಿದ ಪ್ರಕರಣಗಳ ಆಧಾರದ ಮೇಲೆ ಮತ್ತು ತಪಾಸಣಾ ವರದಿಗಳನ್ನು ಕಳುಹಿಸಿದ ತಿಂಗಳಿಂದ ಮಾರ್ಚ್ 2018ರ ಕೊನೆಯವರೆಗೆ ಬಡ್ಡಿಯನ್ನು ಲೆಕ್ಕ ಮಾಡಲಾಗಿದೆ).

## 2.9 ಸಮಾಪನ

ಮೇಲಿನ ಕಂಡಿಕೆಗಳಲ್ಲಿ ಹೇಳಿದಂತೆ ರಾಜ್ಯ ಸರ್ಕಾರವು ವಿವೇಚನಾಯುಕ್ತ ಹಣಕಾಸು ನಿರ್ವಹಣೆಗೆ ಆಯವ್ಯಯ ತಯಾರಿಕೆ ಮತ್ತು ವೆಚ್ಚ ನಿಯಂತ್ರಣದ ಮೇಲೆ ಬಿಗಿಯಾದ ನಿಯಂತ್ರಣವನ್ನು ಸಾಧಿಸಬೇಕಾಗಿದೆ ಏಕೆಂದರೆ ಅಪರ್ಯಾಪ್ತ ನಿಯಂತ್ರಣಗಳಿಂದಾಗಿ ಕೆಳಗಿನ ಅನಿಯತಗಳು ಕಂಡುಬಂದಿವೆ.

- 2017–18ರಲ್ಲಿ ಒಟ್ಟು ಅವಕಾಶದ ಮೊತ್ತವಾದ ₹2,09,479.50 ಕೋಟಿಗೆ ಪ್ರತಿಯಾಗಿ ₹1,92,320.24 ಕೋಟಿ ವೆಚ್ಚವಾಗಿರುತ್ತದೆ. ಇದರ ಪರಿಣಾಮವಾಗಿ ₹17,159.26 ಕೋಟಿ (ಶೇಕಡಾ ಎಂಟು) ಬಳಕೆಯಾಗದೆ ಉಳಿದಿದೆ. ವೆಚ್ಚವನ್ನು ಹೆಚ್ಚಿಗೆ/ಕಡಿಮೆ ಹೇಳುವ ಪ್ರಕರಣಗಳನ್ನು ಗಮನಿಸಲಾಗಿದೆ.

- ₹3,476.63 ಕೋಟಿ ಮೊತ್ತವನ್ನು ಬಂಡವಾಳ/ರಾಜಸ್ವ ವರ್ಗದಡಿ ತಪ್ಪು ವರ್ಗೀಕರಣ ಮಾಡಿರುವುದು ಆರ್ಥಿಕ ಸೂಚಕಗಳ ಮೇಲೆ ಪರಿಣಾಮ ಬೀರುವುದರಿಂದ ಆಯವ್ಯಯ ಸಿದ್ಧತೆಯು ಹೆಚ್ಚು ಜಾಗರೂಕತೆಯಿಂದ ಕೂಡಿರಬೇಕು;

- ಶಾಸಕಾಂಗದ ಅನುಮೋದನೆಗೆ ಮೊದಲೇ ಪೂರಕ ಅಂದಾಜುಗಳ ಶೇಕಡ 21ರಷ್ಟಿನ ₹3,747.77 ಕೋಟಿಗಳ ವೆಚ್ಚಕ್ಕೆ ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸಲಾಗಿತ್ತು. ಶಾಸಕಾಂಗದ ಮಂಜೂರಾತಿಗೆ ಮೊದಲೇ ವೆಚ್ಚಗಳನ್ನು ಭರಿಸಲು ಕಾರ್ಯ ನಿರ್ವಾಹಕ ಆದೇಶಗಳಿಗೆ ಮೊರೆ ಹೋಗುವುದು ಕನಿಷ್ಠವಾಗಿರಬೇಕು ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಶಿಫಾರಸು ಮಾಡಿರುವಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಇಂತಹ ಆಧೇಶಗಳನ್ನು ಜಾರಿಗೊಳಿಸಬೇಕಾಗುತ್ತದೆ.

- 2012–13ರಿಂದ 2017–18ರ ಅವಧಿಗೆ ಸಂಬಂಧಿಸಿದ ₹2,409.53 ಕೋಟಿಗಳ ಅಧಿಕ ವೆಚ್ಚವನ್ನು ಸಂವಿಧಾನದ ಅನುಚ್ಛೇದ 205ರ ಅನ್ವಯ ಸಕ್ರಮೀಕರಣಗೊಳಿಸಬೇಕಾದ ಅಗತ್ಯತೆಯಿದೆ.

- ಆರು ಅನುದಾನಗಳ ಆರು ಪ್ರಕರಣಗಳಲ್ಲಿ 'ಹೊಸ ಸೇವೆ/ಹೊಸ ಸೇವಾ ಸಾಧನ' ಎಂದು ಪರಿಗಣಿಸಬೇಕಿದ್ದ ₹436.56 ಕೋಟಿಗಳಷ್ಟು ಅಧಿಕ ವೆಚ್ಚವನ್ನು ಶಾಸಕಾಂಗದ ಅನುಮೋದನೆಯಿಲ್ಲದೆ ಭರಿಸಲಾಗಿದೆ.

- ಪೂರಕ ಅವಕಾಶಗಳು, ಕೆಎಫ್‌ಆರ್‌ಎ, 2002ರ ಪರಿಚ್ಛೇದ (6) ಉಪಪರಿಚ್ಛೇದ (5)ರ ಅಡಿಯಲ್ಲಿ ತಿಳಿಸಿರುವುದಕ್ಕನುಗುಣವಾಗಿ ವಹಿವಾಟನ್ನು ರಾಜಸ್ವ ತಟಸ್ಥವಾಗಿಸಲು ಇತರೆ ಬೇಡಿಕೆಗಳಡಿಯಲ್ಲಿನ ಉಳಿತಾಯದ ಆಧಾರವನ್ನು ಪಡೆದಿರಲಿಲ್ಲ.

- 13 ಉದ್ದೇಶ ಶೀರ್ಷಿಕೆಗಳಲ್ಲಿ ₹171.53 ಕೋಟಿಯ ಪೂರಕ ಅವಕಾಶವು ಅನವಶ್ಯಕವಾಗಿತ್ತು ಮತ್ತು 13 ಉದ್ದೇಶ ಶೀರ್ಷಿಕೆಗಳಡಿಯಲ್ಲಿ ಮಾಡಿದ ಅವಕಾಶವು ₹107.72 ಕೋಟಿಗಳಷ್ಟು ಅಧಿಕವಾಗಿ ಸಾಬೀತಾಗಿತ್ತು.

- 44 ಪ್ರಕರಣಗಳಲ್ಲಿ ಅನುಚಿತವಾಗಿ ಪುನರ್ವಿನಿಯೋಗ ಮಾಡಿದ್ದು ಬಳಕೆಯಾಗದ ಅವಕಾಶಗಳಲ್ಲಿ ಅಥವಾ ಅವಕಾಶಕ್ಕಿಂತ ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

- 17 ಅನುದಾನಗಳಲ್ಲಿ ₹2,246.23 ಕೋಟಿಗಳನ್ನು ಹಣಕಾಸು ವರ್ಷದ ಕೊನೆಯ ಎರಡು ಕೆಲಸದ ದಿನಗಳಂದು ಅಧ್ಯರ್ಪಣೆ ಮಾಡಲಾಗಿತ್ತು; ಮತ್ತು

- ಕುಟುಂಬ ಪಿಂಚಣಿಯ ಅಧಿಕ ಪಾವತಿಯನ್ನು ಗಮನಿಸಲಾಯಿತು.

## 2.10 ಶಿಫಾರಸುಗಳು

- ಅವಕಾಶಗಳು ಬಳಕೆಯಾಗದೆ ಉಳಿಯುವ ಪ್ರಕರಣಗಳನ್ನು ತಪ್ಪಿಸಲು ಆಯವ್ಯಯ ಅಂದಾಜಿನ ನಿಯಂತ್ರಣವನ್ನು ಎಲ್ಲಾ ಇಲಾಖೆಗಳಲ್ಲೂ ಬಲಪಡಿಸಬೇಕಾಗಿದೆ.

- ರಾಜಸ್ವ ಅಧಿಕದಂತಹ ಆರ್ಥಿಕ ಸೂಚಕಗಳ ಮೇಲೆ ಪರಿಣಾಮ ಬೀರುವ ವೆಚ್ಚವನ್ನು ಕಡಿಮೆ ಹೇಳುವುದು/ಅಧಿಕವಾಗಿ ಹೇಳುವುದನ್ನು ತಪ್ಪಿಸಬೇಕು.

- ಆಯವ್ಯಯ ಬೇಡಿಕೆಗಳ ತೀವ್ರವಾದ ಪರಿಶೀಲನೆ, ವೆಚ್ಚಗಳ ಗತಿಯ ನಿಷ್ಕೃಷ್ಟ ನಿಗಾವಣೆ ಮತ್ತು ಕರ್ನಾಟಕ ಆಯವ್ಯಯ ಕೈಪಿಡಿಯ ಅಂಶಗಳ ಚಾಚೂ ತಪ್ಪದ ಪರಿಪಾಲನೆಗಳು, ವೆಚ್ಚಗಳು ಮಿತಿ ಮೀರುವ ಸಂಭವವನ್ನು ಕಡಿಮೆಗೊಳಿಸಲು ಅತ್ಯವಶ್ಯಕವಾಗಿವೆ. 2012–13ರಿಂದ ಅಧಿಕ ವೆಚ್ಚಗಳನ್ನು ಸಕ್ರಮಗೊಳಿಸಲು ಅಂತಹ ಪ್ರಕರಣಗಳನ್ನು ಸಾರ್ವಜನಿಕ ಲೆಕ್ಕ ಸಮಿತಿಯ ಮುಂದಿಡುವ ಪ್ರಯತ್ನಕ್ಕೆ ಆದ್ಯತೆ ನೀಡಬೇಕಾಗಿದೆ.

- ಅಧಿಕ/ಅನವಶ್ಯಕ/ಸಾಕಷ್ಟಿಲ್ಲದ ಪೂರಕ ಅವಕಾಶಗಳನ್ನು ತಪ್ಪಿಸಬೇಕಾಗಿದೆ.

- ಹೆಚ್ಚಿನ ದರದಲ್ಲಿ ಕುಟುಂಬ ಪಿಂಚಣಿ ಪಾವತಿಯ ಸ್ಥಗಿತ ದಿನಾಂಕವನ್ನು ಅನುಸರಿಸುವುದನ್ನು ಅನುಕೂಲಗೊಳಿಸಲು ತಪಾಸಣೆಗಳನ್ನು ಖಚಿತಗೊಳಿಸಿಕೊಳ್ಳಬೇಕು.

# ಅಧ್ಯಾಯ – III

# ಆರ್ಥಿಕ ನಿರೂಪಣೆ

# ಅಧ್ಯಾಯ 3
## 3 ಆರ್ಥಿಕ ನಿರೂಪಣೆ

ಹಣಕಾಸು ನಿಯಮಗಳ ಅನುಸರಣೆಯನ್ನು ಆಧರಿಸಿದ ಸ್ವಸ್ಥ ಆಂತರಿಕ ಆರ್ಥಿಕ ನಿರೂಪಣಾ ವ್ಯವಸ್ಥೆಯು ಉತ್ತಮ ಆಡಳಿತದ ಲಕ್ಷಣಗಳಲ್ಲಿ ಒಂದಾಗಿದೆ. ಈ ಅಧ್ಯಾಯವು ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರದ ಇಲಾಖೆಗಳ, ವಿವಿಧ ಹಣಕಾಸು ನಿಯಮಗಳ, ಕಾರ್ಯ ವಿಧಾನಗಳ ಮತ್ತು ನಿರ್ದೇಶನಗಳ ಅನುಸರಣೆಯ ಸ್ಥಿತಿಯನ್ನು ಮತ್ತು ಸ್ಥೂಲ ನೋಟವನ್ನು ನೀಡುತ್ತದೆ.

## 3.1 ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವಿಕೆ

ಇಲಾಖಾ ಅಧಿಕಾರಿಗಳು ನೀಡಿದ ಅನುದಾನಗಳಿಗೆ ಅನುದಾನಿತ ಸಂಸ್ಥೆಗಳಿಂದ ಬಳಕೆ ಪ್ರಮಾಣಪತ್ರಗಳನ್ನು ಪಡೆಯಬೇಕು ಹಾಗೂ ಪರಿಶೀಲನೆಯ ನಂತರ ಅವುಗಳನ್ನು ಮಂಜೂರಾದ ದಿನಾಂಕದಿಂದ 18 ತಿಂಗಳುಗಳೊಳಗೆ (ಬೇರೆ ರೀತಿ ನಿಗದಿಪಡಿಸಿದ್ದರ ಹೊರತಾಗಿ) ಮಹಾಲೇಖಾಪಾಲರಿಗೆ (ಲೆ ಮತ್ತು ಹ) ಕಳುಹಿಸಬೇಕೆಂದು ಆರ್ಥಿಕ ನಿಯಮಗಳು ವಿಧಿಸುತ್ತವೆ. ಆದರೆ, 2017–18ರವರೆಗೆ ನೀಡಿದ ಅನುದಾನಗಳಿಗೆ ಸಂಬಂಧಿಸಿದಂತೆ ಸಲ್ಲಿಸಬೇಕಿದ್ದ ₹2,585.26 ಕೋಟಿಗಳ ಒಟ್ಟು ಮೊತ್ತದ 303 ಬಳಕೆ ಪ್ರಮಾಣ ಪತ್ರಗಳು **ಅನುಬಂಧ 3.1**ರಲ್ಲಿ ವಿವರಿಸಿದಂತೆ ಬಾಕಿಯಿದ್ದವು. ವರ್ಷವಾರು ಬಾಕಿಯಿರುವ ಬಳಕೆ ಪ್ರಮಾಣಪತ್ರಗಳನ್ನು **ಕೋಷ್ಟಕ 3.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.1: ವರ್ಷವಾರು ಬಾಕಿಯಿರುವ ಬಳಕೆ ಪ್ರಮಾಣ ಪತ್ರಗಳು**

*(₹ ಕೋಟಿಗಳಲ್ಲಿ)*

| ವರ್ಷ | ಬಾಕಿ ಇರುವ ಸಂಖ್ಯೆ | ಮೊತ್ತ |
|---|---|---|
| 2015–16 ರವರೆಗೆ | 96 | 315.61 |
| 2016–17 | 61 | 358.90 |
| 2017–18* | 146 | 1,910.75 |
| ಮೊತ್ತ | **303** | **2,585.26** |

*ಆಕರ: ಹಣಕಾಸು ಲೆಕ್ಕಗಳು*

** ಮೇಲೆ ಸೂಚಿಸಿರುವ ವರ್ಷವು ಯಾವ ವರ್ಷದಲ್ಲಿ ಬಳಕೆ ಪ್ರಮಾಣ ಪತ್ರಗಳು ಬರಬೇಕಿದೆಯೋ ಆ ವರ್ಷಕ್ಕೆ ಸಂಬಂಧಿಸಿದೆ. ಅಂದರೆ, ವಾಸ್ತವವಾಗಿ ಹಣ ಪಡೆದ 18 ತಿಂಗಳ ನಂತರ.*

ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿರುವ ಹೆಚ್ಚು ಪಾಲು ಪ್ರಕರಣಗಳು ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗೆ (ಶೇಕಡ 64) ಮತ್ತು ನಗರಾಭಿವೃದ್ಧಿ ಇಲಾಖೆಗೆ (ಶೇಕಡ 34) ಸಂಬಂಧಿಸಿವೆ. ಬಳಕೆ ಪ್ರಮಾಣಪತ್ರಗಳ ಸಲ್ಲಿಸುವಿಕೆಯ ಬಾಕಿಯಿರುವುದು, ಇಲಾಖೆಯಿಂದ ಅನುದಾನಿಕರಿಗೆ ಬಿಡುಗಡೆಯಾದ ಅನುದಾನದ ಬಳಕೆಯ ನಿರ್ವಹಣೆಯ ಕೊರತೆಯನ್ನು ಸೂಚಿಸುತ್ತದೆ. ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದೆ ಇರುವುದು ಸಾರ್ವಜನಿಕ ಹಣದ ಮೇಲಿನ ಶಾಸಕಾಂಗದ ನಿಯಂತ್ರಣದ ಮೂಲ ಉದ್ದೇಶವನ್ನು ವಿಫಲಗೊಳಿಸುವುದಲ್ಲದೆ, ವಿವಿಧ ಯೋಜನೆ/ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದ ಮೊತ್ತಗಳ ಬಳಕೆಯಾಗದಿರುವಿಕೆ, ದುರ್ಬಳಕೆ ಅಥವಾ ಅನಧಿಕೃತ ಉದ್ದೇಶಗಳಿಗೆ ಬಳಕೆಯಾಗುವ ಸಂಭವವಿರುತ್ತದೆ.

ಸೆಳೆದ ಹಣಗಳಿಗೆ ಪ್ರತಿಯಾಗಿ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವುದು ನಿಯತಕಾಲಿಕವಾಗಿ ನಡೆಯುವ ಆಯವ್ಯಯ ನಿಯಂತ್ರಣದ ಭಾಗವಾಗಿರಬೇಕು.

## 3.2 ಸರ್ಕಾರದಿಂದ ಗಣನೀಯವಾಗಿ ಆರ್ಥಿಕ ಬೆಂಬಲ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವಿಕೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳು) ಅಧಿನಿಯಮ, 1971ರ 14 ಮತ್ತು 15ನೇ ಪರಿಚ್ಛೇದಗಳಡಿ, ಲೆಕ್ಕ ಪರಿಶೋಧನೆಗೆ ಒಳಪಡುವ ಸಂಸ್ಥೆಗಳನ್ನು ಗುರುತಿಸಲು ಅನುವಾಗುವಂತೆ, ಸರ್ಕಾರದ ಇಲಾಖಾ ಮುಖ್ಯಸ್ಥರುಗಳು ಪ್ರತಿ ವರ್ಷವೂ ₹25 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಆರ್ಥಿಕ ಸಹಾಯ ಪಡೆದಿರುವ ಸಂಸ್ಥೆಗಳ, ಸಹಾಯ ನೀಡಿದ ಉದ್ದೇಶ ಮತ್ತು ಒಟ್ಟು ವೆಚ್ಚದ ವಿವರಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಬೇಕಾಗಿರುತ್ತದೆ.

ಹದಿನಾಲ್ಕು ಇಲಾಖೆಗಳು ಎರಡರಿಂದ 20 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಗೆ ₹25 ಲಕ್ಷ ಅಥವಾ ಅದಕ್ಕಿಂತಲೂ ಹೆಚ್ಚಿನ ಅನುದಾನ ಪಡೆದಿರುವ 487 ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ವಿವರಗಳನ್ನು **ಅನುಬಂಧ 3.2**ರಲ್ಲಿ ನೀಡಲಾಗಿದೆ. ಅನುಬಂಧದಲ್ಲಿ ತೋರಿಸಿರುವಂತೆ, ಶಿಕ್ಷಣ ಇಲಾಖೆ ಪ್ರಮುಖ ಕರ್ತವ್ಯಲೋಪಿ ಇಲಾಖೆಯಾಗಿತ್ತು.

ಆರ್ಥಿಕ ಇಲಾಖೆಯು (ಡಿಸೆಂಬರ್ 2017) ಅಗತ್ಯ ಮಾಹಿತಿಯನ್ನು ನೇರವಾಗಿ ಮಹಾಲೇಖಾಪಾಲರಿಗೆ ಸಲ್ಲಿಸಬೇಕು ಎಂದು ಎಲ್ಲಾ ಆಡಳಿತ ಇಲಾಖೆಗಳ ಕಾರ್ಯದರ್ಶಿಗಳಿಗೆ ಸುತ್ತೋಲೆ ಸೂಚನೆಗಳನ್ನು ಹೊರಡಿಸಿತ್ತು. ಆದರೆ, ಅನುಸರಣೆಯಲ್ಲಿ ಯಾವುದೇ ಸುಧಾರಣೆ ಕಂಡುಬಂದಿಲ್ಲ.

## 3.3 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆಯ ಮತ್ತು ರಾಜ್ಯ ಶಾಸಕಾಂಗದ ಮುಂದೆ ಲೆಕ್ಕ ಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ

ರಾಜ್ಯ ಸರ್ಕಾರವು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಹಲವು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳು) ಅಧಿನಿಯಮ, 1971ರ 19 ಮತ್ತು 20ನೇ ಪರಿಚ್ಛೇದಗಳಡಿ ರಾಜ್ಯದಲ್ಲಿನ 11 ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ. ಈ ಸಂಸ್ಥೆಗಳ ವ್ಯವಹಾರಗಳು, ಕಾರ್ಯಚಟುವಟಿಕೆಗಳು ಮತ್ತು ಲೆಕ್ಕಗಳು ಕ್ರಮಬದ್ಧ ಲೆಕ್ಕ ಪರಿಶೋಧನೆ/ಅನುಸರಣೆ ಆಂತರಿಕ ನಿರ್ವಹಣೆ ಮತ್ತು ಆರ್ಥಿಕ ನಿಯಂತ್ರಣದ ಸಮೀಕ್ಷೆ, ವ್ಯವಸ್ಥೆ ಹಾಗೂ ಕಾರ್ಯವಿಧಾನಗಳ ಸಮೀಕ್ಷೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯನ್ನು ನಡೆಸಲಾಗುತ್ತದೆ.

ಒಂದು ಸ್ವಾಯತ್ತ ಸಂಸ್ಥೆಯ 2014–15ನೇ ಸಾಲಿನ, ಎರಡು ಸ್ವಾಯತ್ತ ಸಂಸ್ಥೆಗಳ 2015–16ನೇ ಸಾಲಿನ ಹಾಗೂ ಏಳು ಸ್ವಾಯುತ್ತ ಸಂಸ್ಥೆಗಳ 2016–17ನೇ ಸಾಲಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ವಿಧಾನಮಂಡಲದಲ್ಲಿ ಇನ್ನೂ ಮಂಡಿಸಬೇಕಾಗಿದೆ. ಒಂದು ಸ್ವಾಯತ್ತ ಸಂಸ್ಥೆಗೆ ಸಂಬಂಧಿಸಿದಂತೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು 2006–07ರಲ್ಲಿ ಅದರ ಸ್ಥಾಪನೆಯಾದಾಗಿನಿಂದ ಮಂಡಿಸಿರುವುದಿಲ್ಲ.

ಸಂಸ್ಥೆಗಳು, ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ವಹಿಸಿರುವಿಕೆ, ಸಲ್ಲಿಸಿರುವ ಲೆಕ್ಕಪತ್ರಗಳು, ಲೆಕ್ಕಪರಿಶೋಧನಾ ವರದಿಗಳ ಜಾರಿ ಮತ್ತು ರಾಜ್ಯವಿಧಾನಮಂಡಲದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು **ಅನುಬಂಧ 3.3**ರಲ್ಲಿ ನೀಡಲಾಗಿದೆ.

## 3.4 ಇಲಾಖಾ ವಾಣಿಜ್ಯ ಉದ್ದಿಮೆಗಳು

ಕೆಲವು ಸರ್ಕಾರಿ ಇಲಾಖೆಗಳ ಇಲಾಖಾ ಉದ್ದಿಮೆಗಳು ವಾಣಿಜ್ಯ ಮತ್ತು ಅರೆವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಡೆಸುತ್ತಿದ್ದು, ಈ ಉದ್ದಿಮೆಗಳು ಪ್ರತಿ ವರ್ಷವೂ, ಸರ್ಕಾರವು ಈ ಉದ್ದಿಮೆಗಳ ಕಾರ್ಯ ವೈಖರಿಯನ್ನು ಅಳೆಯಲು ಸಹಕಾರಿಯಾಗುವಂತೆ, ಹಣಕಾಸು ನಿರ್ವಹಣೆಯ ಕಾರ್ಯಫಲಗಳನ್ನು ತೋರಿಸುವಂತಹ ಪ್ರಪತ್ರ ಲೆಕ್ಕಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಬೇಕಾಗಿದೆ. ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ದಿಮೆಗಳ ಅಂತಿಮಗೊಳಿಸಿದ ಲೆಕ್ಕಗಳು ಈ ಉದ್ದಿಮೆಗಳ ಸಮಗ್ರ ಆರ್ಥಿಕ ಸ್ವಾಸ್ಥ್ಯವನ್ನು ಮತ್ತು ಅವುಗಳ ವ್ಯವಹಾರಗಳನ್ನು ನಿರ್ವಹಿಸುವಲ್ಲಿನ ಸಮರ್ಥತೆಯನ್ನು ಪ್ರತಿಬಿಂಬಿಸುತ್ತದೆ. ಸಕಾಲದಲ್ಲಿ ಲೆಕ್ಕಗಳನ್ನು

ಪೂರ್ಣಗೊಳಿಸದಿದ್ದಲ್ಲಿ ಸರ್ಕಾರದ ಹೂಡಿಕೆಯು ಲೆಕ್ಕಪರಿಶೋಧನೆಯ/ಶಾಸಕಾಂಗದ ಪರಿಶೀಲನೆಯಿಂದ ಹೊರಗೆ ಉಳಿಯುತ್ತವೆ. ತತ್ಪರಿಣಾಮವಾಗಿ ಇವುಗಳ ಹೊಣೆಗಾರಿಕೆಗಳನ್ನು ಖಚಿತಪಡಿಸಿಕೊಳ್ಳುವ ಮತ್ತು ದಕ್ಷತೆಯನ್ನು ಹೆಚ್ಚಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದಲ್ಲಿ, ಅವುಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ, ಇಂತಹ ವಿಳಂಬಗಳಿಂದ, ಸಂಭಾವ್ಯ ವಂಚನೆಯ ಅಪಾಯ ಮತ್ತು ಸಾರ್ವಜನಿಕ ಹಣದ ಸೋರುವಿಕೆಯ ಸಾಧ್ಯತೆ ಇರುತ್ತದೆ.

ಸರ್ಕಾರದ ಇಲಾಖಾ ಮುಖ್ಯಸ್ಥರು, ಈ ಉದ್ದಿಮೆಗಳು ತಮ್ಮ ಲೆಕ್ಕಗಳನ್ನು ನಿಗದಿತ ಸಮಯದಲ್ಲಿ ತಯಾರಿಸಿ ಪ್ರಧಾನ ಮಹಾಲೇಖಾಪಾಲರ ಪರಿಶೋಧನೆಗೆ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಮುಚ್ಚಿ ಹೋಗಿರುವ/ವರ್ಗವಾಗಿರುವ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿತವಾಗಿರುವ ಒಂಭತ್ತು ಉದ್ದಿಮೆಗಳಲ್ಲಿ ಎರಡು ಉದ್ದಿಮೆಗಳ ಪ್ರಪತ್ರ ಲೆಕ್ಕಗಳು 1969–70ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿ ಬಾಕಿ ಇರುವ ಸ್ಥಿತಿಯನ್ನು **ಅನುಬಂಧ 3.4**ರಲ್ಲಿ ನೀಡಲಾಗಿದೆ.

ಹಿಂದಿನ ಲೆಕ್ಕ ಪರಿಶೋಧನೆ ವರದಿಯಲ್ಲಿಯೂ (ರಾಜ್ಯ ಹಣಕಾಸು ವರದಿ 2015–16) ಗಮನಕ್ಕೆ ತರಲಾಗಿದ್ದ ಈ ವಿಷಯಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು (ಮಾರ್ಚ್ 2019) ಪ್ರಪತ್ರ ಲೆಕ್ಕಪತ್ರಗಳನ್ನು ಮಹಾಲೇಖಾಪಾಲರಿಗೆ ಸಲ್ಲಿಸುವ ವಿಷಯವಾಗಿ 18.08.2015ರಂದು ನಡೆದ ಸಭೆಯಲ್ಲಿ ಇಲಾಖಾ ವಾಣಿಜ್ಯ ಉದ್ಯಮಗಳ ಮಾನ್ಯತೆಯನ್ನು ಹಿಂತೆಗೆದುಕೊಳ್ಳದಿರುವುದರಿಂದ ಮಹಾಲೇಖಾಪಾಲರಿಗೆ ಪ್ರಪತ್ರ ಲೆಕ್ಕಪತ್ರಗಳನ್ನು ಸಲ್ಲಿಸುವುದನ್ನು ಮುಂದುವರೆಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿದೆ. ಘಟಕಗಳನ್ನು ಮುಚ್ಚಲು ಸಮಗ್ರ ಪ್ರಸ್ತಾವನೆಗಳನ್ನು ಕಳುಹಿಸಲು ಆಡಳಿತ ಇಲಾಖೆಗಳಿಗೆ ಸೂಚಿಸಲಾಗಿದೆ ಎಂದೂ ಸಹ ತಿಳಿಸಲಾಗಿದೆ.

## 3.5 ಉಗ್ರಾಣ ಮತ್ತು ದಾಸ್ತಾನು ಲೆಕ್ಕಪತ್ರಗಳು ಬಾರದಿರುವುದು

ವಿವಿಧ ಇಲಾಖೆಗಳ ಉಗ್ರಾಣ ಮತ್ತು ದಾಸ್ತಾನಿನ ಕ್ರೋಢೀಕೃತ ವಾರ್ಷಿಕ ಲೆಕ್ಕಪತ್ರಗಳು ಮರು ವರ್ಷದ ಜೂನ್ 15ರ ವೇಳೆಗೆ ಲೆಕ್ಕಪರಿಶೋಧನೆಗೆ ಸಲ್ಲಿಸಲ್ಪಡಬೇಕಾಗಿದೆ. ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ, ಜಲಸಂಪನ್ಮೂಲಗಳು ಮತ್ತು ಸಣ್ಣ ನೀರಾವರಿ ಇಲಾಖೆಗಳ ಅರ್ಧವಾರ್ಷಿಕ ಲೆಕ್ಕಗಳು 15ನೇ ಡಿಸೆಂಬರ್ ಮತ್ತು ಮರು ವರ್ಷದ 15ನೇ ಜೂನ್ ಒಳಗೆ ಸ್ವೀಕೃತವಾಗಬೇಕಾಗಿದೆ. ಉಗ್ರಾಣ ಮತ್ತು ದಾಸ್ತಾನಿನ ಲೆಕ್ಕಪತ್ರಗಳ ಸ್ವೀಕೃತಿಯಲ್ಲಿನ ವಿಳಂಬಗಳನ್ನು ಲೆಕ್ಕಪರಿಶೋಧನಾ ವರದಿಗಳಲ್ಲಿ ಸತತವಾಗಿ ವ್ಯಾಖ್ಯಾನಿಸಲಾಗುತ್ತಿದೆ.

ಹನ್ನೊಂದು ಇಲಾಖೆಗಳ 169 ಕಛೇರಿಗಳು ಸಲ್ಲಿಸಬೇಕಾದ ಉಗ್ರಾಣ ಮತ್ತು ದಾಸ್ತಾನು ಲೆಕ್ಕಗಳು ಬಾಕಿ ಉಳಿದಿದ್ದು ವಿವರಗಳನ್ನು **ಅನುಬಂಧ 3.5**ರಲ್ಲಿ ನೀಡಲಾಗಿದೆ.

## 3.6 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಕರ್ನಾಟಕ ಸರ್ಕಾರದ ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 36ರಲ್ಲಿ ವಿಧಿಸಿರುವಂತೆ, ನಿಯಂತ್ರಣಾಧಿಕಾರಿಗಳು ಮತ್ತು ವಿತರಣಾಧಿಕಾರಿಗಳು ಸೇವಾ ಲೆಕ್ಕಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಸೆಳೆಯಬಹುದಾಗಿದ್ದು, ಅದಕ್ಕೆ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು (ಅಂತಿಮ ವೆಚ್ಚಕ್ಕೆ ಸಮರ್ಥನೆಯಾಗಿ ವೋಚರುಗಳು) ಸಂಕ್ಷಿಪ್ತ ಸಾದಿಲ್ವಾರು ಬಿಲ್ಲು ಸೆಳೆದ ತಿಂಗಳಿನ ಮುಂದಿನ ತಿಂಗಳ 15ನೇ ದಿನಾಂಕಕ್ಕಿಂತ ಮೊದಲು ಖಜಾನೆಗಳ ಮೂಲಕ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಕಳುಹಿಸಬೇಕಾಗಿದೆ. ತಕ್ಷಣದ ವಿತರಣೆಗೆ ಅಗತ್ಯವಿದ್ದ ಹೊರತು ಖಜಾನೆಯಿಂದ ಹಣವನ್ನು ಸೆಳೆಯದಿರುವುದನ್ನು ಸಹ ನಿಯಂತ್ರಣಾಧಿಕಾರಿಗಳು ಖಚಿತಪಡಿಸಿ ಕೊಳ್ಳಬೇಕಾಗಿದೆ. ಮಾರ್ಚ್ 2018ರ ಅಂತ್ಯಕ್ಕೆ ₹84 ಕೋಟಿಗಳ ಮೊತ್ತದ 3,276 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು, **ಕೋಷ್ಟಕ 3.2 ಮತ್ತು ಕೋಷ್ಟಕ 3.3**ರಲ್ಲಿ ವಿವರಿಸಿರುವಂತೆ, ಸವಿವರ ಬಿಲ್ಲುಗಳು ಸಲ್ಲಿಕೆಯಾಗದೆ ಬಾಕಿ ಉಳಿದಿವೆ.

**ಕೋಷ್ಟಕ 3.2: ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು**

*(₹ ಕೋಟಿಗಳಲ್ಲಿ)*

| | ಸಂಖ್ಯೆ | ಮೊತ್ತ |
|---|---|---|
| 01.04.2017ರಲ್ಲಿದ್ದಂತೆ ಪ್ರಾರಂಭಿಕ ಶಿಲ್ಕು | 3,272 | 84.81 |
| ವರ್ಷದ ಅವಧಿಯಲ್ಲಿ ಸೆಳೆದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು | 3,094 | 90.03 |
| ಒಟ್ಟು | 6,366 | 174.84 |
| ಬಾಕಿಯಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಪ್ರತಿಯಾಗಿ ಸಲ್ಲಿಸಿರುವ ಎನ್‌ಡಿಸಿ ಬಿಲ್ಲುಗಳು | 3,090 | 90.84 |
| 31.03.2018 ರಲ್ಲಿದ್ದಂತೆ ಬಾಕಿಯಿರುವ ಎಸಿ ಬಿಲ್ಲುಗಳ ಅಂತಿಮ ಶಿಲ್ಕು | 3,276 | 84.00 |

**ಕೋಷ್ಟಕ 3.3: ವರ್ಷಾವಾರು ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು**

*(₹ ಕೋಟಿಗಳಲ್ಲಿ)*

| ವರ್ಷ | ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆ | ಮೊತ್ತ |
|---|---|---|
| 2015–16ರವರೆಗೆ | 1,437 | 37.73 |
| 2016–17 | 759 | 18.48 |
| 2017–18* | 1,080 | 27.79 |
| **ಒಟ್ಟು** | **3,276** | **84.00** |

**ಮಾರ್ಚ್ 2018ರ ಅವಧಿಯಲ್ಲಿ ಸೆಳೆದ ಬಿಲ್ಲುಗಳನ್ನು ಹೊರತುಪಡಿಸಿ* *ಆಕರ: ಹಣಕಾಸು ಲೆಕ್ಕಗಳು*

2018ರ ಮಾರ್ಚ್ ತಿಂಗಳಲ್ಲಿದ್ದಂತೆ ₹39.94 ಕೋಟಿಗಳ ಮೊತ್ತದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಸೆಳೆಯಲಾಗಿದೆ, ಅದರಲ್ಲಿ ₹1.94 ಕೋಟಿಯನ್ನು ಆರ್ಥಿಕ ವರ್ಷದ ಕೊನೆಯ ದಿನದಂದು ಸೆಳೆಯಲಾಗಿತ್ತು.

ಬಾಕಿ ಇರುವ ಸವಿವರ ಸಾದಿಲ್ವಾರು ಬಿಲ್ಲುಗಳಲ್ಲಿ ಬಹುಪಾಲು ಪೊಲೀಸ್–ಪ್ರಧಾನ ಶೀರ್ಷಿಕೆ 2055 (₹38.47 ಕೋಟಿ–ಶೇಕಡ 46), ಚುನಾವಣೆಗಳು–ಪ್ರಧಾನ ಶೀರ್ಷಿಕೆ 2015 (₹5.04 ಕೋಟಿ–ಶೇಕಡ ಆರು), ಸಾಮಾನ್ಯ ಶಿಕ್ಷಣ–ಪ್ರಧಾನ ಶೀರ್ಷಿಕೆ 2202 (₹4.20 ಕೋಟಿ–ಶೇಕಡ ಐದು), ಇವುಗಳಿಗೆ ಸೇರಿವೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೇಲೆ ಸೆಳೆದ ಮೊತ್ತವನ್ನು ಸಂಚಿತ ನಿಧಿಯಲ್ಲಿನ ಆಯಾ ಸೇವಾ ಪ್ರಧಾನ ಶೀರ್ಷಿಕೆಯಡಿ ಖರ್ಚು ಹಾಕಲಾಗುತ್ತದೆ. ನಿಗದಿತ ಸಮಯದೊಳಗೆ ಈ ಲೆಕ್ಕವನ್ನು ಇತ್ಯರ್ಥ ಮಾಡದಿದ್ದಲ್ಲಿ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗುತ್ತದೆ. ಇದು ಸರ್ಕಾರದ ವಿತ್ತೀಯ ಸೂಚಕಗಳ (ರಾಜಸ್ವ ಹೆಚ್ಚಳ/ವಿತ್ತೀಯ ಕೊರತೆ) ಮೇಲೆ ಪ್ರಭಾವ ಬೀರುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ, ನಿಗದಿತ ಸಮಯದೊಳಗೆ ಲೆಕ್ಕಗಳನ್ನು ತೀರುವಳಿ ಮಾಡಲು, ಇಲ್ಲದಿದ್ದಲ್ಲಿ ಬಟವಾಡೆ ಅಧಿಕಾರಿಗಳ ಸಂಬಳವನ್ನು ನಿಲ್ಲಿಸಲು ಸೂಚನೆಗಳನ್ನು ನೀಡಿದೆ (ಆಗಸ್ಟ್ 2012). ಆದಾಗ್ಯೂ, ಗಮನಾರ್ಹ ಸಂಖ್ಯೆಯ ಬಿಲ್ಲುಗಳು ಬಾಕಿಯಿದ್ದ ಬಟವಾಡೆ ಅಧಿಕಾರಿಗಳಿಗೆ ಸಂಬಳ ಸೆಳೆಯುವ ಪರಿಪಾಠವು ಮುಂದುವರೆದಿದ್ದು, ಆರ್ಥಿಕ ಇಲಾಖೆಯ ಸೂಚನೆಯ ಅನುಸರಣೆಯಲ್ಲಿರುವ ಕೊರತೆಯನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಐದನೆಯ ವರದಿಯಲ್ಲಿ (ಜುಲೈ 2015) ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸದ ಬಟವಾಡೆ ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆದ ಮೊತ್ತಗಳ ಕ್ಲೈಮ್‌ಗಳಿಗೆ ಬೆಂಬಲವಾಗಿ ವೋಚರುಗಳನ್ನು ಸಾದಿಲ್ವಾರು ವೆಚ್ಚ ಕೈಪಿಡಿಯಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಸಲ್ಲಿಸಬೇಕು.

## 3.7 ವೈಯಕ್ತಿಕ ಠೇವಣಿ ಲೆಕ್ಕಗಳು

ಕರ್ನಾಟಕ ಆರ್ಥಿಕ ಸಂಹಿತೆಯು, ವಹಿವಾಟುಗಳ ಲೆಕ್ಕಾಚಾರಕ್ಕೆ ರೂಢಿಯಲ್ಲಿನ ವಿಧಾನವು ಸೂಕ್ತವಲ್ಲವೆಂದು ಕಂಡು ಬಂದ ಪ್ರಸಂಗಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ (ಪಿಡಿ) ಲೆಕ್ಕಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸಿದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕಿ ಪ್ರಾರಂಭಿಸಿದ ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಆರ್ಥಿಕ ವರ್ಷಾಂತ್ಯದಲ್ಲಿ ಮುಕ್ತಾಯಗೊಳಿಸಬೇಕಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳ ಆಡಳಿತಾಧಿಕಾರಿಗಳು ಸಂಚಿತನಿಧಿಗೆ ವರ್ಗಾಯಿಸಬೇಕಾದ ಮೊತ್ತಗಳನ್ನು ಖಜಾನಾಧಿಕಾರಿಗೆ ತಿಳಿಸಬೇಕಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಚಾಲ್ತಿಯ ಅವಧಿ ಮುಗಿದ ನಂತರವೂ ಮುಂದುವರೆಸಬೇಕಾದ ಸಂದರ್ಭದಲ್ಲಿ ಆಡಳಿತಾಧಿಕಾರಿಗಳು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗಿದೆ. ಕಾಲಕಾಲಕ್ಕೆ ವೈಯಕ್ತಿಕ ಲೆಕ್ಕಗಳನ್ನು ಖಜಾನೆಯ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡುವುದು ಆಯಾ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

### 3.7.1 ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಇಟ್ಟಿರುವ ಮೊತ್ತಗಳು

2013–14ರಿಂದ 2017–18ರ ಅವಧಿಯ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು **ಕೋಷ್ಟಕ 3.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.4: ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿನ ಮೊತ್ತಗಳು**

*(₹ ಕೋಟಿಗಳಲ್ಲಿ)*

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ಅಂತಿಮ ಶಿಲ್ಕು |
|---|---|---|---|---|
| 2013–14 | 2,086.18 | 3,782.85 | 3,571.93 | 2,297.10 |
| 2014–15 | 2,297.10 | 3,915.81 | 3,784.62 | 2,428.29 |
| 2015–16 | 2,428.29 | 6,368.39 | 6,061.07 | 2,735.61 |
| 2016–17 | 2,735.61 | 5,516.51 | 5,310.01 | 2,942.12 |
| 2017–18 | 2,942.12 | 4,194.46 | 4,395.06 | 2,741.52 |

*ಆಕರ: ಹಣಕಾಸು ಲೆಕ್ಕಗಳು*

2017–18ರ ಸಾಲಿನಲ್ಲಿ ವೈಯಕ್ತಿಕ ಠೇವಣಿ ಖಾತೆಗಳಿಗೆ ಜಮೆ ಮಾಡಿದ ₹4,194.46 ಕೋಟಿಗಳಲ್ಲಿ ₹864.21 ಕೋಟಿಗಳನ್ನು ಮಾರ್ಚ್ 2018ರಲ್ಲಿ ವೈಯಕ್ತಿಕ ಠೇವಣಿ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ. ಅಲ್ಲದೆ, ಮೇಲಿನ ಕೋಷ್ಟಕದಿಂದ ಗಮನಿಸಿದಂತೆ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳು 2016–17ರವರೆಗೆ ಏರಿಕೆ ಪ್ರವೃತ್ತಿಯನ್ನು ತೋರಿಸಿ ನಂತರ 2017–18ರ ಶಿಲ್ಕಿನಲ್ಲಿ ಸ್ವಲ್ಪ ಇಳಿಕೆಯಿದ್ದಿತು.

ಅಧಿಕ ಶಿಲ್ಕುಗಳಿರುವ ಕೆಲವು ವೈಯಕ್ತಿಕ ಠೇವಣಿ ಲೆಕ್ಕಗಳ ನಿವ್ವಳ ಅಂತಿಮ ಶಿಲ್ಕುಗಳನ್ನು **ಕೋಷ್ಟಕ 3.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.5: ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕು**

*(₹ ಕೋಟಿಗಳಲ್ಲಿ)*

| ಕ್ರಮ ಸಂಖ್ಯೆ | ಆಡಳಿತಾಧಿಕಾರಿಗಳು | ಮೊತ್ತ |
|---|---|---|
| 1 | ವೈಯಕ್ತಿಕ ಠೇವಣಿಗಳು – ಸಾಮಾನ್ಯ | 338.16 |
| 2 | ಜಿಲ್ಲಾಧಿಕಾರಿಗಳ ಠೇವಣಿ ಖಾತೆಗಳು | 6,158.66 |
| 3 | ನಿರ್ದೇಶಕರು (ಅಲ್ಪಸಂಖ್ಯಾತರ ನಿರ್ದೇಶನಾಲಯ) ವೈಯಕ್ತಿಕ ಠೇವಣಿ ಲೆಕ್ಕಗಳು, | 137.47 |

*ಆಕರ: ಋಣ, ಠೇವಣಿ ಮತ್ತು ಇರಸಾಲು ಲೆಡ್ಜರು*

ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಗಣನೀಯ ಶಿಲ್ಕನ್ನು ಉಳಿಸಿರುವುದು ಹಣ ದುರ್ಬಳಕೆ ಮತ್ತು ಅವ್ಯವಹಾರಗಳು ಸಂಭವಿಸುವ ಅಪಾಯವನ್ನು ಹೊಂದಿರುತ್ತದೆ.

ತಮ್ಮ ಉಪಯುಕ್ತತೆಯನ್ನು ಮೀರಿದ ಹಣದ ಶಿಲ್ಕುಗಳನ್ನು ವಾಪಸ್ಸು ಮಾಡಲು/ಲೆಕ್ಕಗಳನ್ನು ಸ್ವಚ್ಛಗೊಳಿಸಲು ಕರ್ನಾಟಕ ಹಣಕಾಸು ಸಂಹಿತೆಯ ನಿಬಂಧನೆಗಳ ಅನ್ವಯ ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯವಿದೆ.

### 3.7.2 ಬಳಕೆ ಮಾಡದಿದ್ದ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡದಿರುವುದು–₹3.05 ಕೋಟಿ

ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರ ವೈಯಕ್ತಿಕ ಠೇವಣಿ ಖಾತೆಯ ಪರಿಶೀಲನೆಯಲ್ಲಿ ಕಾರ್ಯಕಾರಿಯಲ್ಲದ ಯೋಜನೆಗಳ ಈ ಕೆಳಗಿನ ಸಂಬಂಧವಾಗಿ **ಕೋಷ್ಟಕ 3.6**ರಲ್ಲಿ ವಿವರಿಸಿರುವಂತೆ ₹3.05 ಕೋಟಿಯು ಬಳಕೆಯಾಗದೆ ಉಳಿದಿರುವುದನ್ನು ಗಮನಿಸಲಾಯಿತು.

**ಕೋಷ್ಟಕ 3.6: ಕಾರ್ಯಕಾರಿಯಲ್ಲದ ಯೋಜನೆಗಳ ಶಿಲ್ಕುಗಳು**

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಮೊತ್ತ (₹ಗಳಲ್ಲಿ) |
|---|---|---|
| 1 | ಕಡಿಮೆ ವೆಚ್ಚದ ನೈರ್ಮಲ್ಯಕ್ಕಾಗಿ ಸಮಗ್ರ ಕಾರ್ಯಕ್ರಮ<br>(1) ಫಲಾನುಭವಿ ವಂತಿಗೆ ಮೊತ್ತ<br>(2) ಅನುದಾನ ಪಾವತಿ | <br>27,348<br>24,87,792 |
| 2 | ಸಣ್ಣ ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ (ಠೇವಣಿ ಮಾಡಿದ ಅನುದಾನದಲ್ಲಿ ಶ್ರೀರಾಮಪುರಂ ಸಹಕಾರ ಬ್ಯಾಂಕ್ ಮರುಪಾವತಿ ಮೊತ್ತ) | 2,80,15,000 |
| ಒಟ್ಟು | | **3,05,30,140** |

ಬಳಕೆಯಾಗದೆ ಉಳಿದ ಮೊತ್ತವನ್ನು ಇದುವರೆಗೂ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿರುವುದಿಲ್ಲ ಹಾಗೂ ಇದು ಕರ್ನಾಟಕ ಆರ್ಥಿಕ ಸಂಹಿತೆಯ ಪರಿಚ್ಛೇದ 286–ಎ ಯನ್ನು ಉಲ್ಲಂಘನೆ ಮಾಡಿದಂತಾಗಿತ್ತು. ಕ್ರಮಸಂಖ್ಯೆ–1ರಲ್ಲಿನ ಪ್ರಕರಣದ ಸಂಬಂಧವಾಗಿ ಬಳಕೆ ಮಾಡದಿದ್ದ ₹25.15 ಲಕ್ಷವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲಾಗುವುದು ಹಾಗೂ ಕ್ರಮ ಸಂಖ್ಯೆ–2ರ ಪ್ರಕರಣದ ಸಂಬಂಧವಾಗಿ ನಗರ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣವೊಂದು ಬಾಕಿಯಿದ್ದು ಪ್ರಕರಣವು ಇತ್ಯರ್ಥವಾದ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಉತ್ತರಿಸಲಾಗಿದೆ (ಜನವರಿ 2019).

### 3.7.3 ವೈಯಕ್ತಿಕ ಠೇವಣಿ ಲೆಕ್ಕಗಳ ಹೊಂದಾಣಿಕೆ

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286 ಅನ್ವಯ ವೈಯಕ್ತಿಕ ಠೇವಣಿ ಖಾತೆಗಳ ಆಡಳಿತಾಧಿಕಾರಿಗಳು ತಮ್ಮ ನಗದು ಪುಸ್ತಕದ ಶಿಲ್ಕುಗಳನ್ನು ಖಜಾನೆ ದಾಖಲೆಗಳಲ್ಲಿ ತೋರಿಸಿರುವ ಮಾಸಿಕ ಲೆಕ್ಕದೊಂದಿಗೆ ಮುಂದಿನ ತಿಂಗಳ 5ನೇ ತಾರೀಖಿನಂದು ಹೊಂದಾಣಿಕೆ ಮಾಡುವ ಅಗತ್ಯವಿದೆ. ಆಡಳಿತಾಧಿಕಾರಿಗಳು ಖಜಾನೆಗಳೊಂದಿಗೆ ಹೊಂದಾಣಿಕೆ ಮಾಡಿರುವ ಬಗ್ಗೆ ಮಾಹಿತಿಯು ಲಭ್ಯವಿರಲಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286ಎ ಪ್ರಕಾರ ಮೂರು ವರ್ಷಗಳಿಗೂ ಮೇಲ್ಪಟ್ಟ ಅವಧಿಯವರೆಗೆ ನಿಷ್ಕ್ರಿಯವಾಗಿರುವ ಎಲ್ಲ ವೈಯಕ್ತಿಕ ಠೇವಣಿ ಖಾತೆಗಳನ್ನು ರಾಜ್ಯ ಸರ್ಕಾರವು ಮುಕ್ತಾಯ ಗೊಳಿಸಬೇಕಾಗಿರುತ್ತದೆ. 2018ರ ಹಣಕಾಸು ಲೆಕ್ಕಗಳ ಟಿಪ್ಪಣಿಗಳಲ್ಲಿ ಸೂಚಿಸಿರುವಂತೆ 70 ವೈಯಕ್ತಿಕ ಠೇವಣಿ ಖಾತೆಗಳಲ್ಲಿ 22 ವೈಯಕ್ತಿಕ ಠೇವಣಿ ಖಾತೆಗಳು (11 ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹4.75 ಕೋಟಿ ಧನಾತ್ಮಕ ಶಿಲ್ಕು ಮತ್ತು ಒಂಬತ್ತು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹1.27 ಕೋಟಿ ಋಣಾತ್ಮಕ ಶಿಲ್ಕು ಹಾಗೂ ಎರಡು ವೈಯಕ್ತಿಕ ಠೇವಣಿ ಖಾತೆಗಳ ಶಿಲ್ಕು ಶೂನ್ಯ) ನಿಷ್ಕ್ರಿಯವಾಗಿರುತ್ತವೆ (**ಅನುಬಂಧ 3.6**). ಆಡಳಿತಾಧಿಕಾರಿಗಳು ವಹಿವಾಟುಗಳನ್ನು ಅಂತಿಮಗೊಳಿಸಿ ಸರ್ಕಾರದ ಸಂಚಿತ ನಿಧಿಗೆ ಜಮಾ ಮಾಡುವ ಪ್ರಕ್ರಿಯೆಗೂ ಮೊದಲು ಶಿಲ್ಕನ್ನು ವಿಶ್ಲೇಷಿಸಿ ಲೆಕ್ಕ ಕಛೇರಿಯ ಶಿಲ್ಕಿನೊಂದಿಗೆ ಹೊಂದಾಣಿಕೆ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗಿದೆ.

## 3.8 ಸ್ವೀಕೃತಿಗಳ ಮತ್ತು ವೆಚ್ಚಗಳ ಹೊಂದಾಣಿಕೆ

ವೆಚ್ಚದ ಮೇಲಿನ ಪರಿಣಾಮಕಾರಿ ಆಯವ್ಯಯ ನಿಯಂತ್ರಣವನ್ನು ಸಾಧಿಸಲು ಮತ್ತು ಲೆಕ್ಕಪತ್ರಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಪುಸ್ತಕಗಳಲ್ಲಿನ ವೆಚ್ಚ ಮತ್ತು ಸ್ವೀಕೃತಿಗಳ ಅಂಕಿಗಳನ್ನು ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುಗಳು) ಅವರು ಲೆಕ್ಕ ಮಾಡಿರುವ ಅಂಕಿಗಳೊಂದಿಗೆ ಪ್ರತಿ ತಿಂಗಳೂ ಹೊಂದಾಣಿಕೆ ಮಾಡಬೇಕಾಗಿರುತ್ತದೆ. ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ₹1,45,344.52 ಕೋಟಿಗಳ ಮೊತ್ತದ (₹1,47,003.35 ಕೋಟಿಗಳ ಒಟ್ಟು ಸ್ವೀಕೃತಿಯ ಶೇಕಡ 98.87ರಷ್ಟು) ಹೊಂದಾಣಿಕೆಯು ಪೂರ್ಣಗೊಂಡಿದೆ. ವೆಚ್ಚಕ್ಕೆ ಸಂಬಂಧಿಸಿದಂತೆ ₹1,38,610.22

ಕೋಟಿಗಳ ಮೊತ್ತದ (ಒಟ್ಟು ವೆಚ್ಚ ₹1,73,149.09 ಕೋಟಿಗಳ ಶೇಕಡ 80ರಷ್ಟು) ಹೊಂದಾಣಿಕೆ ಪೂರ್ಣಗೊಂಡಿತ್ತು. ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದ ಶೀರ್ಷಿಕೆಗಳಡಿಯ ಸ್ವೀಕೃತಿಗಳು (₹136.93 ಕೋಟಿ) ಮತ್ತು ವಿತರಣೆಗಳಿಗೆ (₹5,092.22 ಕೋಟಿ) ಸಂಬಂಧಿಸಿದಂತೆ ಯಾವುದೇ ಹೊಂದಾಣಿಕೆ ನಡೆದಿಲ್ಲ. ಸಾಲ ಮತ್ತು ಮುಂಗಡಗಳ ಅಡಿಯ ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆಗೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ 5ನೇ ವರದಿಯಲ್ಲಿ (ಜುಲೈ 2015) ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆಗೆ ಈಗಾಗಲೇ ಜಾರಿಗೊಳಿಸಿರುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕೆಂದು ಸರ್ಕಾರಕ್ಕೆ ಸೂಚಿಸಿದೆ.

## 3.9 ಲೆಕ್ಕಪತ್ರಗಳ ಮೇಲಿನ ವ್ಯಾಖ್ಯಾನಗಳು

### 3.9.1 ಸರ್ಕಾರದ ಲೆಕ್ಕಗಳಿಗೆ ಪರಿಹಾರದ ಮೊತ್ತವನ್ನು ಜಮೆ ಮಾಡದಿರುವುದು

ಕರ್ನಾಟಕ ಆರ್ಥಿಕ ಸಂಹಿತೆಯ ಪರಿಚ್ಛೇದ 4 ರಲ್ಲಿ ವಿಧಿಸಿದಂತೆ ಸರ್ಕಾರಿ ನೌಕರನು ತನ್ನ ಅಧಿಕಾರದ ಅರ್ಹತೆಯಲ್ಲಿ ಸ್ವೀಕರಿಸಿದ ಎಲ್ಲಾ ಹಣವನ್ನು ಸರ್ಕಾರಿ ಖಜಾನೆಗೆ ಎರಡು ದಿನಗಳೊಳಗೆ ಪೂರ್ಣವಾಗಿ ಪಾವತಿ ಮಾಡಬೇಕು, ಅದನ್ನು ಸೂಕ್ತ ಲೆಕ್ಕಕ್ಕೆ ಜಮೆ ಮಾಡಬೇಕು ಮತ್ತು ಅದನ್ನು ಸಾಮಾನ್ಯ ಖಜಾನೆ ಶಿಲ್ಕಿನ ಭಾಗವಾಗಿಸಬೇಕು.

#### (1) ಕರ್ನಾಟಕ ಪಠ್ಯಪುಸ್ತಕ ಸೊಸೈಟಿ, ಶಿಕ್ಷಣ ಇಲಾಖೆ

ವಿಶೇಷ ಭೂಸ್ವಾಧೀನ ಅಧಿಕಾರಿಗಳು (ಎಸ್‌ಎಲ್‌ಎಓ) ಮತ್ತು ಸಕ್ಷಮ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ಇವರು ಬೊಮ್ಮಸಂದ್ರ–ಹೊಸೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ.7ರಲ್ಲಿ ಎತ್ತರದ ಹೆದ್ದಾರಿಯ ನಿರ್ಮಾಣ ಮತ್ತು ಅಗಲೀಕರಣಕ್ಕೆ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂಬರ್ 54/2ಬಿ ಮತ್ತು 54/3ರಲ್ಲಿ 4,356 ಚದರ ಅಡಿಯ ಸರ್ಕಾರಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದ್ದು ಜಮೀನಿನ ಹಕ್ಕುಪತ್ರವು ಶಿಕ್ಷಣ ಇಲಾಖೆಗೆ ಸೇರಿತ್ತು. ಎಸ್‌ಎಲ್‌ಎಓರವರು ಭೂಸ್ವಾಧೀನ ಪರಿಹಾರವನ್ನು ₹48.17 ಲಕ್ಷವೆಂದು ನಿರ್ಧರಿಸಿ, ₹5.46 ಲಕ್ಷವನ್ನು ಆದಾಯ ತೆರಿಗೆಯಾಗಿ ಕಡಿತ ಮಾಡಿ ₹42.71 ಲಕ್ಷವನ್ನು 06.10.2008ರಂದು ಸಹಾಯಕ ನಿರ್ದೇಶಕರು, ವಿಭಾಗೀಯ ಪಠ್ಯಪುಸ್ತಕ ಡಿಪೋ, ಬೆಂಗಳೂರು ಇವರಿಗೆ ಪಾವತಿ ಮಾಡಿದರು. ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯ (ಕೆಟಿಬಿಎಸ್) ಕಾರ್ಯನಿರ್ವಾಹಕ ಸಮಿತಿಯ ದಿನಾಂಕ 02.03.2009ರ ನಿರ್ಣಯದ ಆಧಾರದ ಮೇಲೆ ₹42.71 ಲಕ್ಷವನ್ನು ಸೊಸೈಟಿಯು ರಾಷ್ಟ್ರೀಕೃತ ಬ್ಯಾಂಕ್‌ವೊಂದರಲ್ಲಿ ಇದುವರೆಗೆ ನಿಶ್ಚಿತ ಠೇವಣಿಯಲ್ಲಿ ಇಟ್ಟಿದೆ. ಮೇ 2019ರಲ್ಲಿದ್ದಂತೆ ಈ ಮೊತ್ತದ ಅವಧಿ ಮುಕ್ತಾಯ ಮೌಲ್ಯವು ₹82.85 ಲಕ್ಷಗಳಾಗುತ್ತದೆ.

ಅಲ್ಲದೆ, ನಿಶ್ಚಿತ ಠೇವಣಿ ಇಡುವ ವೇಳೆಯಲ್ಲಿ ಜನವರಿ 2008ರಿಂದ ಏಪ್ರಿಲ್ 2010ರವರೆಗಿನ ₹42.71 ಲಕ್ಷದ ಮೇಲಿನ ಬಡ್ಡಿಯಾದ ₹1.92 ಲಕ್ಷವನ್ನು ಪರಿಗಣಿಸಿರಲಿಲ್ಲ. ಬದಲಿಗೆ, ಅದನ್ನು ನಿರ್ವಾಹಕ ನಿರ್ದೇಶಕರು, ಕೆಟಿಬಿಎಸ್ ಅವರ ದಿನಾಂಕ 25 ಮಾರ್ಚ್ 2010ರ ಪತ್ರದಲ್ಲಿನ ಸೂಚನೆಗಳ ಮೇರೆಗೆ ನಿರ್ವಾಹಕ ನಿರ್ದೇಶಕರು, ಕೆಟಿಬಿಎಸ್ ಬೆಂಗಳೂರು ಇವರ ಖಾತೆಗೆ ಜಮೆ ಮಾಡಲಾಗಿತ್ತು (ಏಪ್ರಿಲ್ 2011). ಹೀಗೆ, ಭೂಸ್ವಾಧೀನಕ್ಕೆ ಸಂಬಂಧಿಸಿ ಸ್ವೀಕರಿಸಿದ ಪರಿಹಾರ ಮತ್ತು ಅದರ ಮೇಲಿನ ಬಡ್ಡಿಯನ್ನು ಸೊಸೈಟಿಯು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡದೆ ತನ್ನ ಬಳಿಯೇ ಉಳಿಸಿಕೊಂಡಿತ್ತು.

ಇದನ್ನು ಜುಲೈ 2017ರಲ್ಲಿ ಇಲಾಖೆಯ ಗಮನಕ್ಕೆ ತರಲಾಯಿತು. ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಒಪ್ಪಿಕೊಂಡು (ಡಿಸೆಂಬರ್ 2018) ಬಡ್ಡಿಯೊಂದಿಗೆ ಪರಿಹಾರದ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆಂದು ಸೊಸೈಟಿಯು ತಿಳಿಸಿದೆ. ಅಲ್ಲದೆ, ₹80.49 ಲಕ್ಷವನ್ನು (ಅಸಲು ₹42.72 ಲಕ್ಷ + ಬಡ್ಡಿ ₹37.77 ಲಕ್ಷ) ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲಾಗಿದೆ ಎಂದೂ ತಿಳಿಸಿದೆ (ಮಾರ್ಚ್ 2019).

#### (2) ಬೆಂಗಳೂರು ವೈದ್ಯಕೀಯ ಕಾಲೇಜ್ ಮತ್ತು ಸಂಶೋಧನಾ ಸಂಸ್ಥೆ

ಬೆಂಗಳೂರು ವೈದ್ಯಕೀಯ ಕಾಲೇಜ್ ಮತ್ತು ಸಂಶೋಧನಾ ಸಂಸ್ಥೆಯ ಉನ್ನತಾಧಿಕಾರ ಸಮಿತಿಯು ದಿನಾಂಕ 18 ಜೂನ್ 2011ರಂದು ನಡೆದ ತನ್ನ ಸಭೆಯಲ್ಲಿ ಮೆಟ್ರೋ ನಿರ್ಮಾಣ ಕಾಮಗಾರಿಗಾಗಿ ಆಸ್ಪತ್ರೆಯು ಮೀಸಲಿಟ್ಟಿದ್ದ ವಾಣಿವಿಲಾಸ ಆಸ್ಪತ್ರೆಯ ಆವರಣದಲ್ಲಿ ₹13 ಕೋಟಿ ವೆಚ್ಚದಲ್ಲಿ ಮೆಟ್ರೋ

ಬ್ಲಾಕ್/ವಾರ್ಡ್‌ನ ನಿರ್ಮಾಣವನ್ನು ಅನುಮೋದಿಸಿತು. ಅದರಂತೆ ಆಸ್ಪತ್ರೆಯ ಆವರಣದಲ್ಲಿರುವ ಸುಮಾರು 11,970 ಚದರ ಮೀಟರ್‌ಗಳಷ್ಟು ಭೂಮಿಯನ್ನು ಹಸ್ತಾಂತರಿಸಲು ಬೆಂಗಳೂರು ವೈದ್ಯಕೀಯ ಕಾಲೇಜ್ ಮತ್ತು ಸಂಶೋಧನಾ ಸಂಸ್ಥೆ (ಬಿಎಮ್‌ಸಿಆರ್‌ಐ) ಹಾಗೂ ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಶನ್ ಲಿಮಿಟೆಡ್ (ಬಿಎಮ್‌ಆರ್‌ಸಿಎಲ್) ನಡುವೆ ಪರಸ್ಪರ ಒಪ್ಪಿಗೆಯ ಜ್ಞಾಪನಾ ಪತ್ರವೊಂದನ್ನು ಹೊರಡಿಸಲಾಯಿತು. ಈ ಪ್ರದೇಶದಲ್ಲಿ ಸುಮಾರು 2,450 ಚದರ ಮೀಟರ್‌ಗಳಷ್ಟು ಭೂಮಿಯನ್ನು ಶಾಶ್ವತ ಉದ್ದೇಶಗಳಿಗೆ ಮತ್ತು ಉಳಿದ 9,520 ಚದರ ಮೀಟರ್ ಭೂಮಿಯನ್ನು ತಾತ್ಕಾಲಿಕ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಬೇಕಿತ್ತು. ಇದಲ್ಲದೆ, ತಾತ್ಕಾಲಿಕ ಉದ್ದೇಶಗಳಿಗೆ ತೆಗೆದುಕೊಂಡಿದ್ದ ಭೂಮಿಯನ್ನು ಮೆಟ್ರೋ ನಿಲ್ದಾಣವು ಅಸ್ತಿತ್ವಕ್ಕೆ ಬಂದ ನಂತರ ಆಸ್ಪತ್ರೆಗೆ ಬಿಟ್ಟುಕೊಡಬೇಕೆಂದೂ ಸಹ ಒಪ್ಪಿಕೊಳ್ಳಲಾಗಿತ್ತು. ಶಾಶ್ವತ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಮೆಟ್ರೋ ಬ್ಲಾಕ್/ವಾರ್ಡ್‌ವೊಂದನ್ನು ₹13 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಬಿಎಮ್‌ಆರ್‌ಸಿಎಲ್ ಒಪ್ಪಿಕೊಂಡಿತ್ತು ಮತ್ತು ಅದನ್ನು ಪೂರ್ಣಗೊಳಿಸಿ ಬಿಎಮ್‌ಸಿಆರ್‌ಐಗೆ ಹಸ್ತಾಂತರಿಸಿತು. ಕಾಮಗಾರಿಯನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ಬಿಎಮ್‌ಆರ್‌ಸಿಎಲ್ 1986 ಚದರ ಮೀಟರ್‌ಗಳಷ್ಟು ಹೆಚ್ಚುವರಿ ಭೂಮಿಯನ್ನು ಶಾಶ್ವತ ಕಾಮಗಾರಿಗಳಿಗೆ ಬಳಸಿಕೊಂಡಿತು ಮತ್ತು ಅದಕ್ಕೆ ಪರಿಹಾರವಾಗಿ ₹17,21,86,200ನ್ನು ಪಾವತಿಸಿತು (ಏಪ್ರಿಲ್ 2018). ಈ ಮೊತ್ತವನ್ನು ಬಿಎಮ್‌ಸಿಆರ್‌ಐ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡುವ ಬದಲಿಗೆ ಬಳಕೆದಾರ ನಿಧಿ ಲೆಕ್ಕಕ್ಕೆ ಜಮೆ ಮಾಡಿತು.

ಭೂದಾಖಲೆಗಳ ಅನ್ವಯ ಭೂಮಿಯು ಸರ್ಕಾರಕ್ಕೆ ಸೇರಿದ್ದರಿಂದ ₹17.22 ಕೋಟಿ ಪರಿಹಾರದ ಬಳಕೆದಾರ ನಿಧಿಯಲ್ಲಿ ಉಳಿಸಿಕೊಂಡಿದ್ದು ಕರ್ನಾಟಕ ಆರ್ಥಿಕ ಸಂಹಿತೆಯ ಪರಿಚ್ಛೇದ 4ರ ಉಲ್ಲಂಘನೆಯಾಗಿತ್ತು. ಇದನ್ನು ಸಂಸ್ಥೆಯ ಹಾಗೂ ಆರ್ಥಿಕ ಇಲಾಖೆಯ ಗಮನಕ್ಕೆ ತರಲಾಯಿತು (ಮೇ 2018). ಅದಕ್ಕೆ ಉತ್ತರವಾಗಿ ಬಿಎಮ್‌ಸಿಆರ್‌ಐ ಪಡೆದುಕೊಂಡಿರುವ ಪರಿಹಾರದ ಮೊತ್ತವಾದ ₹17.22 ಕೋಟಿಯನ್ನು ಸಂಚಿತ ನಿಧಿಗೆ ಜಮೆ ಮಾಡಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ಕೋರಲಾಗಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿತ್ತು (ಅಕ್ಟೋಬರ್ 2018). ಈ ವಿಷಯದಲ್ಲಿ ಮುಂದಿನ ಕ್ರಮವನ್ನು ನಿರೀಕ್ಷಿಸಲಾಗಿದೆ.

### 3.9.2 ಇಲಾಖಾ ಸ್ವೀಕೃತಿಗಳನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡದಿರುವುದು–₹127.52 ಕೋಟಿ

ಭಾರತ ಸಂವಿಧಾನದ ಪರಿಚ್ಛೇದ 266(1)ರ ಅನ್ವಯ ರಾಜ್ಯ ಸರ್ಕಾರವು ಸ್ವೀಕರಿಸಿದ ಎಲ್ಲಾ ಆದಾಯಗಳು, ಖಜಾನೆ ಬಿಲ್ಲುಗಳು, ಸಾಲಗಳು ಅಥವಾ ಮಾರ್ಗೋಪಾಯ ಮುಂಗಡಗಳು ಮತ್ತು ಸಾಲಗಳ ಮರುಪಾವತಿಯಿಂದ ಸರ್ಕಾರವು ಸ್ವೀಕರಿಸಿದ ಹಣಗಳು ಎಲ್ಲವನ್ನೂ ರಾಜ್ಯದ ಸಂಚಿತ ನಿಧಿ ಎನ್ನುವ ಹೆಸರಿನ ಸಂಚಿತ ನಿಧಿಯನ್ನು ರೂಪುಗೊಳಿಸುತ್ತದೆ. ರಾಜ್ಯದ ಸಂಚಿತ ನಿಧಿಯಿಂದ ಕಾನೂನಿನ ಪ್ರಕಾರ ಮತ್ತು ಸಂವಿಧಾನದಲ್ಲಿ ಒದಗಿಸಿದ ರೀತಿಯಲ್ಲಿ ಮತ್ತು ಉದ್ದೇಶದ ಹೊರತಾಗಿ ಯಾವುದೇ ಹಣವನ್ನು ವಿನಿಯೋಗ ಮಾಡಲಾಗುವುದಿಲ್ಲ.

ಮೇಲಿನ ಸಾಂವಿಧಾನಿಕ ನಿಬಂಧನೆಗಳಿಗೆ ಅನುಗುಣವಾಗಿ 1958ರಲ್ಲಿ ಜಾರಿ ಮಾಡಿದ ಕರ್ನಾಟಕ ಆರ್ಥಿಕ ಸಂಹಿತೆಯು ಸರ್ಕಾರಿ ನೌಕರನು ತನ್ನ ಅಧಿಕಾರದ ಅರ್ಹತೆಯಲ್ಲಿ ಸಂಗ್ರಹಿಸಿದ ಸರ್ಕಾರಿ ಹಣವನ್ನು ತನ್ನಲ್ಲಿಯೇ ಉಳಿಸಿಕೊಳ್ಳುವುದನ್ನು ನಿರ್ಬಂಧಿಸಿದೆ.

ಟಿಸಿಹೆಚ್ ಮತ್ತು ಬಿಎಡ್ ಪಠ್ಯಕ್ರಮಗಳಿಗೆ ಪ್ರವೇಶ ಪ್ರಕ್ರಿಯೆಯನ್ನು ನಡೆಸಲು ದಿನಾಂಕ 30.03.1996ರ ಸರ್ಕಾರದ ಆದೇಶದಲ್ಲಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು 'ಕೇಂದ್ರೀಕೃತ ಪ್ರವೇಶ ಕೋಶವನ್ನು' (ಸಿಎಸಿ) ರಚಿಸಿದರು. ಆಕಾಂಕ್ಷಿತ ವಿದ್ಯಾರ್ಥಿಗಳಿಂದ ಶುಲ್ಕವನ್ನು ಸಂಗ್ರಹಿಸಲು ಸಹ ಈ ಕೋಶಕ್ಕೆ ಅಧಿಕಾರ ನೀಡಲಾಯಿತು. ಪ್ರವೇಶ ಪ್ರಕ್ರಿಯೆಗಳನ್ನು ನಿಭಾಯಿಸಲು 10 ಕಂಪ್ಯೂಟರ್ ಘಟಕಗಳನ್ನು ಸ್ಥಾಪಿಸಲು ಸರ್ಕಾರವು ₹25 ಲಕ್ಷಗಳ ಅನುದಾನವನ್ನು ಒದಗಿಸಿತು. ಈ ಹಣವನ್ನು ಸಂಚಿತ ನಿಧಿಯಿಂದ ಬಿಡುಗಡೆ ಮಾಡಲಾಯಿತು.

ಮೇಲೆ ತಿಳಿಸಿದ ಪಠ್ಯಕ್ರಮಗಳಿಗೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯು 1996ರಿಂದ ಈವರೆಗೆ ನಡೆಯುತ್ತಿದೆ. ಸಿಎಸಿಯು ಆಕಾಂಕ್ಷಿತ ವಿದ್ಯಾರ್ಥಿಗಳಿಂದ ಪರೀಕ್ಷಾ ಉದ್ದೇಶಕ್ಕಾಗಿ ಸಂಗ್ರಹಿಸಿದ ಶುಲ್ಕವನ್ನು ಸರ್ಕಾರಿ ಲೆಕ್ಕದಿಂದ ಹೊರಗಿಟ್ಟು ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಇಟ್ಟಿದೆ ಮತ್ತು ಹಾಗೆ ಸಂಗ್ರಹಿಸಿದ ಹಣದಿಂದ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಆಡಳಿತಾತ್ಮಕ ವೆಚ್ಚವನ್ನು ಭರಿಸಿದೆ. ಈ ಅವಧಿಯಲ್ಲಿ ಬಳಕೆಯಾಗದೆ ಉಳಿದ ಶಿಲ್ಕನ್ನು ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿದ್ದು 31 ಮಾರ್ಚ್ 2018ರಲ್ಲಿದ್ದಂತೆ ಆ ಮೊತ್ತವು ಬಡ್ಡಿಯೂ ಸೇರಿದಂತೆ ₹127.52 ಕೋಟಿಗಳಷ್ಟಿತ್ತು.

ನೇಮಕಾತಿ ಪ್ರಕ್ರಿಯೆಗೆ ಸಂಬಂಧಪಟ್ಟ ವಿವಿಧ ಚಟುವಟಿಕೆಗಳ ಮೇಲಿನ ವೆಚ್ಚವು ಕಟ್ಟಡ ದುರಸ್ತಿಗಳು, ನಿರ್ಮಾಣಗಳು ಮತ್ತು ಕಂಪ್ಯೂಟರ್ ಕೊಠಡಿಗಳ ಆಧುನೀಕರಣ, ಪರೀಕ್ಷಕರಿಗೆ ನೀಡುವ ಸಂಭಾವನೆ, ಜಾಹಿರಾತು ಮತ್ತು ಪ್ರಕಟಣೆ, ಪರೀಕ್ಷೆಗಳನ್ನು ನಡೆಸುವುದು ಮುಂತಾದ ಸ್ವರೂಪದಲ್ಲಿರುತ್ತದೆ ಮತ್ತು ಅವುಗಳು ಮಾಮೂಲು ವೆಚ್ಚಗಳ ರೂಪದಲ್ಲಿದ್ದು ಅವುಗಳಿಗೆ ಸ್ಪಷ್ಟವಾದ ಉದ್ದೇಶ ಶೀರ್ಷಿಕೆಗಳು ಲಭ್ಯವಿರುತ್ತವೆ. ಸಂಗ್ರಹಿಸಿದ ಶುಲ್ಕವನ್ನು ಸಂಚಿತ ನಿಧಿಗೆ ಜಮೆ ಮಾಡಲು ಕೋಶವು ಕ್ರಮ ತೆಗೆದುಕೊಳ್ಳಬೇಕಿತ್ತು ಮತ್ತು ಮೇಲೆ ತಿಳಿಸಿದ ವೆಚ್ಚಕ್ಕೆ ಅನುದಾನಗಳನ್ನು ಕೋರಬೇಕಿತ್ತು, ಹಾಗೆ ಮಾಡದೆ ಕೋಶದಲ್ಲಿ ಉಳಿದುಕೊಂಡ ಹಣವು ಸಂಚಿತ ನಿಧಿಯ ಭಾಗವಾಗಬೇಕಿತ್ತು ಮತ್ತು ಇಲಾಖಾ ವೆಚ್ಚಗಳನ್ನು ಭರಿಸಲು ಇಲಾಖಾ ಸ್ವೀಕೃತಿಗಳನ್ನು ವಿನಿಯೋಗಿಸಿದ್ದು ಹಾಗೂ ಸಂಚಿತ ನಿಧಿಗೆ ಜಮೆ ಮಾಡದಿದ್ದುದು ಸಂವಿಧಾನದ ಮತ್ತು ಕರ್ನಾಟಕ ಆರ್ಥಿಕ ಸಂಹಿತೆಯ ನಿಬಂಧನೆಗಳಿಗೆ ವಿರುದ್ಧವಾಗಿತ್ತು.

ಮೇಲೆ ತಿಳಿಸಿದ ಚಟುವಟಿಕೆಗಳ ಸಂಗಡ ಸಿಎಸಿಯು ಇತರೆ ಇಲಾಖೆಗಳ ಅಂದರೆ ಕೆಎಸ್‌ಆರ್‌ಟಿಸಿ, ಬಿಎಮ್‌ಟಿಸಿ ಮುಂತಾದ ಇಲಾಖಾ ಪರೀಕ್ಷೆಗಳನ್ನು ಸಹ ನಡೆಸುತ್ತಿದೆ ಎಂದು ಇಲಾಖೆಯು ಉತ್ತರಿಸಿತು (ಜನವರಿ 2019). ಪರೀಕ್ಷಾ ಪರಿಷತ್ ಅಥವಾ ನೇಮಕಾತಿ ಮಂಡಳಿಯ ಸ್ಥಾಪನೆಗೆ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದೂ ಸಹ ಹೇಳಿದೆ.

ಸಂವಿಧಾನದ ಪರಿಚ್ಛೇದ 266(1)ರ ಅನ್ವಯ ಸರ್ಕಾರದ ಆದಾಯಗಳನ್ನು ಸಂಚಿತ ನಿಧಿಗೆ ಜಮೆ ಮಾಡದಿರುವ ವಿಷಯದ ಬಗ್ಗೆ ಉತ್ತರವು ಮೌನವಾಗಿದೆಯಾಗಿದ್ದರಿಂದ ಇಲಾಖೆಯ ಉತ್ತರವು ಸಮರ್ಥನೀಯವಲ್ಲ. ಅಲ್ಲದೆ, ಇಲಾಖಾ ಆದಾಯಗಳನ್ನು ಶಾಸಕಾಂಗದ ಅನುಮೋದನೆಯಿಲ್ಲದೆ ವಿವಿಧ ಚಟುವಟಿಕೆಗಳಿಗೆ ಉಪಯೋಗಿಸಿದ್ದು ಸಂವಿಧಾನದ ಪರಿಚ್ಛೇದ 202ರ ಉಲ್ಲಂಘನೆಯಾಗಿತ್ತು.

## 3.10 ಲೆಕ್ಕಗಳಲ್ಲಿನ ಪಾರದರ್ಶಕತೆ

### 3.10.1 ರಾಜಸ್ವ ಲೆಕ್ಕದಡಿ ವಹಿವಾಟುಗಳ ಅಪಾರದರ್ಶಕತೆ

ಅನುಮೋದನೆಗಾಗಿ ಶಾಸಕಾಂಗದ ಮುಂದೆ ಮಂಡಿಸಿದ ಅನುದಾನಗಳ ಬೇಡಿಕೆಯು ಒಟ್ಟು ಮೊತ್ತಕ್ಕಾಗಿದ್ದರೆ, ಶಾಸಕಾಂಗದ ಮುಂದೆ ಮಂಡಿಸಿದ ವಾರ್ಷಿಕ ಹಣಕಾಸು ತ:ಖ್ತೆಯು ಆ ವರ್ಷದಲ್ಲಿ ಸಂಚಿತ ನಿಧಿಗೆ ಆಗುವ ನಿವ್ವಳ ವೆಚ್ಚವನ್ನು ತೋರಿಸುತ್ತದೆ. ಅನುದಾನಗಳಿಗೆ ಬೇಡಿಕೆಯನ್ನು ತಯಾರಿಸುವಾಗ ಕೆಲವು ನಿಧಿ ವಹಿವಾಟುಗಳ ಕಾರಣದಿಂದಾದ ವಸೂಲಾತಿಗಳನ್ನು ಸಹ ಪರಿಗಣಿಸಲಾಗುತ್ತದೆ. ಪ್ರಾರಂಭದಲ್ಲಿ ಸಂಚಿತ ನಿಧಿಯಲ್ಲಿ ದಾಖಲಿಸಲಾದ ನಿಧಿ ಶಿರ್ಷಿಕೆಗಳಿಗೆ ಸಂಬಂಧಪಟ್ಟ ವೆಚ್ಚವನ್ನು ಅನುದಾನಗಳ ಬೇಡಿಕೆಯಲ್ಲಿ ಸಂಬಂಧಿತ ಕ್ರಿಯಾ ಶೀರ್ಷಿಕೆಗಳಡಿಯಲ್ಲಿ ಕಡಿತ ನಮೂದುಗಳ ಮೂಲಕ ತೋರಿಸಲಾಗುತ್ತದೆ. ಹೀಗೆ, ವಾರ್ಷಿಕ ಹಣಕಾಸು ತ:ಖ್ತೆಯಲ್ಲಿ ಆಯವ್ಯಯದಡಿ ತೋರಿಸಲಾದ ನಿವ್ವಳ ಬೇಡಿಕೆಯು ನಿಧಿ ಲೆಕ್ಕಕ್ಕೆ ಸಂಬಂಧಿಸಿದ ಅಂತಹ ವಹಿವಾಟುಗಳನ್ನು ಮಾತ್ರ ಒಳಗೊಂಡಿರಬೇಕು. ಆದರೆ, ಅದು ಅಧಿಕ ಪಾವತಿಗಳಿಗೆ ಸಂಬಂಧಿಸಿದ ವಸೂಲಾತಿಗಳನ್ನೂ ಸಹ ಒಳಗೊಂಡಿತ್ತು.

2017–18ರಲ್ಲಿ ಧನವಿನಿಯೋಗ ಅಧಿನಿಯಮ (2017ರ ಅಧಿನಿಯಮ ಸಂಖ್ಯೆ.29) ಅನ್ವಯ ಒಟ್ಟು ಬೇಡಿಕೆಯು ₹1,94,917.19 ಕೋಟಿಗಳಷ್ಟು ಮೊತ್ತವನ್ನು ತೋರಿಸಿದ್ದರೆ ಎಎಫ್‌ಎಸ್ ಅಡಿಯಲ್ಲಿ ನಿವ್ವಳ ಬೇಡಿಕೆಯು ₹1,86,561.09 ಕೋಟಿಗಳಷ್ಟಿದ್ದಿತು. ಲೆಕ್ಕ ಮಾಡಲಾದ ವಸೂಲಾತಿಗಳು ₹8,356.10 ಕೋಟಿಗಳಾಗಿದ್ದವು. ಆಯವ್ಯಯ ದಾಖಲೆಗಳಲ್ಲಿ ವಿವಿಧ ಬೇಡಿಕೆಗಳ ಅಡಿಯಲ್ಲಿ ತೋರಿಸಿರುವ ಈ ವಸೂಲಾತಿಗಳ ಪರಿಶೀಲನೆಯು 15 ಅನುದಾನಗಳಡಿಯಲ್ಲಿ ನಿಧಿ ಲೆಕ್ಕದ ವಹಿವಾಟುಗಳಿಗೆ ಸಂಬಂಧಿಸಿರದ ಹಲವಾರು ಕ್ರಿಯಾ ಶೀರ್ಷಿಕೆಗಳಲ್ಲಿ ₹4,029.15 ಕೋಟಿಯನ್ನು ಹೆಚ್ಚುವರಿ ಪಾವತಿಗಳ ವಸೂಲಾತಿಯಲ್ಲಿನ ಲೆಕ್ಕ ಎಂದು ತೋರಿಸಿರುವುದನ್ನು ಗಮನಿಸಲಾಯಿತು (**ಅನುಬಂಧ 3.7**). ಬಹುಉದ್ದೇಶಿತ ಒಳಶೀರ್ಷಿಕೆ 911–ಕಳೆಯಿರಿ–ಹೆಚ್ಚುವರಿ ಪಾವತಿಯ ಕಡಿತಗಳು ಅಡಿಯಲ್ಲಿ ಆಯವ್ಯಯ ಅವಕಾಶವನ್ನು ಪಡೆಯುವುದು ಸರಿಯಿರಲಿಲ್ಲ ಮತ್ತು ಇದು ರಾಜಸ್ವ ವೆಚ್ಚವನ್ನು ₹4,029.15 ಕೋಟಿಗಳಷ್ಟು ಸಂಕುಚಿತಗೊಳಿಸುವ ಪರಿಣಾಮವಾಗಿತ್ತಲ್ಲದೆ ರಾಜಸ್ವ ಅಧಿಕ/ಆರ್ಥಿಕ ಕೊರತೆ ಮುಂತಾದ ಆರ್ಥಿಕ ಸೂಚಕಗಳನ್ನು ಅಪವ್ಯಯಗೊಳಿಸುವುದರಲ್ಲಿ ಸಹ ಪರಿಣಮಿಸಿತ್ತು.

ನಿಧಿ ಲೆಕ್ಕಕ್ಕೆ ಸಂಬಂಧಪಟ್ಟ ವಹಿವಾಟುಗಳನ್ನು ಹೊರತುಪಡಿಸಿ ಹೆಚ್ಚುವರಿ ಪಾವತಿಗಳ ವಸೂಲಾತಿಯಡಿಯಲ್ಲಿ ಆಯವ್ಯಯ ಅವಕಾಶಗಳನ್ನು ತೆಗೆದುಕೊಳ್ಳಬಾರದೆಂದು ಸುತ್ತೋಲೆಯನ್ನು

ಹೊರಡಿಸಲಾಗುವುದು ಎಂದು ದಿನಾಂಕ 15.11.2018ರಂದು ನಡೆದ ಜಂಟಿಪ್ರವೇಶ ಸಮಾಲೋಚನಾ ಸಭೆಯಲ್ಲಿ ಆರ್ಥಿಕ ಇಲಾಖೆಯು ತಿಳಿಸಿತು.

### 3.10.2 ಆಯವ್ಯಯ ಹಂಚಿಕೆ/ವೆಚ್ಚದಲ್ಲಿ ಪಾರದರ್ಶಕತೆಯಿಲ್ಲದಿರುವುದು

ವಹಿವಾಟುಗಳ ಲೆಕ್ಕವಿಡುವಿಕೆಯಲ್ಲಿ ನಿಖರತೆ ಮತ್ತು ಪಾರದರ್ಶಕತೆಯನ್ನು ನಿರ್ವಹಿಸಲು ಆಯವ್ಯಯದಲ್ಲಿ ಆಲೋಚಿಸಿದಂತೆ ವಿವಿಧ ಉದ್ದೇಶಗಳಿಗಾಗಿನ ವೆಚ್ಚವನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಡಿ ದಾಖಲಿಸಬೇಕು.

2017–18ರಲ್ಲಿ ಲೆಕ್ಕಶೀರ್ಷಿಕೆ 6425–00–107–5–10–394, 422 ಮತ್ತು 423 (ಸಾಲ, ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ) ಅಡಿಯಲ್ಲಿ ಸಾಲ ಮನ್ನಾ ಯೋಜನೆಯಡಿ ₹3,400.67 ಕೋಟಿಗಳ ಅವಕಾಶ/ವೆಚ್ಚವನ್ನು ಮಾಡಲಾಗಿರುವುದನ್ನು ರಾಜ್ಯ ಸರ್ಕಾರವು ಮಂಡಿಸಿದ ಆಯವ್ಯಯ ಅಂದಾಜು ಹಾಗೂ ಪೂರಕ ಅಂದಾಜುಗಳ ಸಮೀಕ್ಷೆಯಲ್ಲಿ ಗಮನಿಸಲಾಯಿತು. ಅದರಲ್ಲಿ 20.06.2017ರಲ್ಲಿದ್ದಂತೆ ಸಹಕಾರ ಸೊಸೈಟಿಗಳಿಗೆ/ಸಹಕಾರ ಬ್ಯಾಂಕ್‌ಗಳಿಗೆ ರೈತರಿಂದ ಬಾಕಿಯಿರುವ ₹50,000 ದವರೆಗಿನ ಅಲ್ಪಾವಧಿ ಸಾಲಗಳನ್ನು ಮನ್ನಾ ಮಾಡಲಾಗಿತ್ತು. ಈ ಸಂಬಂಧವಾಗಿ ಒದಗಿಸಿದ ಅವಕಾಶ/ಖರ್ಚು ಮಾಡಿದ ಮೊತ್ತವು ಸಾಲ ಮನ್ನಾ ಉದ್ದೇಶಕ್ಕಾಗಿದ್ದು ಬಾಳಿಕೆ ಬರುವ/ಶಾಶ್ವತ ಸ್ವರೂಪದ ಬಂಡವಾಳ ಆಸ್ತಿಯನ್ನು ಸೃಜಿಸಲು ವೆಚ್ಚವನ್ನು ಮಾಡಿಲ್ಲವಾದ್ದರಿಂದ ಅದನ್ನು ಬಂಡವಾಳ/ಸಾಲ ಶೀರ್ಷಿಕೆಗಳಡಿಯಲ್ಲಿ ಲೆಕ್ಕವಿಡುವುದು ತಪ್ಪಾಗಿದ್ದಿತು. ಇದು ಬಂಡವಾಳ ವೆಚ್ಚವನ್ನು ₹3,400.67 ಕೋಟಿಗಳಷ್ಟು ಹೆಚ್ಚಾಗಿ ಹೇಳುವುದರಲ್ಲಿ ಪರಿಣಮಿಸಿತಲ್ಲದೆ ರಾಜಸ್ವ ಅಧಿಕದಂತಹ ಆರ್ಥಿಕ ಸೂಚಕಗಳ ಮೇಲೆಯೂ ಪರಿಣಾಮ ಬೀರಿತ್ತು ಹಾಗೂ ಈ ವಹಿವಾಟಿನಲ್ಲಿ ಯಾವುದೇ ಬಂಡವಾಳ/ಆಸ್ತಿಯ ಸೃಜನೆಯಿರಲಿಲ್ಲವಾದ್ದರಿಂದ ವಹಿವಾಟುಗಳ ಲೆಕ್ಕವಿಡುವಲ್ಲಿ ಪಾರದರ್ಶಕತೆಯನ್ನೂ ಬಾಧಿಸಿದ್ದಿತು.

15.11.2018ರಂದು ನಡೆದ ಜಂಟಿಪ್ರವೇಶ ಸಮಾಲೋಚನಾ ಸಭೆಯಲ್ಲಿ ಆಕ್ಷೇಪಣೆಯನ್ನು ಒಪ್ಪಿಕೊಳ್ಳುತ್ತಾ ಆರ್ಥಿಕ ಇಲಾಖೆಯು ಆಕ್ಷೇಪಣೆಯನ್ನು ಗಮನಕ್ಕೆ ತೆಗೆದುಕೊಂಡಿದೆ ಮತ್ತು ಮುಂದೆ ಇಂತಹವುಗಳಿಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿದೆ.

## 3.11 ಲೆಕ್ಕಗಳ ನಿಖರತೆಯ ಮೇಲೆ ಪರಿಣಾಮ ಬೀರುವ ಮುಖ್ಯ ಅಂಶಗಳು

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ನಿರ್ವಹಿಸಲಾಗುತ್ತದೆ. ಸರ್ಕಾರಿ ಲೆಕ್ಕದಲ್ಲಿನ ಕೆಲವು ಸ್ವೀಕೃತಿ ಮತ್ತು ವೆಚ್ಚಗಳನ್ನು ಮಾಹಿತಿ ಕೊರತೆ ಅಥವಾ ಇತರೆ ಕಾರಣಗಳಿಂದ ಅಂತಿಮ ಸ್ವೀಕೃತಿ ಅಥವಾ ವೆಚ್ಚ ಶೀರ್ಷಿಕೆಯಡಿ ಲೆಕ್ಕ ಮಾಡಲಾಗದಿದ್ದರೆ, ಅವುಗಳನ್ನು ತಾತ್ಕಾಲಿಕವಾಗಿ ಅಮಾನತ್ತು ಲೆಕ್ಕದಲ್ಲಿ ಇಡಲಾಗುತ್ತದೆ. ಈ ಅಮಾನತ್ತು ಲೆಕ್ಕವನ್ನು ಸಂಬಂಧಿಸಿದ ವಿವರ/ಮಾಹಿತಿ ಬಂದ ನಂತರ ತೀರುವಳಿ ಮಾಡಲಾಗುವುದು.

ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಗಳು (ಡಿ.ಡಿ.ಆರ್.) ಇಂತಹ ವಹಿವಾಟುಗಳನ್ನು ಲೆಕ್ಕ ಮಾಡಲು ಇದ್ದು, ಸರ್ಕಾರವು ಸಾರ್ವಜನಿಕ ಹಣದ ಪಾಲಕನಾಗಿ ಈ ಹಣವನ್ನು ಸ್ವೀಕರಿಸುತ್ತದೆ ಮತ್ತು ವಿಶ್ವಾಸಾರ್ಹವಾಗಿ ನಿರ್ವಹಿಸುತ್ತದೆ.

2017–18ರ ರಾಜ್ಯದ ಹಣಕಾಸಿನ ಲೆಕ್ಕಗಳ ನಿಖರತೆಯ ಮೇಲೆ, (ಅ) ಅಮಾನತ್ತು ಶೀರ್ಷಿಕೆಗಳಡಿ ಹೆಚ್ಚಿನ ಸಂಖ್ಯೆಯ ವ್ಯವಹಾರಗಳು ಅಂತಿಮ ವರ್ಗೀಕರಣಕ್ಕಾಗಿ ಕಾಯುತ್ತಿರುವುದು ಮತ್ತು (ಆ) ಋಣ, ಠೇವಣಿ ಮತ್ತು ಇರಸಾಲು ಲೆಕ್ಕಶೀರ್ಷಿಕೆಗಳಡಿ ಹೆಚ್ಚುತ್ತಿರುವ ವ್ಯತಿರಿಕ್ತ ಶಿಲ್ಕುಗಳ ಸಂಖ್ಯೆ ಮತ್ತು ಪ್ರಮಾಣಗಳಂತಹ ಅಂಶಗಳು ವ್ಯತಿರಿಕ್ತವಾಗಿ ಪರಿಣಾಮ ಬೀರಿದೆ. ಈ ವ್ಯವಹಾರಗಳ ಸಾಮಾನ್ಯ ಸಮೀಕ್ಷೆಯು ಕೆಳಕಂಡ ಅಂಶಗಳನ್ನು ತೋರಿಸಿದೆ.

### (ಎ) ಪ್ರಮುಖ ಅಮಾನತ್ತು ಲೆಕ್ಕಗಳಡಿ ಬಾಕಿ ಉಳಿದಿರುವ ಶಿಲ್ಕುಗಳು

ಸರ್ಕಾರದ ಲೆಕ್ಕಗಳಲ್ಲಿ 'ಅಮಾನತ್ತು ಶೀರ್ಷಿಕೆ'ಗಳೆಂದು ಕರೆಯಲ್ಪಡುವ ಕೆಲವು ಮಧ್ಯವರ್ತಿ/ಹೊಂದಾಣಿಕೆಯ ಲೆಕ್ಕಶೀರ್ಷಿಕೆಗಳನ್ನು ನಿರ್ವಹಿಸಲಾಗುತ್ತಿದ್ದು, ಇವು ವ್ಯವಹಾರದ ಸ್ವರೂಪದ ಬಗ್ಗೆ ಮಾಹಿತಿಯ ಕೊರತೆ ಅಥವಾ ಇತರೆ ಕಾರಣಗಳಿಂದಾಗಿ ಅಂತಿಮ ಲೆಕ್ಕಶೀರ್ಷಿಕೆಗೆ ದಾಖಲಿಸಿಲು ಆಗದ ಸ್ವೀಕೃತಿಗಳು ಮತ್ತು ಸಂದಾಯಗಳನ್ನು ಪ್ರತಿಬಿಂಬಿಸುತ್ತವೆ. ಈ ಲೆಕ್ಕಶೀರ್ಷಿಕೆಗಳಡಿಯ ಮೊತ್ತಗಳನ್ನು ಅನುಕ್ರಮವಾಗಿ ಅವುಗಳ ಅಂತಿಮ ಲೆಕ್ಕಶೀರ್ಷಿಕೆಗಳಡಿ ದಾಖಲಿಸಿದಾಗ, ಅವುಗಳನ್ನು ಸ್ವೀಕೃತಿ ಅಥವಾ ವೆಚ್ಚದ ಕಡಿತದಿಂದ ತೀರುವಳಿ ಮಾಡಲಾಗುವುದು. ಈ ಮೊತ್ತಗಳು ತೀರುವಳಿಯಾಗದೆ ಉಳಿದರೆ,

ಅಮಾನತ್ತು ಶೀರ್ಷಿಕೆಗಳಡಿ ಶಿಲ್ಕುಗಳ ಶೇಖರಣೆಯಾಗಿ ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಖರವಾಗಿ ಪ್ರತಿಬಿಂಬಿಸುವುದಿಲ್ಲ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿರುವ ಲೆಡ್ಜರುಗಳಲ್ಲಿ ದಾಖಲಿಸಿರುವಂತೆ, ಕೆಲವು ಪ್ರಮುಖ ಅಮಾನತ್ತು ಲೆಕ್ಕಶೀರ್ಷಿಕೆಗಳಡಿಯ ಶಿಲ್ಕುಗಳನ್ನು **ಕೋಷ್ಟಕ 3.7**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.7: ಅಮಾನತ್ತು ಶೀರ್ಷಿಕೆ (8658–ಅಮಾನತ್ತು ಲೆಕ್ಕಗಳು)**

*(₹ ಕೋಟಿಗಳಲ್ಲಿ)*

| ಒಳಶೀರ್ಷಿಕೆಯ ಹೆಸರು | 2015–16 | | 2016–17 | | 2017–18 | |
|---|---|---|---|---|---|---|
| | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| 101–ವೇತನ ಮತ್ತು ಲೆಕ್ಕ ಕಛೇರಿ ಅಮಾನತ್ತು | 86.90 | 0.68 | 118.86 | 0.45 | 189.66 | 0.25 |
| ನಿವ್ವಳ | ಖರ್ಚು 86.22 | | ಖರ್ಚು 118.41 | | ಖರ್ಚು 189.41 | |
| 102–ಅಮಾನತ್ತು ಲೆಕ್ಕ(ಸಿವಿಲ್) | 24.29 | 34.42 | 17.22 | 60.78 | 17.37 | 175.77 |
| ನಿವ್ವಳ | ಜಮೆ 10.13 | | ಜಮೆ 43.56 | | ಜಮೆ 158.40 | |
| 110–ರಿಸರ್ವ್ ಬ್ಯಾಂಕ್ ಅಮಾನತ್ತು – ಕೇಂದ್ರ ಕಛೇರಿ | 20.20 | 57.56 | 41.02 | 148.41 | 44.53 | 151.18 |
| ನಿವ್ವಳ | ಜಮೆ 37.36 | | ಜಮೆ 107.39 | | ಜಮೆ 106.65 | |

ಹಣಕಾಸು ಲೆಕ್ಕಗಳು ಈ ಲೆಕ್ಕಶೀರ್ಷಿಕೆಗಳಡಿಯ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಶಿಲ್ಕುಗಳನ್ನು ಬಾಕಿ ಉಳಿದ ಖರ್ಚು ಮತ್ತು ಜಮೆಯನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸಿ ಲೆಕ್ಕ ಮಾಡಲಾಗಿದೆ. ಈ ಲೆಕ್ಕಶೀರ್ಷಿಕೆಗಳಡಿಯ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### ❖ ವೇತನ ಮತ್ತು ಲೆಕ್ಕ ಕಛೇರಿ (ಪಿಎಒ) ಅಮಾನತ್ತು

ಈ ಲೆಕ್ಕ ಶೀರ್ಷಿಕೆಯನ್ನು ವಿವಿಧ ಪ್ರತ್ಯೇಕ ವೇತನ ಮತ್ತು ಲೆಕ್ಕಾಧಿಕಾರಿಗಳ (ಪಿಎಒ) ಮತ್ತು ಮಹಾಲೇಖಾಪಾಲರ ಪುಸ್ತಕಗಳಲ್ಲಿ ಉಂಟಾಗುವ ವಹಿವಾಟುಗಳನ್ನು ಇತ್ಯರ್ಥಗೊಳಿಸಲು ನಿರ್ವಹಿಸಲಾಗುತ್ತಿದೆ. ಈ ವಹಿವಾಟುಗಳು ಮೊದಲು ಮಹಾಲೇಖಾಪಾಲರ ಪುಸ್ತಕಗಳಲ್ಲಿ ಪಿಎಓಮ್ (ಅಮಾನತ್ತು) ಶೀರ್ಷಿಕೆಯಡಿ ದಾಖಲಿಸಲ್ಪಟ್ಟು, ವೇತನ ಮತ್ತು ಲೆಕ್ಕಾಧಿಕಾರಿಯಿಂದ ಚೆಕ್/ಡಿಡಿಯನ್ನು ಸ್ವೀಕರಿಸಿದ ನಂತರ ಮತ್ತು ಯಾವ ವೇತನ ಮತ್ತು ಲೆಕ್ಕಾಧಿಕಾರಿಯ ಪರವಾಗಿ ರಾಜ್ಯ ಖಜಾನೆಗಳಲ್ಲಿ ಹಣ ಸಂದಾಯ ಮಾಡಲಾಗಿತ್ತೋ, ಆ ಪಿಎಓ ಚೆಕ್/ಡಿಡಿಯನ್ನು ನೀಡಿದ ನಂತರ ತೀರುವಳಿ ಮಾಡಲಾಗುವುದು. ಈ ಶೀರ್ಷಿಕೆಯಡಿಯ ಬಾಕಿ ಉಳಿದ ಖರ್ಚಿನ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿಯ ಪರವಾಗಿ ಮಹಾಲೇಖಾಪಾಲರು ಸಂದಾಯಗಳನ್ನು ಮಾಡಿದ್ದು, ಅವುಗಳನ್ನು ಇನ್ನೂ ವಸೂಲಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಬಾಕಿ ಉಳಿದ ಜಮೆಯ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿ ಬದಲಿಗೆ ಮಹಾಲೇಖಾಪಾಲರು ಸಂದಾಯಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಇನ್ನೂ ಪಾವತಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಈ ಶೀರ್ಷಿಕೆಯಡಿಯ ನಿವ್ವಳ ಖರ್ಚಿನ ಶಿಲ್ಕು ಏರಿಕೆ ಪ್ರವೃತ್ತಿಯನ್ನು ತೋರಿಸುತ್ತಿದೆ. ಇದರ ತೀರುವಳಿ/ಇತ್ಯರ್ಥದಿಂದ ರಾಜ್ಯಸರ್ಕಾರದ ನಗದುಶಿಲ್ಕು ಹೆಚ್ಚಾಗುತ್ತದೆ. ಈ ವಹಿವಾಟುಗಳು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಸರ್ಕಾರದಿಂದ ಪಾವತಿಸಿದ ಕೇಂದ್ರ ಸರ್ಕಾರದ ನಾಗರಿಕ ಪಿಂಚಣಿಯ ಬಾಬ್ತಿಗೆ ಸಂಬಂಧಿಸಿದ್ದಾಗಿದೆ.

### ❖ ಅಮಾನತ್ತು ಲೆಕ್ಕ (ಸಿವಿಲ್)

ವ್ಯವಹಾರಗಳ ಪೂರ್ಣ ವರ್ಗೀಕರಣದ ಮಾಹಿತಿಯು ಇರದಿರುವುದು, ಅಥವಾ ಪೂರಕವಾದ ದಸ್ತಾವೇಜು/ಪಟ್ಟಿ ಇರದಿರುವುದು, ಅಥವಾ ಖಜಾನೆಯ ಪಟ್ಟಿಯಲ್ಲಿ ನಮೂದಿಸಿದ ಅಂಕಿಗಳು ಹಾಗೂ ಪೂರಕವಾದ ಖರ್ಚು/ಜಮೆಗಳ ದಸ್ತಾವೇಜು/ಪಟ್ಟಿಗಳ ನಡುವೆ ವ್ಯತ್ಯಾಸವಿರುವುದು, ಇವೇ ಮುಂತಾದ ಸಂದರ್ಭಗಳ ವ್ಯವಹಾರಗಳು, ಈ ಶೀರ್ಷಿಕೆಯಡಿ ಬಾಕಿ ಇರುವ ಜಮೆಯ ಹೆಚ್ಚಿನ ಭಾಗವಾಗಿರುತ್ತವೆ.

ರಾಜ್ಯ ಖಜಾನೆಗಳಲ್ಲಿ ನಡೆಯುವ ರೈಲ್ವೆ, ರಕ್ಷಣೆ, ಅಂಚೆ ಮತ್ತು ದೂರಸಂಪರ್ಕ ಲೆಕ್ಕಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಮೊದಲು ಈ ಶೀರ್ಷಿಕೆಯಲ್ಲಿ ವರ್ಗೀಕರಿಸಿ ಸಂಬಂಧಿಸಿದ ಅಧಿಕಾರಿಗಳಿಂದ ಕ್ಲೈಮುಗಳು ಬರುವ ತನಕ ತೀರುವಳಿಯನ್ನು ಬಾಕಿ ಇರಿಸಲಾಗುವುದು.

ಈ ಶೀರ್ಷಿಕೆಯಡಿ ನಿವ್ವಳ ಧನಾತ್ಮಕ ಶಿಲ್ಕು ಪ್ರಸಕ್ತ ಸಾಲಿನಲ್ಲಿ ₹114.84 ಕೋಟಿಗಳಷ್ಟು ಹೆಚ್ಚಾಗಿದೆ. ರೈಲ್ವೆ (₹3.15 ಕೋಟಿ) ಮತ್ತು ರಕ್ಷಣಾ (₹0.81 ಕೋಟಿ) ಲೆಕ್ಕಗಳಿಗೆ ಸಂಬಂಧಿಸಿದಂತೆ ಅಮಾನತ್ತು

ತೀರುವಳಿಯ ನಂತರ ನಗದು ಶಿಲ್ಕಿನಲ್ಲಿ ಹೆಚ್ಚಳವಾಗುವುದು. ಉಳಿದ ಬಾಬ್ತುಗಳಿಗೆ ಸಂಬಂಧಿಸಿದಂತೆ ತೀರುವಳಿಯು ನಗದು ಶಿಲ್ಕಿನ ಮೇಲೆ ಪರಿಣಾಮವನ್ನು ಬೀರುವುದಿಲ್ಲ.

❖ **ರಿಸರ್ವ್ ಬ್ಯಾಂಕ್ ಅಮಾನತ್ತು, ಕೇಂದ್ರ ಲೆಕ್ಕ ಕಛೇರಿ**

